ಗುರುವಾರ, ಆಗಸ್ಟ್ 7, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 218 | ಪುಟ 14
prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಹೆದ್ದಾರಿ ಕಾಮಗಾರಿ
ದೇಶದಲ್ಲಿ ಪ್ರಸ್ತುತ **29,406** ಕಿ.ಮೀ ಉದ್ದದ **1,240** ರಾಷ್ಟ್ರೀಯ ಹೆದ್ದಾರಿ ಯೋಜನೆಗಳು ಪ್ರಗತಿಯಲ್ಲಿವೆ. ಈ ಯೋಜನೆಗಳ ಒಟ್ಟು ವೆಚ್ಚ **₹7.80** ಲಕ್ಷ ಕೋಟಿ ಎಂದು ಕೇಂದ್ರ ಸರ್ಕಾರ ತಿಳಿಸಿದೆ

‘ಪರೀಕ್ಷಾ ಪೇ ಚರ್ಚಾ’ ದಾಖಲೆ
ಪ್ರಧಾನಿ ನರೇಂದ್ರ ಮೋದಿ ಅವರ ‘ಪರೀಕ್ಷಾ ಪೇ ಚರ್ಚಾ’ ಕಾರ್ಯಕ್ರಮ ಗಿನ್ನೆಸ್ ವಿಶ್ವ ದಾಖಲೆಗೆ ಸೇರ್ಪಡೆಯಾಗಿದೆ. ಒಂದು ತಿಂಗಳಲ್ಲಿ ಅತೀ ಹೆಚ್ಚು ಜನ ಈ ಕಾರ್ಯಕ್ರಮಕ್ಕೆ ನೋಂದಣಿ ಮಾಡಿಕೊಂಡಿದ್ದಾರೆ



ಸೆನ್ಸೆಕ್ಸ್ 80,543 | ನಿಫ್ಟಿ 24,574 | $/₹ 87.73 | ಚಿನ್ನ (Std. 10g) ₹1,05,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,20,600 (ಬೆಂಗಳೂರು)

ಧರ್ಮಸ್ಥಳದಲ್ಲಿ ಗುಂಪು ಘರ್ಷಣೆ

ಯೂಟ್ಯೂಬ್ ಚಾನೆಲ್‌ಗಳ ಮೂವರು, ಟಿ.ವಿ. ವಾಹಿನಿಯ ಒಬ್ಬರ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ‘ಕ್ಷೇತ್ರಕ್ಕೆ ಕಳಂಕ’ ತರಲು ಯತ್ನ ಆರೋಪ
- ಕ್ರಮಕ್ಕೆ ಆಗ್ರಹಪಡಿಸಿ ಠಾಣೆ ಎದುರು ಧರಣಿ
- ಗುಂಪು ಚದುರಿಸಲು ಲಘು ಲಾಠಿ ಪ್ರಹಾರ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದೆ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿದ್ದರೆ, ಇನ್ನೊಂದೆಡೆ ಅಲ್ಲಿ ಎರಡು ಗುಂಪುಗಳ ಮಧ್ಯೆ ಬುಧವಾರ ಘರ್ಷಣೆ ನಡೆದಿದೆ.

ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಜನರನ್ನು ಚದುರಿಸಿದರು. ಇದಾದ ನಂತರ ಒಂದು ಗುಂಪು, ‘ಕ್ಷೇತ್ರಕ್ಕೆ ಕಳಂಕ ತರುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿ ಧರ್ಮಸ್ಥಳ ಪೊಲೀಸ್ ಠಾಣೆಯ ಎದುರು ರಾತ್ರಿ ಧರಣಿ ನಡೆಸಿತು.

ಪ್ರತಿಭಟನೆಯ ಕಾವು ಹೆಚ್ಚುತ್ತಿದ್ದಂತೆಯೇ ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ಅವರು ಧರ್ಮಸ್ಥಳ ಪೊಲೀಸ್ ಠಾಣೆಗೆ ಧಾವಿಸಿದರು.

ಇದಕ್ಕೂ ಮುನ್ನ, ಬಿಗ್‌ಬಾಸ್ ಸ್ಪರ್ಧಿ ರಜತ್ ಎಂಬವರು ಧರ್ಮಸ್ಥಳ ಗ್ರಾಮದ ಪಾಂಗಾಳದಲ್ಲಿರುವ ದಿ. ಸೌಜನ್ಯಾ ಅವರ ಮನೆಗೆ ಭೇಟಿ ನೀಡಿದ್ದರು. ಈ ಮಾಹಿತಿ ತಿಳಿದು ಅವರನ್ನು ಮಾತನಾಡಿಸಲು ಕೆಲ ಯೂಟ್ಯೂಬರ್‌ಗಳು ಪಾಂಗಾಳ ರಸ್ತೆಯ ಬಳಿ ಸೇರಿದ್ದರು. ಆಗ ಸ್ಥಳಕ್ಕೆ ಬಂದ ಗುಂಪೊಂದು ಅವರ ಜೊತೆ ವಾಗ್ವಾದ ನಡೆಸಿತ್ತು. ‘ಕುಡ್ಲ ರ‍್ಯಾಂಪೇಜ್’ ಯೂಟ್ಯೂಬ್ ಚಾನೆಲ್‌ನ ಅಜಯ್ ಅಂಚನ್, ‘ಯುನೈಟೆಡ್ ಮೀಡಿಯಾ’ದ ಅಭಿಷೇಕ್ ಹಾಗೂ ‘ಸಂಚಾರಿ ಸ್ಟುಡಿಯೊ’ದ ವಿಜಯ್ ಅವರ ಮೇಲೆ ಪಾಂಗಾಳದಲ್ಲಿ ಗುಂಪೊಂದು ಹಲ್ಲೆ ನಡೆಸಿದೆ ಎಂದು ಆರೋಪಿಸಲಾಗಿದೆ.

4



ಧರ್ಮಸ್ಥಳ ಗ್ರಾಮದಲ್ಲಿ ಉದ್ರಿಕ್ತ ಜನರನ್ನು ಪೊಲೀಸರು ಚದುರಿಸಿದರು

ಪರಿಸ್ಥಿತಿ ಶಾಂತ: ಎಸ್‌ಪಿ

ಧರ್ಮಸ್ಥಳದಲ್ಲಿ ಪರಿಸ್ಥಿತಿ ಈಗ ಶಾಂತವಾಗಿದೆ. ಘಟನೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ತಿಳಿಸಿದ್ದಾರೆ.

‘ಯೂಟ್ಯೂಬರ್‌ಗಳ ಮೇಲೆ ನಡೆದ ಹಲ್ಲೆ ಮತ್ತು ಅವರ ಎರಡು ವಾಹನಗಳಿಗೆ ಹಾನಿ ನಡೆಸಿದ ಬಗ್ಗೆ ಹಾಗೂ ಖಾಸಗಿ ನ್ಯೂಸ್ ಚಾನೆಲ್‌ನ ವರದಿಗಾರನ ಮೇಲೆ ನಡೆದ ಹಲ್ಲೆ ಸಂಬಂಧಿಸಿದಂತೆ ಪ್ರಕರಣವನ್ನು ದಾಖಲಿಸಲಾಗುತ್ತಿದೆ. ಲಾಠಿ ಪ್ರಹಾರ ನಡೆದ ಸ್ಥಳದಲ್ಲಿ, ಧರ್ಮಸ್ಥಳ ಪೊಲೀಸ್ ಠಾಣಾ ಆವರಣದಲ್ಲಿ ಮತ್ತು ಆಸ್ಪತ್ರೆಯ ಮುಂದೆ ಕಾನೂನುಬಾಹಿರವಾಗಿ ಗುಂಪು ಸೇರಿರುವ ಬಗ್ಗೆ ಪ್ರಕರಣ ದಾಖಲಿಸಲಾಗುತ್ತಿದೆ’ ಎಂದು ಅವರು ಹೇಳಿದ್ದಾರೆ.

4

ಅವಶೇಷ ಪತ್ತೆಗೆ ತಂತ್ರಜ್ಞಾನ ಬಳಕೆ?

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ನೆಲದಡಿ ಮೃತದೇಹದ ಅವಶೇಷಗಳ ಪತ್ತೆ ಹಚ್ಚಲು ತಂತ್ರಜ್ಞಾನ ಬಳಸಲು ಹಾಗೂ ಖಚಿತವಾದರೆ ಮಾತ್ರ ಅಗೆಯುವ ಕಾರ್ಯ ಮುಂದುವರಿಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ಚಿಂತನೆ ನಡೆಸಿದೆ.

ಎಸ್‌ಐಟಿಯವರು ನೇತ್ರಾವತಿ ಸ್ನಾನಘಟ್ಟದ ಸಮೀಪ ಹೆದ್ದಾರಿ ಪಕ್ಕದ ಕಾಡಿನೊಳಗೆ 8ನೇ ದಿನವೂ (ಬುಧವಾರ) ಶೋಧ ಕಾರ್ಯ ಮುಂದುವರಿಸಿದರು. ಆ ಜಾಗದಲ್ಲಿ ಮೃತದೇಹವನ್ನು ಹೂತಿರುವ ಯಾವುದೇ ಕುರುಹು ಪತ್ತೆಯಾಗಿಲ್ಲ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

4

ಕ್ಲೇಮ್ ಇತ್ಯರ್ಥಕ್ಕೆ ಏಕರೂಪಿ ವ್ಯವಸ್ಥೆ

ಮುಂಬೈ (ಪಿಟಿಐ): ಮೃತ ಗ್ರಾಹಕರ ಬ್ಯಾಂಕ್ ಖಾತೆಯಲ್ಲಿ ಇರುವ ಹಣ ಹಾಗೂ ಲಾಕರ್‌ನಲ್ಲಿ ಇರುವ ವಸ್ತುಗಳ ಕ್ಲೇಮ್‌ಗಳ ಇತ್ಯರ್ಥಕ್ಕೆ ಏಕರೂಪಿ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ ಎಂದು ಆರ್‌ಬಿಐ ಹೇಳಿದೆ.

ವಿವರ 10

ಚಿನಕುರುಳಿ ಪ್ರಕಾಶ್ ಶೆಟ್ಟಿ



ಆಮದು ಸುಂಕ ಶೇ 50ಕ್ಕೆ ಏರಿಸಿದ ಟ್ರಂಪ್

ವಾಷಿಂಗ್ಟನ್ (ಎಎಫ್‌ಪಿ/ ಪಿಟಿಐ): ರಷ್ಯಾದಿಂದ ತೈಲ ಖರೀದಿಸುವ ವಿಚಾರವಾಗಿ ಅಮೆರಿಕದ ಬೆದರಿಕೆಗೆ ಭಾರತ ಮಣಿಯದ ಬೆನ್ನಲ್ಲೇ, ಅಮೆರಿಕ ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇಕಡ 25ರಷ್ಟು ಸುಂಕ ಹೇರುವ ಆದೇಶಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಸಹಿ ಹಾಕಿದ್ದಾರೆ.



ಡೊನಾಲ್ಡ್ ಟ್ರಂಪ್

ವಿನಾಯಿತಿ ಪಟ್ಟಿಯಲ್ಲಿರುವ ಕೆಲ ಸರಕುಗಳನ್ನು ಹೊರತುಪಡಿಸಿದಂತೆ, ಭಾರತದ ಮೇಲೆ ಹೇರಲಾದ ಸುಂಕದ ಪ್ರಮಾಣ ಶೇ 50ಕ್ಕೆ ಏರಿದಂತಾಗಿದೆ. ಟ್ರಂಪ್ ಅವರ ಈ ನಡೆಯು, ಜವಳಿ, ಸಾಗರ ಹಾಗೂ ಚರ್ಮ ಉತ್ಪನ್ನಗಳ ರಫ್ತಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಭಾರತದಿಂದ ಅಮೆರಿಕಕ್ಕೆ ₹7.5 ಲಕ್ಷ ಕೋಟಿ (86 ಶತ ಕೋಟಿ ಡಾಲರ್) ಮೌಲ್ಯದಷ್ಟು ಸರಕುಗಳ ರಫ್ತು ಆಗುತ್ತದೆ. ಹೆಚ್ಚುವರಿ ಸುಂಕ ಈ ರಫ್ತಿನ ಮೇಲೆ ಭಾರಿ ಪರಿಣಾಮ ಬೀರಲಿದೆ ಎಂದು ರಫ್ತುದಾರರು ಆತಂಕ ವ್ಯಕ್ತಪಡಿಸಿದ್ದಾರೆ.

ರಷ್ಯಾದಿಂದ ತೈಲ ಖರೀದಿಸುವ ಮೂಲಕ ಭಾರತವು, ಉಕ್ರೇನ್ ವಿರುದ್ಧದ ಯುದ್ಧಕ್ಕೆ ರಷ್ಯಾಕ್ಕೆ ಆರ್ಥಿಕ ನೆರವು ಒದಗಿಸುತ್ತಿದೆ ಎಂದು ಟ್ರಂಪ್ ದೂರಿದ್ದಾರೆ.

10

ಅನ್ಯಾಯ, ಅಸಮರ್ಥನೀಯ: ಭಾರತ



ಭಾರತವು ಅಮೆರಿಕಕ್ಕೆ ರಫ್ತು ಮಾಡುವ ಸರಕುಗಳ ಮೇಲಿನ ಸುಂಕವನ್ನು ಶೇ 50ಕ್ಕೆ ಏರಿಸಿರುವುದು ‘ಅನ್ಯಾಯ, ಅಸಮರ್ಥನೀಯ ಮತ್ತು ಅತಾರ್ಕಿಕ’ ಎಂದು ಭಾರತ ಪ್ರತಿಕ್ರಿಯೆ ನೀಡಿದೆ.

ರಾಷ್ಟ್ರೀಯ ಹಿತಾಸಕ್ತಿಯನ್ನು ಸಂರಕ್ಷಿಸಲು ಬೇಕಾದ ಎಲ್ಲ ಕ್ರಮಗಳನ್ನೂ ಭಾರತ ಕೈಗೊಳ್ಳಲಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

‘ರಷ್ಯಾದಿಂದ ತೈಲ ಖರೀದಿ ಮಾಡದಂತೆ ಅಮೆರಿಕ ಒತ್ತಡ ಹೇರುತ್ತಿದೆ. ಇದಕ್ಕಾಗಿ ಹೆಚ್ಚುವರಿ ಸುಂಕ ವಿಧಿಸಲು ನಿರ್ಧರಿಸಿದ್ದು ದುರದೃಷ್ಟಕರ’ ಎಂದು ಭಾರತ ಹೇಳಿದೆ. ‘ರಷ್ಯಾದಿಂದ ತೈಲ ಖರೀದಿ ಮಾಡುತ್ತಿರುವುದಕ್ಕಾಗಿ ಇತ್ತೀಚಿನ ದಿನಗಳಲ್ಲಿ ಅಮೆರಿಕವು ಭಾರತವನ್ನು ಗುರಿ ಮಾಡುತ್ತಿದೆ. ಈಗ ಹೆಚ್ಚುವರಿ ಸುಂಕ ವಿಧಿಸಿದೆ’ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

10





ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು ಗುಡುಗು ಸಹಿತ ಮಳೆ ಬೀಳುವ ಸಾಧ್ಯತೆ ಇದೆ

ಬಿಎಂಸಿಆರ್‌ಐ ಆಸ್ಪತ್ರೆಗೆ ಸಿ.ಎಂ ದಿಢೀರ್ ಭೇಟಿ

ಚಿಕಿತ್ಸಾ ವ್ಯವಸ್ಥೆ, ಊಟದ ಪರಿಶೀಲನೆ, ಸಹನೆಯಿಂದ ಕೆಲಸ ಮಾಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯ-ನಿರ್ವಹಿಸುತ್ತಿರುವ ಆಸ್ಪತ್ರೆಗಳಿಗೆ ಬುಧವಾರ ದಿಢೀರ್ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಚಿಕಿತ್ಸಾ ವ್ಯವಸ್ಥೆಯನ್ನು ಪರಿಶೀಲಿಸಿದರು.

ಗ್ಯಾಸ್ಟ್ರೋಎಂಟರಾಲಜಿ ವಿಜ್ಞಾನ ಮತ್ತು ಅಂಗಾಂಗ ಕಸಿ ಸಂಸ್ಥೆ (ಐಗಾಟ್), ವಾಣಿವಿಲಾಸ ಆಸ್ಪತ್ರೆ ಹಾಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಅಪಘಾತ ಮತ್ತು ತುರ್ತು ಆರೈಕೆ ಕೇಂದ್ರಕ್ಕೆ ಭೇಟಿ ನೀಡಿದರು. ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಅವರಿಗೆ ಸಾಥ್ ನೀಡಿದರು.

ಸಕಾಲದಲ್ಲಿ ಸೂಕ್ತ ಚಿಕಿತ್ಸೆ ದೊರಕುತ್ತಿದೆಯೇ? ಚಿಕಿತ್ಸೆ ಪಡೆಯುವಲ್ಲಿ ಏನಾದರೂ ಅಡೆತಡೆಗಳಿವೆಯೇ? ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿ ಸ್ಪಂದನೆ ಹೇಗಿದೆ ಎಂದು ರೋಗಿಗಳು ಹಾಗೂ ಅವರ ಸಹಾಯಕರನ್ನು ಪ್ರಶ್ನಿಸಿದರು. ರೋಗಿಗಳಿಗೆ ಸಮಸ್ಯೆಯಾ-ಗದಂತೆ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುವಂತೆ ಇದೇ ವೇಳೆ ವೈದ್ಯಾ-ಧಿಕಾರಿಗಳಿಗೆ ಸೂಚಿಸಿದರು. ಆಸ್ಪತ್ರೆ-ಯಲ್ಲಿನ ಊಟವನ್ನೂ ತರಿಸಿಕೊಂಡು ಪರಿಶೀಲಿಸಿದರು.

'ವೈದ್ಯರು ರೋಗಿಗಳನ್ನು ಸಹಾನುಭೂತಿಯಿಂದ ಕಾಣಬೇಕು. ಉಚಿತವಾಗಿ ಚಿಕಿತ್ಸೆ ಒದಗಿಸುತ್ತಿರುವುದರಿಂದ ಸಹಜವಾಗಿ ರೋಗಿಗಳ ದಟ್ಟಣೆ ಹೆಚ್ಚಿರುತ್ತದೆ. ವೈದ್ಯರು ಸಹನೆಯಿಂದ ಕೆಲಸ ಮಾಡಬೇಕು. ಯಾರ ಬಳಿಯೂ ಹಣ ಪಡೆಯಬಾರದು' ಎಂದು ವೈದ್ಯರಿಗೆ ಸೂಚಿಸಿದರು.

ಹಾಸಿಗೆ ಹೆಚ್ಚಳ: ಬಳಿಕ ಸುದ್ದಿಗಾರ-ರೊಂದಿಗೆ ಮಾತನಾಡಿದ ಅವರು, 'ವಾಣಿವಿಲಾಸ ಆಸ್ಪತ್ರೆಯಲ್ಲಿ ಪ್ರತಿನಿತ್ಯ 40ಕ್ಕೂ ಹೆಚ್ಚು ಹೆರಿಗೆಗಳಾಗುತ್ತವೆ. ವಿವಿಧ ರಾಜ್ಯದ ಜನರು ಇಲ್ಲಿ ಚಿಕಿತ್ಸೆಗಾಗಿ ಬರುತ್ತಾರೆ. ತಾಯಂದಿರ ದಟ್ಟಣೆ ಹೆಚ್ಚಿ-ರುವುದರಿಂದ ಆಸ್ಪತ್ರೆಯ ಹಾಸಿಗೆಗಳನ್ನು ಹೆಚ್ಚು ಮಾಡಬೇಕಿದೆ. ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು' ಎಂದು ತಿಳಿಸಿದರು. ಖಾಸಗಿ ಆಂಬುಲೆನ್ಸ್ ದಂಧೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಸರ್ಕಾರದಿಂದ 108 ಆಂಬುಲೆನ್ಸ್ ಸೇವೆ ಲಭ್ಯವಿದ್ದು, ಅದನ್ನು ಬಳಸಿಕೊಳ್ಳಬೇಕು' ಎಂದು ಹೇಳಿದರು. 'ಬಿಎಂಸಿಆರ್‌ಐ ಆಸ್ಪತ್ರೆಗಳ ಸಂಕೀರ್ಣದಲ್ಲಿ ವಾಹನ ನಿಲುಗಡೆಗೆ ಹಣ ಪಡೆಯುತ್ತಿರುವ ಬಗ್ಗೆ ಪರಿಶೀಲಿಸಲಾಗುವುದು' ಎಂದರು.



ಗ್ಯಾಸ್ಟ್ರೋಎಂಟರಾಲಜಿ ವಿಜ್ಞಾನ ಮತ್ತು ಅಂಗಾಂಗ ಕಸಿ ಸಂಸ್ಥೆಯ ಆವರಣದಲ್ಲಿ ರೋಗಿಗಳ ಸಹಾಯಕರನ್ನು ಸಿದ್ದರಾಮಯ್ಯ ವಿಚಾರಿಸಿದರು. ಶರಣಪ್ರಕಾಶ ಪಾಟೀಲ ಉಪಸ್ಥಿತರಿದ್ದರು

'ದುಬಾರಿ ವೆಚ್ಚದ ಕಸಿ ಉಚಿತ'

'ಐಗಾಟ್ ಸದ್ಯ 120 ಹಾಸಿಗೆಗಳನ್ನು ಹೊಂದಿದೆ. ಖಾಸಗಿ ವಲಯದಲ್ಲಿ ಪಿತ್ತಜನಕಾಂಗ ಕಸಿಗೆ ₹30 ಲಕ್ಷದಿಂದ ₹40 ಲಕ್ಷ ವೆಚ್ಚವಾಗುತ್ತದೆ. ಆದರೆ, ಇಲ್ಲಿ ಉಚಿತವಾಗಿ ಮಾಡಲಾಗುತ್ತಿದೆ.

ಉತ್ತಮ ವೈದ್ಯಕೀಯ ಸೇವೆ ಮತ್ತು ಆರೈಕೆಯೊಂದಿಗೆ ರೋಗಿಗಳಿಗೆ ಗುಣಮಟ್ಟದ ಆಹಾರವನ್ನೂ ನೀಡಲಾಗುತ್ತಿದೆ. ಇಲ್ಲಿಗೆ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆಯೂ ಹೆಚ್ಚಿದೆ. ಹಾಸಿಗೆ ಸಾಮರ್ಥ್ಯವನ್ನು 300ಕ್ಕೆ ಹೆಚ್ಚಿಸುವ ಬೇಡಿಕೆ ಇದೆ.

ಈ ಪ್ರಸ್ತಾವ ಸರ್ಕಾರದ ಮುಂದಿದ್ದು, ಪರಿಗಣಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಏಣಿಯಿಂದ ಬಿದ್ದು ಯುವಕ ಸಾವು

ಮಾಗಡಿ: ಮನೆ ಚಾವಣಿ ಮೇಲಿದ್ದ ಮಳೆ ನೀರು ಸ್ವಚ್ಛಗೊಳಿಸಲು ಹೋಗಿದ್ದ ಯುವಕ ಏಣಿಯಿಂದ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದಾರೆ.

ಪಟ್ಟಣದ ಕೋಟಪ್ಪನಾಳ್ಯದ ಚಂದ್ರಪ್ಪ (34) ಮೃತರು. ಮಾಗಡಿ ಠಾಣೆಯಲ್ಲಿ ದೂರು ದಾಖಲಾಗಿದೆ.

ಡಿಕೆಶಿ ಓಡಿಸಿದ ಸ್ಕೂಟರ್‌ಗೆ ₹18,500 ದಂಡ


ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೆಬ್ಬಾಳ ಮೇಲ್ಸೇತುವೆ ಕಾಮಗಾರಿ ಪರಿಶೀಲನೆ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಓಡಿಸಿದ ದ್ವಿಚಕ್ರ ವಾಹನದ ಮೇಲೆ ₹18,500 ದಂಡ ಬಾಕಿ ಇದ್ದು, KA04JZ2087 ಸಂಖ್ಯೆಯ ವಾಹನ 34 ಬಾರಿ ಸಂಚಾರ ನಿಯಮ ಉಲ್ಲಂಘನೆ ಮಾಡಿದೆ.

ಬಿಡಿಎ ವತಿಯಿಂದ ಹೆಬ್ಬಾಳ ಜಂಕ್ಷನ್‌ನಲ್ಲಿ ನಿರ್ಮಿಸುತ್ತಿರುವ ಹೊಸ ಮೇಲ್ಸೇತುವೆ ಕಾಮಗಾರಿ ವೀಕ್ಷಿಸಲು ಡಿ.ಕೆ. ಶಿವಕುಮಾರ್ ಅವರು ಅಧಿಕಾರಿ-ಗಳೊಂದಿಗೆ ಬಂದಿದ್ದರು. ಸಚಿವ ಬೈರತಿ ಸುರೇಶ್ ಅವರೊಂದಿಗೆ ಹೆಲ್ಮೆಟ್, ಕಪ್ಪು ಕನ್ನಡಕ ಹಾಕಿಕೊಂಡು ಹೊಸ ಮೇಲ್ಸೇತುವೆ ಮೇಲೆ ಡಿಯೋ ಸ್ಕೂಟರ್‌ನಲ್ಲಿ ಒಂದು ಸುತ್ತು ಹೋಗಿ ಬಂದರು.

ಆದರೆ, ಅವರು ಐಎಸ್‌ಐ ಗುರುತು ಇಲ್ಲದ, ಗುಣಮಟ್ಟ ಹೊಂದಿಲ್ಲದ ಹೆಲ್ಮೆಟ್ ಧರಿಸಿದ್ದರು. ಅಲ್ಲದೇ ಅವರ ಹಿಂದೆಯೇ ಮತ್ತೊಂದು ಸ್ಕೂಟರ್‌ನಲ್ಲಿ ಬರುತ್ತಿದ್ದ ಶಾಸಕ ಎನ್.ಎ. ಹ್ಯಾರಿಸ್ ಅವರು ಹೆಲ್ಮೆಟ್ ಧರಿಸದಿರುವ ದೃಶ್ಯ ವಿಡಿಯೊದಲ್ಲಿ ಸೆರೆಯಾಗಿದೆ.

ಹೆಲ್ಮೆಟ್ ರಹಿತ ಚಾಲನೆ, ಸಿಗ್ನಲ್ ಜಂಪ್ ಸೇರಿ ಹಲವು ಪ್ರಕರಣಗಳು ಈ ವಾಹನದ ಮೇಲೆ ದಾಖಲಾಗಿದ್ದು, ಒಟ್ಟು ₹18,500 ದಂಡ ಪಾವತಿಸುವುದು ಬಾಕಿ ಇದೆ ಎಂದು ಸಂಚಾರ ಪೊಲೀಸ್ ಇಲಾಖೆಯ ದತ್ತಾಂಶಗಳಿಂದ ತಿಳಿದುಬಂದಿದೆ. ವಾಹನದ ಮಾಲೀಕ ಹೆಲ್ಮೆಟ್ ರಹಿತ ಚಾಲನೆ, ಸಿಗ್ನಲ್ ಜಂಪ್ ಸೇರಿ ಹಲವು ಸಂಚಾರ ನಿಯಮ ಉಲ್ಲಂಘಿಸಿರುವುದಕ್ಕೆ ಸಂಬಂಧಿಸಿದಂತೆ ಫೋಟೋಗಳು ಹಿಂದೆಯೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.



ಮೇಲ್ಸೇತುವೆ ಮೇಲೆ ದ್ವಿಚಕ್ರ ವಾಹನದಲ್ಲಿ ಸಂಚರಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

'ಮೀಸಲಾತಿ ಹೆಚ್ಚಳ: ತಮಿಳುನಾಡು ಮಾದರಿ ಅನುಸರಿಸಿ'

ಬೆಂಗಳೂರು: 'ರಾಜ್ಯದಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡದ (ಎಸ್ಟಿ) ಮೀಸಲಾತಿ ಪ್ರಮಾಣ ಹೆಚ್ಚಳ ರಕ್ಷಿಸಿಕೊ-ಳ್ಳಲು ಸರ್ಕಾರ ತಮಿಳುನಾಡು ಮಾದರಿ ಅನುಸರಿಸಲಿ' ಎಂದು ದಲಿತ ಸಂಘರ್ಷ ಸಮಿತಿ–ಕರ್ನಾಟಕ ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಸಂಸ್ಥಾಪಕ ಸದಸ್ಯ ಶ್ರೀಧರ್ ಕಲಿವೀರ, 'ಬಿಜೆಪಿ ಸರ್ಕಾರವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಶೇ 15ರಿಂದ ಶೇ 24ಕ್ಕೆ ಏರಿಕೆ ಮಾಡಿತ್ತು. ಒಟ್ಟಾರೆ ಜಾತಿ ಆಧಾರಿತ ಮೀಸಲಾತಿ ಪ್ರಮಾಣ ಶೇ50ರಿಂದ ಶೇ56ಕ್ಕೆ ಏರಿಕೆಯಾಗಿತ್ತು. ಆದರೆ, ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಮೀಸಲಾತಿ ಏರಿಕೆ ರದ್ದುಪಡಿಸಿದ್ದು, ದಲಿತರಿಗೆ ಅನ್ಯಾಯವಾಗಿದೆ' ಎಂದರು.

ಮಹಿಳೆ ಸಾವು: ಆಸ್ಪತ್ರೆ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯರ ನಿರ್ಲಕ್ಷ್ಯ-ದಿಂದ ಮಹಿಳೆ ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಸಂಬಂಧಿಕರು ಕುಮಾರಸ್ವಾಮಿ ಪೊಲೀಸ್ ಠಾಣೆ ವ್ಯಾಪ್ತಿಯ ಖಾಸಗಿ ಆಸ್ಪತ್ರೆ ಎದುರು ಬುಧವಾರ ಪ್ರತಿಭಟಿಸಿದರು. ಮಂಡ್ಯ ಮೂಲದವರಾದ, ನಗರದ ಜರಗನಹಳ್ಳಿ ನಿವಾಸಿ ತನುಶ್ರೀ(27) ಮೃತಪಟ್ಟವರು.

'ತನುಶ್ರೀ ಅವರು ಹೆರಿಗೆ ನೋವಿನಿಂದ ಸೋಮವಾರ ಆಸ್ಪತ್ರೆಗೆ ದಾಖಲಾಗಿದ್ದು, ಮಂಗಳವಾರ ಬೆಳಿಗ್ಗೆ ಹೆರಿಗೆ ಆಗಿದೆ. ಬುಧವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ವೈದ್ಯರ ನಿರ್ಲಕ್ಷ್ಯ-ದಿಂದ ತನುಶ್ರೀ ಮೃತಪಟ್ಟಿದ್ದಾರೆ' ಎಂದು ಆರೋಪಿಸಿ ಕುಟುಂಬದ ಸದಸ್ಯರು ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಿದರು. ವಿಷಯ ತಿಳಿದು ಕುಮಾರಸ್ವಾಮಿ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದರು.

'ವೈದ್ಯರು ಸಹಜ ಹೆರಿಗೆ ಆಗುತ್ತದೆ ಎಂದಿದ್ದರು. ಆದರೆ, ಸಿಸೇರಿಯನ್ ಮಾಡಿ ಮಗುವನ್ನು ಹೊರತೆಗೆದಿದ್ದಾರೆ. ತನುಶ್ರೀ ಮೂಗಿನಲ್ಲಿ ರಕ್ತ ಸೋರುತ್ತಿತ್ತು. ಆಕೆಯ ಸಾವಿನ ಬಗ್ಗೆ ಮಾಹಿತಿ ನೀಡದ ವೈದ್ಯರು ಒಂದೂವರೆ ಲಕ್ಷ ರೂಪಾಯಿ ಬಿಲ್ ಕಟ್ಟಿಸಿಕೊಂಡಿದ್ದಾರೆ' ಎಂದು ಮೃತರ ಸಂಬಂಧಿಕರು ಆರೋಪಿಸಿದರು.

'ಸದ್ಯ ಎನ್‌ಐಸಿಯುನಲ್ಲಿ ಮಗುವಿಗೆ ಚಿಕಿತ್ಸೆ ನೀಡಲಾಗುತ್ತಿದೆ. 'ರಕ್ತದೊತ್ತಡ ನಿಯಂತ್ರಣಕ್ಕೆ ಬಾರದೆ, ಹೆಚ್ಚಿನ ರಕ್ತಸ್ರಾವದಿಂದಾಗಿ ತನುಶ್ರೀ ಮೃತಪಟ್ಟಿದ್ದಾರೆ. ವೈದ್ಯರ ನಿರ್ಲಕ್ಷ್ಯವಿಲ್ಲವೆಂದು ಆಸ್ಪತ್ರೆ ಸ್ಪಷ್ಟನೆ ನೀಡಿದೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ತನುಶ್ರೀ ಅವರ ಪತಿ ಸುರೇಶ್ ಅವರು ಕುಮಾರಸ್ವಾಮಿ ಠಾಣೆ ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ಯುಡಿಆರ್ ದಾಖಲಿಸಿಕೊಂಡಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: B-SG-Proj-WFD-JTJ-Auto ದಿನಾಂಕ: 31.07.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ವೈಟ್‌ಫೀಲ್ಡ್ – ಜೋಲಾರ್‌ಪೇಟೆ ವಿಭಾಗದಲ್ಲಿ ಸ್ವಯಂ ಚಾಲಿತ ಸಿಗ್ನಲಿಂಗ್ ಸಿಸ್ಟಮ್‌ನ ವ್ಯವಸ್ಥೆ.	ರೂ. 111,49,84,83 .37

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.09.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಯೋಜನೆ/ಬೆಂಗಳೂರು

PUB/364/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸೂಚನೆ ಸಂ.: SWRTMYPR2025WT06 ದಿನಾಂಕ: 31.07.2025

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯಲ್ಲಿ ಟ್ರ್ಯಾಕ್ ಮಷೀನ್‌ಗಳ ಬಳಕೆಗಾಗಿ ಸರಿಯಾಗಿ ಕ್ರಿಂಪಿಂಗ್ ಮಾಡಲಾದ ಸೂಕ್ತ ಎಂಡ್ ಫಿಟಿಂಗ್‌ನೊಂದಿಗೆ ಕೂಡಿದ ಹೈಡ್ರಾಲಿಕ್ ಹೋಸ್‌ಗಳ ಪೂರೈಕೆ.	ರೂ. 91,73,969.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.08.2025, 11:00 ಗಂಟೆಯವರೆಗೆ

ಟೆಂಡರು ಸೂಚನೆ ಸಂ.: GEM/2025/B/6519225 ದಿನಾಂಕ: 31.07.2025

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿಯ ಝುಡ್‌ಬಿಡಿ / ಟಿಎಂ / ವೈಪಿಆರ್ ಮತ್ತು ಎಸ್‌ಟಿಎಂಆರ್‌ಡಿ ಯಲ್ಲಿ 24 ತಿಂಗಳುಗಳ ಅವಧಿಗೆ ಹೌಸ್‌ಕೀಪಿಂಗ್ ಮತ್ತು ಹಾಸ್ಪಿಟಾಲಿಟಿ ಸೇವೆಗಳನ್ನು ಒದಗಿಸುವುದು.	ರೂ. 85,24,766.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.08.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.GeM.gov.in ಗೆ ಲಾಗ್ ಆನ್ ಆಗಿ

ಕಾರ್ಯನಿರ್ವಾಹಕ ಇಂಜಿನಿಯರ್/ಟ್ರ್ಯಾಕ್ ಮಷೀನ್‌ಗಳು/ಬೆಂಗಳೂರು

PUB/359/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: B-SG-Pro-Auto-LOGH-HSRA ದಿನಾಂಕ: 31.07.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ಹೊಸೂರು ವಿಭಾಗದ ಲೊಟ್ಟೆಗೊಲ್ಲಹಳ್ಳಿಯಲ್ಲಿ ಸ್ವಯಂ ಚಾಲಿತ ಸಿಗ್ನಲಿಂಗ್ ಸಿಸ್ಟಮ್‌ನ ವ್ಯವಸ್ಥೆ.	ರೂ. 61,18,86,228.07

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.09.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಯೋಜನೆ/ಬೆಂಗಳೂರು

PUB/363/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಇ-ಪ್ರೊಕ್ಯೂರ್‌ಮೆಂಟ್ ಇ-ಟೆಂಡರು ಸೂಚನೆ ಸಂ.: SE03-2025-26

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು – ಕ್ಯಾರಿಯೇಜ್ ಕಾರ್ಯಾಗಾರದಲ್ಲಿ ಎಲ್‌ಹೆಚ್‌ಬಿ ಎಸಿ ಕೋಚ್‌ಗಳಲ್ಲಿ ಪ್ರಮುಖ ಪ್ಯಾಂಟ್ರಿ (ಬಫೆಟ್ ಕಾರ್) ಮತ್ತು ಮಿನಿ–ಪಾರ್ಟಿ ಉಪಕರಣಗಳಿಗೆ ರಿಪೇರಿ ಮತ್ತು ಸರ್ವೀಸಿಂಗ್.	ರೂ. 48,73,952.38

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22.08.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಮೈಸೂರು

PUB/362/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ದಕ್ಷಿಣ ಮಧ್ಯ ರೈಲ್ವೆ

ನಮ್ಮನ್ನು ಅನುಸರಿಸಿ @SCRailwayindia

ದಕ್ಷಿಣ ಮಧ್ಯ ರೈಲ್ವೆಯ ಟೆಂಡರ್ ಪ್ರಕಟಣೆಗಳ ವಿವರಗಳನ್ನು ನಮ್ಮ ವೆಬ್‌ಸೈಟ್ www.scr.indianrailways.gov.in ಇಲ್ಲಿ ವೀಕ್ಷಿಸಬಹುದು.

ತೆರೆದ ಇ–ಟೆಂಡರ್ ಪ್ರಕಟಣೆ ಸಂಖ್ಯೆ: N/E.29/Trd/Tender/12/2025-26, ದಿನಾಂಕ: 29.07.2025 PUB/0944

ಕೆಳಗಿನ ಕಾಮಗಾರಿಗಳಿಗಾಗಿ ಮೊಹರು ಹಾಕಿದ ಟೆಂಡರ್‌ಗಳನ್ನು ಕೆಳಗೆ ಸಹಿ ಮಾಡಿದವರಿಂದ ಆಹ್ವಾನಿಸಲಾಗಿದೆ.

ಕ್ರ.ಸಂ. 1: ಟೆಂಡರ್ ಸಂಖ್ಯೆ: ಎನ್/ಇ.29/ಟಿಆರ್‌ಡಿ/ಟೆಂಡರ್/12/2025–26 ಕಾಮಗಾರಿಯ ವಿವರ: ಇದೇ ವಿಭಾಗದಲ್ಲಿ ಓಹೆಚ್‌ಇ ಮೂಲಸೌಕರ್ಯದ ಸುಧಾರಣೆ ಗಾಗಿ, ಪಕ್ಷಿಗಳ ಹಾವಳಿಯನ್ನು ತಪ್ಪಿಸಲು ಟ್ರಾಕ್ಷನ್ ಸ್ಥಾಪನೆಗಳಲ್ಲಿ ಮಂಕಿ ಆಂಟಿ ಕ್ಲೈಂಬಿಂಗ್ ಸಾಧನ ಮತ್ತು ಹೆಚ್ಚಿನ ಸಾಂದ್ರತೆಯ ಪಾಲಿಥೀನ್ ಜಾಲರ ಅಳವಡಿಸುವುದು.

ಪೂರ್ಣಗೊಳಿಸಬೇಕಾದ ಅವಧಿ: 12 ತಿಂಗಳುಗಳು ಅಂದಾಜು ಮೌಲ್ಯ: ರೂ. 94,72,929.85 ಬಿಡ್ ಭದ್ರತೆ: ರೂ. 1,89,500.00

ಮುಕ್ತಾಯ ದಿನಾಂಕ ಮತ್ತು ಸಮಯ: 20.08.2025, 11:00 ಗಂಟೆಗೆ

ಸೂಚನೆ: ಟೆಂಡರ್ ತೆರೆಯುವ ದಿನದಂದು ರಜೆ ಇದ್ದರೆ, ಟೆಂಡರ್ ಅನ್ನು ಮುಂದಿನ ಕೆಲಸದ ದಿನದಂದು ತೆರೆಯಲಾಗುತ್ತದೆ. ವಿವರವಾದ ಷರತ್ತುಗಳಿಗಾಗಿ "ನಮ್ಮ ಸೈಟ್ www.Ireps.gov.in ಗೆ ಭೇಟಿ ನೀಡಿ".

A1167 ವಿಭಾಗೀಯ ವಿದ್ಯುತ್ ಇಂಜಿನಿಯರ್/ಟಿಆರ್‌ಡಿ/ನಾಂದೇಡ್

ಹೆಚ್ಚಿನ ಟೆಂಡರ್ ಷರತ್ತುಗಳು/ ವಿವರಗಳಿಗೆ ಹಾಗೂ ಟೆಂಡರ್ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು http://www.ireps.gov.in ಅಥವಾ http://www.scr.indianrailways.gov.in ವೆಬ್‌ಸೈಟ್‌ಗಳಿಗೆ ಭೇಟಿ ನೀಡಿ.

ನೈಋತ್ಯ ರೈಲ್ವೆ

ಆಸಕ್ತಿಯ ಅಭಿವ್ಯಕ್ತತೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಸಾರಿಗೆದಾರರು, ಲಾಜಿಸ್ಟಿಕ್ಸ್ ಸೇವಾ ಪೂರೈಕೆದಾರರು, ಅಭಿವೃದ್ಧಿಶೀಲ ಸಂಸ್ಥೆಗಳು, ಕಂಟೇನರ್ ರೈಲು ನಿರ್ವಾಹಕರು, ಸರ್ಕಾರ / ಅರೆ ಸರ್ಕಾರಿ ಸಂಸ್ಥೆಗಳು ಮತ್ತು ಕೇಂದ್ರ / ರಾಜ್ಯ ಸರ್ಕಾರದ ಅಡಿಯಲ್ಲಿ ಶಾಸನಬದ್ಧ ಸಂಸ್ಥೆಗಳು ಇತ್ಯಾದಿಗಳಿಂದ ಬೆಂಗಳೂರು ವಿಭಾಗದ ಹನಕೆರೆ ನಿಲ್ದಾಣದಲ್ಲಿರುವ ರೈಲ್ವೆ ಭೂಮಿಯಲ್ಲಿ ಗತಿ ಶಕ್ತಿ ಮಲ್ಟಿ–ಮೋಡಲ್ ಕಾರ್ಗೋ ಟರ್ಮಿನಲ್‌ಗಳನ್ನು (ಜಿಸಿಟಿ) ಸಂಪೂರ್ಣವಾಗಿ ಅಥವಾ ಭಾಗಶಃ ಅಭಿವೃದ್ಧಿಪಡಿಸಲು ಆಸಕ್ತಿಯ ಅಭಿವ್ಯಕ್ತತೆಯನ್ನು ಆಹ್ವಾನಿಸಿದ್ದಾರೆ.

ಇಒಐ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13.08.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

PUB/365/AAMO/PRB/SWR/2025-26 ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

DIAGEO India

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಷನ್ ನಂಬರ್: L01551KA1999PLC024991

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001, ಕರ್ನಾಟಕ, ಭಾರತ.

ಫೋನ್: +91 80 2221 0705; ಫ್ಯಾಕ್ಸ್: +91 80 2224 5253

ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com

26ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ ಮತ್ತು ಇ–ಮತದಾನದ ಮಾಹಿತಿ

ಕಂಪನಿಯ **26ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ('AGM') ಶುಕ್ರವಾರ, 29 ಆಗಸ್ಟ್ 2025 ರಂದು 3:30 ಗಂಟೆಗೆ IST ಕ್ಕೆ** ಸಮಯಕ್ಕೆ ಅನುಗುಣವಾಗಿ ವೀಡಿಯೊ ಕಾನ್ಫರೆನ್ಸಿಂಗ್ **('VC')** / ಇತರ ಆಡಿಯೋ ವಿಷುಯಲ್ ಮೀನ್ಸ್ **('OAVM')** ಮೂಲಕ ಆಯೋಜಿಸಲಾಗಿದೆ, ಕಂಪನಿಯ ನೋಂದಾಯಿತ ಕಚೇರಿಯು ಸ್ಥಳವೆಂದು ಪರಿಗಣಿಸಲಾಗಿದೆ ಎಂದು **AGM** ಸೂಚನೆ ('ನೋಟಿಸ್')ನಲ್ಲಿ ಸೂಚಿಸಿದಂತೆ ವ್ಯವಹಾರಗಳನ್ನು ವಹಿವಾಟು ಮಾಡಲು ಕಂಪನಿಗಳ ಕಾಯಿದೆ, 2013 **('ಆಕ್ಟ್')** ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 **('ಪಟ್ಟಿ ಮಾಡುವ ನಿಯಮಗಳು')** ಅನ್ವಯವಾಗುವ ನಿಬಂಧನೆಗಳಿಗೆ ಅನುಗುಣವಾಗಿ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('MCA ಸುತ್ತೋಲೆಗಳು') ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ **('SEBI')** ಹೊರಡಿಸಿದ ಎಲ್ಲಾ ಅನ್ವಯವಾಗುವ ಸುತ್ತೋಲೆಗಳೊಂದಿಗೆ ಓದಿ ಕಾಲಕಾಲಕ್ಕೆ VC/OAVM ಮೂಲಕ ಸಾಮಾನ್ಯ ಸಭೆಗಳನ್ನು ಕರೆಯುವುದಕ್ಕಾಗಿ ಈ ಮೂಲಕ ಸೂಚನೆ ನೀಡಲಾಗಿದೆ.

2024-25 ('FY 2024-25') ಹಣಕಾಸು ವರ್ಷದ ಸಮಗ್ರ ವಾರ್ಷಿಕ ವರದಿಯೊಂದಿಗೆ (ಆಡಿಟ್ ಮಾಡಿದ ಹಣಕಾಸು ಹೇಳಿಕೆಗಳನ್ನು ಒಳಗೊಂಡಂತೆ) ಸೂಚನೆಯನ್ನು ಆಗಸ್ಟ್ 6, 2025 ರಂದು ಕಂಪನಿ/ ಠೇವಣಿ ಭಾಗವಹಿಸುವವರು (`DP') / ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ('RTA') ನಲ್ಲಿ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಇಮೇಲ್ ವಿಳಾಸ ನೋಂದಾಯಿಸಿದ ಸದಸ್ಯರಿಗೆ ಕಳುಹಿಸಲಾಗುತ್ತಿದೆ. ಹೆಚ್ಚುವರಿಯಾಗಿ, SEBI ಪಟ್ಟಿ ನಿಯಮಗಳ ನಿಯಮ 36(1)(b)ಗೆ ಅನುಗುಣವಾಗಿ, ಕಂಪನಿ/ RTA/ DP ಯಲ್ಲಿ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರಿಗೆ FY 2024-25ರ ಸಮಗ್ರ ವಾರ್ಷಿಕ ವರದಿಯನ್ನು ಪ್ರವೇಶಿಸಲು ವೆಬ್‌ಲಿಂಕ್ ಮತ್ತು QR ಕೋಡ್ ಅನ್ನು ಒದಗಿಸುವ ಪತ್ರವನ್ನು ಕಳುಹಿಸಲಾಗುತ್ತಿದೆ.

FY 2024-25ರ ಸೂಚನೆ ಮತ್ತು ಸಂಯೋಜಿತ ವಾರ್ಷಿಕ ವರದಿಯ ಪ್ರತಿಯನ್ನು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳಾದ BSE ಲಿಮಿಟೆಡ್‌ನ ವೆಬ್‌ಸೈಟ್ www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ನಲ್ಲಿ ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್‌ನ (`CDSL') ವೆಬ್‌ಸೈಟ್ https://www.evotingindia.com/noticeResults.jsp ನಲ್ಲಿ ಲಭ್ಯವಿದೆ.

ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ರೊಂದಿಗೆ ಓದಲಾಗಿ ಕಾಯಿದೆಯ ಸೆಕ್ಷನ್ 108 ರ ಪ್ರಕಾರ, ಪಟ್ಟಿ ನಿಯಮಾವಳಿಗಳ ನಿಯಮಾವಳಿ 44 ಮತ್ತು ಸಾಮಾನ್ಯ ಸಭೆಗಳಲ್ಲಿ **('SS-2')** ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್, CDSL ನ ಸೇವೆಗಳ ಮೂಲಕ, ಅದರ ಎಲ್ಲಾ ಸದಸ್ಯರಿಗೆ ನೋಟಿಸ್‌ನಲ್ಲಿ ಸೂಚಿಸಲಾದ ಎಲ್ಲಾ ನಿರ್ಣಯಗಳ ಮೇಲೆ ವಿದ್ಯುನ್ಮಾನವಾಗಿ ಮತ ಚಲಾಯಿಸಲು ಕಂಪನಿಯು ಇ–ವೋಟಿಂಗ್ ಸೌಲಭ್ಯವನ್ನು ಒದಗಿಸುತ್ತಿದೆ.

ಎಜಿಎಂ ಮತ್ತು ಇ–ವೋಟಿಂಗ್‌ಗೆ ಸಂಬಂಧಿಸಿದ ಪ್ರಮುಖ ವಿವರಗಳು ಕೆಳಕಂಡಂತಿವೆ:

#	ವಿವರಗಳು	ರಿಮಾರ್ಕ್‌ಗಳು
1	ಎಮೋಟ್ ಇ–ವೋಟಿಂಗ್‌ಗಾಗಿ ಲಿಂಕ್	https://evoting.cdslindia.com/Evoting/EvotingLogin
2	ಸದಸ್ಯರ ಮತದಾನದ ಅರ್ಹತೆಯನ್ನು ನಿರ್ಧರಿಸಲು ಕಟ್–ಆಫ್ ದಿನಾಂಕ	**ಶುಕ್ರವಾರ, 22ನೇ ಆಗಸ್ಟ್ 2025.** ಸದಸ್ಯರ ಮತದಾನದ ಹಕ್ಕುಗಳು ಕಟ್–ಆಫ್ ದಿನಾಂಕದಂದು ಕಂಪನಿಯಲ್ಲಿ ಅವರ ಷೇರುಗಳ ಅನುಪಾತದಲ್ಲಿರುತ್ತದೆ.
3	ರಿಮೋಟ್ ಇ–ವೋಟಿಂಗ್ ಅವಧಿ	**ಸೋಮವಾರ, 25ನೇ ಆಗಸ್ಟ್ 2025 ರಿಂದ 09:00 ಗಂಟೆಗೆ IST ಗೆ** ಪ್ರಾರಂಭವಾಗುತ್ತದೆ ಮತ್ತು **ಗುರುವಾರ, 28ನೇ ಆಗಸ್ಟ್ 2025 ರಂದು 17:00 ಗಂಟೆಗೆ IST ಗೆ** ಕೊನೆಗೊಳ್ಳುತ್ತದೆ. ರಿಮೋಟ್ ಇ–ವೋಟಿಂಗ್ ಮಾಡ್ಯೂಲ್ ಅನ್ನು ಸಿಡಿಎಸ್‌ಎಲ್ ನಂತರ ನಿಷ್ಕ್ರಿಯಗೊಳಿಸುತ್ತದೆ. ಡಿಮೆಟಿರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ, ಭೌತಿಕ ರೂಪದಲ್ಲಿ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ವಿಧಾನವನ್ನು, ನೋಟಿಸ್‌ನಲ್ಲಿ ನೀಡಲಾಗಿದೆ. ಒಮ್ಮೆ ನಿರ್ಣಯಿಸಿದ ಮೇಲೆ ಸದಸ್ಯರು ಮತ ಚಲಾಯಿಸಿದರೆ, ಸದಸ್ಯರು ಅದನ್ನು ತರುವಾಯ ಬದಲಾಯಿಸಲು ಅನುಮತಿಸಲಾಗುವುದಿಲ್ಲ. VC/OAVM ಸೌಲಭ್ಯದ ಮೂಲಕ AGM ನಲ್ಲಿ ಉಪಸ್ಥಿತರಿರುವ ಸದಸ್ಯರು ಮತ್ತು ರಿಮೋಟ್ ಇ–ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸದ ಮತ್ತು ಹಾಗೆ ಮಾಡದಂತೆ ನಿರ್ಬಂಧಿಸದ ಸದಸ್ಯರು AGM ಸಮಯದಲ್ಲಿ ಇ–ಮತದಾನ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ರಿಮೋಟ್ ಇ–ವೋಟಿಂಗ್ ಮೂಲಕ ಮತ ಚಲಾಯಿಸಿದ ಸದಸ್ಯರು AGM ಗೆ ಹಾಜರಾಗಬಹುದು ಆದರೆ AGM ಸಮಯದಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.
4	ಇ–ವೋಟಿಂಗ್‌ಗಾಗಿ ಸ್ಕ್ರೂಟಿನೈಸರ್	ಶ್ರೀ ಸುಧೀರ್ ವಿ ಹುಲ್ಯಾಳ್ಕರ್, ಕಂಪನಿ ಸೆಕ್ರೆಟರಿ ಇನ್ ಪ್ರಾಕ್ಟೀಸ್ (COP:6137) ಅಲಭ್ಯತೆಯಲ್ಲಿ ಶ್ರೀ. ಸುಧೀಂದ್ರ ಕೆ ಎಸ್ ಕಂಪನಿ ಸೆಕ್ರೆಟರಿ ಇನ್ ಪ್ರಾಕ್ಟೀಸ್ (COP:8190) ಇವರನ್ನು ಇ–ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ಪರಿಶೀಲಿಸಲು ಆಯ್ಕೆಯಾಗಿರುತ್ತಾರೆ.
5	RTA ಸಂಪರ್ಕ ವಿವರಗಳು	**ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್** ಘಟಕ: ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್, # 30, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಬೆಂಗಳೂರು-560 003, ಕರ್ನಾಟಕ, ಭಾರತ ದೂರವಾಣಿ ಸಂಖ್ಯೆ: 080 23460815/ 818 ಅಥವಾ ಫ್ಯಾಕ್ಸ್ ಸಂಖ್ಯೆ 0802346089 ಇಮೇಲ್: bglsta@integratedindia.in
6	ವಿಸಿ ಭಾಗವಹಿಸುವಿಕೆ ಮತ್ತು ಇ–ಮತದಾನಕ್ಕಾಗಿ ಎಜಿಎಂ ಮೊದಲು ಅಥವಾ ಸಮಯದಲ್ಲಿ ಯಾವುದೇ ಪ್ರಶ್ನೆ/ ಕುಂದುಕೊರತೆ/ ತಾಂತ್ರಿಕ ನೆರವು ಮತ್ತು ಬೆಂಬಲಕ್ಕಾಗಿ ಸಹಾಯವಾಣಿ ವಿವರಗಳು	ಸದಸ್ಯರು helpdesk.evoting@cdslindia.com ಗೆ ಇಮೇಲ್ ಬರೆಯಬಹುದು ಅಥವಾ ಟೋಲ್–ಫ್ರೀ 1800 21 09911 ಸಂಖ್ಯೆಯನ್ನು ಸಂಪರ್ಕಿಸಬಹುದು . ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮತದಾನ ಮಾಡುವ ಸೌಲಭ್ಯಕ್ಕೆ ಸಂಬಂಧಿಸಿದ ಯಾವುದೇ ಕುಂದುಕೊರತೆಗಳಿದ್ದಲ್ಲಿ ಶ್ರೀ. ರಾಕೇಶ್ ದಳ್ವಿ, ಸೀನಿಯರ್ ಮ್ಯಾನೇಜರ್, ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್, ಎ ವಿಂಗ್, 25 ನೇ ಮಹಡಿ, ಮ್ಯಾರಥಾನ್ ಫ್ಯೂಚರೆಕ್ಸ್, ಮಫತ್‌ಲಾಲ್ ಮಿಲ್ ಕಾಂಪೌಂಡ್ಸ್, ಎನ್ ಎಂ ಜೋಶಿ ಮಾರ್ಗ, ಲೋವರ್ ಪರೇಲ್ (ಪೂರ್ವ), ಮುಂಬೈ – 400 013, ಮಹಾರಾಷ್ಟ್ರ, ಭಾರತ, ಅಥವಾ helpdesk.evoting@cdslindia.com ಇಮೇಲ್ ಕಳುಹಿಸಿ ಅಥವಾ ಟೋಲ್–ಫ್ರೀ 1800 21 09911 ಸಂಪರ್ಕಿಸಿ.

ಇಮೇಲ್ ಐಡಿಗಳನ್ನು ನೋಂದಾಯಿಸುವ/ನವೀಕರಣ ಮಾಡುವ ವಿಧಾನ:

ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರು ಈ ಕೆಳಗಿನ ರೀತಿಯಲ್ಲಿ ನೋಂದಾಯಿಸಲು ವಿನಂತಿಸಲಾಗಿದೆ:

1) ಡಿಮೆಟಿರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ನಿಮ್ಮ ಇಮೇಲ್ ಐಡಿಯನ್ನು ನಿಮ್ಮ ಠೇವಣಿ ಭಾಗವಹಿಸುವವರೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ; ಮತ್ತು
2) ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ನಿಮ್ಮ ಇಮೇಲ್ ಐಡಿಯನ್ನು ಆರ್‌ಟಿಎಗೆ bglsta@integratedindia.in ನಲ್ಲಿ ಬರೆಯುವ ಮೂಲಕ ನೋಂದಾಯಿಸಲು ವಿನಂತಿಸಲಾಗಿದೆ, ಜೊತೆಗೆ ಸರಿಯಾಗಿ ಭರ್ತಿ ಮಾಡಿದ ISR-1 ಫಾರ್ಮ್ https://www.diageoindia.com/en/investors/shareholder-centre/downloads ನಲ್ಲಿ ಲಭ್ಯವಿದೆ.

ನೋಟಿಸ್ ರವಾನೆಯ ನಂತರ ಷೇರುಗಳನ್ನು ಸ್ವಾಧೀನಪಡಿಸಿಕೊಂಡ ಸದಸ್ಯರಿಗೆ ಲಾಗಿನ್ ವಿವರಗಳು, ಆದರೆ ಕಟ್–ಆಫ್ ದಿನಾಂಕದಂದು ಷೇರುಗಳನ್ನು ಹೊಂದಿವೆ:

ನೋಟಿಸ್ ರವಾನೆಯ ನಂತರ ಕಂಪನಿಯ ಸದಸ್ಯರಾಗುವ ಮತ್ತು ಕಟ್–ಆಫ್ ದಿನಾಂಕದಂದು ಷೇರುಗಳನ್ನು ಹೊಂದಿರುವ ಯಾವುದೇ ವ್ಯಕ್ತಿಯು ರಿಮೋಟ್ ಇ–ವೋಟಿಂಗ್ ಮೂಲಕ ಮತ ಚಲಾಯಿಸಬಹುದು ಅಥವಾ ಇಮೇಲ್ ಕಳುಹಿಸುವ ಮೂಲಕ ಲಾಗಿನ್ ರುಜುವಾತುಗಳನ್ನು ಪಡೆಯುವ ಮೂಲಕ AGM ಸಮಯದಲ್ಲಿ ಮತ ಚಲಾಯಿಸಬಹುದು. helpdesk.evoting@cdslindia.com ಅಥವಾ bglsta@integratedindia.in ಅವರ ಫೋಲಿಯೊ ಸಂಖ್ಯೆ / ಡಿಪಿ ಐಡಿ ಕ್ಲೈಂಟ್ ಐಡಿ ಯನ್ನು ನಮೂದಿಸುವ ಮೂಲಕ ಆದಾಗ್ಯೂ, ಅಂತಹ ಸದಸ್ಯರು ಈಗಾಗಲೇ ಇ–ವೋಟಿಂಗ್‌ಗಾಗಿ CDSL ನಲ್ಲಿ ನೋಂದಾಯಿಸಿದ್ದರೆ, ನಂತರ ಅಸ್ತಿತ್ವದಲ್ಲಿರುವ ಲಾಗಿನ್ ರುಜುವಾತುಗಳನ್ನು ಅವರ ಮತ ಚಲಾಯಿಸಲು ಬಳಸಬಹುದು.

ಅಂತಹ ಸದಸ್ಯರು ಕಂಪನಿಯ ವೆಬ್‌ಸೈಟ್ www.diageoindia.com ನಿಂದ ಸೂಚನೆಯನ್ನು ಪಡೆಯಬಹುದು ಅಥವಾ investor.india@diageo.com ಅಥವಾ bglsta@integratedindia.in ಗೆ ಬರೆಯಬಹುದು.

ಅಂತಿಮ ಡಿವಿಡೆಂಡ್, ದಾಖಲೆ ದಿನಾಂಕ ಮತ್ತು ಡಿವಿಡೆಂಡ್ (ಟಿಡಿಎಸ್) ಮೂಲದಲ್ಲಿ ತೆರಿಗೆ ಕಡಿತಗೊಳಿಸಬಹುದಾದ ಸೂಚನೆಗಳು:

AGM ನಲ್ಲಿ ಸದಸ್ಯರ ಅನುಮೋದನೆಗಾಗಿ ಕಂಪನಿಯ ನಿರ್ದೇಶಕರ ಮಂಡಳಿಯು FY 2024-25ಗೆ ಪ್ರತಿ ಷೇರಿಗೆ INR 8ರ ಅಂತಿಮ ಲಾಭಾಂಶವನ್ನು ಶಿಫಾರಸು ಮಾಡಿದೆ. ಇದಲ್ಲದೆ, ಅಂತಿಮ ಲಾಭಾಂಶವನ್ನು ಪಡೆಯಲು ಅರ್ಹರಾಗಿರುವ ಸದಸ್ಯರನ್ನು ನಿರ್ಧರಿಸಲು ಮಂಡಳಿಯು ಶುಕ್ರವಾರ, 1ನೇ ಆಗಸ್ಟ್ 2025 ಅನ್ನು ದಾಖಲೆ ದಿನಾಂಕವಾಗಿ ನಿಗದಿಪಡಿಸಿದೆ. ಅಂತಿಮ ಲಾಭಾಂಶವನ್ನು ಅನುಮೋದಿಸಿದರೆ, ಗುರುವಾರ, 4ನೇ ಸೆಪ್ಟೆಂಬರ್ 2025 ರಂದು ಅಥವಾ ನಂತರ ಪಾವತಿಸಲಾಗುತ್ತದೆ.

ಸದಸ್ಯರಿಗೆ ವಿದ್ಯುನ್ಮಾನವಾಗಿ ಲಾಭಾಂಶವನ್ನು ಪಾವತಿಸಲು ಠೇವಣಿ ಭಾಗವಹಿಸುವವರು ಅಥವಾ ಆರ್‌ಟಿಎ ಒದಗಿಸಿರುವ ಬ್ಯಾಂಕ್ ಖಾತೆ ವಿವರಗಳನ್ನು ಕಂಪನಿಗಳು ಬಳಸುವುದನ್ನು ಸೆಬಿ ಕಡ್ಡಾಯಗೊಳಿಸಿದೆ ಎಂಬುದನ್ನು ಸದಸ್ಯರು ಗಮನಿಸಬೇಕು.

ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಲಾಭಾಂಶವನ್ನು ಪಾವತಿಸಲಾಗುತ್ತದೆ, ಏಕೆಂದರೆ ಅವರ ಫೋಲಿಯೊಗಳು SEBI ಅವಶ್ಯಕತೆಗಳ ಪ್ರಕಾರ KYC ದೂರು ಆಗಿರುತ್ತವೆ. ಅಂತಹ ಫೋಲಿಯೊಗಳನ್ನು ನವೀಕರಿಸದಿದ್ದರೆ, ಸದಸ್ಯರು ತಮ್ಮ KYC ಅನ್ನು ನವೀಕರಿಸುವವರೆಗೆ ಅಂತಹ ಫೋಲಿಯೊಗಳಿಗೆ ಸಂಬಂಧಿಸಿದ ಲಾಭಾಂಶವನ್ನು ತಡೆಹಿಡಿಯಲಾಗುತ್ತದೆ.

ಆದಾಯ ತೆರಿಗೆ ಕಾಯಿದೆ, 1961ರ ಪ್ರಕಾರ, ಡಿವಿಡೆಂಡ್ ಆದಾಯವು 1ನೇ ಏಪ್ರಿಲ್ 2020ರಿಂದ ಸದಸ್ಯರ ಕೈಯಿಂದ ತೆರಿಗೆಗೆ ಒಳಪಡುತ್ತದೆ ಮತ್ತು ಕಂಪನಿಯು ಸದಸ್ಯರಿಗೆ ನಿಗದಿತ ದರಗಳಲ್ಲಿ ಪಾವತಿಸಿದ ಲಾಭಾಂಶದಿಂದ ತೆರಿಗೆಯನ್ನು ತಡೆಹಿಡಿಯುವ ಅಗತ್ಯವಿದೆ ಎಂದು ಸದಸ್ಯರು ಮತ್ತಷ್ಟು ಗಮನಿಸಬಹುದು.

ತೆರಿಗೆ ತಡೆಹಿಡಿಯುವ ಅಗತ್ಯತೆಗಳ ಅನುಸರಣೆಯನ್ನು ಸಕ್ರಿಯಗೊಳಿಸಲು, ಸದಸ್ಯರು ತಮ್ಮ ವಸತಿ ಸ್ಥಿತಿ, ಪ್ಯಾನ್, ವರ್ಗವನ್ನು ತಮ್ಮ ಡಿಪಿಗಳೊಂದಿಗೆ ಪೂರ್ಣಗೊಳಿಸಲು ಮತ್ತು/ಅಥವಾ ನವೀಕರಿಸಲು ವಿನಂತಿಸಲಾಗಿದೆ, ಅವರು ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿದ್ದರೆ ಅಥವಾ ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದರೆ, ದಾಖಲೆಗಳನ್ನು ಕಳುಹಿಸುವ ಮೂಲಕ RTA ಯೊಂದಿಗೆ ಇಮೇಲ್ ಮೂಲಕ bglsta@integratedindia.in. 'ಡಿವಿಡೆಂಡ್‌ನ ಮೂಲದಲ್ಲಿ ಕಡಿತಗೊಳಿಸಲಾದ ತೆರಿಗೆ ಮೇಲಿನ FAQಗಳು' ಕಂಪನಿಯ ವೆಬ್‌ಸೈಟ್‌ನಲ್ಲಿ https://www.diageoindia.com/en/investors/shareholder-centre/downloads ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ.

ಕಂಪನಿಯ ವೆಬ್‌ಸೈಟ್‌ಗಾಗಿ ಕೆಳಗಿನ ಕ್ಯೂಆರ್ ಕೋಡನ್ನು ಸ್ಕ್ಯಾನ್ ಮಾಡಿ

ದಿನಾಂಕ : 06ನೇ ಆಗಸ್ಟ್, 2025
ಸ್ಥಳ : ಮುಂಬೈ

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಮಿತ್ತಲ್ ಸಂಘ್ವಿ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ: A16781

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)
ದ್ರವ ಚಾಲನಾ ವ್ಯವಸ್ಥಾ ಕೇಂದ್ರ (LPSC), ನಿರ್ಮಾಣ ಮತ್ತು ನಿರ್ವಹಣೆ ವಿಭಾಗ,
ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು,
ದೂ.ಸಂ: 080–25037203/ 080–25037214

ದಿನಾಂಕ: 06.08.2025

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕೆಲಸದ ಹೆಸರು ಮತ್ತು ಎನ್‌ಐಟಿ ಸಂ. & ದಿನಾಂಕ	ಅಂದಾಜು ಮೊತ್ತ	ಇಎಂಡಿ	ಪೂರ್ಣಗೊಳಿಸುವ ಅವಧಿ
1	ಎಲ್‌ಪಿಎಸ್‌ಸಿ(ಬಿ), ಬೆಂಗಳೂರು ಇಲ್ಲಿರುವ 1ನೇ ಮಹಡಿ ಆಡಳಿತ ಕಟ್ಟಡದ ನವೀಕರಣ–ವಿದ್ಯುತ್ ಕಾಮಗಾರಿಗಳು. ಎನ್‌ಐಟಿ ಸಂ.: ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/02/2030/ಇ/ಎಂಐ/ 017/2025–26 ದಿನಾಂಕ: 06.08.2025	₹ 15.43 ಲಕ್ಷಗಳು	₹ 30,860/–	02 ತಿಂಗಳು
2	ಎಲ್‌ಪಿಎಸ್‌ಸಿ(ಬಿ) ಕ್ಯಾಂಪಸ್, ತುಮಕೂರು ಇಲ್ಲಿರುವ ಐಟಿಪಿಎಫ್ ಕಟ್ಟಡದಲ್ಲಿ ಸ್ವಾಗತ ಸ್ಥಳಾವಕಾಶ ಒದಗಿಸುವುದು. ಎನ್‌ಐಟಿ ಸಂ.: ಎಲ್‌ಪಿಎಸ್‌ಸಿ(ಬಿ)/ಸಿಎಂಡಿ/02/2031/ಸಿ/ಎಂಐ/ 018/2025–26 ದಿನಾಂಕ: 06.08.2025	₹ 14.77 ಲಕ್ಷಗಳು	₹ 29,540/–	03 ತಿಂಗಳು

ಮಾರಾಟದ ಅವಧಿ: 06.08.2025 ರಿಂದ 12.08.2025 ರವರೆಗೆ

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www.isro.gov.in, www.lpsc.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–135/2024–25/1800/2025–26 ದಿನಾಂಕ: 06.08.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ದಂಡು ಆರೋಗ್ಯಸ್ವಾಮಿ ಬಿನ್ ಲೇಟ್ ದಂಡು ಜೋಜಪ್ಪ ನಂ. 349, ದಂಡುಬೀದಿ ವಿಟ್ಟಸಂದ್ರ ಮುಖ್ಯರಸ್ತೆ, ಬೇಗೂರು, ಬೆಂಗಳೂರು–68	ಬೆಂಗಳೂರು ದಕ್ಷಿಣ	ಬೇಗೂರು	ವಿಟ್ಟಸಂದ್ರ	15/16 15/17 16/1ಬಿ	0–15 0–15 1–20	ವ್ಯವಸಾಯ ವಲಯ	ವಸತಿ
					ಒಟ್ಟು	2–10 (0ಎ–06ಗುಂ ಖರಾಬು ಹೊರತುಪಡಿಸಿ)		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು. ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ನೀಟ್, ಸಿಇಟಿ: 2ನೇ ಸುತ್ತು ವಿಳಂಬ

ಅಖಿಲ ಭಾರತ ವೈದ್ಯಕೀಯ ಸೀಟು ಹಂಚಿಕೆ ಆಗಸ್ಟ್ 9ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ವೈದ್ಯಕೀಯ ಸೀಟು ಹಂಚಿಕೆಯ ದಿನಾಂಕವನ್ನು ವೈದ್ಯಕೀಯ ಕೌನ್ಸೆಲಿಂಗ್ ಪರಿಷತ್ತು (ಎಂಸಿಸಿ) ಮತ್ತೆ ಮುಂದೂಡಿದ್ದು (ಆ.9), ರಾಜ್ಯದ ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶದ ಎರಡನೇ ಸುತ್ತಿನ ಪ್ರಕ್ರಿಯೆಗಳು ವಿಳಂಬವಾಗಲಿವೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ 2025–26ನೇ ಸಾಲಿನ ಪ್ರವೇಶಕ್ಕಾಗಿ ಮೇ 4ರಂದು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ನಡೆಸಿತ್ತು. ನೀಟ್ ಫಲಿತಾಂಶದ ಪಟ್ಟಿಯ ಆಧಾರದಲ್ಲಿ ಎಂಸಿಸಿ ದೇಶದಲ್ಲಿ ಲಭ್ಯವಿರುವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಒಟ್ಟು ಸೀಟುಗಳಲ್ಲಿ ಶೇ 15ರಷ್ಟು ಹಂಚಿಕೆ ಮಾಡುತ್ತದೆ. ಎನ್‌ಟಿಎ ಪರೀಕ್ಷೆ ನಡೆಸಿ 90 ದಿನಗಳು ಕಳೆದರೂ ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯನ್ನೇ ಎಂಸಿಸಿ ಆರಂಭಿಸಿಲ್ಲ.

2025–26ನೇ ಸಾಲಿನಲ್ಲಿ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಬಯಸಿ ಕರ್ನಾಟಕದಲ್ಲಿ 3.11 ಲಕ್ಷ ವಿದ್ಯಾರ್ಥಿಗಳು ಸಿಇಟಿ ಬರೆದಿದ್ದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೇ 24ರಂದು ಫಲಿತಾಂಶ ಪ್ರಕಟಿಸಿತ್ತು. ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಿದ್ದ ನೀಟ್–2025ರ ಫಲಿತಾಂಶವೂ ಜೂನ್ 14ರಂದು ಪ್ರಕಟವಾಗಿತ್ತು. ಆದರೆ, ಎಂಸಿಸಿ ವೈದ್ಯಕೀಯ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಎಲ್ಲಾ ರಾಜ್ಯಗಳಿಗೆ ಕಳುಹಿಸಲು ವಿಳಂಬ ಮಾಡಿದ ಕಾರಣ ಕರ್ನಾಟಕದಲ್ಲೂ ಸಿಇಟಿ ಪ್ರಕ್ರಿಯೆ ವಿಳಂಬವಾಗಿ ಆರಂಭವಾಗಿತ್ತು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೀಟ್ ಅಂಕಗಳ ಆಧಾರದಲ್ಲಿ ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ, ದಂತ ವೈದ್ಯಕೀಯ, ಸಿಇಟಿ ಅಂಕಗಳ ಆಧಾರದಲ್ಲಿ ಎಂಜಿನಿಯರಿಂಗ್ ಸೀಟುಗಳ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆ ಮಾಡಿದ್ದು, ಶೇ 93ರಷ್ಟು ವಿದ್ಯಾರ್ಥಿಗಳು ಈಗಾಗಲೇ ಪ್ರವೇಶ ಪಡೆದಿದ್ದಾರೆ. ಆದರೆ, ಅಖಿಲ ಭಾರತ ಮಟ್ಟದಲ್ಲಿ ಮೊದಲ ಸುತ್ತಿನ ವೈದ್ಯಕೀಯ ಸೀಟು ಹಂಚಿಕೆಯೇ ಆರಂಭವಾಗದ ಕಾರಣ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ.

‘ನೀಟ್‌ನಲ್ಲಿ ಉತ್ತಮ ಅಂಕ ಬಂದಿದೆ. ದೆಹಲಿಗೆ ತೆರಳಿ ವೈದ್ಯಕೀಯ ಶಿಕ್ಷಣ ಪಡೆಯುವ ಕನಸಿದೆ. ಅಲ್ಲಿ ಸಿಗದಿದ್ದರೆ ರಾಜ್ಯದಲ್ಲೇ ಎಂಜಿನಿಯರಿಂಗ್ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಗುರಿ ಇಟ್ಟುಕೊಂಡಿದ್ದೇನೆ. ಆದರೆ, ಸಿಇಟಿಯ ಮೊದಲ ಸುತ್ತಿನಲ್ಲಿ ಶೇ 93ರಷ್ಟು ಸೀಟು ಭರ್ತಿಯಾಗಿವೆ. ಎಂಸಿಸಿ ವಿಳಂಬ ಧೋರಣೆ ಬೇಸರ ತರಿಸಿದೆ’ ಎನ್ನುತ್ತಾರೆ ವಿದ್ಯಾರ್ಥಿನಿ ಎ.ಪಿ. ಫಲ್ಗುಣಿ ಪ್ರಸನ್ನ.

ಅಲೈಡ್ ಹೆಲ್ತ್‌ಸೈನ್ಸ್‌ಗೆ ತೊಡಕು

ಅಲೈಡ್ ಹೆಲ್ತ್‌ಸೈನ್ಸ್ ಕೋರ್ಸ್‌ಗಳಿಗೆ ಕೆಇಎ ಮೊದಲ ಸುತ್ತಿನ ಸೀಟು ಹಂಚಿಕೆ ಮಾಡಿದ ನಂತರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕೆಲ ಕೋರ್ಸ್‌ಗಳನ್ನು ತೆಗೆದು ಹಾಕಿದೆ. ಕೆಲವು ಕಾಲೇಜುಗಳಲ್ಲಿನ ಸೀಟುಗಳ ಸಂಖ್ಯೆಯನ್ನು ಕಡಿಮೆ ಮಾಡಿದೆ.

‘ವಿಶ್ವವಿದ್ಯಾಲಯ ತೆಗೆದು ಹಾಕಿದ ಕೋರ್ಸ್, ಕಾಲೇಜುಗಳು ಹಂಚಿಕೆಯಾಗಿರುವವರು ಆಯ್ಕೆ-3 ನಮೂದಿಸಿ ಮುಂದಿನ ಸುತ್ತಿನಲ್ಲಿ ಭಾಗವಹಿಸಬೇಕು’ ಎಂದು ಪ್ರಾಧಿಕಾರ ಹೇಳಿದೆ.

ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಎರಡನೇ ವರ್ಷದ ಎಂಜಿನಿಯರಿಂಗ್‌ಗೆ ನೇರ ಪ್ರವೇಶ ನೀಡಲು ಅಂತಿಮ ಸುತ್ತಿನ ಸೀಟು ಹಂಚಿಕೆಗೆ ಕೆಇಎ ಸಿದ್ಧತೆ ನಡೆಸಿದೆ. ಅದಕ್ಕಾಗಿ ದಾಖಲೆಗಳ ಪರಿಶೀಲನೆಗೆ ಆ.12ರಂದು ಅವಕಾಶ ನೀಡಿದೆ.

ಮೂಲ ದಾಖಲೆಗಳ ಜತೆಗೆ ಜೆರಾಕ್ಸ್ ಪ್ರತಿಯೊಂದಿಗೆ ಕೆಇಎ ಕಚೇರಿಗೆ ಬರಬೇಕು. ಮೂಲ ದಾಖಲೆಗಳು ಇಲ್ಲದಿದ್ದರೆ ಅಂತಹವರಿಗೆ ಆಪ್ಷನ್ ದಾಖಲಿಸಲು ಅವಕಾಶ ನೀಡುವುದಿಲ್ಲ ಎಂದು ಪ್ರಾಧಿಕಾರ ಹೇಳಿದೆ.

ನಿಧನ ವಾರ್ತೆ

ನಟ ಸಂತೋಷ್ ಬಾಲರಾಜ್



ಬೆಂಗಳೂರು: ನಗರದ ರಾಗಿಗುಡ್ಡ ಆಂಜನೇಯ ದೇವಸ್ಥಾನ ಬಳಿಯ ನಿವಾಸಿ, ನಟ ಸಂತೋಷ್ ಬಾಲರಾಜ್ (38) ತೀವ್ರ ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಜಾಂಡೀಸ್‌ನಿಂದ ಬಳಲುತ್ತಿದ್ದ ಅವರು ಕೆಲವು ದಿನಗಳ ಹಿಂದೆ ಬನಶಂಕರಿಯ ಸಾಗರ್ ಅಪೊಲೊ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು.

‘ಕೆಂಪ’ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ್ದರು. ಬಳಿಕ ‘ಕರಿಯ-2’, ‘ಗಣಪ’ ಮುಂತಾದ ಚಿತ್ರಗಳಲ್ಲಿ ನಾಯಕ ನಟರಾಗಿದ್ದರು. ಅವರ ಇನ್ನೆರಡು ಚಿತ್ರಗಳು ಬಿಡುಗಡೆಗೆ ಬಾಕಿಯಿವೆ.

ಸಂತೋಷ್ ಅವರ ತಂದೆ ‘ಕರಿಯ’ ಚಿತ್ರದ ನಿರ್ಮಾಪಕರೂ ಆಗಿದ್ದ ಆನೇಕಲ್ ಬಾಲರಾಜ್ ಕೆಲವು ವರ್ಷಗಳ ಹಿಂದೆ ನಿಧನರಾಗಿದ್ದರು. ಮೃತರಿಗೆ ತಾಯಿ ಮತ್ತು ಸಹೋದರಿ ಇದ್ದಾರೆ.

ಮೃತರ ಅಂತ್ಯಕ್ರಿಯೆ ಬುಧವಾರ ಆನೇಕಲ್‌ನಲ್ಲಿ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಕೆ.ಟಿ.ರಮೇಶ್



ನೆಲಮಂಗಲ: ತಾಲ್ಲೂಕಿನ ಕುಲುವನಹಳ್ಳಿ ನಿವಾಸಿ ಕೆ. ಟಿ. ರಮೇಶ್ (52) ಬುಧವಾರ ಮುಂಜಾನೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಅವರಿಗೆ ಪತ್ನಿ ಮತ್ತು ಪುತ್ರ ಮತ್ತು ಪುತ್ರಿ ಇದ್ದಾರೆ. ಬುಧವಾರ ಸಂಜೆ ಕುಲುವನಹಳ್ಳಿಯಲ್ಲಿ ಅಂತ್ಯಸಂಸ್ಕಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಮೇಶ್ ಅವರು ನೆಲಮಂಗಲ ತಾಲ್ಲೂಕು ಕುವೆಂಪು ಸಹಕಾರ ಸಂಘ ಮತ್ತು ಪಟ್ಟಣದ ನ್ಯೂ ಎಕ್ಸ್‌ಪರ್ಟ್ ಕಾಲೇಜಿನ ಸಂಸ್ಥಾಪಕ ಕಾರ್ಯದರ್ಶಿ ಆಗಿದ್ದರು. ಜೆಡಿಎಸ್‌ನಲ್ಲೂ ಗುರುತಿಸಿಕೊಂಡಿದ್ದರು.

ಶಾಲೆ ಬಳಿ ಚಿರತೆ ಮರಿ ಸೆರೆ

ತುಮಕೂರು: ನಗರದ ಹೊರವಲಯ ಬೆಳಗುಂಬದಲ್ಲಿರುವ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳ ವಸತಿ ಶಾಲೆ ಬಳಿ ಮಂಗಳವಾರ ರಾತ್ರಿ ಚಿರತೆ ಮರಿ ಬೋನಿಗೆ ಬಿದ್ದಿದೆ.

ಕಳೆದ ಭಾನುವಾರ ಮತ್ತು ಸೋಮವಾರ ಶಾಲೆಯ ಆವರಣದಲ್ಲಿ ಚಿರತೆ ಕಾಣಿಸಿಕೊಂಡಿತ್ತು.


Namma Bengaluru Ge Swagatha!
AN INITIATIVE BY Craft & Artisan REVIVAL LLP
Karigar Bazaar
9th – 17th AUG 2025
11:00 AM – 8:00 PM
A Unique Celebration of India's Living Craft Traditions Comes to Bengaluru for the First Time!
Over 140 master artisans from across India present a vibrant showcase of:
• Timeless textiles & weaves
• Tribal & folk art
• Handcrafted jewellery & decor
• Sustainable lifestyle products
• Artisan-made foods
• Live Craft Demonstrations & Workshops
Regional Food Court Featuring Flavours From Across India.
Enjoy music by Kabir folk artists, Manganiyaar musicians, and Bengaluru's own Desi rapper Adhyaay.
Venue
Jayamahal Palace Bengaluru
+91 87883 49654
info@karigarbazaar.com
Instagram: @karigar_bazaar

SBI
ಭಾರತೀಯ ಸ್ಟೇಟ್ ಬ್ಯಾಂಕ್
ಪ್ರಾದೇಶಿಕ ವ್ಯವಹಾರ ಕಚೇರಿ–5. ಸಿಬಿಡಿ, ಆಡಳಿತ ಕಚೇರಿ–2
2ನೇ ಮಹಡಿ, ಕೆ ಜಿ ರಸ್ತೆ, ಬೆಂಗಳೂರು–560009
ಗುತ್ತಿಗೆಯ ಮೇಲೆ ಅವರಣದ ಅಗತ್ಯವಿದೆ
ಶ್ರೀರಾಂಪುರ ಬೆಂಗಳೂರು 560021 ರ ಶ್ರೀರಾಂಪುರ ಮುಖ್ಯ ರಸ್ತೆಯಲ್ಲಿ ಹೊಸದಾಗಿ ತೆರೆಯಲಾಗುವ ಶಾಖೆಗಾಗಿ, ವಾಣಿಜ್ಯ / ಕಚೇರಿ ಬಳಕೆಗಾಗಿ ಸುಮಾರು 232 ಚದರ ಮಿಟರ್ (2500 ಚದರ ಅಡಿ +/– 25%) ವಿಸ್ತೀರ್ಣವನ್ನು ಹೊಂದಿರುವ ಆವರಣವನ್ನು ಗುತ್ತಿಗೆ ಬಾಡಿಗೆ ಆಧಾರದ ಮೇಲೆ ಖರೀದಿಸಲು ಭಾರತೀಯ ಸ್ಟೇಟ್ ಬ್ಯಾಂಕ್ ರವರು, ಮಾಲೀಕರು/ಪವರ್ ಆಫ್ ಅಟಾರ್ನಿ ಹೊಂದಿರುವವರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.
ವಿವರವಾದ ನಿಯತಾಂಕಗಳು, ನಿಯಮಗಳು ಮತ್ತು ಷರತ್ತುಗಳು ಮತ್ತು ಬೆಲೆ ಬಿಡ್‌ಅನ್ನು ಒಳಗೊಂಡಿರುವ ತಾಂತ್ರಿಕ ಬಿಡ್‌ಅನ್ನು ಸಲ್ಲಿಸುವ ಸ್ವರೂಪವನ್ನು SBI ವೆಬ್‌ಸೈಟ್ www.sbi.co.in ಅಥವಾ https://bank.sbi ನಿಂದ 07/08/2025 ರಿಂದ 20/08/2025 ರವರೆಗೆ ಡೌನ್‌ಲೋಡ್ ಮಾಡಬಹುದು. ತಾಂತ್ರಿಕ ಬಿಡ್ ಮತ್ತು ಬೆಲೆ ಬಿಡ್ ಅನ್ನು ಒಳಗೊಂಡಿರುವ ಕೊಡುಗೆಗಳನ್ನು ಪ್ರತ್ಯೇಕವಾಗಿ ಎರಡು ವಿಭಿನ್ನ ಮೊಹರು ಮಾಡಿದ ಕವರ್‌ಗಳಲ್ಲಿ SBI ಪ್ರಾದೇಶಿಕ ವ್ಯವಹಾರ ಕಚೇರಿ–5, CBD ಆಡಳಿತ ಕಚೇರಿ–2, 2ನೇ ಮಹಡಿ, SBI ಕಟ್ಟಡ, ಕೆ.ಜಿ ರಸ್ತೆ, ಬೆಂಗಳೂರು–560009 ಇಲ್ಲಿಗೆ 20/08/2025 ರಂದು ಮಧ್ಯಾಹ್ನ 3.00 ಗಂಟೆ ಅಥವಾ ಅದಕ್ಕಿಂತ ಮೊದಲು ಸಲ್ಲಿಸಬೇಕು. ದಲ್ಲಾಳಿಗಳಿಗೆ ಅವಕಾಶವಿರುವುದಿಲ್ಲ.
ಸಹಿ/– ಪ್ರಾದೇಶಿಕ ಕಚೇರಿ, ಪ್ರಾದೇಶಿಕ ವ್ಯವಹಾರ ಕಚೇರಿ–5, ಆಡಳಿತ ಕಚೇರಿ –2.

INSTITUTE FOR SOCIAL AND ECONOMIC CHANGE
Dr. V.K.R.V. Rao Road, Nagarabhavi P.O. Bengaluru-560 072. www.isec.ac.in
Date: 6th August 2025
Applications are invited for One (1) post of **Research Investigator**, One (1) post of **Field Investigator**, Three (3) posts of **Data Assistant** and One (1) post of Research fellow-1 on contractual basis at Population Research Centre (PRC), ISEC.
The last date for receiving applications is **5th September 2025.**
Detailed advertisement visit **www.isec.ac.in.**
Registrar I/c
ISEC-25608

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಕವಿಪ್ರನಿನಿ/ಬಿ16/44953/2023–24 ದಿನಾಂಕ: 06.08.2025
ಅಧಿಸೂಚನೆ
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 14.10.2024ರ ಉದ್ಯೋಗ ಪ್ರಕಟಣೆಗನುಗುಣವಾಗಿ ಕಿರಿಯ ಸ್ಟೇಷನ್ ಪರಿಚಾರಕ (ಕೆ.ಕೆ.) ಮತ್ತು ಕಿರಿಯ ಪವರ್‌ಮ್ಯಾನ್ (ಕೆ.ಕೆ.) ಹುದ್ದೆಗಳಿಗೆ ಕಟ್–ಆಫ್ (Cut-Off) ಅಂಕಗಳೊಂದಿಗೆ ಅಂತಿಮ ಆಯ್ಕೆ ಪಟ್ಟಿಗಳನ್ನು ಹಾಗೂ ಕಿರಿಯ ಸ್ಟೇಷನ್ ಪರಿಚಾರಕ (ಎನ್.ಕೆ.ಕೆ.) ಮತ್ತು ಕಿರಿಯ ಪವರ್‌ಮ್ಯಾನ್ (ಎನ್.ಕೆ.ಕೆ.) ಹುದ್ದೆಗಳಿಗೆ ಕಟ್–ಆಫ್ (Cut-Off) ಅಂಕಗಳೊಂದಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು ಅಂತರ್ಜಾಲ https://kptcl.karnataka.gov.in ನಲ್ಲಿ ಪ್ರಕಟಿಸಲಾಗಿದೆ.
ಸಹಿ/– ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕ.ವಿ.ಪ್ರ.ನಿ.ನಿ.
ಕಾವೇರಿ ಭವನ, ಬೆಂಗಳೂರು – 560 009

#LeanOnUs
GERI CARE ASSISTED LIVING
ಬೆಂಗಳೂರಿನಲ್ಲಿ ಹಿರಿಯ ನಾಗರೀಕರ ಆರೈಕೆಗಾಗಿ 360° ವಲಯ
ಅವರ ಆರೋಗ್ಯಕ್ಕಾಗಿ, ಅವರ ಸಂತೋಷಕ್ಕಾಗಿ. ನಿಮಗಾಗಿ.
ಹಿರಿಯ ನಾಗರೀಕರ ಕ್ಲಿನಿಕ್, ಫಾರ್ಮಸಿ ಮತ್ತು ಲ್ಯಾಬ್‌ಗಳು 24x7
ಸೆಂಟ್. ಜಾನ್ಸ್ ರೋಡ್, ಅಲಸೂರು

ಮಧ್ಯಭಾಗದಲ್ಲಿರುವ

100% ಹಿರಿಯ-ನಾಗರೀಕರ ಅನುಕೂಲ

24x7 ವೈದ್ಯಕೀಯ ಕಾಳಜಿ
ವಿಶೇಷ ಸಹಾಯಕ ನಿವಾಸ ಸೇವೆಗಳು
ಆಸ್ಪತ್ರೆ ನಂತರದ ಆರೈಕೆ — ಸೋಂಕು ಮತ್ತು ಮರುದಾಖಲೆಯ ಅಪಾಯವನ್ನು ಕಡಿಮೆಗೊಳಿಸುವುದು
ಡಿಮೆನ್ಶಿಯಾ ಕೇರ್ — ರೋಗದ ಹಂತಹಂತಾನುಸಾರವಾಗಿ ರೂಪಗೊಳ್ಳುವ ಆರೈಕೆ ಯೋಜನೆ
ಶಸ್ತ್ರ ಚಿಕಿತ್ಸೆಯ ನಂತರ ಕಾಳಜಿ — ಫಿಸಿಯೋ ಮತ್ತು ಪುನಶ್ಚೇತನ ಮೂಲಕ ಬೆಂಬಲ
ತಾತ್ಕಾಲಿಕ ಆರೈಕೆ ಸೇವೆ — ನಿತ್ಯ ಮೇಲ್ವಿಚಾರಣೆಯ ಅಗತ್ಯವಿರುವ ಹಿರಿಯರಿಗೆ ತಾತ್ಕಾಲಿಕ ಅಥವಾ ಮಧ್ಯಾವಧಿಯ ಆರೈಕೆ ಸೇವೆ
ಶಮನಾತ್ಮಕ ಆರೈಕೆ — ದೀರ್ಘಕಾಲದ ರೋಗದಿಂದ ಬಳಲುವವರಿಗೆ ಉತ್ತಮ ಜೀವನಮಟ್ಟ ಒದಗಿಸುವುದು
ಬೆಂಗಳೂರು ಅಲಸೂರು । ಸರ್ಜಾಪುರ
ಕೊಯಂಬತ್ತೂರು ಲುಲು ಮಾಲ್ ಎದುರುಗಡೆ
ಚೆನ್ನೈ ತೊರೈಪಾಕ್ಕಂ । ರಾಯಪುರಂ । ಮೊಗಪ್ಪೇರ್ । ವೇಲಾಚ್ಚೆರಿ
INDIA'S 1ST ELDER-CARE SERVICES BY GERIATRICIANS
99 444 59 000
www.gericare.in I enquiry@gericare.in
ENQUIRE NOW


ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಸಮಾಜ ಕಲ್ಯಾಣ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಪರಿಶಿಷ್ಟ ಜಾತಿಯವರ ಆರ್ಥಿಕ ಅಭಿವೃದ್ಧಿಗಾಗಿ ಕಲ್ಯಾಣ ಯೋಜನೆಗಳು
2025-2026ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಿಗೆ ಅರ್ಜಿ ಆಹ್ವಾನ

ಭೂ ಒಡೆತನ ಯೋಜನೆ
ಭೂರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಈ ಕೆಳಕಂಡ ಘಟಕ ವೆಚ್ಚದಲ್ಲಿ ಕೃಷಿ ಜಮೀನು ಖರೀದಿಸಿ ನೀಡಲಾಗುವುದು.
ಘಟಕ ವೆಚ್ಚ: ರೂ. 25.00 ಲಕ್ಷ /ರೂ. 20.00 ಲಕ್ಷ
ಸಹಾಯಧನ: ಶೇ. 50%
ಸಾಲ: ಶೇ. 50%
(ಶೇಕಡ 4ರಷ್ಟು ಬಡ್ಡಿದರ)

ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆ:
ಮಹಿಳಾ ಸ್ವಸಹಾಯ ಸಂಘಗಳಿಗೆ (ಕನಿಷ್ಟ 10 ಸದಸ್ಯರು) ಕಿರು ಆರ್ಥಿಕ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನ ಸೌಲಭ್ಯ ನೀಡಲಾಗುವುದು.
ಘಟಕ ವೆಚ್ಚ: ರೂ. 5.00 ಲಕ್ಷ
ಸಹಾಯಧನ: ರೂ. 2.50 ಲಕ್ಷ
ಸಾಲ: ರೂ. 2.50 ಲಕ್ಷ
(ಶೇ. 4 ರಷ್ಟು ಬಡ್ಡಿದರ)

ಗಂಗಾ ಕಲ್ಯಾಣ ಯೋಜನೆ
1.20 ಎಕರೆ ಯಿಂದ 5.00 ಎಕರೆ ಜಮೀನು ಹೊಂದಿರುವ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಕೊಳವೆಬಾವಿ ಕೊರೆದು ಪಂಪ್‌ಸೆಟ್ ಅಳವಡಿಸಿ, ವಿದ್ಯುದ್ದೀಕರಣಗೊಳಿಸಿ ನೀರಾವರಿ ಸೌಲಭ್ಯ ಒದಗಿಸಿಕೊಡಲಾಗುವುದು.
ಘಟಕ ವೆಚ್ಚ: ರೂ. 4.75 ಲಕ್ಷ / ರೂ. 3.75 ಲಕ್ಷ – ಇದರಲ್ಲಿ ರೂ. 50,000/– ಸಾಲವೂ ಸೇರಿರುತ್ತದೆ.

ಸ್ವಯಂ ಉದ್ಯೋಗ ನೇರಸಾಲ ಯೋಜನೆಗಳು
1. ನೇರಸಾಲ ಯೋಜನೆ: ಕಿರು ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ನಿಗಮದಿಂದ ಸಹಾಯಧನ ಮತ್ತು ನೇರಸಾಲ ಮಂಜೂರು ಮಾಡಲಾಗುತ್ತದೆ.
2. ಕುರಿ ಸಾಕಾಣಿಕೆ ಯೋಜನೆ: ಕುರಿ ಸಾಕಾಣಿಕೆ ಉದ್ದೇಶಕ್ಕೆ ನಿಗಮದಿಂದ ಸಹಾಯಧನ ಮತ್ತು ನೇರಸಾಲ ಮಂಜೂರು ಮಾಡಲಾಗುತ್ತದೆ.
ಘಟಕ ವೆಚ್ಚ: ರೂ. 1.00 ಲಕ್ಷ
ಸಹಾಯಧನ: ರೂ. 50,000/–
ಸಾಲ: ರೂ. 50,000/–
(ಶೇ. 4 ರಷ್ಟು ಬಡ್ಡಿದರ)

ಉದ್ಯಮಶೀಲತಾ ಅಭಿವೃದ್ಧಿ ಯೋಜನೆ:
(ಬ್ಯಾಂಕ್‌ಗಳ ಸಹಯೋಗದೊಂದಿಗೆ)
1. ಸ್ವಾವಲಂಬಿ ಸಾರಥಿ: ಸರಕು ವಾಹನ/ಟ್ಯಾಕ್ಸಿ (ಹಳದಿ ಬೋರ್ಡ್) ಉದ್ದೇಶದಡಿ ಘಟಕ ವೆಚ್ಚದ ಶೇ.75 ರಷ್ಟು ಅಥವಾ ಗರಿಷ್ಠ ರೂ. 4.00 ಲಕ್ಷಗಳ ಸಹಾಯಧನ.
2. ಫಾಸ್ಟ್ ಫುಡ್ ಟ್ರಕ್ ಟ್ರೈಲರ್/ಮೊಬೈಲ್ ಕಿಚನ್ ಫುಡ್ ಕಿಯೋಸ್ಕ್: ಫುಡ್ ಕಾರ್ಟ್ ವಾಹನಗಳ ಉದ್ದೇಶದಡಿ ಘಟಕ ವೆಚ್ಚದ ಶೇ.75 ರಷ್ಟು ಅಥವಾ ಗರಿಷ್ಠ ರೂ. 4.00 ಲಕ್ಷಗಳ ಸಹಾಯಧನ.
3. ಹೈನುಗಾರಿಕೆ: ಹೈನುಗಾರಿಕೆ ಕೈಗೊಳ್ಳಲು ಎರಡು ಎಮ್ಮೆ/ಹಸುಗಳಿಗೆ ಘಟಕ ವೆಚ್ಚದ ಶೇ.50ರಷ್ಟು ಅಥವಾ ಗರಿಷ್ಟ 1.25 ಲಕ್ಷಗಳ ಸಹಾಯಧನ.
4. ಇತರೆ ಉದ್ದೇಶ: ವ್ಯಾಪಾರ ಮತ್ತು ಇತರೆ ಉದ್ದೇಶಗಳಿಗೆ ಘಟಕ ವೆಚ್ಚದ ಶೇ. 70 ರಷ್ಟು ಅಥವಾ ಗರಿಷ್ಟ ರೂ. 2.00 ಲಕ್ಷ ಸಹಾಯಧನ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10.09.2025
https://sevasindhu.karnataka.gov.in ನಲ್ಲಿ ನೇರವಾಗಿ ಅಥವಾ ಕೆಳಕಂಡ ಸಂಸ್ಥೆಗಳ ಸಹಯೋಗದೊಂದಿಗೆ ಸಹಾ ಅರ್ಜಿ ಸಲ್ಲಿಸಬಹುದು.
KARNATAKA One | ಗ್ರಾಮ ಒನ್ | BANGALORE One

2023–24 ಮತ್ತು 2024–25ನೇ ಸಾಲಿನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.


ಡಾ. ಹೆಚ್. ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರು ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಆರ್. ಸಂಪತ್ ರಾಜ್ ರವರೊಂದಿಗೆ ನಿಗಮದ ಯೋಜನೆಗಳ ಬಗ್ಗೆ ಚರ್ಚಿಸುತ್ತಿರುವುದು.

ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ | ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ
ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ | ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ | ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ

ವಿಶೇಷ ಸೂಚನೆ: ನಿಗಮದ ನಿರ್ದೇಶಕ ಮಂಡಳಿ ವಿವೇಚನಾ ಕೋಟಾ ಅಥವಾ ಸರ್ಕಾರದ ಸಾಂಸ್ಥಿಕ ಕೋಟಾದಡಿ ಸ್ವೀಕರಿಸುವ ಅರ್ಜಿಗಳನ್ನು ಸಹ ಸೇವಾಸಿಂಧು ಪೋರ್ಟಲ್ ಮೂಲಕವೇ ಅರ್ಜಿ ಸಲ್ಲಿಸುವುದು.
ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳ ಕಛೇರಿ ಅಥವಾ ನಿಗಮಗಳ ವೆಬ್ ಸೈಟ್ ಅಥವಾ ಕಲ್ಯಾಣಮಿತ್ರ ಸಹಾಯವಾಣಿ ಸಂಖ್ಯೆ 9482–300–400 ಸಂಪರ್ಕಿಸುವುದು.

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ನಿಗಮಗಳು | ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ | ಮಾನ್ಯ ಅಧ್ಯಕ್ಷರು, ಎಲ್ಲಾ ನಿಗಮಗಳು


ವಾಹನಗಳಿಗೆ ಬೆಂಕಿ: ಮೂವರ ಬಂಧನ

ಹಳೆ ದ್ವೇಷದಿಂದ ದುಷ್ಕೃತ್ಯ • ರೌಡಿಶೀಟರ್ ಪಟ್ಟಿ ಸೇರಲಿರುವ ಮೂವರು


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಳಿಯಮ್ಮ ದೇವಸ್ಥಾನದ ಬೀದಿ ಬದಿ ಅಂಗಡಿ ಸೇರಿದಂತೆ ಹತ್ತಾರು ದ್ವಿಚಕ್ರ ವಾಹನಗಳಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿ.ಜೆ.ಹಳ್ಳಿ ಸುತ್ತಮುತ್ತಲಿನ ನಿವಾಸಿಗಳಾದ ಮಕ್ಸೂದ್ ಅಹಮದ್, ಇಜಾರ್ ಪಾಷಾ ಹಾಗೂ ಹಮಿತ್ ತಬ್ರೇಜ್ ಬಂಧಿತರು.


ಮಕ್ಸೂದ್ ಅಹಮದ್


ಇಜಾರ್ ಪಾಷಾ


ಹಮಿತ್ ತಬ್ರೇಜ್

ಜುಲೈ 28ರ ಬೆಳಗಿನ ಜಾವ ಕುಡಿದ ಅಮಲಿನಲ್ಲಿ ಆರೋಪಿಗಳು, ಉದ್ದೇಶಪೂರ್ವಕವಾಗಿ 10 ದ್ವಿಚಕ್ರ ವಾಹನಗಳು, 7 ಸೈಕಲ್ ಹಾಗೂ ಅಂಗಡಿಗೆ ಬೆಂಕಿ ಹಚ್ಚಿದ್ದರು. ವಾಹನಗಳು ಸುಟ್ಟು ಹೋಗಿದ್ದವು. ಈ ಸಂಬಂಧ ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ಪೈಕಿ ಮಕ್ಸೂದ್ ಅಹಮದ್, ಈ ಹಿಂದೆ ಹಲಸೂರಿನ ಬಜಾರ್ ಸ್ಟ್ರೀಟ್‌ನಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದ. ಕೆಲ ತಿಂಗಳ ಹಿಂದೆಯಷ್ಟೇ ಡಿ.ಜೆ. ಹಳ್ಳಿಗೆ ಮನೆ ಬದಲಿಸಿದ್ದ. ಹಲಸೂರಿನಲ್ಲಿ ವಾಸವಿರುವಾಗ ಕೊಲೆ ಪ್ರಕರಣದಲ್ಲಿ ಭಾಗಿಯಾಗಿ ಜೈಲಿನಲ್ಲಿರುವ ಫಹಾದ್ ಹಾಗೂ ಸರ್ಫುದ್ದೀನ್ ಎಂಬುವರು ಕ್ಷುಲ್ಲಕ ಕಾರಣಕ್ಕಾಗಿ ಆರೋಪಿ ಮೇಲೆ ಸಾರ್ವಜನಿಕವಾಗಿ ಹಲ್ಲೆ ಮಾಡಿದ್ದರು.

ಅವಮಾನಕ್ಕೆ ಒಳಗಾಗಿದ್ದ ಮಕ್ಸೂದ್, ದ್ವೇಷ ಸಾಧಿಸುತ್ತಿದ್ದ. ಹಲಸೂರಿನಲ್ಲಿ ತಮ್ಮದೇ ಪ್ರಭಾವವಿರುವುದಾಗಿ ಸಂದೇಶ ಸಾರುವ ಸಲುವಾಗಿ ಮತ್ತಿಬ್ಬರನ್ನು ಒಗ್ಗೂಡಿಸಿ ಈ ರೀತಿಯ ದುಷ್ಕೃತ್ಯ ಎಸಗಿದ್ದಾನೆ. ಮೂವರು ಆರೋಪಿಗಳ ಮೇಲೆ ರೌಡಿಶೀಟ್ ತೆರೆಯಲಾಗುವುದು ಎಂದು ಪೂರ್ವ ವಿಭಾಗದ ಡಿಸಿಪಿ ದೇವರಾಜ್ ತಿಳಿಸಿದ್ದಾರೆ.

ಪ್ರತ್ಯೇಕ ಅಪಘಾತ: ಮೂವರ ಸಾವು

ನಗರದಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಡೆಲಿವರಿ ಬಾಯ್ ಸೇರಿ ಮೂವರು ಮೃತಪಟ್ಟಿರುವ ಘಟನೆ ನಡೆದಿದೆ.

ರಾಜಾಜಿನಗರದ 51ನೇ ಅಡ್ಡರಸ್ತೆಯಲ್ಲಿ ಸಂಭವಿಸಿದ ಬೈಕ್ ಅಪಘಾತದಲ್ಲಿ ಹರೀಶ್ (19) ಮೃತಪಟ್ಟಿದ್ದಾರೆ. ಜೆಪ್ಟೊ ಕಂಪನಿಯಲ್ಲಿ ಡೆಲಿವರಿ ಬಾಯ್ ಆಗಿದ್ದ ಹರೀಶ್, ಕಮಲಾನಗರದಲ್ಲಿ ಕೆಲಸ ಮುಗಿಸಿಕೊಂಡು ತಡರಾತ್ರಿ 2 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಮನೆಗೆ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

ರಸ್ತೆ ಉಬ್ಬು ಗಮನಿಸದೆ ವೇಗವಾಗಿ ಬೈಕ್ ಚಲಾಯಿಸಿ, ನಿಯಂತ್ರಣ ತಪ್ಪಿ ಸುಮಾರು 10 ಅಡಿ ದೂರ ಹೋಗಿ ಬಿದ್ದಿದ್ದಾರೆ. ತಲೆಗೆ ತೀವ್ರ ಪೆಟ್ಟಾಗಿ ಅಸ್ವಸ್ಥಗೊಂಡಿದ್ದ ಹರೀಶ್, ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ. ಘಟನಾ ಸಂದರ್ಭದಲ್ಲಿ ಹರೀಶ್ ಅವರು ಹೆಲ್ಮೆಟ್ ಧರಿಸಿದ್ದರು. ರಾಜಾಜಿನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಸಗಿ ಕಂಪನಿ ಉದ್ಯೋಗಿ: ಅಗರ ರಸ್ತೆಯಲ್ಲಿ ಖಾಸಗಿ ಬಸ್‌ಗೆ ಸಿಲುಕಿ ಚೇತನ್ ರಾಥೋರ್ (23) ಮೃತಪಟ್ಟಿದ್ದಾರೆ. ಗೋವಾ ಮೂಲದ ಚೇತನ್, ನಗರದ ವೆಂಕಟಾಪುರದಲ್ಲಿ ವಾಸವಾಗಿದ್ದರು.

ಎಚ್‌ಎಸ್‌ಆರ್ ಲೇಔಟ್‌ನ ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ಚೇತನ್, ಬೊಮ್ಮನಹಳ್ಳಿಯಲ್ಲಿ ಸ್ನೇಹಿತನನ್ನು ಭೇಟಿಯಾಗಿ ದ್ವಿಚಕ್ರ ವಾಹನದಲ್ಲಿ ಮನೆಗೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ.

ಮುಂದೆ ಹೋಗುತ್ತಿದ್ದ ಟ್ರಾವೆಲ್ಸ್ ಬಸ್ ಅನ್ನು ಎಡಗಡೆಯಿಂದ ಹಿಂದಿಕ್ಕಲು ಯತ್ನಿಸಿದ ವೇಳೆ ಬಸ್ ತಾಗಿದೆ. ಪರಿಣಾಮ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಾಗ, ಅವರ ಮೇಲೆ ಬಸ್‌ನ ಹಿಂದಿನ ಚಕ್ರ ಹರಿದಿದೆ. ತೀವ್ರವಾಗಿ ಗಾಯಗೊಂಡ ಚೇತನ್, ಸ್ಥಳದಲ್ಲೇ ಮೃತಪಟ್ಟರು ಎಂದು ಪೊಲೀಸರು ಹೇಳಿದ್ದಾರೆ.

ಎಚ್‌ಎಸ್‌ಆರ್ ಲೇಔಟ್ ಸಂಚಾರ ಠಾಣೆ ಪೊಲೀಸರು, ಬಸ್ ಚಾಲಕನನ್ನು ಬಂಧಿಸಿ, ವಾಹನ ವಶಪಡಿಸಿಕೊಂಡಿದ್ದಾರೆ. ದೂರು ದಾಖಲಾಗಿದೆ.

ಪಾದಚಾರಿ ಸಾವು: ತುಮಕೂರು ರಸ್ತೆಯ ದಾಸರಹಳ್ಳಿ ಜಂಕ್ಷನ್‌ನಲ್ಲಿ ಕ್ಯಾಂಟರ್ ಹರಿದು ಶಿವಕುಮಾರ್ (60) ಮೃತಪಟ್ಟಿದ್ದಾರೆ.

ನೆಲಗದರನಹಳ್ಳಿಯ ಶಿವಕುಮಾರ್, ದೇವಸ್ಥಾನಕ್ಕೆ ಹೋಗಿದ್ದರು. ಬಿಎಂಟಿಸಿ ಬಸ್‌ನಲ್ಲಿ ದಾಸರಹಳ್ಳಿ ಜಂಕ್ಷನ್‌ಗೆ ಬಂದಿಳಿದಿದ್ದ ಅವರು ರಸ್ತೆ ದಾಟುತ್ತಿದ್ದಾಗ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಈ ವೇಳೆ ಕೆಳಗೆ ಬಿದ್ದ ಅವರ ಕಾಲಿನ ಮೇಲೆ ಕ್ಯಾಂಟರ್ ಹರಿದಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಸ್ವಲ್ಪ ಸಮಯದಲ್ಲೇ ಅವರು ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ. ಪೀಣ್ಯ ಸಂಚಾರ ಠಾಣೆ ಪೊಲೀಸರು ಕ್ಯಾಂಟರ್ ಚಾಲಕನನ್ನು ಬಂಧಿಸಿ, ವಾಹನ ಜಪ್ತಿ ಮಾಡಿದ್ದಾರೆ.

ಅಪರಾಧ ಸುದ್ದಿ

ಸ್ನೇಹಿತನ ಪತ್ನಿ ಕೊಂದು, ಆತ್ಮಹತ್ಯೆ

ಸ್ನೇಹಿತನ ಪತ್ನಿಯನ್ನು ಚಾಕುವಿನಿಂದ ಇರಿದು ಕೊಂದು ನಂತರ ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹೆಬ್ಬಗೋಡಿ ಬಳಿಯ ತಿರುಪಾಳ್ಯದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ತಿರುಪಾಳ್ಯ ನಿವಾಸಿ ಮಂದಿರಾ ಮಂಡಲ್ (27) ಕೊಲೆಯಾದ ಮಹಿಳೆ. ಸುಮನ್ ಮಂಡಲ್ (28) ಎಂಬಾತ ಆತ್ಮಹತ್ಯೆ ಮಾಡಿಕೊಂಡ ಆರೋಪಿ.

ಪಶ್ಚಿಮ ಬಂಗಾಳದ ಮಂದಿರಾ ಮಂಡಲ್ ಅವರು ಎಂಟು ವರ್ಷಗಳ ಹಿಂದೆ ಬಿಜೋನ್ ಮಂಡಲ್ ಎಂಬಾತನನ್ನು ಮದುವೆಯಾಗಿದ್ದರು. ಕೌಟುಂಬಿಕ ಕಲಹದ ಕಾರಣಕ್ಕೆ ಪತಿಯಿಂದ ದೂರವಾಗಿದ್ದ ಅವರು, ಆರು ವರ್ಷದ ಮಗನ ಜತೆ ತಿರುಪಾಳ್ಯದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಅಪಾರ್ಟ್‌ಮೆಂಟ್ ಸ್ವಚ್ಛತಾ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅಂಡಮಾನ್‌ನಲ್ಲಿ ಬಿಜೋನ್ ನೆಲಸಿದ್ದು, ಆತನ ಸ್ನೇಹಿತನಾದ ಸುಮನ್, ಮಂದಿರಾ ಅವರಿಗೂ ಪರಿಚಿತನಾಗಿದ್ದ. ಆಗಾಗ್ಗೆ ಅವರ ಮನೆಗೆ ಬರುತ್ತಿದ್ದ. ಮಂಗಳವಾರ ರಾತ್ರಿ ಮಂದಿರಾ ಅವರ ಮನೆಗೆ ಬಂದಿದ್ದ. ಈ ವೇಳೆ ಇಬ್ಬರ ನಡುವೆ ಜಗಳವಾಗಿದೆ. ಈ ಹಂತದಲ್ಲಿ ಆತ ಮಂದಿರಾ ಅವರ ಕತ್ತಿಗೆ ಚಾಕು ಇರಿದು ಕೊಲೆ ಮಾಡಿದ್ದಾನೆ. ನಂತರ ಅವರ ಮನೆಯ ಕೊಠಡಿಯಲ್ಲೇ ನೇಣು ಹಾಕಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಮೃತಳ ಪೋಷಕರು ಆಕೆಯ ಮನೆಯ ಸಮೀಪದಲ್ಲೇ ವಾಸವಾಗಿದ್ದಾರೆ. ಘಟನಾ ಸಂದರ್ಭದಲ್ಲಿ ಮಂದಿರಾ ಮಗ, ಅಜ್ಜ-ಅಜ್ಜಿಯ ಮನೆಯಲ್ಲಿದ್ದ. ಮಂದಿರಾ ಪೋಷಕರು ರಾತ್ರಿ ಮಗಳ ಮನೆಯ ಬಳಿ ಬಂದಾಗ ಕೊಲೆ ಮತ್ತು ಆತ್ಮಹತ್ಯೆ ಗೊತ್ತಾಗಿದೆ. ಕೊಲೆಗೆ ನಿಖರ ಕಾರಣ ಗೊತ್ತಾಗಿಲ್ಲ ಎಂದು ತಿಳಿಸಿದ್ದಾರೆ.

ಪ್ರೀತಿಗೆ ನಿರಾಕರಣೆ: ಈ ಹಿಂದೆ ಅಂಡಮಾನ್‌ನಲ್ಲಿ ಕೆಲಸ ಮಾಡುತ್ತಿದ್ದ ಸುಮನ್, ಇತ್ತೀಚೆಗಷ್ಟೇ ಬೆಂಗಳೂರಿಗೆ ಬಂದು ಪೋಷಕರೊಂದಿಗೆ ನೆಲಸಿದ್ದ. ಆತ ಮಂದಿರಾ ಅವರನ್ನು ಪ್ರೀತಿಸುತ್ತಿದ್ದ. ಆದರೆ ಆಕೆ ಒಪ್ಪಿರಲಿಲ್ಲ. ಇದೇ ಕಾರಣಕ್ಕೆ ಅವರ ಮಧ್ಯೆ ಜಗಳವಾಗಿ ಆರೋಪಿಯು ಅವರನ್ನು ಕೊಲೆ ಮಾಡಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಹೆಬ್ಬಗೋಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸುದ್ದಿ 2 ನಿಮಿಷ

ಕಾಮಾಕ್ಷಿ ಸಾಧನೆಗೆ ಮೆಚ್ಚುಗೆ

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ನಾಗೇನಹಳ್ಳಿಯಲ್ಲಿ ದೇವದಾಸಿ ಕುಟುಂಬದಲ್ಲಿ ಜನಿಸಿದ ಕಾಮಾಕ್ಷಿ ಅವರು ತಮ್ಮ ಛಲ, ಸಾಧನೆಯಿಂದ ಇಂಗ್ಲೆಂಡ್‌ನ ಸಸೆಕ್ಸ್ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಆಯ್ಕೆ ಆಗಿರುವುದಕ್ಕೆ ಬಹುತೇಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಅವರಿಗೆ ನೆರವಿಗೆ ಹಲವರು ಮುಂದಾಗಿದ್ದಾರೆ.

'ಪ್ರಜಾವಾಣಿ'ಯ ಆ.6ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿದ್ದನ್ನು ಗಮನಿಸಿ ನೂರಾರು ಕರೆಗಳು ಬಂದಿದ್ದು, ವಸತಿ ಸಚಿವ ಜಮೀರ್ ಅಹಮದ್ ಖಾನ್ ಹಾಗೂ ಸಂಸದ ಗೋವಿಂದ ಕಾರಜೋಳ ಅವರ ಪುತ್ರ, ಯುವ ಭಾರತ ಸಂಸ್ಥೆಯ ಅಧ್ಯಕ್ಷ ಉಮೇಶ್ ಕಾರಜೋಳ ಅವರು ನೆರವಿನ ಭರವಸೆ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ ಫೇಸ್‌ಬುಕ್‌ನಲ್ಲಿ ಈ ವರದಿಯನ್ನು ಟ್ಯಾಗ್ ಮಾಡಿ, 'ರಾಜ್ಯ ಕಾಂಗ್ರೆಸ್ ಸರ್ಕಾರ ಅನುಷ್ಠಾನಗೊಳಿಸಿದ ಪ್ರತಿ ಯೋಜನೆಯೂ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅದರ ಸಂಪೂರ್ಣ ಪ್ರಯೋಜನ ಸಿಗುವಂತೆ ಮಾಡುತ್ತವೆ ಎನ್ನುವುದಕ್ಕೆ ಈ ಹಿಂದೆ ನಾನು ಸಮಾಜ ಕಲ್ಯಾಣ ಇಲಾಖೆ ಸಚಿವನಾಗಿದ್ದಾಗ ಜಾರಿಗೊಳಿಸಿದ್ದ 'ಪ್ರಬುದ್ಧ' ಯೋಜನೆಯೇ ಸಾಕ್ಷಿ' ಎಂದು ಹೇಳಿದ್ದಾರೆ.



'ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿಲ್ಲ'

ಬೆಂಗಳೂರು: ನಗರದಲ್ಲಿ ಇತ್ತೀಚೆಗೆ ಕೊಲೆಯಾದ 13 ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮರಣೋತ್ತರ ಪರೀಕ್ಷೆಯ ವರದಿ ಬಂದಿದ್ದು, ಮೃತ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಯಾವುದೇ ಲಕ್ಷಣಗಳು ಅಥವಾ ಪುರಾವೆಗಳು ಕಂಡುಬಂದಿಲ್ಲ ಎಂದು ತಿಳಿಸಿವೆ

ಜುಲೈ 30ರಂದು ಟ್ಯೂಷನ್‌ಗೆ ತೆರಳಿದ್ದ ನಿಶ್ಚಿತ್, ವಾಪಸ್ ಮನೆಗೆ ಬಂದಿರಲಿಲ್ಲ. ಜುಲೈ 31ರಂದು ಬಿಲ್ವಾರದಹಳ್ಳಿಯ ಅರಣ್ಯ ಪ್ರದೇಶದಲ್ಲಿ ಬಂಡೆಯ ಮೇಲೆ ಬಾಲಕನ ಮೃತದೇಹ ಪತ್ತೆಯಾಗಿತ್ತು.

ಅರಕೆರೆಯ ಶಾಂತಿನಿಕೇತನ ಬಡಾವಣೆಯಲ್ಲಿ ಟ್ಯೂಷನ್ ಮುಗಿಸಿಕೊಂಡು ಸೈಕಲ್‌ನಲ್ಲಿ ಮನೆಗೆ ತೆರಳುತ್ತಿದ್ದ ಬಾಲಕ ನಿಶ್ಚಿತ್‌ನನ್ನು(13) ದುಷ್ಕರ್ಮಿಗಳು ಅಪಹರಿಸಿ, ಕೊಲೆ ಮಾಡಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದರು. ಆಗಸ್ಟ್ 1ರಂದು ಆರೋಪಿಗಳಾದ ಗುರುಮೂರ್ತಿ, ಗೋಪಿಯನ್ನು ಪೊಲೀಸರು ಬಂಧಿಸಿದ್ದರು.

'ದುಷ್ಕರ್ಮಿಗಳು ಹಣಕ್ಕಾಗಿ ಬಾಲಕನ ಅಪಹರಿಸಿದ್ದರು. ಬಳಿಕ ತಮ್ಮ ಗುರುತು ಬಹಿರಂಗವಾಗುತ್ತದೆ ಎಂಬ ಕಾರಣಕ್ಕೆ ಕೊಲೆ ಮಾಡಿದರು' ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ಪ್ರಮುಖ ಆರೋಪಿ ಗುರುಮೂರ್ತಿ ಎಂಬಾತ ನಿಶ್ಚಿತ್ ಅವರ ತಂದೆ ಅಚ್ಯುತ್ ಬಳಿ ಹೆಚ್ಚುವರಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ. ಆಗಾಗ ಮನೆಗೆ ಬಂದು ಹೋಗುತ್ತಿದ್ದ ಗುರುಮೂರ್ತಿ, ನಿಶ್ಚಿತ್‌ನನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಇಡುವ ಸಂಚು ರೂಪಿಸಿದ್ದ. ನಿಶ್ಚಿತ್ ತಾಯಿಯನ್ನು ಪರಿಚಯ ಮಾಡಿಕೊಂಡು, ಬಾಲಕನಿಗೂ ಹತ್ತಿರವಾಗಿದ್ದ. ಬಾಲಕನ ಕುಟುಂಬದ ಹಿನ್ನೆಲೆಯನ್ನು ತಿಳಿದುಕೊಂಡು ಹಣ ಗಳಿಸಲು ಸಂಚು ರೂಪಿಸಿದ್ದ. ಕೃತ್ಯ ಎಸಗಲು ತನ್ನ ಸ್ನೇಹಿತ ಗೋಪಿಯನ್ನೂ ಬಳಸಿಕೊಂಡಿದ್ದ' ಎಂದು ಹೇಳಿದ್ದಾರೆ.

ಎಸ್‌ಇಪಿ: ಅಂತಿಮ ವರದಿ ನಾಳೆ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಸಿದ್ಧವಾಗಿದ್ದು, ಎಸ್‌ಇಪಿ ಆಯೋಗ ಆಗಸ್ಟ್ 8ರಂದು ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸುತ್ತಿದೆ.

ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ (ಎಸ್‌ಜೆಪಿ) ಆವರಣದಲ್ಲಿ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿದ ನಂತರ ಈ ಕುರಿತು ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, 'ಎಸ್‌ಇಪಿ ಅಂತಿಮ ವರದಿ ಸಿದ್ಧವಾಗಿದೆ. ಈ ಕುರಿತು ಉನ್ನತ ಶಿಕ್ಷಣ ಹಾಗೂ ಶಾಲಾ ಶಿಕ್ಷಣ ಸಚಿವರಿಗೆ ಪ್ರಾಥಮಿಕ ಮಾಹಿತಿ ನೀಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮಯ ಪಡೆದು ವರದಿ ಸ್ವೀಕರಿಸಲಾಗುವುದು' ಎಂದರು.

ತರಾತುರಿಯಲ್ಲಿ ಸಿದ್ಧಪಡಿಸಿದ್ದ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಗೆ ಪರ್ಯಾಯವಾಗಿ ರಾಜ್ಯ ಶಿಕ್ಷಣ ನೀತಿ ರೂಪಿಸಲು ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಲಾಗಿತ್ತು. ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ನೀಡಿದ್ದ ಭರವಸೆಯಂತೆ ನಡೆದುಕೊಂಡಿತ್ತು. ವರದಿ ಸ್ವೀಕರಿಸಿದ ನಂತರ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ, ಜಾರಿಗೊಳಿಸಲಾಗುವುದು ಎಂದು ಮಾಹಿತಿ ನೀಡಿದರು.

ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ 2021ರಲ್ಲಿ ಅಂದಿನ ಎನ್‌ಇಪಿಯನ್ನು ಉನ್ನತ ಶಿಕ್ಷಣದಲ್ಲಿ ಅಳವಡಿಸಿಕೊಂಡಿತ್ತು. ಆದರೆ, ಶಾಲಾ ಶಿಕ್ಷಣದಲ್ಲಿ ಅನುಷ್ಠಾನ ಮಾಡಿರಲಿಲ್ಲ. ಎಸ್‌ಇಪಿ ಮಧ್ಯಂತರ ವರದಿಯ ಆಧಾರದ ಮೇಲೆ, ಕಳೆದ ವರ್ಷ ನಾಲ್ಕು ವರ್ಷಗಳ ಪದವಿ ಕೋರ್ಸ್‌ಗಳನ್ನು ಹಿಂಪಡೆಯಲಾಗಿತ್ತು. ಮೊದಲಿನಂತೆಯೇ ಮೂರು ವರ್ಷಗಳ ಪದವಿ ಕೋರ್ಸ್‌ಗಳನ್ನು ಮರು ಜಾರಿ ಮಾಡಲಾಗಿತ್ತು. ಬಹು ಪ್ರವೇಶ-ನಿರ್ಗಮನ ಮತ್ತು ಇತರ ಅಂಶಗಳನ್ನು ಸಹ ಸಂಪೂರ್ಣವಾಗಿ ರದ್ದುಗೊಳಿಸಲಾಗಿತ್ತು. ಎಸ್‌ಇಪಿ ಅಂತಿಮ ವರದಿಯ ಅನುಷ್ಠಾನ ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣಕ್ಕೆ ಪ್ರಯೋಜನವಾಗಲಿದೆ ಎಂದರು.

'ಅತಿಥಿ'ಗಳ ನೇಮಕಕ್ಕೆ ಕೋರ್ಟ್ ತಡೆ'

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಮಾನದಂಡಗಳ ಪ್ರಕಾರ ಪದವಿ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವಂತೆ ಹೈಕೋರ್ಟ್ ಆದೇಶಿಸಿದೆ. ಆದೇಶ ಪ್ರಶ್ನಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಿದೆ. ಪ್ರಕರಣದ ವಿಚಾರಣೆ ನಡೆಯುತ್ತಿರುವ ಕಾರಣ ನೇಮಕಾತಿ ವಿಳಂಬವಾಗಿದೆ ಎಂದು ಸಚಿವ ಎಂ.ಸಿ. ಸುಧಾಕರ್ ಹೇಳಿದರು.

ಯುಜಿಸಿ ಮಾನದಂಡಗಳ ಪ್ರಕಾರ ಅರ್ಹತೆ ಹೊಂದಿರುವ ಮತ್ತು ಹೊಂದಿರದ ಅತಿಥಿ ಉಪನ್ಯಾಸಕರ ನಡುವೆ ಸರ್ಕಾರ ಸಿಲುಕಿಕೊಂಡಿದೆ. ಎಲ್ಲ ಉಪನ್ಯಾಸಕರ ಹಿತಾಸಕ್ತಿ ರಕ್ಷಣೆಗೆ ಶ್ರಮಿಸುತ್ತಿದೆ.

'ಪಾದಚಾರಿ ಮಾರ್ಗ ವ್ಯವಸ್ಥೆಗೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿ ಅಡೆತಡೆಯಿಲ್ಲದ ಪಾದಚಾರಿ ಮಾರ್ಗದ ವ್ಯವಸ್ಥೆಗೆ ಆದ್ಯತೆ ನೀಡಿ, ಪಾದಚಾರಿ ಮಾರ್ಗ ಒತ್ತುವರಿಯನ್ನು ನಿರಂತರವಾಗಿ ತೆರವುಗೊಳಿಸುವ ಕಾರ್ಯಾಚರಣೆ ನಡೆಸಲಾಗುವುದು ಎಂದು ವಲಯ ಆಯುಕ್ತ ಬಿ.ಸಿ. ಸತೀಶ್ ತಿಳಿಸಿದರು.

ಕೆಂಗೇರಿ ಉಪ ವಿಭಾಗ ವ್ಯಾಪ್ತಿಯ ಮಾಗಡಿ ಮುಖ್ಯರಸ್ತೆಯಿಂದ ಈಸ್ಟ್ ವೆಸ್ಟ್ ಕಾಲೇಜು, ಒಂದನೇ ಹಂತ, ಬಿಇಎಲ್ ಲೇಔಟ್‌ವರೆಗೆ ಹಾಗೂ ರಾಜರಾಜೇಶ್ವರಿನಗರ ವಿಭಾಗದ ಮೈಸೂರು ಮುಖ್ಯ ರಸ್ತೆ, ಗೋಪಾಲನ್ ಮಾಲ್ ಆರ್ಚ್‌ನಿಂದ ರಾಜರಾಜೇಶ್ವರಿ ನಗರದ 18ನೇ ಅಡ್ಡರಸ್ತೆ, ಐಡಿಯಲ್ ಹೋಮ್ಸ್‌ವರೆಗೆ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಬುಧವಾರ ನಡೆಸಲಾಯಿತು ಎಂದು ಮಾಹಿತಿ ನೀಡಿದರು.

ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿದ್ದ ಅಂಗಡಿಗಳು, ತಾತ್ಕಾಲಿಕ ಚಾವಣಿಗಳು, ಮೆಟ್ಟಿಲುಗಳು, ತಾತ್ಕಾಲಿಕ ಶೆಡ್‌ಗಳು, ಕಟ್ಟಡ ನಿರ್ಮಾಣದ ಸಾಮಗ್ರಿ, ತಡೆಗೋಡೆಗಳು, ನಂದಿನಿ ಬೂತ್, ಜಾಹೀರಾತು ಫಲಕಗಳು, ಮಣ್ಣು ಮತ್ತು ತ್ಯಾಜ್ಯವನ್ನು ತೆರವುಗೊಳಿಸಲಾಯಿತು.

ಪ್ಲಾಸ್ಟಿಕ್ ತಪಾಸಣೆ: ಪಾದಚಾರಿ ಮಾರ್ಗ ತೆರವು ಕಾರ್ಯಾಚರಣೆಯೊಂದಿಗೆ ವಿವಿಧ ಅಂಗಡಿಗಳಿಗೆ ಭೇಟಿ ನೀಡಿ, ಏಕ ಬಳಕೆ ಪ್ಲಾಸ್ಟಿಕ್ ಬಳಸುತ್ತಿರುವ ಬಗ್ಗೆ ತಪಾಸಣೆ ನಡೆಸಲಾಯಿತು. ಈ ಸಂದರ್ಭದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಬಳಸುತ್ತಿದ್ದ 37 ಅಂಗಡಿಗಳಿಂದ ₹64,300 ದಂಡ ವಸೂಲಿ ಮಾಡಲಾಯಿತು.

ಆಗಸ್ಟ್ 14ರಂದು ವಲಯ ವ್ಯಾಪ್ತಿಯ ಕೆಂಗೇರಿ, ರಾಜರಾಜೇಶ್ವರಿ ನಗರ ವಿಭಾಗದ ವಿವಿಧೆಡೆ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗುವುದು ಎಂದು ಸತೀಶ್ ಮಾಹಿತಿ ನೀಡಿದರು.

ಕಣ್ಮನ ಸೂರೆಗೊಂಡ 'ವಿನ್ಯಾಸ ವೈಭವ'

ಬೆಂಗಳೂರು: ಝಗಮಗಿಸುವ ಬೆಳಕಿನ ಚಿತ್ತಾರ, ವೇದಿಕೆಯಲ್ಲಿ ವಿಶಿಷ್ಟ ಕಲಾತ್ಮಕತೆಯ ಉಡುಪುಗಳನ್ನು ಧರಿಸಿದ ವಿದ್ಯಾರ್ಥಿಗಳ ವಯ್ಯಾರ, ಸಭಿಕರ ಕರತಾಡನ...

ಇದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಫ್ಯಾಷನ್ ಮತ್ತು ಉಡುಪು ವಿನ್ಯಾಸ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ 'ವಿನ್ಯಾಸ ವೈಭವ-2' ಫ್ಯಾಷನ್ ಶೋ ಝಲಕ್.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಒಟ್ಟು 12 ತಂಡಗಳ 64 ವಿದ್ಯಾರ್ಥಿಗಳು ವಿವಿಧ ಪರಿಕಲ್ಪನೆಗಳ ವರ್ಣರಂಜಿತ ಉಡುಪು ವಿನ್ಯಾಸ ಪ್ರದರ್ಶಿಸಿದರು.

ಬಹುಮಾನ ವಿಜೇತರು: ವರ್ಷದ ವಿನ್ಯಾಸಕಿ-ಸುಷ್ಮಾ, ಅತ್ಯುತ್ತಮ ಕಲಾತ್ಮಕ ಉಡುಪು-ಚೈತ್ರಾ, ಅತ್ಯುತ್ತಮ ಕಸೂತಿ ಕೆಲಸ- ಸ್ಮೃತಿ, ಅತ್ಯುತ್ತಮ ವರ್ಣ ಸಂಯೋಜನೆ- ರೇಷ್ಮಾ, ಅತ್ಯುತ್ತಮ ಪರಿಕಲ್ಪನೆ-ಶರ್ಲಿ, ಅತ್ಯುತ್ತಮ ಸಮರ್ಪಣೆ- ಆರ್.ಪ್ರೀತಿ.


ಫ್ಯಾಷನ್ ಶೋನಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಪ್ರಜಾವಾಣಿ ಚಿತ್ರ

ಎಚ್‌ಎಎಲ್ ಉದ್ಯೋಗಿ ಬಿಟ್ಟು ಹೋಗಿದ್ದ ಟೂಲ್‌ಕಿಟ್ ಬಾಕ್ಸ್

ಮೆಟ್ರೊ ನಿಲ್ದಾಣದಲ್ಲಿ ಬಾಕ್ಸ್: ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಆರ್.ಪುರಂ ಮೆಟ್ರೊ ನಿಲ್ದಾಣದಲ್ಲಿ ಬುಧವಾರ ಮಧ್ಯಾಹ್ನ ಅನುಮಾನಾಸ್ಪದ ಬಾಕ್ಸ್ ಪತ್ತೆಯಾಗಿದ್ದು, ಕೆಲ ಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಬಳಿಕ ಅದು ಎಚ್‌ಎಎಲ್ ಉದ್ಯೋಗಿಯೊಬ್ಬರು ಬಿಟ್ಟು ಹೋಗಿದ್ದ ಟೂಲ್‌ಕಿಟ್ ಬಾಕ್ಸ್ ಎಂದು ಗೊತ್ತಾದ ಬಳಿಕ ಸಾರ್ವಜನಿಕರು ಮತ್ತು ಪೊಲೀಸರು ನಿಟ್ಟುಸಿರುಬಿಟ್ಟರು.

ಎಚ್‌ಎಎಲ್‌ನ ಏರ್‌ಕ್ರಾಫ್ಟ್ ವಿಭಾಗದ ಉದ್ಯೋಗಿ ಮಂಜುನಾಥ್ ಜಾಧವ್ ಅವರು ಹರಿಯಾಣದಲ್ಲಿ ತರಬೇತಿ ಮುಗಿಸಿ ನಗರಕ್ಕೆ ರೈಲಿನಲ್ಲಿ ಬಂದರು. ಬಳಿಕ ಅಲ್ಲಿಂದ ಮೆಟ್ರೊ ನಿಲ್ದಾಣಕ್ಕೆ ಬಂದಿದ್ದಾರೆ. ಈ ವೇಳೆ ಅವರು ತಮ್ಮ ಟೂಲ್ ಕಿಟ್ ಬಾಕ್ಸ್ ಅನ್ನು ನಿಲ್ದಾಣದಲ್ಲಿಯೇ ಮರೆತು ಹೋಗಿದ್ದಾರೆ.

ಬಾಕ್ಸ್ ಗಮನಿಸಿದ ಸಾರ್ವಜನಿಕರು, ಬಾಂಬ್ ಇರಬಹುದೆಂದು ಶಂಕೆ ವ್ಯಕ್ತಪಡಿಸಿ, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಮಹದೇವಪುರ ಪೊಲೀಸರು ಭೇಟಿ ನೀಡಿ, ಸ್ಥಳವನ್ನು ಸುತ್ತುವರಿದರು.


ಮೆಟ್ರೊ ನಿಲ್ದಾಣದಲ್ಲಿ ಪತ್ತೆಯಾದ ಟೂಲ್ ಕಿಟ್ ಬಾಕ್ಸ್

ಮುಂಜಾಗ್ರತಾ ಕ್ರಮವಾಗಿ ಬಾಂಬ್ ನಿಷ್ಕ್ರಿಯ ದಳ, ಆಂಬುಲೆನ್ಸ್ ಮತ್ತು ಅಗ್ನಿಶಾಮಕ ದಳವನ್ನು ಕರೆಸಿಕೊಳ್ಳಲಾಯಿತು. ಬಾಕ್ಸ್ ಪರಿಶೀಲಿಸಿದಾಗ ಸ್ಫೋಟಕ ವಸ್ತುಗಳು ಇರಲಿಲ್ಲ. ಬದಲಾಗಿ ಟೂಲ್ ಕಿಟ್ ಬಾಕ್ಸ್ ಎಂಬುದು ಗೊತ್ತಾಯಿತು.

ಮರೆತುಹೋಗಿದ್ದ ಟೂಲ್ ಕಿಟ್ ಬಾಕ್ಸ್ ಅನ್ನು ತೆಗೆದುಕೊಳ್ಳಲು ಮಂಜುನಾಥ್ ಅವರು ಮೆಟ್ರೊ ನಿಲ್ದಾಣಕ್ಕೆ ವಾಪಸ್ ಬಂದಿದ್ದಾರೆ. ಆಗ ಪೊಲೀಸರು ಅವರನ್ನು ವಿಚಾರಣೆ ನಡೆಸಿ, ಸಾರ್ವಜನಿಕ ಸ್ಥಳಗಳಲ್ಲಿ ಈ ರೀತಿ ಬೇಜವಾಬ್ದಾರಿತನದಿಂದ ವರ್ತಿಸಬಾರದೆಂದು ಎಚ್ಚರಿಕೆ ನೀಡಿ, ಬಾಕ್ಸ್ ಕೊಟ್ಟು ಕಳುಹಿಸಿದರು.

ರಮ್ಯಾಗೆ ಅಶ್ಲೀಲ ಸಂದೇಶ ಮತ್ತೊಬ್ಬನ ಬಂಧನ



ಬೆಂಗಳೂರು: ನಟಿ ರಮ್ಯಾಗೆ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಚಿತ್ರ ಹಾಗೂ ಬೆದರಿಕೆ ಸಂದೇಶ ಕಳುಹಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಆರೋಪಿಯನ್ನು ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕೊಪ್ಪಳ ಜಿಲ್ಲೆ ಕಾರಟಗಿ ತಾಲ್ಲೂಕಿನ ಸಿಂಗನಾಳ ಗ್ರಾಮದ ನಿವಾಸಿ ಮಂಜುನಾಥ್ ಬಂಧಿತ ಆರೋಪಿ. ಈವರೆಗೆ ಬಂಧಿತರ ಸಂಖ್ಯೆ 5ಕ್ಕೆ ಏರಿಕೆಯಾಗಿದೆ. ಪ್ರಕರಣ ದಾಖಲಾದ ಬಳಿಕ ಓಬಣ್ಣ ಮತ್ತು ಗಂಗಾಧರ್ ಹಾಗೂ ಚಿಕ್ಕಮಗಳೂರು ಜಿಲ್ಲೆ ಕಡೂರು ಮೂಲದ ರಾಜೇಶ್ ಮತ್ತು ಭುವನ್‌ಗೌಡ ಎಂಬವರನ್ನು ಬಂಧಿಸಲಾಗಿದೆ.

ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ವಿರುದ್ಧ ಹೇಳಿಕೆ ನೀಡಿದ್ದ ಕಾರಣಕ್ಕೆ ರಮ್ಯಾಗೆ ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂ ಮತ್ತು 'ಎಕ್ಸ್'ನಲ್ಲಿ ಅಶ್ಲೀಲವಾಗಿ ಸಂದೇಶ ಕಳುಹಿಸಿ, ಜೀವ ಬೆದರಿಕೆ ಹಾಕಿದ್ದರು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.
ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ-ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

30ನೇ ಜೂನ್ 2025ರ ಮೊದಲನೆಯ ತ್ರೈಮಾಸಿಕ ಅವಧಿಗೆ ಕೊನೆಗೊಂಡ ಅಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಜೂನ್ 2025 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಜೂನ್ 2024 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2025 (ಪರಿಶೋಧಿತ)
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	2,763.39	2,467.81	11,641.25
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	84.51	(30.26)	284.35
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	102.16	(30.26)	136.03
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	44.76	(38.43)	(19.27)
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	29.65	(32.20)	(10.10)
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)	147.07	128.97	147.07
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ			3,905.16
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು			
	ಎ) ಮೂಲಭೂತ:	3.95	(2.45)	1.89
	ಬಿ) ಡೈಲ್ಯೂಟೆಡ್:	3.93	(2.45)	1.88

ಸೂಚನೆ :

1. 30ನೇ ಜೂನ್ 2025 ರ ಮೊದಲನೆಯ ತ್ರೈಮಾಸಿಕ ಅವಧಿಗೆ ಕೊನೆಗೊಂಡ ಪ್ರತ್ಯೇಕವಾದ ಅಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ 30 ಜೂನ್ 2025 (ಅಪರಿಶೋಧಿತ)	ತ್ರೈಮಾಸಿಕಕ್ಕೆ ಕೊನೆಗೊಂಡ 30 ಜೂನ್ 2024 (ಅಪರಿಶೋಧಿತ)	ವರ್ಷಕ್ಕೆ ಕೊನೆಗೊಂಡ 31 ಮಾರ್ಚ್ 2025 (ಪರಿಶೋಧಿತ)
ನಿರ್ವಹಣೆಯಿಂದ ಬಂದ ಒಟ್ಟು ವರಮಾನ	1,826.05	1,346.24	7,568.33
ಲಾಭ ತೆರಿಗೆಯ ಮುಂಚೆ	226.06	60.81	712.03
ಲಾಭ ತೆರಿಗೆಯ ನಂತರ	164.99	44.96	527.95

2. ಈ ಮೇಲಿನ ಅಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 4ನೇ ಆಗಸ್ಟ್, 2025 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 5ನೇ ಆಗಸ್ಟ್, 2025 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಮೇಲಿರುವ ತ್ರೈಮಾಸಿಕ ಅವಧಿಗೆ ಕೊನೆಗೊಂಡ, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾದ, ಸಮಗ್ರ ಹಣಕಾಸಿನ ಅಪರಿಶೋಧಿತ, ಪ್ರತ್ಯೇಕವಾದ ಫಲಿತಾಂಶಗಳ ಸಂಕ್ಷಿಪ್ತ ರೂಪ ಮತ್ತು ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಸಂಕ್ಷಿಪ್ತ ರೂಪವಾಗಿದೆ. ಸಮಗ್ರ ತ್ರೈಮಾಸಿಕ ಅವಧಿಗೆ ಕೊನೆಗೊಂಡ ಹಣಕಾಸಿನ ಪ್ರತ್ಯೇಕವಾದ ಮತ್ತು ಸಮಗ್ರ ಫಲಿತಾಂಶಗಳ ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/-
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು
DIN : 00286308

ಸ್ಥಳ : ಬೆಂಗಳೂರು
ದಿನಾಂಕ: ಆಗಸ್ಟ್ 05, 2025

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

I KABITA KUMARI BARIK, Residing at Koraluru, Naduvathi post, Hoskote Taluk, Bengaluru- 560067, have changed to New name KABITA BISHWAL, vide affidavit dated 06/08/2025 before notary Veena J. Bangalore.

CHANGE OF NAME
I, JENNIFER PRIYA HARRY PETER, residing at No. 1645, BDA B Type, Austin Town Layout, Viveknagar, Benglauru - 560047 have changed my name to JENNIFER PRIYA vide affidavit dated 05-08-2025 sworn before notary B.M. Chandrashekar, Bengaluru. Henceforth I shall be knows as JENNIFER PRIYA only

CHANGE OF NAME
I, Mark Archadas John, R/at No.14, Blessed Home, 1st Main, Gangai Amman Temple Street, Dooravaninagar, A Narayanapura Bengaluru-560016. have changed my name to MARK ANTHONY JOHN vide affidavit dated 06.08.2025 before notary Thippeswamy T, Bengaluru. Henceforth I shall be called MARK ANTHONY JOHN only.

CHANGE OF NAME
I, VASISHT RAMPRIYA ALIAS VASISHT RAMAPRIYA, S/o G.S Rampriya residing at No.2153, near nagegowdanapalya, BSK 6th Stage, 4th Block, Thalaghattapura, Bangalore-560109, declare that the above names pertain to me only. henceforth i shall be known as VASISHT RAMPRIYA vide affidavit 04.08.2025 before notary Ambreshappa, Bangalore.

I, KATHYAYANI P R, w/o Prathap Thammanna residing in 33, 5th main, block 2, f g3, PSR Residency, Bengaluru have changed my name to Kathyayani Prathap and is known by this changed name since 2008.

CHANGE OF NAME
I, Bala Krishna Reddy Velu Pushpanathan, R/at No.14, Blessed Home, 1st Main, Gangai Amman Temple Street, Dooravaninagar, A Narayanapura Bengaluru-560016. have changed my name to BALA KRISHNA REDDY vide affidavit dated 06.08.2025 before notary Thippeswamy T, Bengaluru. Henceforth I shall be called BALA KRISHNA REDDY only.

JOB OPPORTUNITIES

Stores/ Purchase

PURCHASE-COORDINATOR REQUIRED. Candidate should have experience in store data entry, computer proficiency, and be a B.Com graduate. Send CV to bkhrdept8517@gmail.com

CHANGE OF NAME
I, M. JAYARAM, residing at No. 349-A, K H B Colony, Shivanapalya (Vaddarapalya) Benglauru - 560060 have changed my name to JAYARAMAIAH M vide affidavit dated 05-08-2025 sworn before notary Ravi, Bengaluru. Henceforth I shall be knows as JAYARAMAIAH M only

REAL ESTATE SELLING

Agricultural Land

General

168 ACRES of plantation land for sale in Coorg Karnataka suitable for all plantations with perennial stream of water with full grown trees suitable for resorts. Rs. 12 Lacs per acre. Contact: 9448843396/9880288795

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact
NAME CHANGE
ಪ್ರಜಾವಾಣಿ
Book your Name Change Ad in DH All Karnataka + Prajavani Bengaluru City All Days
@50/-* PER WORDS
www.dhclassifieds.com
BOOK NOW
For more details contact:
+91 7795158424
+91 9731810277 | +91 9900428036
*Conditions apply

ವರಮಹಾಲಕ್ಷ್ಮಿ ಹಬ್ಬಕ್ಕೆ ಖರೀದಿ ಭರಾಟೆ



ಹೂವು–ಹಣ್ಣಿನ ದರದಲ್ಲಿ ಭಾರಿ ಏರಿಕೆ •ಕನಕಾಂಬರ ಕೆ.ಜಿಗೆ ₹3,000, ಮಲ್ಲಿಗೆ ₹1,600

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರಮಹಾಲಕ್ಷ್ಮಿ ಹಬ್ಬವನ್ನು ಶುಕ್ರವಾರ ಸಂಭ್ರಮ–ಸಡಗರದಿಂದ ಆಚರಿಸಲು ನಗರದ ಜನತೆ ಸಿದ್ಧತೆ ನಡೆಸಿದ್ದು, ಬುಧವಾರ ಬೆಳಿಗ್ಗೆಯಿಂದಲೇ ಹೂವು ಮತ್ತು ಹಣ್ಣುಗಳ ಖರೀದಿಯಲ್ಲಿ ತೊಡಗಿದ್ದರು. ಬೆಲೆ ಏರಿಕೆ ಬಿಸಿಯ ನಡುವೆಯೂ ಖರೀದಿ ಭರಾಟೆ ಜೋರಾಗಿತ್ತು.

ಹಬ್ಬದ ದಿನ ಮನೆಗಳಲ್ಲಿ ಲಕ್ಷ್ಮಿ ಮೂರ್ತಿಗಳನ್ನು ಕೂರಿಸಿ, ಪೂಜಿಸುವುದು ವಾಡಿಕೆ. ಈ ವೇಳೆ ಅಲಂಕಾರಕ್ಕಾಗಿ ತರಹೇವಾರಿ ಹೂವು ಮತ್ತು ಹಣ್ಣುಗಳನ್ನು ಬಳಸುತ್ತಾರೆ. ಹಾಗಾಗಿ, ಪ್ರತಿ ವರ್ಷದಂತೆ ಈ ಬಾರಿಯೂ ಹೂವು ಮತ್ತು ಹಣ್ಣಿನ ದರಗಳಲ್ಲಿ ಭಾರಿ ಏರಿಕೆಯಾಗಿದೆ.

ಹೂವಿನ ದರ ಗಗನಮುಖಿ: 'ಈ ಬಾರಿ ಹೂವಿಗೆ ಬೇಡಿಕೆ ಹೆಚ್ಚಿದ್ದು, ದರವೂ ದುಬಾರಿಯಾಗಿದೆ. ಈ ಹಬ್ಬದಲ್ಲೇ ಹೂವಿನ ಬೆಳೆಗಾರರು ಮತ್ತು ವರ್ತಕರು ಲಾಭ ಕಾಣುತ್ತಾರೆ' ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವರ್ತಕರಾದ ಸಲ್ಮಾನ್ ಮತ್ತು ದೀಪಕ್ ಮಾಹಿತಿ ನೀಡಿದರು.

'ಕನಕಾಂಬರದ ಗರಿಷ್ಠ ದರ ಕೆ.ಜಿ.ಗೆ ₹3 ಸಾವಿರ, ಮಲ್ಲಿಗೆ ಹೂವಿನ ದರ ಕೆ.ಜಿ.ಗೆ ₹1,400ರಿಂದ ₹1,600 ತಲುಪಿದೆ. ಪ್ರತಿ ಕೆ.ಜಿ.ಗೆ ಸೇವಂತಿಗೆ ₹300, ಗುಲಾಬಿ ₹400, ಸುಗಂಧರಾಜ ₹350, ಚೆಂಡು ಹೂವು ₹80ರಂತೆ ಮಾರಾಟವಾಗುತ್ತಿದೆ. ಹಿಂದಿನ ದಿನಗಳಿಗೆ ಹೋಲಿಸಿದರೆ ವರಮಹಾಲಕ್ಷ್ಮಿ ಹಬ್ಬ ಸಮೀಪಿಸಿದ ಬಳಿಕ ಹೂವುಗಳ ದರದಲ್ಲಿ ಭಾರಿ ಏರಿಕೆಯಾಗಿದೆ. ಗುರುವಾರ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಹೂವಿನ ದರವೂ ಹೆಚ್ಚಾಗಲಿದೆ' ಎಂದು ತಿಳಿಸಿದರು.

ವರಮಹಾಲಕ್ಷ್ಮಿ ಹಬ್ಬದಲ್ಲಿ ಹಣ್ಣುಗಳಿಗೆ ಬೇಡಿಕೆ ಜಾಸ್ತಿ. ಲಕ್ಷ್ಮಿ ಪೂಜೆ ಸಂದರ್ಭದಲ್ಲಿ ಮೂರ್ತಿಯ ಸುತ್ತ ಜೋಡಿಸಲು ಮತ್ತು ಅಲಂಕಾರಕ್ಕಾಗಿ ಹೆಚ್ಚಿನ ಪ್ರಮಾಣದ ಹಣ್ಣುಗಳನ್ನು ಖರೀದಿಸುತ್ತಾರೆ. ಬೇಡಿಕೆ ಹೆಚ್ಚಾದಂತೆ ಹಣ್ಣುಗಳ ದರದಲ್ಲೂ ಸ್ವಲ್ಪ ಏರಿಕೆಯಾಗಿದೆ. ತರಕಾರಿ ದರಗಳು ಸ್ಥಿರವಾಗಿವೆ. ಸೊಪ್ಪಿನ ಬೆಲೆಯೂ ಕಡಿಮೆಯಾಗಿದೆ.

'ಬೆಂಗಳೂರು ಗ್ರಾಮಾಂತರ, ತುಮಕೂರು, ಕುಣಿಗಲ್, ಗೌರಿಬಿದನೂರು, ಶಿವಮೊಗ್ಗ, ಮೈಸೂರು ಮುಂತಾದ ಕಡೆಗಳಿಂದ ನಗರದ ಮಾರುಕಟ್ಟೆಗಳಿಗೆ ಹೂವು ಪೂರೈಕೆಯಾಗುತ್ತದೆ. ತಮಿಳುನಾಡಿನ ವಿವಿಧೆಡೆಗಳಿಂದಲೂ ಹೂವು ಪೂರೈಕೆಯಾಗುತ್ತದೆ. ಹಬ್ಬದ ಸಂದರ್ಭದಲ್ಲಿ ಮಳೆ ಇಳಿಮುಖವಾಗಿರುವುದರಿಂದ ಹೂವುಗಳ ಆವಕ ಹೆಚ್ಚಿದೆ. ಜೊತೆಗೆ ತಾಜಾ ಹೂವಿನ ಪೂರೈಕೆ ಆಗುತ್ತಿದೆ' ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿಗಳು 'ಪ್ರಜಾವಾಣಿ'ಗೆ ತಿಳಿಸಿದರು.

ಹೂವುಗಳ ದರ ಪ್ರತಿ ಕೆ.ಜಿ.ಗೆ (₹ಗಳಲ್ಲಿ)

	ಕಳೆದ ವಾರ	ಈ ವಾರ
ಕನಕಾಂಬರ	600	3,000
ಮಲ್ಲಿಗೆ	400	1,600
ಗುಲಾಬಿ	150	400
ಸೇವಂತಿಗೆ	100	300
ಸುಗಂಧರಾಜ	100	350

ತರಕಾರಿ ದರಗಳು ಪ್ರತಿ ಕೆ.ಜಿ.ಗೆ

ಕ್ಯಾರೆಟ್	60-80
ಕ್ಯಾಪ್ಸಿಕಮ್	40-60
ಈರುಳ್ಳಿ	20-20
ಬೀನ್ಸ್	50-60
ಟೊಮೆಟೊ	20-40
ಆಲೂಗಡ್ಡೆ	25-30
ಹೀರೇಕಾಯಿ	50-60
ಚವಳಿಕಾಯಿ	40-50
ಮೆಣಸಿನಕಾಯಿ	100-80
ಕುಂಬಳಕಾಯಿ	30-40
ಬೆಳ್ಳುಳ್ಳಿ	100-120



ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಬುಧವಾರ ಕೆ.ಆರ್. ಮಾರುಕಟ್ಟೆಯಲ್ಲಿ ಬಾಳೆ ಕಂಬ ಖರೀದಿಯಲ್ಲಿ ತೊಡಗಿದ್ದ ಮಹಿಳೆಯರು ಚಿತ್ರಗಳು: ರಂಜು ಪಿ.

ಕಿರು ಮಾರುಕಟ್ಟೆಗಳ ನಿರ್ಮಾಣ

ನಗರದ ವಿವಿಧ ಭಾಗಗಳಲ್ಲಿ ಹೂವು ಹಾಗೂ ಅಲಂಕಾರಿಕ ವಸ್ತುಗಳ ಮಾರಾಟದ ಭರಾಟೆಯೂ ಜೋರಾಗಿದೆ. ಪ್ರಮುಖ ರಸ್ತೆಗಳು, ವೃತ್ತಗಳಲ್ಲಿ ಕಿರು ಮಾರುಕಟ್ಟೆಗಳು ದಿಢೀರ್ ತಲೆಎತ್ತಿವೆ. ಮಲ್ಲೇಶ್ವರ, ಯಶವಂತಪುರ, ಜಯನಗರ, ಶಿವಾಜಿನಗರದ ಮಾರುಕಟ್ಟೆ ಪ್ರದೇಶಗಳಲ್ಲಿನ ರಸ್ತೆ ಇಕ್ಕೆಲಗಳಲ್ಲಿ ನಡೆದಾಡಲೂ ಕಷ್ಟವಾಗುವಷ್ಟು ಗ್ರಾಹಕರು ಜಮಾಯಿಸಿದ್ದರು. ಇದರಿಂದ, ಸಂಚಾರ ದಟ್ಟಣೆಯುಂಟಾಗಿ ವಾಹನ ಸವಾರರು ಪರದಾಡಬೇಕಾಯಿತು. ಕೆ.ಆರ್. ಮಾರುಕಟ್ಟೆಗೆ ಸಂಪರ್ಕಿಸುವ ರಸ್ತೆಗಳಲ್ಲಿ ಸಂಚಾರ ದಟ್ಟಣೆ ತೀವ್ರವಾಗಿತ್ತು. ಮುಂಜಾನೆ 4ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಕೆ.ಆರ್. ಮಾರುಕಟ್ಟೆ, ಅವೆನ್ಯೂ ರಸ್ತೆಯಲ್ಲಿ ಜನದಟ್ಟಣೆ ಹೆಚ್ಚಿತ್ತು.

ಹಣ್ಣುಗಳ ದರ ಪ್ರತಿ ಕೆ.ಜಿಗೆ

ಸೇಬು	120-180
ದಾಳಿಂಬೆ	80-100
ಏಲಕ್ಕಿ ಬಾಳೆ	60-80
ಸೀತಾಫಲ	80-100
ಸಪೋಟ	80-100
ಅನಾನಸ್	80ಕ್ಕೆ ಎರಡು

ಬಾಳೆಕಂಬ ಜೋಡಿಗೆ	100
ಮಾವಿನ ತೋರಣ	30
100 ವೀಳ್ಯದೆಲೆಗೆ	100
4 ತೆಂಗಿನಕಾಯಿಗೆ(ಚಿಕ್ಕದ್ದು)	100

ಕಿರಣ್ ಕುಮಾರ್ ಸೇರಿ 15 ಮಂದಿಗೆ 'ಬಸವ ಪುರಸ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವ ಪರಿಷತ್ ನೀಡುವ 2025ನೇ ಸಾಲಿನ 'ಬಸವ ಪುರಸ್ಕಾರ'ಕ್ಕೆ ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್ ಸೇರಿ 15 ಮಂದಿ ಆಯ್ಕೆಯಾಗಿದ್ದಾರೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ಮಹಾಂತೇಶ್ ಹಿರೇಮಠ, 'ವಿವಿಧ ಕ್ಷೇತ್ರಗಳ ಸಾಧಕರನ್ನು ಈ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಪರಿಸರ ಕ್ಷೇತ್ರದಿಂದ ಅಲ್ಮಿತ್ರಾ ಪಟೇಲ್, ನ್ಯಾಯಾಂಗ ಕ್ಷೇತ್ರದಿಂದ ರವಿವರ್ಮ ಕುಮಾರ್, ಶಿಕ್ಷಣ ಹಾಗೂ ಸಹಕಾರ ಕ್ಷೇತ್ರದಿಂದ ಎಸ್.ಆರ್.ಪಾಟೀಲ, ಸಹಕಾರ ಮಹಿಳಾ ಸಬಲೀಕರಣ ಕ್ಷೇತ್ರದಿಂದ ಎಂ.ಎನ್. ರಾಜೇಂದ್ರ ಕುಮಾರ್, ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರದಿಂದ ಉಮಾಶ್ರೀ, ಸಮಾಜ ಸೇವೆ ಹಾಗೂ ಉದ್ಯಮ ಕ್ಷೇತ್ರದಿಂದ ಮಾನಂದಿ ರಮೇಶ್, ಬಸವರಾಜ ಎಸ್. ದೇಶಮುಖ, ವಿ.ಎಸ್.ವಿ. ಪ್ರಸಾದ್, ಎಸ್.ಪಿ. ದಯಾನಂದ್ ಹಾಗೂ ಬಸವರಾಜ ಧನ್ನೂರ ಆಯ್ಕೆಯಾಗಿದ್ದಾರೆ' ಎಂದು ತಿಳಿಸಿದರು.

'ಉದ್ಯಮ ಹಾಗೂ ಶಿಕ್ಷಣ ಕ್ಷೇತ್ರದಿಂದ ಶಾಮನೂರು ಎಸ್. ಗಣೇಶ್, ಶಿಕ್ಷಣ ಹಾಗೂ ಸಮಾಜ ಸೇವೆ ಕ್ಷೇತ್ರದಿಂದ ಬಸವರಾಜ್ ಎಸ್. ದೇಶಮುಖ, ವೈದ್ಯಕೀಯ ಕ್ಷೇತ್ರದಿಂದ ಡಾ. ನಾಗರಾಜಯ್ಯ ಎನ್., ಸಮಾಜ ಸೇವೆ ಕ್ಷೇತ್ರದಿಂದ ರವಿಕುಮಾರ ಸ್ವಾಮಿ ಹಿರೇಮಠ, ಸಾಹಿತ್ಯ ಮತ್ತು ಸರ್ಕಾರಿ ಸೇವೆ ಕ್ಷೇತ್ರದಿಂದ ಬಸವರಾಜ ಯಲಿಗಾರ ಅವರು ಈ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ' ಎಂದು ಮಾಹಿತಿ ನೀಡಿದರು.

'ಇದೇ 9ರಂದು ಅರಮನೆ ರಸ್ತೆಯಲ್ಲಿರುವ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಸಮಾರಂಭದ ಸಾನ್ನಿಧ್ಯ ವಹಿಸುತ್ತಾರೆ. ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರು ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ' ಎಂದು ಹೇಳಿದರು.



ನವ ಭಾರತ: ಕೌಶಲ ಅಭಿವೃದ್ಧಿ ಅಗತ್ಯ

ಪ್ರಜಾವಾಣಿ ವಾರ್ತೆ

ರಾಮನಗರ: ಹೆಚ್ಚು ಯುವಜನರನ್ನು ಹೊಂದಿರುವ ಭಾರತದಲ್ಲಿ ನವ ಭಾರತ ನಿರ್ಮಾಣದ ನಿರೀಕ್ಷೆಗೆ ತಕ್ಕಂತೆ ಅಗತ್ಯ ಕೌಶಲ ಅಭಿವೃದ್ಧಿ ಆಗಬೇಕಿದೆ ಎಂದು ಭಾರತೀಯ ಬಾಹ್ಯಕಾಶ ಸಂಸ್ಥೆಯ (ಇಸ್ರೊ) ಮಾಜಿ ಅಧ್ಯಕ್ಷ ಡಾ. ಎಸ್. ಸೋಮನಾಥ್ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕಿನ ಬಿಡದಿಯ ಕೈಗಾರಿಕಾ ಪ್ರದೇಶದಲ್ಲಿರುವ ಟೊಯೊಟಾ ತಾಂತ್ರಿಕ ತರಬೇತಿ ಸಂಸ್ಥೆಯಲ್ಲಿ (ಟಿಟಿಟಿಐ) ಬುಧವಾರ ನಡೆದ ಸಂಸ್ಥೆಯ 16ನೇ ಬ್ಯಾಚ್ ವಿದ್ಯಾರ್ಥಿಗಳ ಘಟಿಕೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

'ಕೌಶಲಾಭಿವೃದ್ಧಿಯ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಟೊಯೊಟಾ ನಿರಂತರ ಬದ್ಧತೆ ಶ್ಲಾಘನೀಯ' ಎಂದು ಹೇಳಿದರು.

ಟೊಯೊಟಾ ಕಿರ್ಲೋಸ್ಕರ್ ಮೋಟಾರ್ (ಟಿಕೆಎಂ) ಹಣಕಾಸು ಮತ್ತು ಆಡಳಿತ ವಿಭಾಗದ ಕಾರ್ಯನಿರ್ವಾಹಕ ಉಪಾಧ್ಯಕ್ಷ ಜಿ. ಶಂಕರ ಮಾತನಾಡಿದರು.

200 ಮಂದಿಗೆ ಪದವಿ: ಘಟಿಕೋತ್ಸವದಲ್ಲಿ 200 ಮಂದಿಗೆ ಪದವಿ ಪ್ರಮಾಣಪತ್ರ ವಿತರಿಸಲಾಯಿತು. ಈ ಪೈಕಿ ಕೆಲವರು ವಿಶ್ವ ಕೌಶಲ ಸ್ಪರ್ಧೆಗಳಲ್ಲಿ ಪದಕಗಳನ್ನು ಗಳಿಸಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಇದುವರೆಗೆ ತರಬೇತಿ ಪಡೆದ 1,417 ವಿದ್ಯಾರ್ಥಿಗಳ ಪೈಕಿ 481 ಮಂದಿ ಟಿಕೆಎಂ ಸೇರಿದ್ದಾರೆ. ಇತರರು ಗ್ರೂಪ್ ಕಂಪನಿಗಳು, ಪೂರೈಕೆದಾರ ಸಂಸ್ಥೆಗಳು ಮತ್ತು ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಎಸ್‌ಟಿಪಿ ಕಾಮಗಾರಿ ಕಾಲಮಿತಿಯಲ್ಲಿ ಪೂರ್ಣಗೊಳಿಸಿ

ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯಿಂದ ಹೊಸದಾಗಿ ನಿರ್ಮಿಸುತ್ತಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ (ಎಸ್‌ಟಿಪಿ) ಕಾಮಗಾರಿಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಬೆಂಗಳೂರು ಜಲಮಂಡಳಿ ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚಿಸಿದರು.

ಜಲಮಂಡಳಿಯ ವೃಷಭಾವತಿ ವ್ಯಾಲಿಯ(ವಿವಿ) 150 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದ (ಎಸ್‌ಟಿಪಿ) ಯೋಜನೆ ಹಾಗೂ ಮೈಲಸಂದ್ರದಲ್ಲಿ ಉನ್ನತೀಕರಿಸಲಾಗುತ್ತಿರುವ ಎಸ್‌ಟಿಪಿ ಕಾಮಗಾರಿ ಪರಿಶೀಲಿಸಿ ಅವರು ಮಾತನಾಡಿದರು.

ಮೈಲಸಂದ್ರ ಎಸ್‌ಟಿಪಿ ಕಾಮಗಾರಿ ಪೂರ್ಣಗೊಳಿಸದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು, 'ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳಬೇಕು' ಎಂದರು. ವೃಷಭಾವತಿ ವ್ಯಾಲಿ ಯೋಜನೆಯ ಕಾಮಗಾರಿಯನ್ನು 2026ರ ಮಾರ್ಚ್ ವೇಳೆಗೆ ಪೂರ್ಣಗೊಳಿಸುವಂತೆ ನಿರ್ದೇಶಿಸಿದರು.

ಇದೇ ವೇಳೆ ಈ ಎರಡೂ ಸ್ಥಳಗಳಲ್ಲಿ ಅಧ್ಯಕ್ಷರು ಸೇರಿದಂತೆ ಜಲಮಂಡಳಿ ಸಿಬ್ಬಂದಿ 350 ಗಿಡಗಳನ್ನು ನೆಟ್ಟರು.



ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅವರು ಮೈಲಸಂದ್ರದ ಎಸ್‌ಟಿಪಿ ನಿರ್ಮಾಣದ ಪ್ರಗತಿ ಪರಿಶೀಲಿಸಿದರು

ನಗರದಲ್ಲಿ ಇಂದು


ಎಂ.ಕೆ. ಕೆಂಪೇಗೌಡ ಅವರ 'ಗ್ರಾಮ ಸುರಾಜ್ಯ' ಇಂಗ್ಲಿಷ್‌ಗೆ ಭಾಷಾಂತರಗೊಂಡ ಪುಸ್ತಕ ಜನಾರ್ಪಣೆ: ಪ್ರಿಯಾಂಕ್ ಖರ್ಗೆ, ಅಧ್ಯಕ್ಷತೆ: ಸಿ. ನಾರಾಯಣಸ್ವಾಮಿ, ಪುಸ್ತಕದ ಕುರಿತು: ಎಸ್.ಎಂ. ವಿಜಯಾನಂದ್, ಅತಿಥಿಗಳು: ಉಮಾ ಮಹಾದೇವನ್, ಎಂ. ಕೃಷ್ಣೇಗೌಡ, ಸಿ. ನಾಗಣ್ಣ, ಪ್ರಮೋದ್ ಹೆಗಡೆ, ಡಿ.ಆರ್. ಪಾಟೀಲ, ವಿ.ವೈ. ಘೋರ್ಪಡೆ, ಆಯೋಜನೆ: ವಿಸ್ಮಯ ಬುಕ್ ಹೌಸ್, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 9.30

ವೀರ ರಾಣಿ ಕಿತ್ತೂರು ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಿಷಯಾಧಾರಿತ 218ನೇ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಎಸ್. ಎಸ್. ಮಲ್ಲಿಕಾರ್ಜುನ್, ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಗಾಜಿನ ಮನೆ, ಲಾಲ್‌ಬಾಗ್, ಬೆಳಿಗ್ಗೆ 10

11ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆ, ಕೈಮಗ್ಗ ನೇಕಾರರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಶಿವಾನಂದ ಎಸ್. ಪಾಟೀಲ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ನೇಕಾರರ ಸೇವಾ ಕೇಂದ್ರ, ಕಾವೇರಿ ಹ್ಯಾಂಡ್‌ಲೂಮ್ಸ್, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ಭಗವಾನ್ ಜಿಹ್ವೇಶ್ವರ ಜಯಂತಿ, ಸುಬ್ರಹ್ಮಣ್ಯಂ ಕೆಂದೋಳೆ ಅವರ 'ಮೂಲಸ್ತಂಭ ಸಾಳೀ ಮಹಾತ್ಮ್ಯ ಪುರಾಣ' ಗ್ರಂಥದ ಜನಾರ್ಪಣೆ: ಸಾನ್ನಿಧ್ಯ: ಬಸವ ರಮಾನಂದ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಕೆ. ನಾರಾಯಣ, ಎಂ.ಡಿ. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಪ್ರದೀಪ್ ರೋಖಡೆ, ಉಪಸ್ಥಿತಿ: ಚಂದ್ರಕಾಂತ ಭಂಡಾರೆ, ಜಲಜಾ ಸವ್ವಾಸೇರೆ, ಆಯೋಜನೆ: ಸಂಯುಕ್ತ ಸ್ವಕುಳಸಾಳಿ ಸಂಘ, ಸ್ಥಳ: ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿಹಬ್ಬ ಭವನ, ಆನಂದರಾವ್ ವೃತ್ತದ ಬಳಿ, ರೇಸ್‌ಕೋರ್ಸ್ ರಸ್ತೆ, ಗಾಂಧಿನಗರ, ಬೆಳಿಗ್ಗೆ 10.30

ವಚನ ಶ್ರಾವಣ–2025: ವಚನ ಗಾಯನ: ಗೀತಾ ಭತ್ತದ್, ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿ: ಕಾತ್ಯಾಯಿನಿ ಸುಭಾಷ್, ಅಧ್ಯಕ್ಷತೆ: ಜಿ. ದಯಾನಂದ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಗಾನ ಸಿದ್ಧಗಂಗಾ ಕಲ್ಚರಲ್ ಟ್ರಸ್ಟ್, ಕೆಂಗೇರಿ ಉಪನಗರ, ಸಂಜೆ 5.30



ಕಿ.ರಂ. ನಾಗರಾಜ

'ಕಾಡುವ ಕಿ.ರಂ' ಅಹೋರಾತ್ರಿ–ಬೆರಗು, ಕಿರಂ ಪುರಸ್ಕಾರ, ಕಾವ್ಯ ಸಮಯ, ಜನಪದ ಗಾಯನ, ರೇಖಾ ಸಮಯ, ನಾಟಕ ಪ್ರದರ್ಶನ, ಪುಸ್ತಕ ಬಿಡುಗಡೆ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ಸಹನ ಕೆ.ಎನ್., ಕೆ.ಎನ್. ಕವನ, ಕೆ.ಎನ್. ಚಂದನ, ಎಸ್. ಮಂಜುನಾಥ್, ಅಧ್ಯಕ್ಷತೆ: ಕೋಟಿಗಾನಹಳ್ಳಿ ರಾಮಯ್ಯ, 'ನೀಗಿಕೊಂಡ ಸಂಸ' ನಾಟಕ ಪ್ರದರ್ಶನ: ರಚನೆ: ಕಿ.ರಂ. ನಾಗರಾಜ, ನಿರ್ದೇಶನ: ಸಿದ್ದರಾಮ್ ಕೊಪ್ಪರ್, 'ಕಿ.ರಂ ಪುರಸ್ಕಾರ' ಸ್ವೀಕರಿಸುವವರು: ಎಂ. ಗೋಪಾಲ್, ಎಂ. ಉಷಾ, ಎಂ.ಜಿ. ಚಂದ್ರಶೇಖರಯ್ಯ, ಶ್ರೀನಿವಾಸ ನಟೇಕರ್ ಎಸ್., ಕೂಡ್ಲೂರು ವೆಂಕಟಪ್ಪ, ಟಿ. ನಾರಾಯಣ್, 'ಮೀಸಲಾತಿ ಮತ್ತು ಒಳ ಮೀಸಲಾತಿ–ಸಾಂವಿಧಾನಿಕ ಆಶಯಗಳು', 'ಅಪಾಯಕಾರಿ ಪದಗಳು–ಸಂಸ್ಕೃತಿ, ಸಂಸ್ಕೃತಿ ಚಿಂತಕ', 'ವೈಜ್ಞಾನಿಕ ಮನೋಭಾವ ಮತ್ತು ವರ್ತಮಾನ ಭಾರತ', 'ಕವಿತೆಗಳ ಅನುಸಂಧಾನ' ಕವಿಗೋಷ್ಠಿ, ಆಯೋಜನೆ: ಜನಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು ಆರ್ಟ್ ಫೌಂಡೇಷನ್, ಕಿರಂ ಪ್ರಕಾಶನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6ರಿಂದ ಬೆಳಿಗ್ಗೆ 6ಗಂಟೆಯವರೆಗೆ

ಪ್ರತಿಭಾ ಪುರಸ್ಕಾರದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಸಚಿವ ಜಮೀರ್ ಅಹ್ಮದ್

ಇಲಾಖೆ ಅನುದಾನದಲ್ಲಿ ಶೇ 70ರಷ್ಟು ಶಿಕ್ಷಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣವೊಂದೇ ಸಾಧನೆಗೆ ಮಾರ್ಗವಾಗಿರುವುದರಿಂದ ಅಲ್ಪಸಂಖ್ಯಾತ ಇಲಾಖೆಯ ಅನುದಾನದಲ್ಲಿ ಶೇ 70ರಷ್ಟನ್ನು ಶಿಕ್ಷಣ ಕ್ಷೇತ್ರಕ್ಕೆ ಬಳಕೆ ಮಾಡಲಾಗುತ್ತಿದೆ ಎಂದು ವಸತಿ, ವಕ್ಫ್, ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹ್ಮದ್ ತಿಳಿಸಿದರು.

ನಗರದಲ್ಲಿ ಬುಧವಾರ ನಡೆದ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ–ಕಾಲೇಜುಗಳ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಾಗೂ ಶೈಕ್ಷಣಿಕ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ನಾನು 10ನೇ ತರಗತಿಗೆ ವಿದ್ಯಾಭ್ಯಾಸ ನಿಲ್ಲಿಸಿದೆ. ಈಗ ಕಲಿಯುವ ಮನಸ್ಸಿದ್ದರೂ ಕಲಿಯಲು ಆಗುತ್ತಿಲ್ಲ. ನನಗೆ ಶಾಸಕನಾಗುವ, ಮಂತ್ರಿಯಾಗುವ ಅವಕಾಶ ಸಿಕ್ಕಿದೆ. ವಿದ್ಯೆ ಪಡೆಯದ ಎಲ್ಲರಿಗೂ ಇಂಥ ಅವಕಾಶ ಸಿಗುವುದಿಲ್ಲ. ಹಾಗಾಗಿ ನೀವು ಯಾರೂ ಅರ್ಧದಲ್ಲಿ ವಿದ್ಯಾಭ್ಯಾಸ ನಿಲ್ಲಿಸಬಾರದು' ಎಂದರು.

'ಅಲ್ಪಸಂಖ್ಯಾತ ಇಲಾಖೆಯಡಿ ಬರುವ ವಸತಿನಿಲಯಗಳಲ್ಲಿ ಎರಡು ವರ್ಷಗಳ ಹಿಂದೆ 1,20,350 ವಿದ್ಯಾರ್ಥಿಗಳು ದಾಖಲಾತಿ ಹೊಂದಿದ್ದರು. ಈ ವರ್ಷ 2,08,065 ವಿದ್ಯಾರ್ಥಿಗಳಿದ್ದಾರೆ. ಮುಂದಿನ 3 ವರ್ಷಗಳಲ್ಲಿ 5 ಲಕ್ಷಕ್ಕೆ ತಲುಪಬೇಕು ಎಂಬುದು ನಮ್ಮ ಗುರಿ' ಎಂದು ತಿಳಿಸಿದರು.

ಬಿಜೆಪಿ ಆಡಳಿತದಲ್ಲಿ ಇರುವಾಗ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ 2022-23ರಲ್ಲಿ ಕೇವಲ ₹850 ಕೋಟಿ ಅನುದಾನ ನೀಡಲಾಗಿತ್ತು. ಕಾಂಗ್ರೆಸ್ ಸರ್ಕಾರ ಬಂದ ಕೂಡಲೇ ಈ ಅನುದಾನವನ್ನು ₹2,101 ಕೋಟಿಗೆ ಏರಿಸಲಾಗಿತ್ತು. 2025-26ರಲ್ಲಿ ₹4,537 ಕೋಟಿ ಮೀಸಲಿಡಲಾಗಿದೆ ಎಂದು ವಿವರಿಸಿದರು.

ವಸತಿ ಶಾಲೆ ಹಾಗೂ ಕಾಲೇಜುಗಳಲ್ಲಿ ಓದಿ ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುತ್ತಮ ಅಂಕ ಗಳಿಸಿದ 125 ವಿದ್ಯಾರ್ಥಿಗಳಿಗೆ ₹10 ಸಾವಿರ ನಗದು ಮತ್ತು ಲ್ಯಾಪ್‌ಟಾಪ್ ವಿತರಿಸಲಾಯಿತು. ಪಿಯುಸಿಯಲ್ಲಿ ಅತ್ಯುತ್ತಮ ಅಂಕ ಗಳಿಸಿದ 17 ವಿದ್ಯಾರ್ಥಿಗಳಿಗೆ ₹15 ಸಾವಿರ ನಗದು ಮತ್ತು ಲ್ಯಾಪ್‌ಟಾಪ್ ವಿತರಿಸಲಾಯಿತು. ಉತ್ತಮವಾಗಿ ಕಾರ್ಯನಿರ್ವಹಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲ್ಲೂಕು ವಿಸ್ತರಣಾಧಿಕಾರಿಗಳು, ಪ್ರಾಂಶುಪಾಲರು, ಉಪನ್ಯಾಸಕರು, ಶಿಕ್ಷಕರು, ವಾರ್ಡನ್‌ಗಳನ್ನು ಸನ್ಮಾನಿಸಲಾಯಿತು.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಕೆ. ಅಲ್ತಾಫ್ ಖಾನ್, ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್. ಜಾಫೆಟ್, ಸಚಿವರ ಆಪ್ತ ಕಾರ್ಯದರ್ಶಿ ಸರ್ಫರಾಜ್ ಖಾನ್, ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು. ನಿಸಾರ್ ಅಹಮದ್, ಉರ್ದು ಅಕಾಡೆಮಿ ಅಧ್ಯಕ್ಷ ಮೊಹಮ್ಮದ್ ಅಲಿ, ಹಜ್ ಸಮಿತಿ ಅಧ್ಯಕ್ಷ ಎಸ್. ಜುಲ್ಫಿಕರ್ ಅಹಮದ್, ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕ ಜಿಲಾನಿ ಎಚ್. ಮೊಕಾಶಿ ಉಪಸ್ಥಿತರಿದ್ದರು.




ಜಮೀರ್ ಅಹ್ಮದ್ ಅವರು ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಹಾಗೂ ಪ್ರೋತ್ಸಾಹಧನ ನೀಡಿದರು ಪ್ರಜಾವಾಣಿ ಚಿತ್ರ

'ದೇವೇಗೌಡ ರಾಜಕೀಯ ಗುರು'

'ನನಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರೇ ರಾಜಕೀಯ ಗುರು' ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಸ್ಮರಿಸಿದರು. 'ನಾನೀಗ ಕಾಂಗ್ರೆಸ್ ಪಕ್ಷದಲ್ಲಿ ಇರಬಹುದು. ಪಕ್ಷ ಬದಲಾದರೆ ಗುರು ಬದಲಾಗಲ್ಲ. ರಾಜಕೀಯ ಕ್ಷೇತ್ರದಲ್ಲಿ ಬೆಳೆಸಿದವರನ್ನು ನಾನು ನೆನಪು ಮಾಡಿಕೊಳ್ಳಲೇಬೇಕು. ಅವರು ಬಹಳ ಬಡತನದಿಂದ ಮೇಲಕ್ಕೆ ಬಂದವರು. ಪ್ರಧಾನಿಯೂ ಆದರು' ಎಂದು ಹೇಳಿದರು.

₹1 ಲಕ್ಷ ಬಹುಮಾನ

ಎಂ.ಎಸ್ಸಿ ಭೌತ ವಿಜ್ಞಾನದಲ್ಲಿ ಆರು ಚಿನ್ನದ ಪದಕ ಪಡೆದ ಕೆ.ಎಂ. ರೂಫಿಯಾ ಅವರಿಗೆ ಸಚಿವ ಜಮೀರ್ ಅಹ್ಮದ್ ವೈಯಕ್ತಿಕವಾಗಿ ₹1 ಲಕ್ಷ ಬಹುಮಾನ ನೀಡಿದರು. ಎಂಬಿಬಿಎಸ್ ಸೀಟು ಪಡೆದ ಎ.ಆರ್. ರಿದಾ ಅವರಿಗೆ ಎಂಬಿಬಿಎಸ್ ಪೂರ್ಣಗೊಳಿಸುವವರೆಗಿನ ಪೂರ್ಣ ವೆಚ್ಚವನ್ನು ಭರಿಸುವುದಾಗಿ ತಿಳಿಸಿದ ಸಚಿವರು, ರಿದಾಗೆ ದ್ವಿಚಕ್ರವಾಹನವನ್ನು ಕೊಡುಗೆಯಾಗಿ ನೀಡಿದರು.



ಚುಟುಕು ಸುದ್ದಿ

575 ಮೆಟ್ಟಿಲುಗಳ ಬೆಟ್ಟವೇರಿದ ರಾಜ್ಯಪಾಲರು



ಗಂಗಾವತಿ ತಾಲ್ಲೂಕಿನಲ್ಲಿರುವ ಅಂಜನಾದ್ರಿ ಬೆಟ್ಟವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಬುಧವಾರ ಏರಿದರು

ಗಂಗಾವತಿ (ಕೊಪ್ಪಳ ಜಿಲ್ಲೆ): ಹನುಮ ಜನಿಸಿದ ನಾಡು ಎಂದೇ ಹೆಸರಾದ ತಾಲ್ಲೂಕಿನ ಅಂಜನಾದ್ರಿಗೆ ಬುಧವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕುಟುಂಬದ ಸದಸ್ಯರೊಂದಿಗೆ ಭೇಟಿ ನೀಡಿ ಆಂಜನೇಯನ ದರ್ಶನ ಪಡೆದರು.

ಮೊದಲು ಬೆಟ್ಟದ ಪಾದಗಟ್ಟೆಯಲ್ಲಿ ವಿಶೇಷ ಪೂಜೆ ಹಾಗೂ ಪ್ರಾರ್ಥನೆ ಸಲ್ಲಿಸಿದರು. 575 ಮೆಟ್ಟಿಲುಗಳನ್ನು ಅರ್ಧ ಗಂಟೆಯಲ್ಲಿ ಏರಿ ಬೆಟ್ಟ ತಲುಪಿದರು. ಜಿಲ್ಲಾಡಳಿತವು ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿತು. ಜಿಲ್ಲಾಧಿಕಾರಿ ಸುರೇಶ ಇಟ್ನಾಳ, ಜಿಲ್ಲಾ ಪಂಚಾಯಿತಿ ಸಿಇಒ ವರ್ಣಿತ್ ನೇಗಿ, ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ಧಿ ಅವರಿದ್ದರು

ಹಂಪಿಗೂ ಭೇಟಿ (ಹೊಸಪೇಟೆ ವರದಿ): ರಾಜ್ಯಪಾಲರು ಹಂಪಿಗೂ ಭೇಟಿ ನೀಡಿದ್ದು, ವಿರೂಪಾಕ್ಷ ದೇವಸ್ಥಾನ, ವಿಜಯ ವಿಠ್ಠಲ ಕಲ್ಲಿನರಥ, ಉಗ್ರ ನರಸಿಂಹ, ಬಡವಿಲಿಂಗ, ವಿಜಯವಿಠ್ಠಲ ಮತ್ತು ಇತರ ಕೆಲ ಸ್ಮಾರಕಗಳನ್ನು ವೀಕ್ಷಿಸಿದರು. ತುಂಗಭದ್ರಾ ಜಲಾಶಯ ನೋಡಿ ಕಣ್ತುಂಬಿಕೊಂಡರು.

ನಾಟಿ ಔಷಧ ಸೇವನೆ ಮೂವರ ಸಾವು

ಸೇಡಂ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಇಮಡಾಪುರದಲ್ಲಿ ಮದ್ಯ ಸೇವನೆ ಚಟ ಬಿಡಿಸಲು ನಾಟಿ ವೈದ್ಯರು ನೀಡಿದ್ದ ಔಷಧ ಸೇವಿಸಿದ್ದ ಮೂವರು ಬುಧವಾರ ಮೃತಪಟ್ಟಿದ್ದಾರೆ.

'ಬುರಗಪಲ್ಲಿ ಗ್ರಾಮದ ಲಕ್ಷ್ಮಿ ನರಸಿಂಹಲು ಬಟಗೇರಾ (55), ಮದಕಲ್ ಗ್ರಾಮದ ನಾಗೇಶ (32) ಹಾಗೂ ಶಹಾಬಾದ್ ಬಳಿಯ ಡಕ್ಕಾ ತಾಂಡಾ ಗಣೇಶ ರಾಠೋಡ್ (30) ಮೃತರು. 'ಲಕ್ಷ್ಮಿ ಅವರ ಮಗ ಲಿಂಗಪ್ಪ ಅವರ ಸ್ಥಿತಿ ಗಂಭೀರವಾಗಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇಮಡಾಪುರ ಗ್ರಾಮದಲ್ಲಿ ಫಕೀರಪ್ಪ ಅಲಿಯಾಸ್ ಸಾಯಪ್ಪ ಅವರು ಕುಡಿತದ ಚಟ ಬಿಡಿಸಲು ಔಷಧ ನೀಡುತ್ತಿದ್ದರು. ನಾಲ್ವರು ಔಷಧ ಪಡೆದಿದ್ದರು ಎನ್ನಲಾಗಿದೆ. 'ಪ್ರಾಥಮಿಕ ಮಾಹಿತಿಯಂತೆ ಮದ್ಯ ಸೇವನೆ ವ್ಯಸನದಿಂದ ಹೊರಬರಲು ಕೆಲವರು ನಾಟಿ ಔಷಧ ಪಡೆದಿದ್ದರು. ಭಾನುವಾರ ಔಷಧ ಪಡೆದಿದ್ದ ಜನರು ಮತ್ತೆ ಬುಧವಾರವೂ ಬಂದು ಔಷಧ ಪಡೆದಿದ್ದರು' ಎಂದು ಪೊಲೀಸರು ತಿಳಿಸಿದರು.

'ಮೈಸೂರು– ಕೊಡಗು ಕ್ಷೇತ್ರದಲ್ಲೂ ಮತ ಕಳವು'

ಮೈಸೂರು: 'ಕಳೆದ ಚುನಾವಣೆಯಲ್ಲಿ ಮೈಸೂರು– ಕೊಡಗು ಲೋಕಸಭೆ ಕ್ಷೇತ್ರದಲ್ಲೂ ಮತ ಕಳವು ಮಾಡಲಾಗಿದೆ' ಎಂದು ಕಾಂಗ್ರೆಸ್ ಪರಾಜಿತ ಅಭ್ಯರ್ಥಿ, ಪಕ್ಷದ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಆ.8ರಂದು ಬೆಂಗಳೂರಿನಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನಡೆಸುವ ಸಭೆಯಲ್ಲಿ ಪ್ರಸ್ತಾಪಿಸಿ, ನಂತರ ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು' ಎಂದರು.

ಒಳಮೀಸಲು ವರದಿ: ಇಂದು ನಿರ್ಧಾರ?

ಸಚಿವ ಸಂಪುಟ ಸಭೆಯಲ್ಲಿ ನ್ಯಾ. ನಾಗಮೋಹನ್‌ದಾಸ್ ಆಯೋಗದ ಶಿಫಾರಸು ಚರ್ಚೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕುರಿತು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕಸದಸ್ಯ ಆಯೋಗ ಸಲ್ಲಿಸಿರುವ ವರದಿಯ ಕುರಿತು ಗುರುವಾರ (ಆಗಸ್ಟ್ 7) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗುವ ಸಾಧ್ಯತೆಯಿದೆ.

ನಾಗಮೋಹನ್‌ದಾಸ್ ಅವರು ಆರು ಶಿಫಾರಸುಗಳನ್ನು ಒಳಗೊಂಡ ಸುಮಾರು 1,765 ಪುಟಗಳ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ಸಲ್ಲಿಸಿದ್ದರು. 'ಆಯೋಗದ ವರದಿಯನ್ನು 7ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಚರ್ಚೆ ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಹೇಳಿದ್ದರು.

ಒಳ ಮೀಸಲಾತಿಗೆ ಆಗ್ರಹಿಸಿ ಮಾದಿಗ ದಂಡೋರ ಸೇರಿದಂತೆ ವಿವಿಧ ದಲಿತ ಸಂಘಟನೆಗಳು ನ್ಯಾಯಾಲಯಗಳ ಒಳಗೆ ಮತ್ತು ಹೊರಗೆ 30 ವರ್ಷಗಳಿಂದಲೂ ಹೋರಾಟ ನಡೆಸುತ್ತಲೇ ಬಂದಿವೆ. ಒಳ ಮೀಸಲಾತಿ ಕಲ್ಪಿಸುವ ಸಂಬಂಧ 2009ರಲ್ಲಿ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ಸಲ್ಲಿಸಿದ್ದ ವರದಿಯನ್ನು ಬದಿಗಿಟ್ಟು ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಹೊಸತಾಗಿ ಒಳ ಮೀಸಲಾತಿ ಹಂಚಿಕೆ ಮಾಡಿದ್ದರೂ ಜಾರಿಗೆ ಬಂದಿಲ್ಲ. ನಾಗಮೋಹನ್‌ದಾಸ್ ಆಯೋಗ ಹೊಸತಾಗಿ ಸಮೀಕ್ಷೆ ನಡೆಸಿ ಲಭ್ಯ ಶೇ 17ರಷ್ಟು ಮೀಸಲಾತಿ ಪ್ರಮಾಣವನ್ನು ಹಂಚಿಕೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ಪರಿಶಿಷ್ಟ ಜಾತಿಯಲ್ಲಿ ಸಾಮಾಜಿಕ ನ್ಯಾಯದ ಬೇಡಿಕೆಗೆ ನಿರ್ಣಾಯಕ ತಿರುವು ನೀಡಲಿರುವ ಈ ವರದಿಯ ಜಾರಿಗೆ ಸಚಿವ ಸಂಪುಟ ಸಭೆ ನಿರ್ಣಯ ತೆಗೆದುಕೊಳ್ಳುತ್ತದೆಯೇ, ವರದಿಯ ಪರಿಶೀಲನೆಗೆ ಸಚಿವರ ಸಮಿತಿ ರಚಿಸಲಿದೆಯೇ ಅಥವಾ ಅಧ್ಯಯನ ನಡೆಸಲು ಸಚಿವ ಸಂಪುಟ ಉಪ ಸಮಿತಿ ರಚಿಸಲಿದೆಯೇ ಎಂಬ ಕುತೂಹಲ ಮೂಡಿದೆ.

ಮುಂಬರುವ ಅಧಿವೇಶನದಲ್ಲಿ ಆಯೋಗದ ವರದಿಯನ್ನು ಮಂಡಿಸಿ ಒಳ ಮೀಸಲಾತಿ ಜಾರಿಗೆ ಕ್ರಮ ತೆಗೆದುಕೊಳ್ಳಬೇಕೆಂದು ಸಚಿವ ಸಂಪುಟದಲ್ಲಿರುವ ಎಡಗೈ (ಮಾದಿಗ) ಸಮುದಾಯದ ಸಚಿವರು ಪಟ್ಟು ಹಿಡಿಯುವ ಸಾಧ್ಯತೆಯಿದೆ. ಆದರೆ, ಬಲಗೈ ಜಾತಿಯ ಸಚಿವರು, ಜನಸಂಖ್ಯೆ ಆಧರಿಸಿ ತಮ್ಮ ಸಮುದಾಯಕ್ಕೆ ಕಡಿಮೆ ಮೀಸಲಾತಿ ಹಂಚಿಕೆಯಾಗಿದೆ ಎಂದು ಅಪಸ್ವರ ಎತ್ತುವ ಮತ್ತು ಸಮುದಾಯಗಳ ಜನಸಂಖ್ಯೆ ಮತ್ತು ಹಿಂದುಳಿದಿರುವಿಕೆ ಆಧರಿಸಿ ಮೀಸಲಾತಿ ನೀಡಬೇಕು. ವರದಿಯನ್ನು ತರಾತುರಿಯಲ್ಲಿ ಅಂಗೀಕರಿಸಬಾರದೆಂದು ಒತ್ತಾಯಿಸುವ ಸಂಭವವೂ ಇದೆ.

ಬಲಗೈ ಸಮುದಾಯದ ಕೆಲವು ಜಾತಿಗಳು ಈಗಾಗಲೇ ಈ ವರದಿಗೆ ಅಸಮಾಧಾನ ವ್ಯಕ್ತಪಡಿಸಿವೆ.



ವಿಧಾನಸಭಾ ಉಪಾಧ್ಯಕ್ಷ ರುದ್ರಪ್ಪ ಲಮಾಣಿ ನೇತೃತ್ವದ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು

'ವರದಿ ಸಾರ್ವಜನಿಕಗೊಳಿಸಿ'

'ನ್ಯಾ.ನಾಗಮೋಹನ್ ದಾಸ್ ಆಯೋಗದ ವರದಿಯ ಕೆಲ ಅಂಶಗಳು ಸೋರಿಕೆ ಆಗಿದ್ದು ಅವುಗಳನ್ನು ಕಂಡು ಆತಂಕಗೊಂಡಿದ್ದೇವೆ. ಆತಂಕ ನಿವಾರಣೆಗಾಗಿ ವರದಿಯನ್ನು ಸಾರ್ವಜನಿಕ ಚರ್ಚೆಗೆ ಬಿಡಬೇಕು' ಎಂದು ವಿಧಾನಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ ನೇತೃತ್ವದ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ.

'ಪರಿಶಿಷ್ಟರ 101 ಜಾತಿಗಳಿಂದ ಆಕ್ಷೇಪಣೆ ಸ್ವೀಕರಿಸಲು ಅವಕಾಶ ನೀಡಬೇಕು. ವರದಿಯಲ್ಲಿ ನ್ಯೂನತೆಗಳಿದ್ದರೆ ಸರಿಪಡಿಸಬೇಕು. ನಮ್ಮ ನಮ್ಮ ಸಮುದಾಯಗಳ ಜನಸಂಖ್ಯೆ ಮತ್ತು ಹಿಂದುಳಿದಿರುವಿಕೆ ಆಧರಿಸಿ ಮೀಸಲಾತಿ ನೀಡಬೇಕು. ವರದಿಯನ್ನು ತರಾತುರಿಯಲ್ಲಿ ಅಂಗೀಕಾರ ಮಾಡಬಾರದು' ಎಂದು ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ನಾಗಮೋಹನದಾಸ್ ಅವರಿಂದ ವರದಿ ಸ್ವೀಕರಿಸಿದ್ದೇವೆ. ಇನ್ನೂ ಅದನ್ನು ಓದಿಲ್ಲ. ಸಚಿವ ಸಂಪುಟದಲ್ಲಿ ಅದನ್ನು ಓದುತ್ತೇವೆ. ಆನಂತರ ಪ್ರತಿಕ್ರಿಯೆ ನೀಡುತ್ತೇವೆ. ಯಾವುದೇ ಸಮುದಾಯಕ್ಕೂ ಅನ್ಯಾಯ ಆಗದಂತೆ ಕ್ರಮವಹಿಸುತ್ತೇವೆ' ಎಂದು ಭರವಸೆ ನೀಡಿದರು.

ಸುದ್ದಿ 2 ನಿಮಿಷ

ಒಳಮೀಸಲಾತಿ: ತರಾತುರಿಯಲ್ಲಿ ಜಾರಿಗೊಳಿಸದಿರಲು ಆಗ್ರಹ

ಬಾಗಲಕೋಟೆ: 'ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕಸದಸ್ಯ ಆಯೋಗದ ವರದಿಯನ್ನು ಸರ್ಕಾರ ಯಾರದ್ದೇ ಮುಲಾಜು, ಒತ್ತಡಕ್ಕೆ ಒಳಗಾಗಿ ತರಾತುರಿಯಲ್ಲಿ ಜಾರಿಗೊಳಿಸಬಾರದು' ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಬುಧವಾರ ಆಗ್ರಹಿಸಿದರು.

'ಸರ್ಕಾರ ಸಾರ್ವಜನಿಕ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ತಕರಾರು, ಆಕ್ಷೇಪಗಳಿದ್ದರೆ, ಪರಿಗಣಿಸಿ ವಿಶೇಷ ಅಧಿವೇಶನ ನಡೆಸಬೇಕು. 224 ಶಾಸಕರ ಅಭಿಪ್ರಾಯ ಸಂಗ್ರಹಿಸಿ ಯಾರಿಗೂ ತೊಂದರೆ ಆಗದಂತೆ ತೀರ್ಮಾನಿಸಬೇಕು' ಎಂದು ಸುದ್ದಿಗಾರರಿಗೆ ತಿಳಿಸಿದರು.

'2011ರಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ 1.08 ಕೋಟಿ ಇತ್ತು. ಆಯೋಗದ ಈಗಿನ ಸಮೀಕ್ಷೆಯಲ್ಲಿ 1.07 ಕೋಟಿ ಎಂದಿದೆ. 14 ವರ್ಷಗಳಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ ಕಡಿಮೆಯಾಯಿತೇ? ಜೆ.ಸಿ. ಮಾಧುಸ್ವಾಮಿ ನೇತೃತ್ವದ ಸಂಪುಟ ಉಪ ಸಮಿತಿ ಬೋವಿ, ಲಂಬಾಣಿ, ಕೊರಮ, ಕೊರಚ ಸಮುದಾಯಗಳಿಗೆ ಶೇ 4.5 ಮೀಸಲಾತಿ ನೀಡಿತ್ತು. ಈಗ ಶೇ 4 ಎಂಬ ಮಾಹಿತಿ ಇದೆ. ಹೇಗೆ ಒಪ್ಪಿಕೊಳ್ಳಬೇಕು' ಎಂದು ಪ್ರಶ್ನಿಸಿದರು.

'ಕೇಂದ್ರ ಸರ್ಕಾರ ಜಾತಿ ಗಣತಿಗೆ ಮುಂದಾಗಿದೆ. ಅದರ ವರದಿ ಬಂದ ಬಳಿಕ ಎರಡನ್ನೂ ಪರಾಮರ್ಶಿಸಿ, ಸರಿಯಾದ ಅಂಕಿ–ಅಂಶಗಳೊಂದಿಗೆ ಒಳ ಮೀಸಲಾತಿ ಜಾರಿಗೊಳಿಸಬೇಕು. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಪ್ರಗತಿ ಮಾನದಂಡದ ಮೇಲೆಯೇ ಮೀಸಲಾತಿ ನಿಗದಿಯಾಗಬೇಕು' ಎಂದು ಆಗ್ರಹಿಸಿದರು.



'ಹಿಂದಿನ ಸರ್ಕಾರ ವೈಜ್ಞಾನಿಕವಾಗಿ ಚಿಂತಿಸದೇ ತರಾತುರಿಯಲ್ಲಿ ಒಳ ಮೀಸಲಾತಿ ಜಾರಿಗೆ ಮುಂದಾಗಿತ್ತು. ಅದರ ಪರಿಣಾಮ ವಿಧಾನಸಭಾ ಚುನಾವಣೆಯಲ್ಲಿ ವ್ಯಕ್ತವಾಯಿತು. ಹೊಸ ಸರ್ಕಾರಕ್ಕೆ ಶಕ್ತಿ ತುಂಬಿದ ಸಮುದಾಯಗಳ ಶಕ್ತಿ ಕುಂದಿಸಬಾರದು, ರಕ್ಷಿಸಬೇಕು' ಎಂದರು.

ಬಸವಕಲ್ಯಾಣ: 'ದಸರಾ ದರ್ಬಾರ್' ವಿರುದ್ಧ ಪ್ರತಿಭಟನೆಗೆ ಸ್ವಾಮೀಜಿ ಕರೆ

ಭಾಲ್ಕಿ (ಬೀದರ್ ಜಿಲ್ಲೆ): 'ಬಸವಕಲ್ಯಾಣದಲ್ಲಿ ದಸರಾ ದರ್ಬಾರ್ ಹೆಸರಿನಲ್ಲಿ ಬಸವಣ್ಣನವರಿಗೆ ಅವಮಾನಿಸುವ ಹಾಗೂ ಲಿಂಗಾಯತ ಧರ್ಮದ ವಿರುದ್ಧ ಕುತಂತ್ರ ಹೆಣೆಯುತ್ತಿರುವ ಬಸವ ದ್ರೋಹಿಗಳ ವಿರುದ್ಧ ನಾಡಿನ ಬಸವಪರ, ಹಿಂದುಳಿದ ಮಠಗಳ ಸ್ವಾಮೀಜಿ, ಸಂಘಟಕರು, ಭಕ್ತರು ಒಗ್ಗಟ್ಟಿನಿಂದ ಸಿಡಿದೇಳಬೇಕು' ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಹೇಳಿದ್ದಾರೆ.

'ಜಗತ್ತು ಬಸವಣ್ಣನವರನ್ನು ಜಗದ್ಗುರು, ಜಗಜ್ಯೋತಿ ಎಂದು ವಂದಿಸುತ್ತಿದೆ. ಆದರೆ, ಬಸವತತ್ವವನ್ನು ಒಪ್ಪಿಕೊಳ್ಳದ ಕೆಲವರು ಬಸವಕಲ್ಯಾಣದ ಭೂಮಿಯಲ್ಲಿ ತಮ್ಮ ವ್ಯಕ್ತಿ ಪ್ರತಿಷ್ಠೆಯ ವೈಭವ ಮೆರೆಯಲು ಮುಂದಾಗಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಬಸವಣ್ಣನವರು ವೀರಶೈವ ಧರ್ಮ ಸ್ವೀಕರಿಸಿದರು ಎಂಬ ಹಸಿ ಸುಳ್ಳನ್ನು ಹಬ್ಬಿಸುವ ಆಚಾರ್ಯರು, ಬಸವಕಲ್ಯಾಣದ ಭೂಮಿಯಲ್ಲಿ ಬಂದು ಬಸವತತ್ವಕ್ಕೆ ದ್ರೋಹ ಬಗೆಯುವ ಎಲ್ಲಾ ಸಿದ್ಧತೆ ನಡೆಸುತ್ತಿದ್ದಾರೆ' ಎಂದು ಆರೋಪಿಸಿದರು.

'ಬಸವಕಲ್ಯಾಣದಲ್ಲಿ ಆಗಸ್ಟ್ 17ರ ಬೆಳಿಗ್ಗೆ ಬಸವಭಕ್ತರ ಸಭೆ ಕರೆಯಲಾಗಿದೆ. ಹಿರಿಯ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಚರ್ಚಿಸಿ, ಮುಂದಿನ ನಡೆ ನಿರ್ಧರಿಸಲಾಗುವುದು.ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಷ್ಕರದಲ್ಲಿ ಪಾಲ್ಗೊಂಡವರಿಗೆ ನೋಟಿಸ್

ಮುಷ್ಕರಕ್ಕೆ ಕರೆ ನೀಡಿದ್ದ ಕೆಎಸ್‌ಆರ್‌ಟಿಸಿ ಕಾರ್ಮಿಕರ ಜಂಟಿ ಕ್ರಿಯಾ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕರೆ ನೀಡಿದ್ದ ಮುಷ್ಕರದಲ್ಲಿ ಪಾಲ್ಗೊಂಡ ವಿವಿಧ ನಿಗಮಗಳ ನೌಕರರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ.

ಮಂಗಳವಾರ ಮುಷ್ಕರ ನಡೆಸಲು ಕರೆ ನೀಡಲಾಗಿತ್ತು. ಮುಷ್ಕರ ನಡೆಸದಂತೆ ಹೈಕೋರ್ಟ್ ನಿರ್ದೇಶನ ನೀಡಿತ್ತು. ಈ ನಡುವೆ ಚಾಲಕರು, ನಿರ್ವಾಹಕರು, ಡಿಪೊ ಸಿಬ್ಬಂದಿ ಸೇರಿ ಹಲವರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಬೆಳಿಗ್ಗೆ ಕರ್ತವ್ಯಕ್ಕೆ ಹಾಜರಾಗದೇ ಮಧ್ಯಾಹ್ನದ ಬಳಿಕ ಹಾಜರಾದವರಿಗೆ ತಡವಾಗಲು ಕಾರಣವೇನು ಎಂದು ವಿವರಣೆ ನೀಡುವಂತೆ ನೋಟಿಸ್ ಕಳುಹಿಸಲಾಗಿದೆ. ಮಧ್ಯಾಹ್ನದ ಬಳಿಕವೂ ಬಾರದವರಿಗೆ ನಿಮ್ಮ ಮೇಲೆ ಯಾಕೆ ಶಿಸ್ತು ಕ್ರಮ ಕೈಗೊಳ್ಳಬಾರದು ಎಂದು ನೋಟಿಸ್‌ನಲ್ಲಿ ಪ್ರಶ್ನಿಸಲಾಗಿದೆ.

ಸಾರಿಗೆಯು 'ಕರ್ನಾಟಕ ಅಗತ್ಯ ಸೇವಾ ನಿರ್ವಹಣೆ' ಆಗಿರುವುದರಿಂದ ಮುಷ್ಕರದಲ್ಲಿ ಪಾಲ್ಗೊಳ್ಳುವಂತಿಲ್ಲ. ಆದರೂ, ಅಧಿಕೃತವಾಗಿ ರಜೆ ಹಾಕದೇ ಅನಧಿಕೃತವಾಗಿ ಗೈರಾಗುವ ಮೂಲಕ ಮುಷ್ಕರಕ್ಕೆ ಬೆಂಬಲ ನೀಡಿದ್ದೀರಿ. ಇದರಿಂದಾಗಿ ದೈನಂದಿನ ಕಾರ್ಯ- ನಿರ್ವಹಣೆಗೆ ಅಡಚಣೆಯಾಗಿದೆ. ಕಾನೂನು ಬಾಹಿರವಾಗಿ ಮುಷ್ಕರದಲ್ಲಿ ಭಾಗವಹಿಸುವ ಮೂಲಕ ಸಂಸ್ಥೆಯ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ವರ್ತಿಸಿದ್ದೀರಿ. ಸಂಸ್ಥೆಗೆ ಕೆಟ್ಟ ಹೆಸರು ಬರುವಂತೆ ಮಾಡಿದ್ದೀರಿ. ನಿಗಮದ ನೌಕರರ ನಡತೆ ಮತ್ತು ಶಿಸ್ತು ನಿಯಮಾ- ವಳಿಯನ್ನು ಉಲ್ಲಂಘಿಸಿದ್ದೀರಿ' ಎಂದು ನೋಟಿಸ್‌ನಲ್ಲಿ ಆರೋಪಿಸಲಾಗಿದೆ.

'ಮುಷ್ಕರ ನಡೆಸದಂತೆ ಹೈಕೋರ್ಟ್ ನಿರ್ದೇಶನ ನೀಡಿರುವುದನ್ನು ಎಲ್ಲರಿಗೂ ತಿಳಿಸಲಾಗಿತ್ತು. ಆದರೂ ಅನೇಕರು ಕೆಲಸಕ್ಕೆ ಬಂದಿರಲಿಲ್ಲ. ಮುಷ್ಕರದಲ್ಲಿ ಭಾಗವಹಿಸಿದರೆ ಬಂಧಿಸಿ ಎಂದು ಎರಡನೇ ಬಾರಿ ಹೈಕೋರ್ಟ್ ಸೂಚನೆ ನೀಡಿದ ಮೇಲೆ ಅನೇಕರು ಕರ್ತವ್ಯಕ್ಕೆ ಹಾಜರಾಗಿದ್ದರು. ಅವರಿಗೆ ತಡವಾಗಿದ್ದಕ್ಕೆ ಕಾರಣ ಕೇಳಲಾಗಿದೆ. ಆದರೆ, ಎರಡನೇ ಬಾರಿಯ ಸೂಚನೆ ಬಳಿಕವೂ ಬಾರದವರಿಗೆ ಬಿಸಿ ಮುಟ್ಟಿಸಲೇಬೇಕಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ನಿಗಮಗಳ ವಿಭಾಗೀಯ ನಿಯಂತ್ರಣಾಧಿಕಾರಿಗಳು ಶಿಸ್ತು ಪಾಲನಾ ನಿಯಮಾವಳಿಯಂತೆ ನೋಟಿಸ್ ನೀಡುತ್ತಿದ್ದಾರೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಮಾಹಿತಿ ನೀಡಿದರು.

ಭಯದ ವಾತಾವರಣ: 'ಮುಷ್ಕರದಲ್ಲಿ ಪಾಲ್ಗೊಂಡವರಿಗೆ ಕಾರಣ ಕೇಳಿ ನೋಟಿಸ್ ಅಷ್ಟೇ ನೀಡಿಲ್ಲ, ಆಪಾದನಾ ಪಟ್ಟಿಯನ್ನೇ ನೀಡಿದ್ದಾರೆ. ಭಯದ ವಾತಾವರಣವನ್ನು ಸೃಷ್ಟಿಸಿದ್ದಾರೆ. ಇದು ಸರಿಯಲ್ಲ' ಎಂದು ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಹೇಳಿದೆ.



ಸರ್ಕಾರಿ ಸಾರಿಗೆ ನೌಕರರ ಮುಷ್ಕರ ಪರಿಣಾಮ ಕಲಬುರಗಿಯ ಬಸ್ ಡಿಪೋನಲ್ಲಿ ಮಂಗಳವಾರ ಬಸ್‌ಗಳು ನಿಂತಿರುವ ದೃಶ್ಯ ಪ್ರಜಾವಾಣಿ ಚಿತ್ರ

ಮುಷ್ಕರ ವಾಪಸ್

'ಹೈಕೋರ್ಟ್ ಆದೇಶಕ್ಕೆ ತಲೆಬಾಗಿ ಸದ್ಯಕ್ಕೆ ಮುಷ್ಕರ ಕೈಬಿಡಲಾಗಿದೆ. ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಲು ಸರ್ಕಾರಕ್ಕೆ ಸೂಚಿಸುವಂತೆ ನ್ಯಾಯಾಲಯದಲ್ಲಿ ಕೇಳಿಕೊಂಡಿದ್ದೇವೆ. ಆ.7ರಂದು ವಿಚಾರಣೆ ನಡೆಯಲಿದೆ. ಹೈಕೋರ್ಟ್‌ನ ಆದೇಶ ಏನು ಬರುತ್ತದೆ ಎಂದು ನೋಡಿಕೊಂಡು ಮುಂದಿನ ನಡೆ ಬಗ್ಗೆ ತೀರ್ಮಾನಿಸಲಾಗುವುದು' ಎಂದು ಜಂಟಿ ಕ್ರಿಯಾ ಸಮಿತಿ ಪರವಾಗಿ ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್ ತಿಳಿಸಿದ್ದಾರೆ. 'ನಾವು ಕಾನೂನು ಉಲ್ಲಂಘಿಸುವುದಿಲ್ಲ. ನ್ಯಾಯಾಲಯಕ್ಕೆ ಗೌರವ ನೀಡುತ್ತೇವೆ. ಕಾರ್ಮಿಕರಿಗೆ ನ್ಯಾಯ ಸಿಗಬೇಕು ಎಂಬುದಷ್ಟೇ ನಮ್ಮ ಉದ್ದೇಶ' ಎಂದು ಹೇಳಿದರು.

'ಅರಣ್ಯ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದರೆ ಕ್ರಮ'

ಬೀದರ್: 'ಧರ್ಮಸ್ಥಳದ ಮೀಸಲು ಅರಣ್ಯ ಪ್ರದೇಶದಲ್ಲಿ ಶವ ಹೂತಿಟ್ಟ ಪ್ರಕರಣದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದರೆ ಕ್ರಮ ಜರುಗಿಸಲಾಗುವುದು' ಎಂದು ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಖಾತೆ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.



ಈಶ್ವರ ಖಂಡ್ರೆ

ನಗರದಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ತನಿಖೆ ನಡೆಯುತ್ತಿದೆ. ಎಲ್ಲಿ ಅಕ್ರಮವಾಗಿದೆ? ಯಾವ ಅರಣ್ಯ ಪ್ರದೇಶ, ಸರ್ವೆ ನಂಬರ್ ಯಾವುದು? ಯಾರ ವ್ಯಾಪ್ತಿಗೆ ಬರಲಿದೆ ಎಂದು ಗಮನಿಸಿ ತೀರ್ಮಾನಿಸುತ್ತೇವೆ' ಎಂದು ತಿಳಿಸಿದ್ದಾರೆ.

ಬೇರ್ಪಟ್ಟ ರೈಲು ಬೋಗಿಗಳು

ಶಿವಮೊಗ್ಗ: ತುಂಗಾ ಸೇತುವೆ ಮೇಲೆ ಘಟನೆ; ತಪ್ಪಿದ ಅವಘಡ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ತಾಳಗುಪ್ಪದಿಂದ ಮೈಸೂರಿಗೆ ಹೊರಟಿದ್ದ ಇಂಟರ್‌ಸಿಟಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16205) ರೈಲಿನ ಬೋಗಿಗಳ ನಡುವಿನ ಸಂಪರ್ಕ ಕೊಂಡಿ (ಅನ್ ಕಪ್ಲಿಂಗ್) ಬುಧವಾರ ಸಂಜೆ ಇಲ್ಲಿನ ತುಂಗಾ ನದಿ ಸೇತುವೆ ಮೇಲೆ ತುಂಡಾಗಿ ಕಳಚಿದ್ದರಿಂದ ಆತಂಕ ಉಂಟಾಗಿತ್ತು.

ಸಂಜೆ 5 ಗಂಟೆಗೆ ಶಿವಮೊಗ್ಗ ರೈಲು ನಿಲ್ದಾಣದಿಂದ ಹೊರಟ ರೈಲು, ಗುಂಡಪ್ಪ ಶೆಡ್–ಸ್ಯಾಂಡಲ್ ಫ್ಯಾಕ್ಟರಿ ನಡುವಿನ ತುಂಗಾ ನದಿ ಸೇತುವೆಯ ಮೇಲೆ ತೆರಳುತ್ತಿದ್ದ ವೇಳೆ 16 ಬೋಗಿಗಳ ಪೈಕಿ ಆರು ಬೋಗಿ (ಕೋಚ್) ಬೇರೆಯಾಗಿವೆ. ಗಾರ್ಡ್ ಕಂಪಾರ್ಟ್‌ಮೆಂಟ್ ಒಳಗೊಂಡ ಆರು ಬೋಗಿಗಳು ತುಂಗಾ ನದಿ ಸೇತುವೆ ಏರುವ ಮೊದಲೇ ಕಳಚಿಕೊಂಡು ನಿಂತಿವೆ. 10 ಬೋಗಿಗಳನ್ನು ಒಳಗೊಂಡ ಎಂಜಿನ್ ಸೇತುವೆ ಮೇಲೆ ನಿಂತಿದೆ. ಸ್ವಲ್ಪ ದೂರ ತೆರಳಿದ ನಂತರ ಇದನ್ನು ಗಮನಿಸಿದ ಲೋಕೊಪೈಲಟ್ ರೈಲು ನಿಲ್ಲಿಸಿದ್ದಾರೆ. ವಿಷಯ ತಿಳಿದು ರೈಲ್ವೆ ಎಂಜಿನಿಯರಿಂಗ್ ವಿಭಾಗದ ತಂತ್ರಜ್ಞರು ಸ್ಥಳಕ್ಕೆ ಧಾವಿಸಿದ್ದು ಸಂಪರ್ಕ ಕಳಚಿಕೊಂಡಿದ್ದ ಆರು ಬೋಗಿಗಳನ್ನು ಮರು ಜೋಡಣೆ ಮಾಡಲಾಯಿತು.



ಸೇತುವೆ ಮೇಲೆ ಸ್ಥಗಿತಗೊಂಡಿದ್ದ ರೈಲು ಚಿತ್ರ: ನಿತಿನ್ ಕೈದೊಟ್ಲು

45 ನಿಮಿಷ ನಿಂತ 'ವಂದೇ ಭಾರತ್'



ದಾವಣಗೆರೆ: ಬೆಂಗಳೂರಿನಿಂದ ಧಾರವಾಡಕ್ಕೆ ಹೋಗುತ್ತಿದ್ದ 'ವಂದೇ ಭಾರತ್' ರೈಲು ತಾಂತ್ರಿಕ ಸಮಸ್ಯೆಯಿಂದಾಗಿ ಬುಧವಾರ ದಾವಣಗೆರೆ ಬಳಿ 45 ನಿಮಿಷ ನಿಲುಗಡೆ ಮಾಡಿತ್ತು. ಬೆಳಿಗ್ಗೆ 9.15ಕ್ಕೆ ದಾವಣಗೆರೆ ರೈಲು ನಿಲ್ದಾಣ ತಲುಪಬೇಕಿದ್ದ ರೈಲು, ಸಿಗ್ನಲ್ ಸಿಗದ್ದರಿಂದ 7 ಕಿ.ಮೀ ದೂರದಲ್ಲಿ ನಿಲುಗಡೆ ಮಾಡಿತ್ತು.

'ರೈಲುಗಳು ನಿಲ್ದಾಣಕ್ಕೆ ಬರುವ ಮುನ್ನ ಹಳಿ ಬದಲಾವಣೆ ಮಾಡಬೇಕು. ಹೀಗೆ ಹಳಿ ಬದಲಿಸಲು ಹಸಿರು ನಿಶಾನೆ ಸಿಗದಿರುವುದು ದಾವಣಗೆರೆ ತಾಲ್ಲೂಕಿನ ತೋಳಹುಣಸೆ ಸಮೀಪ 'ವಂದೇಭಾರತ್' ನಿಂತಿತ್ತು. ಸಮಸ್ಯೆ ಪರಿಹಾರದ ಬಳಿಕ ಸಂಚಾರ ಮುಂದುವರಿಸಿತು. ಬೆಳಿಗ್ಗೆ 10.20ಕ್ಕೆ ದಾವಣಗೆರೆ ನಿಲ್ದಾಣ ತಲುಪಿತು' ಎಂದು ರೈಲ್ವೆ ಇಲಾಖೆ ಮೂಲಗಳು ತಿಳಿಸಿವೆ.

ಮಗನಿಗೆ ನೌಕರಿ ನೀಡಲು ಆಗ್ರಹ ಮಲ ಸುರಿದುಕೊಂಡು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಪಟ್ಟಣದ ಪುರಸಭೆ ಎದುರು ಸಫಾಯಿ ಕರ್ಮಚಾರಿ ಸುರೇಶ ಬಸವಾನಾಯ್ಕರ್ ಮೈ ಮೇಲೆ ಮಲ ಸುರಿದುಕೊಂಡು ಬುಧವಾರ ಪ್ರತಿಭಟನೆ ನಡೆಸಿದರು.

'ನಾನು ಹಿಂದೆ ಪುರಸಭೆಯಲ್ಲಿ ಸಫಾಯಿ ಕರ್ಮಚಾರಿ ಆಗಿ ಕೆಲಸ ಮಾಡಿದ್ದರೂ ಕಾಯಂ ನೌಕರಿ ಸಿಗಲಿಲ್ಲ. ಮಗನಿಗಾದರೂ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನೀಡಲು ಕೋರಿರುವೆ. ಅದಕ್ಕೂ ಸ್ಪಂದನೆ ಇಲ್ಲ. ಅದಕ್ಕೆ ಪ್ರತಿಭಟಿದ್ದೇನೆ' ಎಂದು ಸುರೇಶ ತಿಳಿಸಿದರು.

'ಪುರಸಭೆ ಆಡಳಿತ ಮಂಡಳಿಯು ಕೆಲ ತಿಂಗಳ ಗುತ್ತಿಗೆ ಆಧಾರದಲ್ಲಿ 10ಕ್ಕೂ ಹೆಚ್ಚು ಜನರ ನೇಮಿಸಿಕೊಂಡಿದೆ. ಈಗಲಾದರೂ ಮಗನಿಗೆ ನೇಮಿಸಿಕೊಳ್ಳಬೇಕು' ಎಂದರು. ಸ್ಥಳಕ್ಕೆ ಬಂದ ಪೊಲೀಸರು ಮನವೊಲಿಸಿದ ಬಳಿಕ ಸುರೇಶ ಅವರು ಪ್ರತಿಭಟನೆ ಕೈಬಿಟ್ಟರು. 'ಪ್ರತಿಭಟಿಸಿದ ವ್ಯಕ್ತಿಗೂ, ಪುರಸಭೆಗೂ ಸಂಬಂಧ ಇಲ್ಲ. ಸುರೇಶ ಹಿಂದೆ ಪುರಸಭೆಯಲ್ಲಿ ಸಫಾಯಿ ಕರ್ಮಚಾರಿಯಾಗಿ ಹೊರಗುತ್ತಿಗೆಯಡಿ ಕೆಲಸ ಮಾಡಿದ್ದಾಗಿ ಹೇಳಿದ್ದಾರೆ. ಈ ಬಗ್ಗೆ ಮಾಹಿತಿ ಇಲ್ಲ. ಸದ್ಯ ಕಾರ್ಮಿಕರನ್ನು ಗುತ್ತಿಗೆದಾರರು ನೇಮಿಸುತ್ತಾರೆ ಹೊರತು ಪುರಸಭೆಯಲ್ಲ' ಎಂದು ಪುರಸಭೆ ಮುಖ್ಯಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದರು.



ಲಕ್ಷ್ಮೇಶ್ವರದ ಪುರಸಭೆ ಎದುರು ಮೈ ಮೇಲೆ ಮಲ ಸುರಿದುಕೊಂಡು ಪ್ರತಿಭಟಿಸಿದ ಸುರೇಶ ಬಸವಾನಾಯ್ಕರ

ಕುಕ್ಕರ್ ಬಾಂಬ್ ಸ್ಫೋಟ: ಆರೋಪಿ ಹಣ ಮುಟ್ಟುಗೋಲು

ಮಂಗಳೂರು: ನಗರದಲ್ಲಿ ನಡೆದಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಸೈಯದ್ ಯಾಸಿನ್‌ನ ಖಾತೆಯಲ್ಲಿದ್ದ ₹29,176 ಮೊತ್ತವನ್ನು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ ಎಂದು ಜಾರಿ ನಿರ್ದೇಶನಾಲಯ (ಇಡಿ) ಹೇಳಿಕೆ ತಿಳಿಸಿದೆ

ನಗರದ ನಾಗುರಿ ಬಳಿ 2022ರ ನ.19ರಂದು ಸಂಜೆ 4.40ರ ವೇಳೆ ಆಟೊದಲ್ಲಿ ತೆಗೆದುಕೊಂಡು ಹೋಗುತ್ತಿದ್ದ ಕುಕ್ಕರ್ ಬಾಂಬ್ ಸ್ಫೋಟಿಸಿ ಚಾಲಕ ಪುರುಷೋತ್ತಮ ಪೂಜಾರಿ ಗಾಯಗೊಂಡಿದ್ದರು. ಅವರು ನೀಡಿದ ದೂರಿನ ಆಧಾರದಲ್ಲಿ ಕಂಕನಾಡಿ ಠಾಣೆ ಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಎನ್‌ಐಎಗೆ ತನಿಖೆ ವಹಿಸಲಾಗಿತ್ತು.

ಬೆಳಗಾವಿ ಜಿಲ್ಲೆಯ ಮಸೀದಿಯೊಂದರಲ್ಲಿ ನಡೆದಿದ್ದ ಕೃತ್ಯ

ಅತ್ಯಾಚಾರ: 2 ವರ್ಷ ಬಳಿಕ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ತಾಲ್ಲೂಕು ಕೇಂದ್ರವೊಂದರ ಮಸೀದಿಯಲ್ಲಿ 5 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದು, ಘಟನೆ ಎರಡು ವರ್ಷಗಳ ಬಳಿಕ ಗೊತ್ತಾಗಿದೆ. ಆರೋಪಿಯನ್ನು ವಶಕ್ಕೆ ಪಡೆದ ಪೊಲೀಸರು, ತನಿಖೆ ನಡೆಸಿದ್ದಾರೆ.



ತುಫೇಲ್‌ಅಹ್ಮದ್ ದಾದಾಪೀರ್ ನಗರ್ಚಿ

'ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರದ ತುಫೇಲ್‌ಅಹ್ಮದ್ ದಾದಾಪೀರ್ ನಗರ್ಚಿ (22) ಆರೋಪಿ. ತಗಡಿನ ಶೆಡ್ ನಿರ್ಮಾಣದ ಕೆಲಸ ಮಾಡುವ ಆರೋಪಿ, ಆಗಾಗ ಮಸೀದಿಯಲ್ಲಿ ಧರ್ಮ ಬೋಧನೆ ಮಾಡುತ್ತಿದ್ದ. 2023ರ ಅಕ್ಟೋಬರ್ 5ರಂದು ಮಸೀದಿ ಪಕ್ಕದಲ್ಲಿನ ಮನೆ ಬಳಿ ಆಟವಾಡುತ್ತಿದ್ದ ಬಾಲಕಿಗೆ ಪುಸಲಾಯಿಸಿ, ಅತ್ಯಾಚಾರ ಎಸಗಿದ್ದ. ಇದು ಮಸೀದಿ ಒಳಗಿನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪತ್ತೆಯಾಗಿದ್ದು ಹೇಗೆ?: 'ಪುನೀತ್ ಕೆರೆಹಳ್ಳಿ ಎಂಬುವರು ತಮ್ಮ 'ಎಕ್ಸ್' ಖಾತೆಯಲ್ಲಿ ಮಂಗಳವಾರ (ಆ.5) ಈ ವಿಷಯ ಹಂಚಿಕೊಂಡಿದ್ದರು. ಮಸೀದಿಯಲ್ಲಿ ಬಾಲಕಿಯ ಮೇಲೆ ಅತ್ಯಾಚಾರ ನಡೆದಿದೆ. ದೂರು ಕೊಡದಂತೆ ಮಸೀದಿಯವರು ಬಾಲಕಿಯ ತಂದೆಗೆ ಬೆದರಿಕೆ ಹಾಕಿದ್ದಾರೆ. ಅವರಿಗೆ ನ್ಯಾಯ ಕೊಡಿಸುವವರು ಶೇರ್ ಮಾಡಿರಿ' ಎಂದು ಬರೆದಿದ್ದರು. ಇದರೊಂದಿಗೆ ಅತ್ಯಾಚಾರದ ವಿಡಿಯೊ ತುಣುಕು, ಬಾಲಕಿಯ ತಂದೆ ಮಾತನಾಡಿದ ಆಡಿಯೊ ತುಣುಕು ಇತ್ತು.

ಜಿಲ್ಲಾ ಸಾಮಾಜಿಕ ಜಾಲತಾಣಗಳ ಮಾನಿಟರಿಂಗ್ ಕೋಶದವರು ಇದನ್ನೇ ಸಾಕ್ಷಿಯಾಗಿಸಿಕೊಂಡು ಕಾರ್ಯ ಪ್ರವೃತ್ತರಾದರು. ಆಗ ಅತ್ಯಾಚಾರದ ವಿಷಯ ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ತಿಳಿಸಿದರು.

> **ದೂರು ನೀಡುವಂತೆ ಬಾಲಕಿ ಪೋಷಕರಿಗೆ ಕೋರಿದರೂ ನಿರಾಕರಿಸಿದ್ದಾರೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂಪರ್ಕಿಸಿ, ಅಂಗನವಾಡಿ ಕಾರ್ಯಕರ್ತೆ ಮೂಲಕ ದೂರು ದಾಖಲಿಸಿಕೊಳ್ಳಲಾಗಿದೆ**
> **ಭೀಮಾಶಂಕರ ಗುಳೇದ**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬೆಳಗಾವಿ

'ಅತ್ಯಾಚಾರ ಎಸಗಿದ ದೃಶ್ಯಗಳು ಮಸೀದಿಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಆದರೆ, ಕೆಲವರು ರಾಜಿ ನಡೆಸಿ ಪ್ರಕರಣ ಮುಚ್ಚಿಹಾಕಿದ್ದರು. ಬಾಲಕಿ ಪಾಲಕರೂ ದೂರು ಕೊಟ್ಟಿರಲಿಲ್ಲ. ಈಚೆಗೆ ಬಾಲಕಿಯ ತಂದೆ ಇನ್ನೊಬ್ಬರೊಂದಿಗೆ ಮೊಬೈಲ್‌ನಲ್ಲಿ ಈ ವಿಷಯ ಹೇಳಿಕೊಂಡಿದ್ದರು. ಅದರ ಆಡಿಯೊ ತುಣುಕು ಹಾಗೂ ಸಿಸಿಟಿವಿ ತುಣುಕು ಸಂಗ್ರಹಿಸಿದ್ದ ಪುನೀತ್ ಕೆರೆಹಳ್ಳಿ ಮಂಗಳವಾರ 'ಎಕ್ಸ್'ನಲ್ಲಿ ಅಪ್ಲೋಡ್ ಮಾಡಿದ್ದರು' ಎಂದರು.

'ಮುರಗೋಡ ಪೊಲೀಸ್ ಠಾಣೆಯ ಅಧಿಕಾರಿಗಳ ನೇತೃತ್ವದಲ್ಲಿ ಮೂರು ತಂಡ ರಚಿಸಿ, ಬುಧವಾರ ಆರೋಪಿಯನ್ನು ವಶಕ್ಕೆ ಪಡೆಲಾಯಿತು. ತಂದೆ–ತಾಯಿ ಜತೆಗೆ ಜಗಳವಾಡಿ, ಚಿಕ್ಕಮ್ಮನ ಮನೆಗೆ ಬಂದಿದ್ದ ಆರೋಪಿ ಈ ಕೃತ್ಯ ಎಸಗಿದ್ದಾನೆ' ಎಂದರು.

'ಇದರಲ್ಲಿ ಮಸೀದಿಯವರು ನೇರ ಆರೋಪಿಗಳಾಗಿಲ್ಲ. ಸಂಧಾನ ಮಾಡಿ ಪ್ರಕರಣ ಮುಚ್ಚಲು ಯತ್ನಿಸಿದವರನ್ನು ವಿಚಾರಣೆ ಮಾಡಲಾಗುತ್ತಿದೆ. 2024ರ ಜುಲೈ 1ಕ್ಕಿಂತ ಮುಂಚೆ ಆಗಿದ್ದರಿಂದ ಐಪಿಸಿ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಲಾಗಿದೆ' ಎಂದರು.

ಧರ್ಮಸ್ಥಳ: ಗುಂಪು ಘರ್ಷಣೆ

ಒಂದನೇ ಪುಟದಿಂದ...

ಬಳಿಕ ಆ ಗುಂಪಿನಲ್ಲಿದ್ದ ಕೆಲವರು, 'ಕೆಲವು ಯೂಟ್ಯೂಬರ್‌ಗಳು ಎಸ್‌ಐಟಿ ತನಿಖೆಯ ಕುರಿತು ಸುಳ್ಳು ಸುದ್ದಿ ಹರಡುತ್ತಿದ್ದಾರೆ ಎಂದು ಆರೋಪಿಸಿ ಎರಡು ವಿಡಿಯೊ ಕ್ಯಾಮೆರಾಗಳನ್ನು ಧ್ವಂಸ- ಗೊಳಿಸಿದರು. 'ಸೌಜನ್ಯಾ' ಫೋಟೊ ಅಳವಡಿಸಿದ್ದ ವಾಹನದ ಗಾಜನ್ನು ಪುಡಿ ಮಾಡಿದರು' ಎಂದು ಮೂಲಗಳು ತಿಳಿಸಿವೆ.

ಈ ಹಲ್ಲೆಯನ್ನು ಖಂಡಿಸಿ ಒಂದು ಗುಂಪು ಪಾಂಗಾಳ ರಸ್ತೆ ಬಳಿ ಪ್ರತಿಭಟನೆ ನಡೆಸಿತು. ಇದೇ ವೇಳೆ, 'ಕ್ಷೇತ್ರಕ್ಕೆ ಕಳಂಕ ಹಚ್ಚಲು ಉದ್ದೇಶಪೂರ್ವಕವಾಗಿ ಯತ್ನಿಸಲಾಗುತ್ತಿದೆ' ಎಂದು ಆರೋಪಿಸಿ ಇನ್ನೊಂದು ಗುಂಪು ಅದೇ ಸ್ಥಳದತ್ತ ಧಾವಿಸಿ ಪ್ರತಿಭಟನೆಗೆ ಮುಂದಾಯಿತು. ಈ ವೇಳೆ ಎರಡೂ ಗುಂಪುಗಳ ನಡುವೆ ವಾಗ್ವಾದ ನಡೆಯಿತು. ಪರಿಸ್ಥಿತಿ ಕೈಮೀರುವ ಹಂತ ತಲುಪಿದಾಗ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಸ್ಥಳದಲ್ಲಿದ್ದವರನ್ನು ಚದುರಿಸಿದರು.

ಹಲ್ಲೆಗೊಳಗಾದ ಯೂಟ್ಯೂಬರ್ ಗಳು ಚಿಕಿತ್ಸೆಗಾಗಿ ಉಜಿರೆಯ ಬೆನಕ ಆಸ್ಪತ್ರೆಗೆ ದಾಖಲಾಗಿದ್ದರು. ಅಲ್ಲಿಗೆ ವರದಿಗಾರಿಕೆಗಾಗಿ ತೆರಳಿದ್ದ ಏಷ್ಯಾ ನೆಟ್ ಸುವರ್ಣ ವಾಹಿನಿಯ ವರದಿಗಾರ ಹರೀಶ್ ಹಾಗೂ ಕ್ಯಾಮೆರಾಮನ್ ನವೀನ್ ಎಂಬವರ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ವಾಹಿನಿಯ ಮೂಲಗಳು ತಿಳಿಸಿವೆ.

ಪರಿಸ್ಥಿತಿ ಶಾಂತ: ಎಸ್‌ಪಿ

ಒಂದನೇ ಪುಟದಿಂದ...

'ಹಲ್ಲೆಗೊಳಗಾದವರು ಚಿಕಿತ್ಸೆಗಾಗಿ ದಾಖಲಾಗಿರುವ ಆಸ್ಪತ್ರೆಯ ವೈದ್ಯರಿಂದ ಮಾಹಿತಿ ಪಡೆದಿದ್ದೇವೆ. ಹಲ್ಲೆಗೊಳಗಾದವರಿಗೆ ಯಾವುದೇ ಗಂಭೀರ ಗಾಯಗಳಾಗಿರು- ವುದು ಪ್ರಾಥಮಿಕ ಆರೋಗ್ಯ ತಪಾಸಣೆಯಲ್ಲಿ ಕಂಡುಬಂದಿಲ್ಲ ಎಂಬುದಾಗಿ ವೈದ್ಯರು ಮೌಖಿಕವಾಗಿ ತಿಳಿಸಿದ್ದಾರೆ. ಈ ದಿನ ನಡೆದ ಘಟನೆಗಳಿಗೆ ಸಂಬಂಧಿಸಿದ ವಿಡಿಯೊ ದೃಶ್ಯಾವಳಿ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಎಸ್‌ಪಿ ಹೇಳಿದ್ದಾರೆ.

ಅವಶೇಷ ಪತ್ತೆಗೆ ತಂತ್ರಜ್ಞಾನ ಬಳಕೆ?

ಒಂದನೇ ಪುಟದಿಂದ...

ಸಾಕ್ಷಿ ದೂರುದಾರ ಇದುವರೆಗೆ ತೋರಿಸಿದ್ದ 13ನೇ ಜಾಗವನ್ನು ಹೊರತುಪಡಿಸಿ, ಉಳಿದೆಲ್ಲ ಜಾಗಗಳಲ್ಲಿ ಎಸ್‌ಐಟಿ ಶೋಧ ಕಾರ್ಯ ಪೂರ್ಣಗೊಳಿಸಿದೆ. ಆತ ಮೊದಲ ದಿನ ತೋರಿಸಿದ್ದ 13 ಜಾಗಗಳ ಹೊರತಾಗಿ ಇನ್ನೆರಡು ಹೊಸ ಜಾಗಗಳಲ್ಲೂ ಶೋಧ ಕಾರ್ಯ ನಡೆಸಲಾಗಿದೆ. ಆತ ತೋರಿಸಿದ್ದ ಆರನೇ ಜಾಗದಲ್ಲಿ ಗಂಡಸಿನ ಮೃತದೇಹದ ಅವಶೇಷ ಸಿಕ್ಕಿತ್ತು. ಆತ ಕಾಡಿನೊಳಗೆ ತೋರಿಸಿದ್ದ, ಗುರುತು ಮಾಡದ ಜಾಗದಲ್ಲಿ ಮೃತದೇಹದ ತಲೆಬುರುಡೆ, ಬೆನ್ನುಮೂಳೆ ಸೇರಿದಂತೆ 100ಕ್ಕೂ ಹೆಚ್ಚು ಮೂಳೆಗಳು ಸಿಕ್ಕಿದ್ದವು.

ಮತ್ತೊಬ್ಬನಿಂದ ಅರ್ಜಿ: 'ಮೃತದೇಹ ಹೂತು ಹಾಕಿದ ಸ್ಥಳಗಳ ವಿವರ ತನಗೂ ತಿಳಿದಿದೆ' ಎಂದು ಹೇಳಿಕೊಂಡು ಧರ್ಮಸ್ಥಳದ ಗ್ರಾಮದ ಪಾಂಗಳ ಕುಳಾಂಗಜೆಯ ತುಕರಾಮ ಗೌಡ ಎಂಬವರು ಎಸ್‌ಐಟಿಗೆ ಬುಧವಾರ ಅರ್ಜಿ ಸಲ್ಲಿಸಿದ್ದಾರೆ. ಈ ಕುರಿತ ಮಾಹಿತಿಯನ್ನು ಸ್ಥಳೀಯ ಪೊಲೀಸ್ ಠಾಣೆಗೆ (ಧರ್ಮಸ್ಥಳ ಠಾಣೆ) ಸಲ್ಲಿಸುವಂತೆ ಎಸ್‌ಐಟಿ ಅಧಿಕಾರಿಗಳು ಸಲಹೆ ನೀಡಿದ್ದಾರೆ.

ಪಂಚಾಯಿತಿಯಿಂದ ಮತ್ತಷ್ಟು ಮಾಹಿತಿ: 'ಮೂರು ದಶಕಗಳಿಂದ ಈಚೆಗೆ ವಿಲೇ ಮಾಡಲಾದ ಮೃತದೇಹಗಳ ವಿವರವನ್ನು ಎಸ್‌ಐಟಿಗೆ ಹಿಂದೆ ನೀಡಿದ್ದೇವೆ. ವಾರಸುದಾರರು ಇಲ್ಲದ, ಗುರುತು ಪತ್ತೆಯಾಗದ 270 ಮೃತದೇಹ ಹೂತು ಹಾಕಿರುವ ವಿವರ ಲಭ್ಯವಿದೆ' ಎಂದು ಪಂಚಾಯಿತಿಯ ಮೂಲಗಳು ತಿಳಿಸಿವೆ.

ಮಾಧ್ಯಮ ನಿರ್ಬಂಧ ತೆರವು ಕೋರಿ ಅರ್ಜಿ

ಬೆಂಗಳೂರು: 'ಸೌಜನ್ಯ ಕೊಲೆ, ಆಕೆಯ ಮೇಲಿನ ಅತ್ಯಾಚಾರ ಆರೋಪ ಹಾಗೂ ಧರ್ಮಸ್ಥಳದಲ್ಲಿ ಕಾನೂನು ಬಾಹಿರವಾಗಿ ನೂರಾರು ಶವಗಳನ್ನು ದಫನ ಮಾಡಲಾಗಿದೆ ಎಂಬ ದೂರಿಗೆ ಸಂಬಂಧಿಸಿದಂತೆ ನಮ್ಮ ವಿರುದ್ಧ ಸೆಷನ್ಸ್ ನ್ಯಾಯಾಲಯ ವಿಧಿಸಿರುವ ಪ್ರತಿಬಂಧಕ ಆದೇಶ ರದ್ದುಗೊ- ಳಿಸಬೇಕು' ಎಂದು ಕೋರಿ 'ನ್ಯೂಸ್ ಮಿನಿಟ್ ವೆಬ್ ಪೋರ್ಟಲ್' ಹೈಕೋರ್ಟ್ ಮೆಟ್ಟಿಲೇರಿದೆ. ಅರ್ಜಿಯು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠದಲ್ಲಿ ಇದೇ 11ರಂದು ವಿಚಾರಣೆಗೆ ನಿಗದಿಯಾಗಿದೆ.

ಭೂಸ್ವಾಧೀನ: ಸಂತ್ರಸ್ತರ ಜತೆ ಸಮಾಲೋಚನೆ

ನಮ್ಮ ಮೆಟ್ರೊ: ಕೆಂಪಾಪುರ–ಜೆ.ಪಿ.ನಗರ 4ನೇ ಹಂತ, ಹೊಸಹಳ್ಳಿ–ಕಡಬಗೆರೆ ಸಂಪರ್ಕ ಮಾರ್ಗ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ 3ನೇ ಹಂತದ (ಕಿತ್ತಳೆ ಮಾರ್ಗ) ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಂಡಿದ್ದು, ಕಾರಿಡಾರ್ 1ಕ್ಕೆ ಸಂಬಂಧಪಟ್ಟ ಪ್ರಕ್ರಿಯೆ ಮೂರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಇದರ ಸಾಮಾಜಿಕ ಪರಿಣಾಮಗಳ ಬಗ್ಗೆ ಬಾಧಿತ ಪಾಲುದಾರರೊಂದಿಗೆ ಬಿಎಂಆರ್‌ಸಿಎಲ್ ಅಧಿಕಾರಿಗಳು ಸಮಾಲೋಚನಾ ಸಭೆಗಳನ್ನು ಆರಂಭಿಸಿದ್ದಾರೆ.

ಕೆಂಪಾಪುರ–ಜೆ.ಪಿ.ನಗರ 4ನೇ ಹಂತ ಮೊದಲ ಕಾರಿಡಾರ್ ಆಗಿದ್ದು, ಹೊಸಹಳ್ಳಿ–ಕಡಬಗೆರೆ ಎರಡನೇ ಕಾರಿಡಾರ್ ಆಗಿದೆ. ಒಂದನೇ ಕಾರಿಡಾರ್ ಮೂರು ಪ್ಯಾಕೇಜ್‌ಗಳಲ್ಲಿ ನಿರ್ಮಾಣಗೊಳ್ಳಲಿದೆ. ಎರಡನೇ ಕಾರಿಡಾರ್ ನಾಲ್ಕನೇ ಪ್ಯಾಕೇಜ್ ಆಗಿದೆ. ಇವುಗಳಿಗೆ ಸಂಬಂಧಿಸಿದಂತೆ ಮೊದಲು ತಯಾರಿಸಿದ್ದ ವಿಸ್ತೃತ ಯೋಜನಾ ವರದಿಯಲ್ಲಿ ಡಬಲ್ ಡೆಕರ್ ಸೇರ್ಪಡೆಗೊಂಡಿರಲಿಲ್ಲ. ಅದಕ್ಕಾಗಿ ಮರು ಸರ್ವೆ ಶುರುವಾಗಿತ್ತು.

ಕಿತ್ತಳೆ ಮಾರ್ಗ

ಮೊದಲ ಪ್ಯಾಕೇಜ್ ಜೆ.ಪಿ.ನಗರ 4ನೇ ಹಂತದಿಂದ ಮೈಸೂರು ರಸ್ತೆಯ ಸರ್ವೆ ಮುಗಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಕಂಠೀರವ ಸ್ಟೇಡಿಯಂನಿಂದ ಕೆಂಪಾಪುರದ ವರೆಗಿನ 3ನೇ ಪ್ಯಾಕೇಜ್‌ನಲ್ಲಿ 100 ಆಸ್ತಿಗಳನ್ನು ಗುರುತಿಸಲಾಗಿದೆ. ಮೈಸೂರು ರಸ್ತೆ–ಕಂಠೀರವ ಸ್ಟೇಡಿಯಂವರೆಗಿನ ಎರಡನೇ ಪ್ಯಾಕೇಜ್‌ನ ಸರ್ವೆ ನಡೆಯುತ್ತಿದೆ. ಈ ಎಲ್ಲ ಕಾರ್ಯಗಳು ಮೂರು ತಿಂಗಳಲ್ಲಿ ಪೂರ್ಣಗೊಳ್ಳಲಿವೆ ಎಂದು 3ನೇ ಹಂತದ 1ನೇ ಕಾರಿಡಾರ್‌ನ ಭೂಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕಿ ಪೂರ್ಣಿಮಾ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಸಭೆಗಳು: ಸಂತ್ರಸ್ತರೊಂದಿಗೆ ಆ.4ರಿಂದ ಸಮಾಲೋಚನಾ ಸಭೆಗಳು ಶುರುವಾಗಿವೆ. ಕಾರಿಡಾರ್–2ಕ್ಕೆ (ನಾಲ್ಕನೇ ಪ್ಯಾಕೇಜ್) ಸಂಬಂಧಿಸಿದಂತೆ ಕಾಮಾಕ್ಷಿಪಾಳ್ಯದ ಪೂಜಾ ಕನ್ವೆನ್ಷನ್ ಹಾಲ್, ವಿಜಯನಗರದ ಜಿ.ಬಿ.ಬಿ. ಕಲ್ಯಾಣ ಮಹಲ್ ಹಾಗೂ ದೊಡ್ಡ ಗೊಲ್ಲರಹಟ್ಟಿ ರವಿನಂದನ ಪ್ಯಾಲೆಸ್‌ನಲ್ಲಿ ಸಭೆಗಳು ನಡೆದಿವೆ.

ಶ್ರೀಗಂಧದ ಕಾವಲ್‌ನ ಶಿವಾನಂದಿ ಕನ್ವೆನ್ಷನ್ ಹಾಲ್, ನಾಗರಭಾವಿಯ ಅಮ್ಮಾ ಪಾರ್ಟಿ ಹಾಲ್‌ನಲ್ಲಿ ಕಾರಿಡಾರ್ 1ರ ಪ್ಯಾಕೇಜ್ 2ಕ್ಕೆ ಸಂಬಂಧಿಸಿದಂತೆ ಸಭೆ ಗಳಾಗಿವೆ. ಆ.11ರಂದು ಬೆಳಿಗ್ಗೆ 10.30ಕ್ಕೆ ಲಗ್ಗೆರೆಯ ಮಂಜುಶ್ರೀ ಫಂಕ್ಷನ್ ಹಾಲ್‌ನಲ್ಲಿ ಕೊನೇ ಸಭೆ ನಡೆಯಲಿದೆ.

37,703 ಚ.ಮೀ. ಸ್ವಾಧೀನಪಡಿಸಿಕೊಳ್ಳಲು ಸದ್ಯ ಗುರುತಿಸಿರುವ ಭೂಮಿ

₹15,611 ಕೋಟಿ ಮೆಟ್ರೊ 3ನೇ ಹಂತದ ಒಟ್ಟು ವೆಚ್ಚ

ಕಾರಿಡಾರ್ 1ರ ಪ್ಯಾಕೇಜ್ 1ಕ್ಕೆ ಸಂಬಂಧಿಸಿದವರ ಸಭೆ ಹೊರವರ್ತುಲ ರಸ್ತೆಯ ಎಂ.ಆರ್. ಕನ್ವೆನ್ಷನ್ ಹಾಲ್‌ನಲ್ಲಿ ನಡೆದಿದ್ದು, ಆ.9ರಂದು ಬೆಳಿಗ್ಗೆ 10.30ಕ್ಕೆ ಸಿಂಧೂರ್ ಕನ್ವೆನ್ಷನ್ ಹಾಲ್‌ನಲ್ಲಿ, ಮಧ್ಯಾಹ್ನ 2ಕ್ಕೆ ಪದ್ಮನಾಭನಗರದ ಬೆಂಗಳೂರು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ಅಂತಿಮ ಸಭೆಗಳು ನಡೆಯಲಿವೆ.

ಆ.7ರಂದು ಬೆಳಿಗ್ಗೆ 10.30ಕ್ಕೆ ಸಂಜಯನಗರದ ರಘೋತ್ತಮ ಪಾರ್ಟಿ ಹಾಲ್‌ನಲ್ಲಿ (ಮಾರಿಗೋಲ್ಡ್) ಪ್ಯಾಕೇಜ್ ಮೂರಕ್ಕೆ ಸಂಬಂಧಿಸಿದ ಸಭೆ ನಡೆಯಲಿದೆ ಎಂದು ನಮ್ಮ ಮೆಟ್ರೊ 3ನೇ ಹಂತ 2ನೇ ಕಾರಿಡಾರ್ ಭೂಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಯತೀಶ್ ಉಲ್ಲಾಳ್ ಮಾಹಿತಿ ನೀಡಿದರು.

ಕಾರಿಡಾರ್–2ಕ್ಕೆ ಸಂಬಂಧಿಸಿದಂತೆ ಸರ್ವೆ ನಡೆಯುತ್ತಿದ್ದು, ಭೂಸ್ವಾಧೀನ ಪ್ರಕ್ರಿಯೆ 8 ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರಿಡಾರ್ -1			ಕಾರಿಡಾರ್ -2
10.88 ಕಿ.ಮೀ. ಮೊದಲ ಪ್ಯಾಕೇಜ್	10.60 ಕಿ.ಮೀ. ಎರಡನೇ ಪ್ಯಾಕೇಜ್	10.67 ಕಿ.ಮೀ. ಮೂರನೇ ಪ್ಯಾಕೇಜ್	12.5 ಕಿ.ಮೀ. ನಾಲ್ಕನೇ ಪ್ಯಾಕೇಜ್



ನಮ್ಮ ಮೆಟ್ರೊ ಮೂರನೇ ಹಂತದ (ಕಿತ್ತಳೆ ಮಾರ್ಗ) ಎರಡು ಕಾರಿಡಾರ್‌ಗಳು

ಏಕವ್ಯಕ್ತಿ ಸಮಿತಿಯಿಂದ ಪರಿಹಾರ ನಿರ್ಧಾರ

ಜಮೀನಿಗೆ ಮತ್ತು ಈ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ಎಷ್ಟು ಪರಿಹಾರ ನೀಡಬೇಕು ಎಂಬುದನ್ನು ಏಕವ್ಯಕ್ತಿ ಸಮಿತಿ ನಿರ್ಧಾರ ಮಾಡಲಿದೆ. ಬಿಎಂಆರ್‌ಸಿಎಲ್ ಇಲ್ಲಿವರೆಗೆ ಅತ್ಯುತ್ತಮ ಪರಿಹಾರವನ್ನು ನೀಡಿದೆ. ಮೂರನೇ ಹಂತದಲ್ಲಿಯೂ ಭೂಸಂತ್ರಸ್ತರಿಗೆ ಉತ್ತಮ ಪರಿಹಾರ ಸಿಗಲಿದೆ ಎಂದು ನಮ್ಮ ಮೆಟ್ರೊ ಹಂತ ಮೂರರ 2ನೇ ಕಾರಿಡಾರ್ ಭೂಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಯತೀಶ್ ಉಲ್ಲಾಳ್ ತಿಳಿಸಿದ್ದಾರೆ.

ಸಚಿವ ಜಾರ್ಜ್ ವಿರುದ್ಧದ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದ ಟೆಂಡರ್ ಸಂಪೂರ್ಣ ಕಾನೂನು ಬಾಹಿರವಾಗಿದೆ' ಎಂದು ಆಪಾದಿಸಿ ಸಚಿವ ಕೆ.ಜೆ.ಜಾರ್ಜ್ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ದಾಖಲಿಸಲಾಗಿರುವ ಖಾಸಗಿ ದೂರಿನ ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಸಚಿವ ಕೆ.ಜೆ.ಜಾರ್ಜ್ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ'ದ ನ್ಯಾಯಮೂರ್ತಿ ಎಂ.ಐ.ಅರುಣ್ ಬುಧವಾರ ವಿಚಾರಣೆ ನಡೆಸಿದರು. ಸಚಿವ ಜಾರ್ಜ್ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ. ನಾಗೇಶ್ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳೂ ಆದ ಪ್ರಕರಣದ ಫಿರ್ಯಾದುದಾರರಾದ ಬಿಜೆಪಿಯ ಶಾಸಕರಾದ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಎಸ್.ಆರ್.ವಿಶ್ವನಾಥ್ ಮತ್ತು ಧೀರಜ್ ಮುನಿರಾಜು ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಪ್ರತಿವಾದಿಗಳು ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು.

ಕೋರಿಕೆ ಏನು?: 'ಭಾರತೀಯ ನ್ಯಾಯ ಸಂಹಿತಾ–2023ರ ಕಲಂ 314, 316 ಮತ್ತು 61, ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ–2018ರ ಕಲಂ 13 (1)ಎ ಮತ್ತು 13(1)ಬಿ ಅಡಿಯಲ್ಲಿ 2025ರ ಜುಲೈ 17ರಂದು ನನ್ನ ವಿರುದ್ಧ ದಾಖಲಿಸಲಾಗಿರುವ ಖಾಸಗಿ ದೂರನ್ನು ರದ್ದುಗೊಳಿಸಬೇಕು. ಈ ಸಂಬಂಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ ಕಲಂ 175(4)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ದೂರಿಗೆ ಸಂಬಂಧಿಸಿದಂತೆ ವರದಿ ಸಲ್ಲಿಸುವಂತೆ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿಗೆ ಜುಲೈ 23ರಂದು ನೀಡಿರುವ ನಿರ್ದೇಶನವನ್ನು ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಏನಿದು ದೂರು?: 'ಸ್ಮಾರ್ಟ್ ಮೀಟರ್ ಟೆಂಡರ್ ನೀಡಿಕೆಯಿಂದ ಅಂದಾಜು ₹16 ಸಾವಿರ ಕೋಟಿ ಮೊತ್ತದ ದುರ್ಲಾಭ ಪಡೆಯಲಾಗುತ್ತಿದೆ' ಎಂದು ಆರೋಪಿಸಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ಅಧ್ಯಕ್ಷರೂ ಆದ ಇಂಧನ ಸಚಿವ ಕೆ.ಜೆ.ಜಾರ್ಜ್, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಬೆಸ್ಕಾಂನ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಹಾಗೂ ಬೆಸ್ಕಾಂನ ತಾಂತ್ರಿಕ ನಿರ್ದೇಶಕ ಎಚ್.ಜೆ.ರಮೇಶ್ ಅವರನ್ನು ಆರೋಪಿಗಳನ್ನಾಗಿ ಹೆಸರಿಸಿ 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಸೆಷನ್ಸ್ ಕೋರ್ಟ್ ಖಾಸಗಿ ದೂರು ದಾಖಲಿಸಲಾಗಿದೆ.

ಚಿಟಿಕೆ ಸುದ್ದಿ

ಅರ್ಜಿ ಅಹ್ವಾನ

ಬೆಂಗಳೂರು: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದಿಂದ ವಸತಿ ನಿಲಯಕ್ಕೆ ಅರ್ಜಿ ಅಹ್ವಾನಿಸಲಾಗಿದೆ.

ತಾಂತ್ರಿಕ, ಸ್ನಾತಕೋತ್ತರ ಪದವಿ, ಡಿಪ್ಲೊಮಾ, ವೈದ್ಯಕೀಯ ಹಾಗೂ ಔಷಧಿ ವಿಜ್ಞಾನ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಈಡಿಗ ಸಮುದಾಯದ ವಿದ್ಯಾರ್ಥಿಗಳು ಆಗಸ್ಟ್ 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿಳಾಸ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ನಂ. 185, ಈಡಿಗ ಭವನ, ರಾಜೀವಗಾಂಧಿ ವೃತ್ತ, ಶೇಷಾದ್ರಿಪುರ, ಬೆಂಗಳೂರು–560 020

ಮಾಹಿತಿಗೆ: 99160 45255.

ಫೋನ್–ಇನ್ ಕಾರ್ಯಕ್ರಮ ನಾಳೆ

ಬೆಂಗಳೂರು: ಜಲಮಂಡಳಿಯ ಅಧ್ಯಕ್ಷ ಡಾ.ವಿ. ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಆಗಸ್ಟ್ 8ರಂದು ಶುಕ್ರವಾರ ಬೆಳಿಗ್ಗೆ 9.30 ರಿಂದ 10.30 ರವರೆಗೆ ನೇರ ಫೋನ್–ಇನ್ ಕಾರ್ಯಕ್ರಮ ನಡೆಯಲಿದೆ.

ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿ| ಕೊಳ್ಳಬಹುದು.

ದೂರವಾಣಿ ಸಂಖ್ಯೆ; 080-22945119 ಮತ್ತು 080-22229639 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

'ಕೊಪ್ಪಳದ ಯುವಕನ ಹತ್ಯೆ ಎನ್‌ಐಎಗೆ ಒಪ್ಪಿಸಿ'

ಬೆಂಗಳೂರು: 'ಕೊಪ್ಪಳದ ಹಿಂದೂ ಸಂಘಟನೆಯ ಕಾರ್ಯಕರ್ತ ಗವಿಸಿದ್ಧಪ್ಪ ನಾಯಕ ಅವರ ಹತ್ಯೆ ಪ್ರಕರಣದ ತನಿಖೆಯನ್ನು ಎನ್‌ಐಎಗೆ ಒಪ್ಪಿಸಬೇಕು' ಎಂದು ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದ್ದಾರೆ.


ಛಲವಾದಿ ನಾರಾಯಣ ಸ್ವಾಮಿ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರ ಹಿಂದೂ ಕಾರ್ಯಕರ್ತರ ಹತ್ಯೆಗಳನ್ನು ಮುಚ್ಚಿ ಹಾಕುವ ಕೆಲಸ ಮಾಡುತ್ತಿದೆ. ಸರ್ಕಾರದ ಧೋರಣೆಯನ್ನು ವಿರೋಧಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಹೇಳಿದರು.

'ಸರ್ಕಾರವು ಮತಬ್ಯಾಂಕಿಗಾಗಿ ಮಾಡುತ್ತಿರುವ ಓಲೈಕೆಗಳು ರಾಜ್ಯದ ಜನರ ಪ್ರಾಣಗಳನ್ನು ತೆಗೆದುಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಪ್ರತಿಯೊಬ್ಬರೂ ಸರ್ಕಾರವನ್ನು ಪ್ರಶ್ನಿಸಬೇಕು. ಹತ್ಯೆಗೀಡಾದ ಯುವಕ ಪರಿಶಿಷ್ಟ ಪಂಗಡಕ್ಕೆ ಸೇರಿದವರು. ಆದ್ದರಿಂದ ಕೊಪ್ಪಳದಲ್ಲಿ ಬಿ.ಶ್ರೀರಾಮುಲು ನೇತೃತ್ವದಲ್ಲಿ ದೊಡ್ಡ ಮಟ್ಟದ ಹೋರಾಟ ಮಾಡಲು ತೀರ್ಮಾನಿಸಲಾಗಿದೆ' ಎಂದರು.

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಇದನ್ನು ಬಹಳ ದಿನಗಳಿಂದ ಹೇಳುತ್ತಲೇ ಬಂದಿದ್ದೇವೆ. ಆದರೂ ಕೂಡ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಇನ್ನೂ ಎಚ್ಚೆತ್ತುಕೊಂಡಿಲ್ಲ' ಎಂದು ಟೀಕಿಸಿದರು.

'ಮಾಹಿತಿ ತಂತ್ರಜ್ಞಾನ; ರಾಜ್ಯ ಸದೃಢ'

ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ಎಐ, ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ವಿಯೆಟ್ನಾಂ, ಯೂರೋಪ್‌ಗೆ ಪೈಪೋಟಿ ಕೊಡುವಷ್ಟು ಸದೃಢವಾಗಿದೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಹೊರವಲಯದ ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ಬುಧವಾರ ಕೃತಕ ಬುದ್ಧಿಮತ್ತೆ (ಎಐ), ಸೈಬರ್ ಭದ್ರತೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, 'ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ 23 ಮಾಹಿತಿ ತಂತ್ರಜ್ಞಾನ ಕಂಪನಿಗಳು ಸ್ಥಾಪನೆಯಾಗಿದ್ದು, ಇನ್ನೂ 40ಕ್ಕೂ ಹೆಚ್ಚು ಕಂಪನಿಗಳು ಆಸಕ್ತಿ ತೋರಿವೆ. ಒಂದು ಸಾವಿರ ನವೋದ್ಯಮಗಳಲ್ಲಿ, ಹುಬ್ಬಳ್ಳಿಯಲ್ಲೇ 120 ಕಂಪನಿಗಳು ಸ್ಥಾಪನೆಯಾಗಿವೆ' ಎಂದರು.

'ರಾಜ್ಯದಲ್ಲಿರುವ ಮೂಲ ಸೌಲಭ್ಯಗಳನ್ನು ಅರಿತು ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಮಾಡಲು ಉದ್ಯಮಿಗಳು ಉತ್ಸುಕತೆ ತೋರುತ್ತಿದ್ದಾರೆ. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದಲ್ಲೂ ಬಹುದೊಡ್ಡ ಪ್ರಗತಿ ಸಾಧಿಸುತ್ತಿದ್ದೇವೆ. ಐದು ವರ್ಷಗಳಿಂದ ಇದೇ ಹುಬ್ಬಳ್ಳಿಯ ಇನ್ಫೊಸಿಸ್ ಕ್ಯಾಂಪಸ್ ನಲ್ಲಿಯೇ ಎಐ ತಂತ್ರಜ್ಞಾನ ಅಭಿವೃದ್ಧಿಯಾಗುತ್ತಿದೆ. ಪ್ರತಿ ಕ್ಷೇತ್ರದಲ್ಲೂ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ಆದರೆ, ಯಾವುದೇ ಪ್ರಗತಿ ಆಗಿಲ್ಲ ಎನ್ನುವಂತೆ ವಿರೋಧ ಪಕ್ಷಗಳು ಟೀಕಿಸುತ್ತಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮಾತನಾಡಿ, 'ಬಿಯಾಂಡ್ ಬೆಂಗಳೂರು ಕಲ್ಪನೆಯಂತೆ ಹುಬ್ಬಳ್ಳಿಯೂ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿಯತ್ತ ಸಾಗಬೇಕು. ಅದಕ್ಕೆ ಪೂರಕ ವಾತಾವರಣ ಸಹ ಇಲ್ಲಿದ್ದು, ಉದ್ಯಮಗಳು ಇಲ್ಲಿ ಕಾರ್ಯಾರಂಭ ಮಾಡಬೇಕು. ಈ ನಿಟ್ಟಿನಲ್ಲಿ ಇನ್ಫೊಸಿಸ್ ಸಾಕಷ್ಟು ಕೊಡುಗೆ ನೀಡುತ್ತಿದೆ' ಎಂದರು.

'ಇನ್ಫೊಸಿಸ್ ಹುಬ್ಬಳ್ಳಿ ಕ್ಯಾಂಪಸ್‌ನಲ್ಲಿ ಉದ್ಯೋಗಿಗಳ ಸಂಖ್ಯೆ ಒಂದು ಸಾವಿರ ತಲುಪಿದ್ದು, ಉತ್ತರ ಕರ್ನಾಟಕ ಭಾಗದಲ್ಲಿ ತನ್ನ ವ್ಯಾಪ್ತಿ ವಿಸ್ತರಿಸಿಕೊಂಡಿದೆ. ಸ್ಥಳೀಯ ಪ್ರತಿಭಾವಂತರಿಗೆ ಎಐ ಮತ್ತು ಸೈಬರ್ ಭದ್ರತೆಯಂತಹ ನೂತನ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಲು ಸಹಕಾರಿಯಾಗಿದೆ. ಇದು ಬೆಂಗಳೂರಿನ ಕ್ಯಾಂಪಸ್ ಮೀರಿಸುವಷ್ಟು ದೊಡ್ಡದಾಗಿ ಬೆಳೆಯಬೇಕು' ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭುವನೇಶ ಪಾಟೀಲ, ಇನ್ಫೊಸಿಸ್ ಕಾರ್ಯಕಾರಿ ಉಪಾಧ್ಯಕ್ಷ ರಜನೀಶ ಮಾಳವೀಯ, ಸುನೀಲಕುಮಾರ ಧಾರೇಶ್ವರ ಇದ್ದರು.



ಹುಬ್ಬಳ್ಳಿಯ ಹೊರವಲಯದಲ್ಲಿರುವ ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಗತಿಗೆ ಶ್ರಮಿಸಿದ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ಸಚಿವರಾದ ಪ್ರಿಯಾಂಕ್ ಖರ್ಗೆ, ಎಂ.ಬಿ. ಪಾಟೀಲ ಪಾಲ್ಗೊಂಡಿದ್ದರು

> **ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯವು ವರ್ಷಕ್ಕೆ ₹4.50 ಲಕ್ಷ ಕೋಟಿ ವ್ಯವಹಾರ ನಡೆಸುತ್ತಿದೆ. ಆಂಧ್ರ ಪ್ರದೇಶದ ವ್ಯವಹಾರ ₹2.50 ಲಕ್ಷ ಕೋಟಿಯಷ್ಟಿದೆ**
> **ಪ್ರಿಯಾಂಕ್ ಖರ್ಗೆ**
> ಮಾಹಿತಿ ತಂತ್ರಜ್ಞಾನ ಸಚಿವ

> **ಕೈಗಾರಿಕಾ ಕ್ಷೇತ್ರದಲ್ಲಿ ಎಐ-ಚಾಲಿತ ಡಿಜಿಟಲ್ ಪರಿಹಾರ ನೀಡುವಲ್ಲಿ ಈ ಹೊಸ ಲಿವಿಂಗ್ ಲ್ಯಾಬ್ ಮಹತ್ವದ ಹೆಜ್ಜೆಯಾಗಿದೆ. ಮೂಲಸೌಲದೊಂದಿಗೆ ಕೇಂದ್ರ ಸ್ಥಾಪನೆಯಾಗಿದೆ.**
> **ಸುನೀಲಕುಮಾರ್ ಧಾರೇಶ್ವರ್,** ಕಾರ್ಯನಿರ್ವಾಹಕ ಉಪಾಧ್ಯಕ್ಷ, ಇನ್ಫೊಸಿಸ್

'ನಮ್ಮ ಮೆಟ್ರೊ: ರಾಜ್ಯದ ನಿರ್ಲಕ್ಷ್ಯ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ವನ್ನು ಕೇಂದ್ರ ಸರ್ಕಾರವೊಂದೇ ನಿರ್ಮಿಸಿರುವಂತೆ ಬಿಜೆಪಿ ಬಿಂಬಿಸುತ್ತಿದೆ. ಬಿಜೆಪಿಯ ಶಾಸಕರು ಮತ್ತು ಸಂಸದರು ಯಾವುದೇ ನಾಚಿಕೆ ಇಲ್ಲದೇ ಸತ್ಯವನ್ನು ನಿರ್ಲಕ್ಷಿಸಿ ಈ ಕೆಲಸ ಮಾಡುತ್ತಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಟೀಕಿಸಿದ್ದಾರೆ.

ರಾಜ್ಯ ಸರ್ಕಾರವು ಬಿಎಂಆರ್‌ಸಿಎಲ್‌ನಲ್ಲಿ ಕೇಂದ್ರ ಸರ್ಕಾರಕ್ಕಿಂತ ಹೆಚ್ಚಿನ ಪಾಲನ್ನು ಹೊಂದಿದೆ. ಜಮೀನು ಒದಗಿಸುವುದು, ಒತ್ತುವರಿ ತೆರವುಗೊಳಿಸುವುದು, ಯೋಜನೆಗೆ ಅನುದಾನ ಒದಗಿಸುವುದನ್ನು ರಾಜ್ಯ ಸರ್ಕಾರ ಮಾಡಿದೆ ಎಂದು ಸಚಿವರು 'ಎಕ್ಸ್' ಖಾತೆಯಲ್ಲಿ ತಿಳಿಸಿದ್ದಾರೆ.

ನಮ್ಮ ಮೆಟ್ರೊ ಹಂತ 1ಕ್ಕೆ ಸಂಬಂಧಿಸಿದಂತೆ ಶೇ 30ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಿದೆ. ಕೇಂದ್ರ ಸರ್ಕಾರದ ಪಾಲು ಶೇ 25ರಷ್ಟು. ಉಳಿದಿದ್ದನ್ನು ಸಾಲ ಮೂಲಕ ಭರಿಸಲಾಗಿದೆ. ಹಂತ 2ಕ್ಕೆ ಸಂಬಂಧಿಸಿದಂತೆ ಶೇ 30ರಷ್ಟು ವೆಚ್ಚ ಮತ್ತು ಜಮೀನು ಸಹಿತ ಎಲ್ಲ ವೆಚ್ಚಗಳನ್ನು ರಾಜ್ಯ ಸರ್ಕಾರ ನೀಡಿದೆ. ಕೇಂದ್ರ ಸರ್ಕಾರ ಶೇ 20ರಷ್ಟು ಪಾಲು ನೀಡಿದೆ. ಉಳಿದವುಗಳನ್ನು ಸಾಲರೂಪದಲ್ಲಿ ಪಡೆಯಲಾಗಿದೆ. ಹಂತ 3ಕ್ಕೆ ಸಂಬಂಧಿಸಿ ಕರ್ನಾಟಕವು ಶೇ 20ರಷ್ಟು ಅನುದಾನ ಮತ್ತು ಜಮೀನು ವೆಚ್ಚವನ್ನು ಭರಿಸುತ್ತಿದೆ. ಕೇಂದ್ರ ಸರ್ಕಾರ ಶೇ 20ರಷ್ಟು ನೀಡಲಿದೆ ಎಂದು ವಿವರಿಸಿದ್ದಾರೆ.

ಕೇಂದ್ರ ಸರ್ಕಾರಕ್ಕಿಂತ ಅಧಿಕ ಮೊತ್ತವನ್ನು ರಾಜ್ಯ ಸರ್ಕಾರ ಪಾವತಿ ಮಾಡುತ್ತಿದ್ದರೂ 'ನಮ್ಮ ಮೆಟ್ರೊ' ಕೇವಲ ಕೇಂದ್ರ ಸರ್ಕಾರದ ಉಡುಗೊರೆ ಎಂದು ನಟಿಸುವ ಮೂಲಕ ಬಿಜೆಪಿ ರಾಜ್ಯವನ್ನು ಅವಮಾನಿಸುತ್ತಿದೆ. ಮೆಟ್ರೊ ಯಾವುದೇ ಪಕ್ಷಕ್ಕೆ ಸೇರಿದ್ದಲ್ಲ, ಜನರಿಗೆ ಸೇರಿದ್ದು ಎಂದು ಹೇಳಿದ್ದಾರೆ.

'ಕಾಂಗ್ರೆಸ್ ಕಿತ್ತೊಗೆಯಲಿದ್ದಾರೆ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಮತದಾರರು ನೂರಕ್ಕೆ ನೂರರಷ್ಟು ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲಿದ್ದಾರೆ' ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.


ನಿಖಿಲ್

ಜೆಡಿಎಸ್ ಹಮ್ಮಿಕೊಂಡಿದ್ದ ಸದಸ್ಯತ್ವ ನೋಂದಣಿ ಅಭಿಯಾನ ಹಾಗೂ ಸಂಘಟನಾ ಪ್ರವಾಸವನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಕಳೆದ ಲೋಕಸಭಾ ಚುನಾವಣೆಯಲ್ಲಿ 151 ವಿಧಾನಸಭಾ ಕ್ಷೇತ್ರಗಳಲ್ಲಿ ಮೈತ್ರಿ ಅಭ್ಯರ್ಥಿಗಳು ಮುನ್ನಡೆ ಸಾಧಿಸಿದ್ದಾರೆ. ಇದು ನಮ್ಮ ಗೆಲುವಿಗೆ ದಿಕ್ಸೂಚಿಯಾಗಿದೆ. ಆದ್ದರಿಂದ ಯಾರೂ ಹತಾಶರಾಗದೆ ಇಂದಿನಿಂದಲೇ ಸಂಘಟನೆಯಲ್ಲಿ ಕಾರ್ಯ ಪ್ರವೃತ್ತರಾಗಿ' ಎಂದರು.

'ಬೆಂಗಳೂರಿನ ಕೊಳಚೆ ನೀರನ್ನು ವೃಷಭಾವತಿ ಯೋಜನೆ ಮೂಲಕ ಕೆರೆಗಳಿಗೆ ತುಂಬಿಸುವ ಯೋಜನೆಯನ್ನು ಕಾಂಗ್ರೆಸ್ ಹಮ್ಮಿಕೊಂಡಿದೆ. ಇದರ ವಿರುದ್ಧ ಹೋರಾಟ ರೂಪಿಸುತ್ತೇವೆ' ಎಂದರು.

ಇದೇ ವೇಳೆ ನಗರಸಭೆ ವ್ಯಾಪ್ತಿಯ ಯುವ ಘಟಕದ ಅಧ್ಯಕ್ಷರಾಗಿ ವಿಷ್ಣು, ವಕ್ತಾರರಾಗಿ ಕನಕರಾಜು, ತಾಲ್ಲೂಕು ವಿದ್ಯಾರ್ಥಿ ಘಟಕದ ಅಧ್ಯಕ್ಷರನ್ನಾಗಿ ಸಿ.ಪಾಲ್ಯಾತೀಥ ಅವರನ್ನು ನೇಮಿಸಿ, ನೇಮಕಾತಿ ಪತ್ರ ನೀಡಿದರು.


ಕಾರ್ಯಕ್ರಮಕ್ಕೂ ಮುನ್ನ ಚೌಡೇಶ್ವರಿ ದೇವಸ್ಥಾನದಿಂದ ವೇದಿಕೆವರೆಗೆ ಬೈಕ್ ರ‍್ಯಾಲಿ ಮೂಲಕ ನಿಖಿಲ್ ಅವರನ್ನು ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು.

ಮಾಜಿ ಶಾಸಕರಾದ ಕೆ.ಶ್ರೀನಿವಾಸಮೂರ್ತಿ, ಎ.ಮಂಜು, ಇ.ಕೃಷ್ಣಪ್ಪ, ಬಮೂಲ್ ನಿರ್ದೇಶಕ ಭವಾನಿ ಶಂಕರ್ ಬೈರೇಗೌಡ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಟಿ.ತಿಮ್ಮರಾಯಪ್ಪ, ನಗರಸಭೆ ಸದಸ್ಯ ಆಂಜನಮೂರ್ತಿ ಪಾಪಣ್ಣಿ, ಮುಖಂಡಾದ ಎಸ್. ಎಂಟಿ ಪ್ರಕಾಶ್, ಎಸ್.ಮಂಜುನಾಥ್, ಸುರೇಂದ್ರ ಇದ್ದರು.

'ಇದು ವೇಗದ ಆಡಳಿತದ ಯುಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನನ್ನನ್ನು ಅನಗತ್ಯ ಆತುರದಲ್ಲಿರುವ ಯುವಕ ಎಂದು ಕರೆದಿದ್ದಾರೆ. ಆದರೆ, ಇದು ನಿಧಾನಗತಿಯ ರಾಜಕೀಯದ ಯುಗ ವಲ್ಲ. ವೇಗದ ಆಡಳಿತದ ಯುಗ' ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.


ತೇಜಸ್ವಿ ಸೂರ್ಯ

'ಹಳದಿ ಮೆಟ್ರೊ ಮಾರ್ಗವನ್ನು ಬೇಗನೆ ಆರಂಭಿಸಲು ನಾನು ಪದೇ ಪದೇ ಒತ್ತಾಯಿಸಿರುವುದರಿಂದ ಆತುರದ ಯುವಕ ಎಂದು ಅವರು ನನ್ನನ್ನು ಕರೆದಿದ್ದಾರೆ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಹೌದು, ನನಗೆ ಆತುರವಿದೆ. ಏಕೆಂದರೆ ಸಾರ್ವಜನಿಕ ಮೂಲಸೌಕರ್ಯಗಳನ್ನು ಪೂರ್ಣಗೊಳಿಸಲು ದಶಕಗಳ ಅವಧಿ ಬೇಕೆಂಬುದನ್ನು ನಾನು ನಂಬುವುದಿಲ್ಲ. 2 ಕಿ.ಮೀ ಫ್ಲೈಓವರ್‌ಗೆ ಎಂಟೂವರೆ ವರ್ಷ ಬೇಕೆಂಬುದನ್ನು ನಾನು ಒಪ್ಪುವುದಿಲ್ಲ. ನಾನು ಬದಲಾವಣೆಯನ್ನು ಇಂದೇ ಬಯಸುವ ಭಾರತೀಯರ ಪೀಳಿಗೆಯನ್ನು ಪ್ರತಿನಿಧಿಸುತ್ತೇನೆ. ಯಾವುದೇ ಅನಿರ್ದಿಷ್ಟ ಭವಿಷ್ಯದಲ್ಲಿ ಅಲ್ಲ' ಎಂದಿದ್ದಾರೆ.

'ನಮ್ಮ ಬೆಂಗಳೂರು ಸಂಚಾರ ದಟ್ಟಣೆಯ ಕಾರಣದಿಂದ ಉಸಿರುಗಟ್ಟುತ್ತಿರುವುದರಿಂದ ನನಗೆ ಆತುರವಿದೆ. ಏಕೆಂದರೆ ಪ್ರಯಾಣಿಕರು ಗಂಟೆಗಟ್ಟಲೆ ಟ್ರಾಫಿಕ್‌ನಲ್ಲಿ ಸಿಲುಕಿಕೊಳ್ಳುತ್ತಾರೆ. ಅಲ್ಲಿ ಸಮಸ್ಯೆಗೆ ಸಿಲುಕುವವರು ಸಾಮಾನ್ಯ ನಾಗರಿಕರೇ ವಿನಾ ಮಂತ್ರಿಗಳಲ್ಲ. ನನ್ನ ವಯಸ್ಸಿನ ಬಗ್ಗೆ ವೈಯಕ್ತಿಕವಾಗಿ ವ್ಯಂಗ್ಯವಾಡುವ ಬದಲು, ಹಳದಿ ಮಾರ್ಗವನ್ನು ತ್ವರಿತಗೊಳಿಸಲು ಅವರು ಮಾಡಿದ ಒಂದೇ ಒಂದು ನಿರ್ದಿಷ್ಟ ಪರಿಹಾರದ ಬಗ್ಗೆ ತಿಳಿಸಲಿ' ಎಂದಿದ್ದಾರೆ.

'ಭೂಸ್ವಾಧೀನ ಸಾಧ್ಯವಾಗದೇ ಯೋಜನೆ ನಿಂತಾಗ ಅವರು ಎಲ್ಲಿದ್ದರು? ಪೂರ್ಣಾವಧಿಯ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗಾಗಿ ಹೋರಾಡುತ್ತಿದ್ದಾಗ ಅವರು ಎಲ್ಲಿದ್ದರು? ಯೋಜನೆಯ ಸಮಯಕ್ಕೆ ಸರಿಯಾಗಿ ರೋಲಿಂಗ್ ಸ್ಟಾಕ್ ಅನ್ನು ತಲುಪಿಸಲು ನಾವು ವಿವಿಧ ಸಚಿವಾಲಯಗಳು ಮತ್ತು ತಯಾರಕರೊಂದಿಗೆ ಸಮನ್ವಯ ಸಾಧಿಸಬೇಕಾದ ಸಂದರ್ಭದಲ್ಲಿ ಅವರು ಎಲ್ಲಿದ್ದರು' ಎಂದು ತೇಜಸ್ವಿ ಪ್ರಶ್ನಿಸಿದ್ದಾರೆ.

'ಉದ್ಘಾಟನೆಯ ದಿನಾಂಕ ನಿಗದಿಗೆ ಒತ್ತಾಯಿಸಿ, ನಾನು ನಾಗರಿಕರ ಮೆರವಣಿಗೆಯನ್ನು ಮುನ್ನಡೆಸಿದಾಗ ಅವರು ಎಲ್ಲಿದ್ದರು? ಪ್ರಧಾನಿಯವರು ಉದ್ಘಾಟನೆಗೆ ಬರುವ ಕೆಲವು ದಿನಗಳ ಮುಂಚೆ ಮಾಧ್ಯಮಗಳ ಎದುರು ಸರ್ಕಸ್ ಮಾಡುವುದು ಎಷ್ಟು ಸರಿ' ಎಂದು ಅವರು ಕಾಲೆಳೆದಿದ್ದಾರೆ.

ಪರ್ಮನೆಂಟ್ ಹಾನಿ ಮಾಡುತ್ತಿರುವ ಎಮರ್ಜೆನ್ಸಿ ಸೂರ್ಯ: ದ್ವಾರಕನಾಥ್

'ನಾನು ಅರ್ಜೆಂಟ್ ಯುಗದವನು, ಕಾಯಲು ಸಮಯವಿಲ್ಲ. ಕೂಡಲೇ ಮೆಟ್ರೊ ಹಳದಿ ಮಾರ್ಗ ಉದ್ಘಾಟನೆಯಾಗಬೇಕು ಎಂದು ಸಂಸದ ತೇಜಸ್ವಿ ಸೂರ್ಯ ಅವರು ಇದೇ ರೀತಿ ಅರ್ಜೆಂಟ್ ಮಾಡಿ ವಿಮಾನದ ಎಮರ್ಜೆನ್ಸಿ ಎಕ್ಸಿಟ್ ತೆಗೆಯಲು ಹೋಗಿ ನೂರಾರು ಪ್ರಯಾಣಿಕರ ಪ್ರಾಣ ಒತ್ತೆ ಇಟ್ಟಿದ್ದರು' ಎಂದು ಕೆಪಿಸಿಸಿ ವಕ್ತಾರ ಶಂಕರ ಗುಹಾ ದ್ವಾರಕನಾಥ್ ಟೀಕಿಸಿದ್ದಾರೆ.

ದೇಶದಲ್ಲಿ 2021ರಿಂದ 2025ರವರೆಗೆ 170 ಸೇತುವೆಗಳು ಕುಸಿದಿವೆ. ಸುಮಾರು 250 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಗುಜರಾತಿನಲ್ಲಿ ಸೇತುವೆ ಕುಸಿತವಾಗಿ 160 ಜನರು ಪ್ರಾಣ ಕಳೆದುಕೊಂಡಿರುವುದು ಪ್ರಮುಖವಾದುದು. ಇದೆಲ್ಲವೂ ಅರ್ಜೆಂಟಾಗಿ ಮಾಡಿದ ಕೆಲಸದ ಪ್ರಭಾವ ಎಂದು ಹೇಳಿಕೆ ನೀಡಿದ್ದಾರೆ.

ಮೆಟ್ರೊ ವಿಚಾರದಲ್ಲಿ ಆತುರ ಬೇಡ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಸುಮಾರು 40 ವರ್ಷಗಳ ರಾಜಕೀಯ ಅನುಭವವಿದೆ. ಒಮ್ಮಿಂದೊಮ್ಮೆಲೆ ಮೆಟ್ರೊ ಸಂಚಾರ ಆರಂಭಿಸಿ ಅಪಾಯ ಉಂಟು ಮಾಡುವ ಬದಲು ಪ್ರಾಯೋಗಿಕವಾಗಿ ಪ್ರಯಾಣ ಮಾಡಿ ಅವರು ಸುರಕ್ಷತೆ ಖಚಿತಪಡಿಸಿಕೊಂಡಿದ್ದಾರೆ ಎಂದಿದ್ದಾರೆ.

'ಸರ್ಕಾರದಿಂದ ಜನರಿಗೆ ವಂಚನೆ'

ಬೆಂಗಳೂರು: 'ರಾಜ್ಯ ಸರ್ಕಾರ 'ಎ' ಖಾತಾ 'ಬಿ' ಖಾತಾ ಎಂದು ರಾಜಧಾನಿಯ ಜನರನ್ನು ವಂಚಿಸುತ್ತಿದೆ' ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ಆರೋಪಿಸಿದರು.

ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಈ ಬಗ್ಗೆ ಮನವಿ ಪತ್ರ ಸಲ್ಲಿಸಿದ ಅವರು, 'ತಕ್ಷಣವೇ ಖಾತಾ ವಂಚನೆಯನ್ನು ನಿಲ್ಲಿಸಬೇಕು. ಬಿ ಖಾತಾದಿಂದ ಎ ಖಾತಾ ಮಾಡುವ ಕ್ರಮಕ್ಕೆ ಕಾನೂನಿನಲ್ಲಿಯೇ ಅವಕಾಶ ಇಲ್ಲ. ಕೇವಲ ಜನರ ಹಣ ಲೂಟಿ ಮಾಡಲಿಕ್ಕಾಗಿಯೇ ಇದನ್ನು ಮಾಡಲಾಗುತ್ತಿದೆ' ಎಂದು ದೂರಿದರು.

ಮತದಾರರ ಹಕ್ಕಿನ ರಕ್ಷಣೆ ರಾಜಕೀಯ ಪಕ್ಷಗಳ ಕರ್ತವ್ಯ: ಡಿ.ಕೆ.ಶಿವಕುಮಾರ್

ರಾಹುಲ್ ನೇತೃತ್ವದಲ್ಲಿ ಪ್ರತಿಭಟನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತ ಕಳ್ಳತನ ವಿಚಾರವನ್ನು ನಮ್ಮ ಹೈಕಮಾಂಡ್ ನಾಯಕರು ಗಂಭೀರವಾಗಿ ಪರಿಗಣಿಸಿದ್ದು, ಮತದಾರರ ಹಕ್ಕಿನ ರಕ್ಷಣೆ ಮಾಡಬೇಕಾಗಿರುವುದು ರಾಜಕೀಯ ಪಕ್ಷಗಳ ಕರ್ತವ್ಯ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಈ ವಿಚಾರ ಮುಂದಿಟ್ಟುಕೊಂಡು ರಾಹುಲ್ ಗಾಂಧಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ (ಆಗಸ್ಟ್ 8) ಪ್ರತಿಭಟನಾ ಸಮಾವೇಶ ಹಮ್ಮಿಕೊಂಡಿದ್ದೇವೆ. ಚುನಾವಣೆ ಸಮಯದಲ್ಲಿ ಆಗಿರುವ ಅಕ್ರಮಗಳ ಬಗ್ಗೆ ದಾಖಲೆಗಳ ಸಮೇತ ಚುನಾವಣಾ ಆಯೋಗಕ್ಕೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡುತ್ತೇವೆ' ಎಂದರು.

'ಆಯೋಗಕ್ಕೆ ಯಾವ ದಾಖಲೆಗಳನ್ನು ನೀಡುತ್ತೀರಿ' ಎಂದು ಕೇಳಿದಾಗ, 'ಈ ವಿಚಾರವನ್ನು ನಾನು ಬಹಿರಂಗಪಡಿಸುವುದಿಲ್ಲ. ಇದು ರಾಷ್ಟ್ರೀಯ ವಿಚಾರ ಆಗಿರುವ ಕಾರಣ ನಮ್ಮ ನಾಯಕರು ಮಾಧ್ಯಮಗೋಷ್ಠಿಯಲ್ಲಿ ಮಾಹಿತಿ ನೀಡಲಿದ್ದಾರೆ' ಎಂದರು.

'ಮೆರವಣಿಗೆ ನಡೆಯಲಿದೆಯೇ' ಎಂಬ ಪ್ರಶ್ನೆಗೆ, 'ಸ್ವಾತಂತ್ರ್ಯ ಉದ್ಯಾನದಲ್ಲಿ ಕಾನೂನು ಚೌಕಟ್ಟಿನಲ್ಲಿ ಪ್ರತಿಭಟನೆ ನಡೆಯಲಿದೆ' ಎಂದಷ್ಟೇ ಹೇಳಿದರು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಡಿ.ಕೆ ಶಿವಕುಮಾರ್ ಅವರು ಪ್ರತಿಭಟನಾ ಸಮಾವೇಶ ನಡೆಯಲಿರುವ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು.

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ, ಸಚಿವರಾದ ಎಚ್.ಕೆ. ಪಾಟೀಲ, ಕೆ.ಜೆ. ಜಾರ್ಜ್, ಕೆ.ಎಚ್. ಮುನಿಯಪ್ಪ, ರಾಮಲಿಂಗಾ ರೆಡ್ಡಿ, ಕೃಷ್ಣ ಬೈರೇಗೌಡ, ಡಾ. ಶರಣ್ ಪ್ರಕಾಶ್ ಪಾಟೀಲ, ಕೆ. ವೆಂಕಟೇಶ್, ಎನ್.ಎಸ್. ಬೋಸರಾಜು, ಡಾ.ಎಂ.ಸಿ. ಸುಧಾಕರ್, ಬೈರತಿ ಸುರೇಶ್, ರಹೀಂ ಖಾನ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ದೆಹಲಿಯಲ್ಲಿ ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಶಾಸಕರು, ಪಕ್ಷದ ಮುಖಂಡರು ಈ ಸಭೆಯಲ್ಲಿದ್ದರು.

ರಾಷ್ಟ್ರೀಯ ಮಟ್ಟದಲ್ಲಿ ಕಿಚ್ಚು ಹೆಚ್ಚಾಗಬೇಕು: ಸಿ.ಎಂ

'ಚುನಾವಣಾ ಆಯೋಗದ ವಿರುದ್ಧ ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ರಾಹುಲ್ ಗಾಂಧಿಯವರ ನೇತೃತ್ವದಲ್ಲೇ ಈ ಹೋರಾಟ ನಡೆಯಲಿದೆ. ರಾಷ್ಟ್ರೀಯ ಮಟ್ಟದಲ್ಲಿ ಕಿಚ್ಚು ಹೆಚ್ಚಾಗಬೇಕು' ಎಂದು ಪಕ್ಷದ ಮುಖಂಡರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪ್ರತಿಭಟನಾ ಸಭೆಗೆ ತಯಾರಿ ಮಾಡಿಕೊಳ್ಳುವ ಉದ್ದೇಶದಿಂದ ಕೆಪಿಸಿಸಿಯ ಭಾರತ್ ಜೋಡೊ ಭವನದಲ್ಲಿ ಬುಧವಾರ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, 'ಇತರೆ ರಾಜ್ಯಗಳಲ್ಲೂ ತಲ್ಲಣ ಮೂಡಿಸಬೇಕು. ಹೀಗಾಗಿ, ನಾವೆಲ್ಲರೂ ಪ್ರತಿಭಟನೆ ಯಶಸ್ವಿಗೊಳಿಸಬೇಕು' ಎಂದು

'ವಹಿಸಿರುವ ಕೆಲಸವನ್ನು ಎಲ್ಲರೂ ಸರಿಯಾಗಿ ನಿಭಾಯಿಸುವ ಜೊತೆಗೆ, ಹೆಚ್ಚಿನ ಸಂಖ್ಯೆಯಲ್ಲಿ ಜನರು ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಮಾಡಬೇಕು' ಎಂದೂ ಸಲಹೆ ನೀಡಿದರು.


> **ಸ್ವಾತಂತ್ರ್ಯ ಉದ್ಯಾನದಲ್ಲಿ ಐತಿಹಾಸಿಕ ಪ್ರತಿಭಟನೆ ನಡೆಯಲಿದೆ. ಇಡೀ ದೇಶಕ್ಕೆ ಒಂದು ಸಂದೇಶ ಹೋಗಲಿದೆ. ಬೆಂಗಳೂರು ಸುತ್ತಮುತ್ತ ಬಿಟ್ಟು ಇತರ ವಿಧಾನಸಭಾ ಕ್ಷೇತ್ರಗಳಿಂದ ಪಕ್ಷದ ತಲಾ 50 ನಾಯಕರನ್ನು ಆಹ್ವಾನಿಸಿದ್ದೇವೆ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

> **ಆಗಸ್ಟ್ 8ರಂದು ಮತ ಹಕ್ಕು ಸಮಾವೇಶ ಆಯೋಜಿಸಿದ್ದೇವೆ. ರಾಷ್ಟ್ರವ್ಯಾಪಿ ಈ ಹೋರಾಟ ಮಾಡಲಿದ್ದೇವೆ. ಚುನಾವಣಾ ಆಯೋಗದ ಕ್ರಮವನ್ನು ಪ್ರಶ್ನೆ ಮಾಡುತ್ತೇವೆ**
> **ರಣದೀಪ್ ಸಿಂಗ್ ಸುರ್ಜೇವಾಲಾ,** ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಉಚಿತ ಔಷಧ ನಿರಾಕರಣೆ ತಡೆಯಲು ಜನೌಷಧ ಕೇಂದ್ರಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಆಸ್ಪತ್ರೆಗಳಲ್ಲಿ ವಿತರಿಸುವ ಉಚಿತ ಔಷಧಗಳ ನಿರಾಕರಿಸುವುದನ್ನು ತಡೆಯುವ ಸಲುವಾಗಿ, 184 ಜನೌಷಧ ಕೇಂದ್ರಗಳಿಗೆ ಮಾತ್ರ ನಿರ್ಬಂಧ ವಿಧಿಸಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟನೆ ನೀಡಿದ್ದಾರೆ.


ದಿನೇಶ್ ಗುಂಡೂರಾವ್

ಈ ಬಗ್ಗೆ ಅವರು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರಿಗೆ ಪತ್ರ ಬರೆದಿದ್ದಾರೆ. 'ರಾಜ್ಯದಲ್ಲಿ 1,417 ಜನೌಷಧ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಎಲ್ಲಾ ಜನೌಷಧ ಕೇಂದ್ರಗಳನ್ನು ಮುಚ್ಚಿಸಿಲ್ಲ. ಬದಲಾಗಿ, ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಕೇಂದ್ರಗಳ ಕಾರ್ಯನಿರ್ವಹಣೆಗೆ ಮಾತ್ರ ನಿರ್ಬಂಧ ವಿಧಿಸಲು ತೀರ್ಮಾನಿಸಲಾಗಿದೆ. ದೇಶದಲ್ಲಿ ಅಧಿಕ ಜನೌಷಧ ಕೇಂದ್ರಗಳನ್ನು ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಅಗ್ರ ಸ್ಥಾನದಲ್ಲಿದೆ' ಎಂದು ಹೇಳಿದ್ದಾರೆ.

'ಔಷಧಗಳನ್ನು ಖರೀದಿಸಲು ರೋಗಿಗಳು ಭರಿಸುವ ವೆಚ್ಚವನ್ನು ಕಡಿಮೆ ಮಾಡಲು ಸರ್ಕಾರ ಈ ಕ್ರಮ ಕೈಗೊಂಡಿದೆ. ಇದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆ ಪಡೆಯುವ ಬಡ ರೋಗಿಗಳಿಗೆ ಅನುಕೂಲವಾಗುತ್ತದೆ' ಎಂದಿದ್ದಾರೆ.

'ಸರ್ಕಾರಿ ಆಸ್ಪತ್ರೆಗಳ ಆವರಣಗಳ ಹೊರಗಿರುವ ಜನೌಷಧ ಕೇಂದ್ರಗಳನ್ನು ನಿರ್ಬಂಧಿಸುತ್ತಿಲ್ಲ. ಜನರು ತಮ್ಮ ಆಯ್ಕೆಯಂತೆ ಈ ಕೇಂದ್ರಗಳಿಗೆ ಭೇಟಿ ನೀಡಿ, ಔಷಧ ಪಡೆಯಲು ಸ್ವತಂತ್ರರಾಗಿದ್ದಾರೆ' ಎಂದು ಸ್ಪಷ್ಟಪಡಿಸಿದ್ದಾರೆ.

'ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ಮೂಲಕ ಎಲ್ಲ ಅಗತ್ಯ ಔಷಧಗಳನ್ನು ಸರ್ಕಾರಿ ಆಸ್ಪತ್ರೆಗಳಿಗೆ ನಿಯಮಿತವಾಗಿ ಪೂರೈಸಲಾಗುತ್ತಿದೆ. ಆಸ್ಪತ್ರೆಗಳಿಗೆ ಅಗತ್ಯ ಅನುದಾನವನ್ನೂ ಒದಗಿಸಲಾಗಿದ್ದು, ಯಾವುದೇ ಔಷಧಗಳ ಕೊರತೆ ಉಂಟಾದಲ್ಲಿ ಸ್ಥಳೀಯವಾಗಿ ಔಷಧಗಳನ್ನು ಖರೀದಿಸಲು ಸೂಚನೆ ನೀಡಲಾಗಿದೆ' ಎಂದಿದ್ದಾರೆ.

ನಿಮ್ಮನ್ನು ಶ್ರೀಮಂತವಾಗಿಸುವುದು ನಿಮ್ಮ ಸಂಬಳ ಅಲ್ಲ. ಸಂಬಳವನ್ನು ಖರ್ಚು ಮಾಡುವ ಬಗೆಯು ನಿಮ್ಮನ್ನು ಶ್ರೀಮಂತನನ್ನಾಗಿಸುತ್ತದೆ
ಚಾರ್ಲ್ಸ್ ಎ. ಜಾಫೆ, ಬರಹಗಾರ

ದುಡ್ಡಿನಂಥಾ ಮಾತು

ಫ್ಲೆಕ್ಸಿಕ್ಯಾಪ್ ಫಂಡ್: ಹಣ ಏಕೆ ಇತ್ತ ಹರಿಯುತ್ತಿದೆ?



ಷೇರುಪೇಟೆ ಎಂಬುದು ಚಲನಶೀಲವಾದ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಹಣವನ್ನು ತೊಡಗಿಸಿದವರು ಚಲನಶೀಲವಾಗಿ ಸ್ಪಂದಿಸುವ ಬಗೆಯನ್ನೂ ರೂಢಿಸಿಕೊಳ್ಳಬೇಕು. ಮ್ಯೂಚುವಲ್ ಫಂಡ್‌ಗಳ ಮೂಲಕ ಹಣ ತೊಡಗಿಸಿದವರಿಗೆ ಆ ರೀತಿ ಮಾಡುವುದಕ್ಕೆ ಇರುವ ಒಂದು ಮಾರ್ಗವೆಂದರೆ ಫ್ಲೆಕ್ಸಿಕ್ಯಾಪ್ ಫಂಡ್‌ಗಳು. ಈ ಬಗೆಯ ಫಂಡ್‌ಗಳ ಶಕ್ತಿಯನ್ನು ಇಲ್ಲಿ ತಜ್ಞರು ವಿವರಿಸಿದ್ದಾರೆ.

• ಪ್ರಶಾಂತ ಕೃಷ್ಣ

2025ರ ಮೊದಲಾರ್ಧದಲ್ಲಿ ಫ್ಲೆಕ್ಸಿಕ್ಯಾಪ್ ಮ್ಯೂಚುವಲ್ ಫಂಡ್‌ಗಳು ₹30 ಸಾವಿರ ಕೋಟಿಗೂ ಹೆಚ್ಚಿನ ಹೂಡಿಕೆಯನ್ನು ಸೆಳೆದಿವೆ. ಇದೊಂದು ಗಮನಾರ್ಹ ಮೈಲಿಗಲ್ಲು. ಇದು ಹೂಡಿಕೆದಾರರ ಆಯ್ಕೆಗಳು ಬದಲಾಗುತ್ತಿರುವುದನ್ನು ಹೇಳುತ್ತಿದೆ. ಈ ಬಗೆಯ ಫಂಡ್‌ಗಳಿಗೆ ಇಷ್ಟೊಂದು ದೊಡ್ಡ ಮೊತ್ತವು ಹರಿದುಬಂದಿರುವುದು, ಮಾರುಕಟ್ಟೆಗಳು ಚಲನಶೀಲವಾಗಿರುವ ಈ ಹೊತ್ತಿನಲ್ಲಿ ಬದಲಾವಣೆಗೆ ಒಗ್ಗಿಕೊಳ್ಳುವ ಹಾಗೂ ನಮ್ಯವಾದ ಹೂಡಿಕೆ ತಂತ್ರಗಾರಿಕೆಯ ಮಹತ್ವವನ್ನು ಹೂಡಿಕೆದಾರರು ಗುರುತಿಸುತ್ತಿದ್ದಾರೆ ಎಂಬುದನ್ನೂ ಸೂಚಿಸುತ್ತಿದೆ.

ಮಾರುಕಟ್ಟೆಯಲ್ಲಿ ಹಣದ ಹರಿವು ಒಂದು ವಲಯದಿಂದ ಇನ್ನೊಂದು ವಲಯದತ್ತ ಮತ್ತೆ ಮತ್ತೆ ಸಾಗುತ್ತಿರುವಾಗ, ಜಿಗುಟಾದ ಹೂಡಿಕೆಯ ಕಾರ್ಯತಂತ್ರವು ಸೂಕ್ತವಾಗಲಿಕ್ಕಿಲ್ಲ ಎಂಬುದು ಹೂಡಿಕೆದಾರರಿಗೆ ಅರ್ಥವಾಗುತ್ತಿರುವ ಕಾರಣಕ್ಕೂ ಫ್ಲೆಕ್ಸಿಕ್ಯಾಪ್ ಫಂಡ್‌ಗಳತ್ತ ಹೆಚ್ಚಿನ ಹಣ ಹರಿದುಬರುತ್ತಿರಬಹುದು.

ಮಾರುಕಟ್ಟೆಯಲ್ಲಿ ಈಗ ಏನಾಗುತ್ತಿದೆ ಎಂಬುದರತ್ತ ಒಮ್ಮೆ ಗಮನ ಹರಿಸೋಣ. 2025ರ ಮೊದಲ ಆರು ತಿಂಗಳಲ್ಲಿ ಲಾರ್ಜ್‌ಕ್ಯಾಪ್ ಷೇರುಗಳು (ನಿಫ್ಟಿ 100ರಲ್ಲಿ ಇರುವವು) ಶೇಕಡ 6.98ರಷ್ಟು ಲಾಭ ನೀಡಿದವು. ಆದರೆ ಇದರಲ್ಲಿ ಹೇಳಿಕೊಳ್ಳುವಂಥದ್ದು ಏನೂ ಇಲ್ಲ. ಇದೇ ಅವಧಿಯಲ್ಲಿ ಮಿಡ್‌ಕ್ಯಾಪ್ ಷೇರುಗಳು ಶೇ 4.25ರಷ್ಟು ಲಾಭ ನೀಡಿದವು. ಸ್ಮಾಲ್‌ಕ್ಯಾಪ್ ಷೇರುಗಳು ಶೇ 0.83ರಷ್ಟು ಲಾಭವನ್ನಷ್ಟೇ ಕೊಟ್ಟವು.

ಈ ಅವಧಿಯಲ್ಲಿ ಸ್ಮಾಲ್‌ಕ್ಯಾಪ್ ಮ್ಯೂಚುವಲ್ ಫಂಡ್‌ನಲ್ಲಿ ಹೆಚ್ಚಿನ ಹಣ ತೊಡಗಿಸಿದ್ದವರು ಆಗಿರುವ ಗಾಯಕ್ಕೆ ಈಗ ಮುಲಾಮು ಹಚ್ಚಿಕೊಳ್ಳುತ್ತಿರಬಹುದು. ಲಾರ್ಜ್‌ಕ್ಯಾಪ್ ಫಂಡ್‌ನಲ್ಲಿ ತೊಡಗಿಸಿದ್ದವರು ಖುಷಿಯಿಂದ ಬೀಗಬಹುದು. ಆದರೆ ಮುಂದೆ ಮಾರುಕಟ್ಟೆಯಲ್ಲಿ ಹಣ ಯಾವ ಕಡೆ ಹರಿಯಬಹುದು ಎಂಬುದನ್ನು ಅವರು ಗುರುತಿಸದೆ ಇರಬಹುದು.

ಆದರೆ, ಚೆನ್ನಾಗಿ ನಿರ್ವಹಣೆ ಕಾಣುತ್ತಿರುವ ಫ್ಲೆಕ್ಸಿಕ್ಯಾಪ್ ಫಂಡ್‌ನಲ್ಲಿ ಹಣ ತೊಡಗಿಸಿದರೆ? ಹಣವು ಮುಂದೆ ಯಾವುದೇ ಕಡೆ ಸಾಗಲಿ, ಅದರ ಲಾಭ ಪಡೆದುಕೊಳ್ಳಲು ಆ ಹೂಡಿಕೆದಾರ ಸಜ್ಜಾಗಿರುತ್ತಾನೆ. ಫ್ಲೆಕ್ಸಿಕ್ಯಾಪ್ ವರ್ಗದ ಒಂದು ಫಂಡ್ ಮಾರ್ಚ್‌ನಿಂದ ಜೂನ್‌ವರೆಗಿನ ಅವಧಿಯಲ್ಲಿ ಶೇ 24.33ರಷ್ಟು ಲಾಭ ನೀಡಿದೆ. ಇದೇ ವರ್ಗದ ಇನ್ನೊಂದು ಫಂಡ್ ಇದೇ ಅವಧಿಯಲ್ಲಿ ಶೇ 23.04ರಷ್ಟು ಲಾಭ ನೀಡಿದೆ. ಇವೆಲ್ಲ ಅದೃಷ್ಟದ ಬಲದಿಂದ ಆಗಿದ್ದಲ್ಲ. ಎಲ್ಲಿ ಅವಕಾಶ ಲಭ್ಯವಿತ್ತೋ ಅಲ್ಲಿ ಹಣವನ್ನು ತೊಡಗಿಸಿದ ನಿಧಿ ನಿರ್ವಾಹಕರ ಕಾರಣದಿಂದಾಗಿ ಈ ಪ್ರಮಾಣದ ಲಾಭ ಸಾಧ್ಯವಾಗಿದೆ.

ಈ ವರ್ಷದ ಮೇ ತಿಂಗಳಲ್ಲಿ ಫ್ಲೆಕ್ಸಿಕ್ಯಾಪ್ ಫಂಡ್‌ಗಳತ್ತ ಒಟ್ಟು ₹5,733 ಕೋಟಿ ಹೊಸ ಹೂಡಿಕೆ ಹರಿದುಬಂತು. ಅಂದರೆ ಈ ವರ್ಗದ ಫಂಡ್‌ಗಳಲ್ಲಿ ಹೂಡಿಕೆದಾರರ ಆಸಕ್ತಿ ಸ್ಥಿರವಾಗಿದೆ ಎಂಬುದನ್ನು ಇದು ತೋರಿಸುತ್ತಿದೆ. ಹಣದ ಹರಿವು ಈ ಫಂಡ್‌ಗಳತ್ತ ಸ್ಥಿರವಾಗಿ ಬರುತ್ತಿರುವುದು ಹೊಂದಾಣಿಕೆಯ ಹೂಡಿಕೆ ಕಾರ್ಯತಂತ್ರದ ಬಗ್ಗೆ ಸಾಂಸ್ಥಿಕ ಹೂಡಿಕೆದಾರರಲ್ಲಿ, ಸಣ್ಣ ಹೂಡಿಕೆದಾರರಲ್ಲಿ ವಿಶ್ವಾಸ ಇರುವುದನ್ನು ಹೇಳುತ್ತಿದೆ.

ಷೇರುಪೇಟೆಗಳು ಇಂದು ಹೆಚ್ಚು ಸಂಕೀರ್ಣವಾಗಿವೆ, ಈಗ ಪ್ರಾಮುಖ್ಯ ಪಡೆದಿರುವ ವಲಯವೊಂದು ಬಹುಬೇಗ ಆ ಸ್ಥಿತಿಯನ್ನು ಕಳೆದುಕೊಳ್ಳಬಹುದು. ಒಂದು ತ್ರೈಮಾಸಿಕದಲ್ಲಿ ತಂತ್ರಜ್ಞಾನ ವಲಯದ ಷೇರುಗಳು ಹೆಚ್ಚು ಲಾಭ ಕೊಡಬಹುದು. ನಂತರದ ತ್ರೈಮಾಸಿಕದಲ್ಲಿ ಆರೋಗ್ಯಸೇವಾ ವಲಯದ ಷೇರುಗಳು ಹೆಚ್ಚು ಲಾಭ ಕೊಡಬಹುದು. ನಿರ್ದಿಷ್ಟ ಪ್ರಮಾಣದ ಮಾರುಕಟ್ಟೆ ಬಂಡವಾಳದ ವಲಯಗಳಿಗೆ ನಿಶ್ಚಿತ ರೂಪದಲ್ಲಿ ಹಣ ತೊಡಗಿಸುವ ಸಾಂಪ್ರದಾಯಿಕ ಹೂಡಿಕೆ ಪದ್ಧತಿಯು ಈ ಬಗೆಯ ಬದಲಾವಣೆಗಳಿಂದಾಗಿ ಸಿಗುವ ಪ್ರಯೋಜನಗಳನ್ನು ಪರಿಣಾಮಕಾರಿಯಾಗಿ ಪಡೆದುಕೊಳ್ಳುವ ಸ್ಥಿತಿಯಲ್ಲಿ ಇರುವುದಿಲ್ಲ.

ಫ್ಲೆಕ್ಸಿಕ್ಯಾಪ್ ಫಂಡ್‌ಗಳನ್ನು ನಿರ್ವಹಿಸುತ್ತಿರುವವರ ಬಳಿ ಇಂದು ಹಿಂದಿನ ತಲೆಮಾರಿನ ನಿಧಿ ನಿರ್ವಾಹಕರು ಹೊಂದಿಲ್ಲದಿದ್ದ ಅವಕಾಶಗಳು ಇವೆ. ಫ್ಲೆಕ್ಸಿಕ್ಯಾಪ್ ಫಂಡ್ ನಿರ್ವಹಣೆ ಮಾಡುತ್ತಿರುವವರು ಹೂಡಿಕೆದಾರರ ಹಣವನ್ನು ಮಾರುಕಟ್ಟೆ ದತ್ತಾಂಶ, ಅರ್ಥ ವ್ಯವಸ್ಥೆಯಲ್ಲಿನ ಬದಲಾವಣೆ, ನಿರ್ದಿಷ್ಟ ವಲಯಗಳಿಗೆ ಸಂಬಂಧಿಸಿದ ಬೆಳವಣಿಗೆ ಆಧರಿಸಿ ತಕ್ಷಣವೇ ಬೇರೆಡೆ ತೊಡಗಿಸಬಲ್ಲರು. ಈಚೆಗೆ ಷೇರುಪೇಟೆ ಸೂಚ್ಯಂಕಗಳು ತಮ್ಮ ಗರಿಷ್ಠ ಮಟ್ಟದಿಂದ ಶೇ 10ರಷ್ಟು ಕೆಳಕ್ಕೆ ಬಿದ್ದಾಗ ಫ್ಲೆಕ್ಸಿಕ್ಯಾಪ್ ಫಂಡ್ ನಿರ್ವಾಹಕರು ಹೊಸ ಅವಕಾಶಗಳನ್ನು ಅಲ್ಲಿ ಗುರುತಿಸಿದರು. ಉತ್ತಮ ಗುಣಮಟ್ಟದ ಸ್ಮಾಲ್‌ಕ್ಯಾಪ್ ಹಾಗೂ ಮಿಡ್‌ಕ್ಯಾಪ್ ಷೇರುಗಳು ಆಗ ಕಡಿಮೆ ಬೆಲೆಗೆ ಸಿಗುತ್ತಿದ್ದವು. ಸಣ್ಣ ಹೂಡಿಕೆದಾರರು ಆ ಸಂದರ್ಭದಲ್ಲಿ ನಿಶ್ಚಿತ ಠೇವಣಿಗಳತ್ತ ಮುಖ ಮಾಡಿದ್ದರು, ಈ ನಿರ್ವಾಹಕರು ಕಡಿಮೆ ಬೆಲೆಗೆ ಆಯ್ದ ಷೇರುಗಳ ಖರೀದಿಯಲ್ಲಿ ತೊಡಗಿದ್ದರು.

ಈ ಬಗೆಯ ಹೂಡಿಕೆ ಕಾರ್ಯತಂತ್ರದ ಅನುಕೂಲವೆಂದರೆ, ಸಣ್ಣ ಹೂಡಿಕೆದಾರರು ಮಾರುಕಟ್ಟೆಯಲ್ಲಿ ಸೂಕ್ತ ಸಮಯಕ್ಕೆ ಕಾಯುತ್ತ ಕೂರುವ ಅಗತ್ಯ ಇರುವುದಿಲ್ಲ. ಸಣ್ಣ ಹೂಡಿಕೆದಾರರು ತಮ್ಮ ಹಣವನ್ನು ಸ್ಮಾಲ್‌ಕ್ಯಾಪ್ ಷೇರುಗಳಲ್ಲಿ ತೊಡಗಿಸಬೇಕೋ, ಲಾರ್ಜ್‌ಕ್ಯಾಪ್ ಷೇರುಗಳಿಗೆ ವಿನಿಯೋಗಿಸಬೇಕೋ ಎಂಬುದರ ಬಗ್ಗೆ ಆಲೋಚಿಸಬೇಕಾಗಿಲ್ಲ. ಆ ಕಷ್ಟದ ಕೆಲಸವನ್ನು ಸಂಶೋಧನಾ ತಂಡ, ವಿಶ್ಲೇಷಣಾ ಪರಿಕರಗಳನ್ನು ಬಳಸಿ ನಿಧಿ ನಿರ್ವಾಹಕ ಮಾಡಿಕೊಡುತ್ತಾನೆ.

ಇದು ಕಟು ಸತ್ಯ

ಷೇರುಪೇಟೆಯಲ್ಲಿ ಇಂದು ನಾಯಕತ್ವದ ಸ್ಥಾನವು ಬಹಳ ಬೇಗ ಬದಲಾಗುತ್ತಿದೆ. 2024ರಲ್ಲಿ ತೀವ್ರಗತಿಯಲ್ಲಿ ಮೌಲ್ಯ ಹೆಚ್ಚಿಸಿಕೊಳ್ಳುವ ಷೇರುಗಳ ಹಾಗೂ ಉತ್ತಮ ಬೆಲೆಗೆ ಸಿಗುತ್ತಿದ್ದ ಗುಣಮಟ್ಟದ ಷೇರುಗಳ ನಡುವೆ ಹಣದ ಹರಿವು ಇತ್ತು. ದೇಶಿ ಮಾರುಕಟ್ಟೆಯನ್ನು ನೆಚ್ಚಿಕೊಂಡಿರುವ ಹಾಗೂ ರಫ್ತು ಆಧಾರಿತ ಉದ್ದಿಮೆಗಳ ಷೇರುಗಳ ಮಧ್ಯೆ, ಸಾಂಪ್ರದಾಯಿಕ ವಲಯಗಳು ಹಾಗೂ ಹೊಸಯುಗದ ಕಂಪನಿಗಳ ಷೇರುಗಳ ನಡುವೆ ಹಣದ ಹರಿವು ಇತ್ತು.

ಮಿಡ್‌ಕ್ಯಾಪ್ ಷೇರುಗಳು ಹೊಸ ಎತ್ತರಕ್ಕೆ ಜಿಗಿಯುತ್ತಿರುವಾಗ ನಿಮ್ಮ ಹಣವು ಲಾರ್ಜ್‌ಕ್ಯಾಪ್ ಷೇರುಗಳಲ್ಲಿ ಇತ್ತು ಎಂದಾದರೆ ನೀವು ದೊಡ್ಡ ಪ್ರಮಾಣದಲ್ಲಿ ಲಾಭ ಕಾಣುವುದನ್ನು ತಪ್ಪಿಸಿಕೊಳ್ಳುತ್ತೀರಿ. ಹಾಗೆಯೇ, ಲಾರ್ಜ್‌ಕ್ಯಾಪ್‌ಗಳಿಗೆ ಹೆಚ್ಚು ಬೇಡಿಕೆ ಇದ್ದಾಗ ನಿಮ್ಮ ಹಣ ಮಿಡ್‌ಕ್ಯಾಪ್ ಫಂಡ್‌ಗಳಲ್ಲಿ ಇತ್ತು ಎಂದಾದರೆ ನಿಮಗೆ ಹೆಚ್ಚು ಲಾಭ ದಕ್ಕುವುದಿಲ್ಲ. ಆದರೆ ಫ್ಲೆಕ್ಸಿಕ್ಯಾಪ್ ಫಂಡ್‌ಗಳಲ್ಲಿ ಈ ಸಮಸ್ಯೆ ಇರುವುದಿಲ್ಲ. ಅವು ಮಾರುಕಟ್ಟೆಯ ಹರಿವಿಗೆ ತಕ್ಕಂತೆ ಹೊಂದಿಕೆ ಆಗುತ್ತವೆ. ಮಾರುಕಟ್ಟೆಯ ಚಲನೆಗೆ ವಿರುದ್ಧವಾಗಿ ಅವು ಸಾಗುವುದಿಲ್ಲ.

ಫ್ಲೆಕ್ಸಿಕ್ಯಾಪ್ ಫಂಡ್‌ಗಳು ವಿಕಾಸವನ್ನು ಪ್ರತಿನಿಧಿಸುತ್ತಿವೆ. ಷೇರು ಮಾರುಕಟ್ಟೆಗಳು ಚಲನಶೀಲ ವ್ಯವಸ್ಥೆಗಳು, ಅವುಗಳಿಗೆ ಚಲನಶೀಲ ಸ್ಪಂದನೆಯ ಅಗತ್ಯ ಇರುತ್ತದೆ ಎಂಬುದನ್ನು ಈ ಬಗೆಯ ಫಂಡ್‌ಗಳು ಹೇಳುತ್ತವೆ. ಈ ಬಗೆಯ ಫಂಡ್‌ಗಳಿಗೆ ಈ ವರ್ಷದ ಪ್ರಥಮಾರ್ಧದಲ್ಲಿ ₹30 ಸಾವಿರ ಕೋಟಿ ಹರಿದುಬಂದಿದೆ ಎಂಬುದು ಈ ಫಂಡ್‌ಗಳೂ ಜನಪ್ರಿಯವಾಗುತ್ತಿವೆ ಎಂಬುದನ್ನಷ್ಟೇ ಹೇಳುತ್ತಿಲ್ಲ. ಬದಲಿಗೆ, ಹೊಂದಾಣಿಕೆಗೆ ಸಿದ್ಧವಾಗಿರುವುದು ಆಧುನಿಕ ಷೇರು ಮಾರುಕಟ್ಟೆಯಲ್ಲಿ ಉಳಿದುಕೊಳ್ಳುವುದಕ್ಕೂ ಅಗತ್ಯ ಎಂಬುದನ್ನು ಹೇಳುತ್ತಿವೆ.

ಲೇಖಕ ಹೂಡಿಕೆ ಸಲಹಾ ಸಂಸ್ಥೆ
ವಾಲ್‌ಟ್ರಸ್ಟ್ ಪಾರ್ಟ್ನರ್ಸ್‌ನ ಮುಖ್ಯ ತಾಂತ್ರಿಕ ವಿಶ್ಲೇಷಕ

ದೊಡ್ಡ ಸಮಸ್ಯೆಯೊಂದಕ್ಕೆ ಪರಿಹಾರ ನೀಡುತ್ತವೆ

ಹೂಡಿಕೆದಾರರ ಪೈಕಿ ಹೆಚ್ಚಿನವರು ತಪ್ಪು ಮಾಡುವುದು ಎಲ್ಲಿ ಗೊತ್ತೇ? ಸ್ಮಾಲ್‌ಕ್ಯಾಪ್ ಹಾಗೂ ಮಿಡ್‌ಕ್ಯಾಪ್ ಷೇರುಗಳ ಮೇಲೆ ಹಣ ತೊಡಗಿಸುವುದು ಬಹಳ ಅಪಾಯಕಾರಿ ಎಂದು ಅವರು ಭಾವಿಸುತ್ತಾರೆ. ಆ ವಲಯದ ಷೇರುಗಳಿಂದ ಪೂರ್ತಿಯಾಗಿ ದೂರವಿರುತ್ತಾರೆ. ಇನ್ನು ಕೆಲವರು, ಅಷ್ಟೂ ಹಣವನ್ನು ಈ ವಲಯದ ಷೇರುಗಳ ಮೇಲೆ ತೊಡಗಿಸಿ, ಅವು ಕುಸಿದಾಗ ತೀವ್ರ ನಷ್ಟಕ್ಕೆ ಗುರಿಯಾಗುತ್ತಾರೆ.

ನಿಜವಾದ ಸಂಪತ್ತು ಸೃಷ್ಟಿಯಾಗುವುದೇ ಸ್ಮಾಲ್‌ಕ್ಯಾಪ್ ಹಾಗೂ ಮಿಡ್‌ಕ್ಯಾಪ್ ಷೇರುಗಳಲ್ಲಿ. ಸಣ್ಣ ಗಾತ್ರದ ಔಷಧ ಕಂಪನಿಯೊಂದರ ಔಷಧವೊಂದಕ್ಕೆ ನಿಯಂತ್ರಣ ಸಂಸ್ಥೆಯ ಅನುಮೋದನೆ ದೊರೆತಾಗ ಆ ಕಂಪನಿಯು ಹೂಡಿಕೆದಾರರ ಹಣವನ್ನು ಹತ್ತು ಪಟ್ಟು ಹೆಚ್ಚು ಮಾಡಬಲ್ಲದು. ಮಿಡ್‌ಕ್ಯಾಪ್ ವಲಯದ ತಂತ್ರಜ್ಞಾನ ಕಂಪನಿಯೊಂದು ದೊಡ್ಡ ಗುತ್ತಿಗೆಯನ್ನು ಪಡೆದುಕೊಂಡಾಗ ಭಾರಿ ಪ್ರಮಾಣದಲ್ಲಿ ಬೆಳೆಯಬಲ್ಲದು. ಆದರೆ ಸರಿಯಾದ ಸಮಯದಲ್ಲಿ ಈ ವಲಯದ ಷೇರುಗಳಲ್ಲಿ ಹೂಡಿಕೆ ಮಾಡುವುದು ಬಹಳ ಮಹತ್ವದ್ದಾಗುತ್ತದೆ. ಸಣ್ಣ ಹೂಡಿಕೆದಾರರಲ್ಲಿ ಹೆಚ್ಚಿನವರು ಸರಿಯಾದ ಸಮಯವನ್ನು ಗುರುತಿಸುವಲ್ಲಿ ಎಡವುತ್ತಾರೆ.


ಈ ಸಮಸ್ಯೆಯನ್ನು ಪರಿಹರಿಸಿಕೊಡುತ್ತವೆ ಫ್ಲೆಕ್ಸಿಕ್ಯಾಪ್ ಫಂಡ್‌ಗಳು. ಸ್ಮಾಲ್‌ಕ್ಯಾಪ್ ಷೇರುಗಳು ಅಗ್ಗವಾಗಿ ಸಿಗುವಾಗ (ಅವುಗಳ ಖರೀದಿಗೆ ಅದು ಒಳ್ಳೆಯ ಸಂದರ್ಭ) ನಿಧಿ ನಿರ್ವಾಹಕರು ಅವುಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಆ ಷೇರುಗಳ ಮೌಲ್ಯವು ಅತಿಯಾದಾಗ ಹಣವನ್ನು ಸುರಕ್ಷಿತವಾದ ಲಾರ್ಜ್‌ಕ್ಯಾಪ್ ಷೇರುಗಳ ಕಡೆ ತಿರುಗಿಸುತ್ತಾರೆ. ಫ್ಲೆಕ್ಸಿಕ್ಯಾಪ್ ಫಂಡ್‌ನಲ್ಲಿ ಹಣ ತೊಡಗಿಸುವುದು ಎಂದರೆ ವೃತ್ತಿಪರ ಟ್ರೇಡರ್ ಒಬ್ಬರನ್ನು ನಿಮ್ಮ ಪೋರ್ಟ್‌ಫೋಲಿಯೊ ನಿರ್ವಹಿಸಲು ನೇಮಕ ಮಾಡಿಕೊಂಡಂತೆ. ಆದರೆ ಈ ನಿರ್ವಾಹಕರು ಪಾರದರ್ಶಕತೆಯನ್ನು ಕಾಯ್ದುಕೊಳ್ಳುತ್ತಾರೆ, ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತಾರೆ.

ಮ್ಯೂಚುವಲ್ ಫಂಡ್

ಜನ ಎಲ್ಲಿ ಹಣ ತೊಡಗಿಸಿದ್ದಾರೆ?

2025ರ ಜೂನ್ ವೇಳೆಗೆ ವ್ಯಕ್ತಿಗತವಾಗಿ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಿರುವ ಹೂಡಿಕೆಯ ಮೊತ್ತ ₹45.38 ಲಕ್ಷ ಕೋಟಿ. ಇದರಲ್ಲಿ ಎಚ್‌ಎನ್‌ಐಗಳು (ಅಂದರೆ ಶ್ರೀಮಂತ ವ್ಯಕ್ತಿಗಳು) ತೊಡಗಿಸಿರುವ ಹಣವೂ ಸೇರಿದೆ.

ಇದು ಹಿಂದಿನ ವರ್ಷದ ಜೂನ್ ವೇಳೆಗೆ ಆಗಿದ್ದ ಹೂಡಿಕೆ ಮೊತ್ತಕ್ಕೆ ಹೋಲಿಸಿದರೆ ಶೇ 21.13ರಷ್ಟು ಹೆಚ್ಚು. ಕಳೆದ ವರ್ಷದ ಜೂನ್‌ವರೆಗೆ ವ್ಯಕ್ತಿಗಳಿಂದ ₹37.45 ಲಕ್ಷ ಕೋಟಿ ಹೂಡಿಕೆ ಆಗಿತ್ತು.



ಭಾರ್ತಿ ಏರ್‌ಟೆಲ್



ಬ್ರೋಕರೇಜ್ ಮಾತು

ದೇಶದ ದೂರಸಂಪರ್ಕ ಸೇವಾ ಕಂಪನಿಗಳಲ್ಲಿ ಒಂದಾಗಿರುವ ಭಾರ್ತಿ ಏರ್‌ಟೆಲ್‌ನ ಷೇರುಮೌಲ್ಯವು ₹2,200ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಅಂದಾಜು ಮಾಡಿದೆ. ಭಾರ್ತಿ ಏರ್‌ಟೆಲ್ ಜೂನ್ ತ್ರೈಮಾಸಿಕದ ತನ್ನ ಹಣಕಾಸು ಫಲಿತಾಂಶವನ್ನು ಮಂಗಳವಾರ ಪ್ರಕಟಿಸಿದೆ.

ಕಂಪನಿಯು ಪ್ರತಿ ಬಳಕೆದಾರನಿಂದ ಪಡೆಯುವ ವರಮಾನವು ವೃದ್ಧಿಸಿದೆ. ಕಂಪನಿಯ ಆಫ್ರಿಕಾ ವಹಿವಾಟುಗಳ ವರಮಾನವು ನಿರೀಕ್ಷೆಗಿಂತ ಹೆಚ್ಚಳ ಕಂಡಿದೆ. ಭಾರತದಲ್ಲಿನ ವಯರ್‌ಲೆಸ್ ಸೇವೆಗಳ ವರಮಾನವು ಕೂಡ ಹೆಚ್ಚಳ ಕಂಡಿದೆ ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ.

ಕಂಪನಿಯ ಒಟ್ಟು ವರಮಾನದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು (ಸಿಎಜಿಆರ್) 2024–25ರಿಂದ 2027–28ರವರೆಗೆ ಶೇ 14ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿದೆ. ಡಿಸೆಂಬರ್ ನಂತರದಲ್ಲಿ ಭಾರತದಲ್ಲಿನ ವಯರ್‌ಲೆಸ್ ಸೇವೆಗಳ ಶುಲ್ಕವು ಶೇ 15ರಷ್ಟು ಹೆಚ್ಚಳ ಕಾಣಬಹುದು ಎಂದು ಕೂಡ ಬ್ರೋಕರೇಜ್ ಸಂಸ್ಥೆ ಅಂದಾಜಿಸಿದೆ. ಶುಕ್ರವಾರದ ವಹಿವಾಟಿನ ಅಂತ್ಯಕ್ಕೆ ಭಾರ್ತಿ ಏರ್‌ಟೆಲ್ ಷೇರುಮೌಲ್ಯವು ₹1,924 ಆಗಿತ್ತು.

ಅದಾನಿ ಪೋರ್ಟ್ ಆ್ಯಂಡ್ ಎಸ್‌ಇಜೆಡ್

‘ಅದಾನಿ ಪೋರ್ಟ್ ಆ್ಯಂಡ್ ಎಸ್‌ಇಜೆಡ್’ನ ಷೇರುಮೌಲ್ಯವು ₹1,777ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಪ್ರಭುದಾಸ್ ಲೀಲಾಧರ್ ಕ್ಯಾಪಿಟಲ್ ಅಂದಾಜು ಮಾಡಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ಸಾಧನೆಯು ಚೆನ್ನಾಗಿ ಆಗಿದೆ. ಮುಂದಿನ ಕೆಲವು ತ್ರೈಮಾಸಿಕಗಳಲ್ಲಿ ಕಂಪನಿಯ ಸರಕು ಸಾಗಣೆ ವಹಿವಾಟುಗಳು ಚೆನ್ನಾಗಿ ಆಗುವ ನಿರೀಕ್ಷೆ ಇದೆ. ಸರಕು ಸಾಗಣೆ ವಹಿವಾಟಿನಲ್ಲಿ 2028–29ನೆಯ ಹಣಕಾಸು ವರ್ಷದವರೆಗೆ ಒಟ್ಟು ಬಂಡವಾಳ ವೆಚ್ಚವಾಗಿ ಗರಿಷ್ಠ ₹20 ಸಾವಿರ ಕೋಟಿವರೆಗೆ ತೊಡಗಿಸುವ ಅಂದಾಜನ್ನು ಕಂಪನಿ ನೀಡಿದೆ ಎಂದು ಪ್ರಭುದಾಸ್ ಲೀಲಾಧರ್ ಹೇಳಿದೆ.

ದೇಶದಲ್ಲಿ 15 ಬಂದರುಗಳು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ 4 ಬಂದರುಗಳನ್ನು ಹೊಂದಿರುವ ಕಂಪನಿಯು ದೇಶದ ಜಾಗತಿಕ ರಫ್ತಿನಲ್ಲಿ ಆಗುವ ಹೆಚ್ಚಳದ ಪ್ರಯೋಜನವನ್ನು ಪಡೆಯುವ ನಿರೀಕ್ಷೆ ಇದೆ ಎಂದೂ ಬ್ರೋಕರೇಜ್ ಸಂಸ್ಥೆ ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಕಂಪನಿಯು ಷೇರುಮೌಲ್ಯವು ₹1,366.90 ಆಗಿತ್ತು.

(ಬ್ರೋಕರೇಜ್ ಸಂಸ್ಥೆಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Second Language ENGLISH : POEM

Quality of Mercy

4) Some traits or qualities are mentioned below. Classify them into two categories of temporal power and divine (Godly) attributes:
(Revenge, Tyranny, Cruelty, miserliness, hatred, tit for tat attitude, Love, Sympathy, Mercy, Compassion)

Ans:-

Temporal	Divine

Answer:

Temporal	Divine
Revenge, Tyranny, Cruelty, miserliness, hatred, tit for tat attitude	Love, Sympathy, Mercy, Compassion

Read and appreciate

Work in pairs and answer the following questions.

1) Read the first two lines. Explain simile (comparison) briefly.
Ans: The gentle quality of mercy has been compared to rain which drops gently to ground. Rain does not hurt mother earth but it enriches it. Similarly mercy never hurts anyone but blesses both the giver and the receiver. Hence mercy, 'it droppeth as the gentle rain from heaven'.

2) How do you interpret the speaker's interpretation of mercy as twice blessed?
Ans: The poet calls mercy as twice blessed because it blesses both the giver and the receiver. This interpretation is excellent as it uplifts both the giver and the receiver.

3) The speaker compares the power of the king with the power of mercy, saying that mercy is the mightiest of the mightiest. How does she justify this?
Ans: The speaker emphasizes that king has only temporal power and keeps his subjects in awe and fear by display of his sceptre and throne. But mercy being quality attributed to God is mightier than mightiest king. It when king's justice is tempered by mercy that it raises king to Godliness

4) This text has fourteen lines. But it is not a sonnet. Look at the ending of the lines and justify the above statement.
Ans: A sonnet is divided into octave and sestet. An octave deals with a problem and sestet gives solution to it. The poem 'Quality of Mercy' does not follow that pattern. It talks about virtues of mercy. Therefore though poem has fourteen lines, it does not follow the pattern of a sonnet

5) What is the earthly power referred to?
Ans: The speaker refers to authority that is vested in mortal beings like judges or kings as earthly power.

6) What is an attribute to God Himself?
Ans: Mercy.

7) What attributes does the speaker liken to the sceptre?
Ans: The speaker attributes awe and majesty to the sceptre.

8) When do you find earthly power resembling God's power?
Ans: We find earthly power resembling God's power when the quality of mercy is enthroned in the heart of kings.

9) What power of the king does the sceptre stand for?
Ans: The sceptre stands for both earthly power. the symbol of royal authority and temporal power. the symbol of awe and majesty

Multiple Choice Questions

1) The quality of mercy is……………………
A) strain'd B) not train'd
C) train'd D) not strain'd
Ans:(D) not strain'd

2) Mercy droppeth as the gentle rain from
A) the sky B) heaven
C) clouds D) the horizon
Ans: (B) heaven

3) Mercy droppeth as the gentle rain from heaven ………………
A) upon the heads of people
B) upon the ground
C) upon the place beneath
D) upon the trees and leaves
Ans:(C) upon the place beneath

4) The throned monarch better than his………
A) queen B) sceptre
C) prince D) crown
Ans:(D) crown

****

Prose

Gentleman of Rio en Medio

YOUR UNDERSTANDING

Share your responses

1) The old man was……….. (Fill in the bank with the most appropriate word)
a. understanding b. quick
c. unhurried d. witty
Ans: (c) unhurried

2) Do you think the ancestors of the old man lived in Rio en Medio?
Ans: Yes. They had lived there because he tilled the land that they had tilled.

3)A word in line 4 of paragraph 1 suggests that the old man was a farmer. Pick that word.
Ans: The word is filled the land.

(Contd…)

Biology

REPRODUCTION
REPRODUCTIVE HEALTH

Answer the following:-

7. What is Tubectomy?
Ans:- (………..Contd)
the suture is digested by the body fluids and the two severed ends of the tubes separate Therefore, the ovum is prevented from passing into the uterus and the sperms cannot reach the ovum.

8. What is Laparoscopic sterilization?
Ans:- Laparoscopic sterilization is also a method of female sterilization. After giving a local or general anesthesia, a harmless gas is introduced into the abdomen to create a gas bubble. The bubble expands in the abdominal cavity and pushes the intestines away from the pelvic cavity so that the uterine tubes could be easily seen.

A small incision is made at the lower rim of the umbilicus to insert a laparoscope to locate, cut and close the uterine tubes. Once the tubes are sealed, the instrument is removed, the gas is released and the incision is dressed with a bandage. The person can resume normal work after a few hours.

9) Which is the irreversible method of birth control?
Ans:- Removal of Gonads and Uterus is a perfect method of birth control. But once performed it cannot be reversed. Removal of Gonads effects because the gonads play an important role in the endocrine system. Therefore, these operations are performed only if the organs are diseased or damaged. Removal of testis is called castration, removal of ovary is called oophorectomy and Removal of uterus is called hysterectomy.

PRINCIPLES OF INHERITANCE AND VARIATION

1. What is genetics?
Ans:- Genetics is a branch of biological science which deals with heredity and variations.

2. Who is the father of Genetics?
Ans:- Gregor Johann Mendel is the father of Genetics.

3. Name the scientists who rediscovered the work of Mendel?
Ans:- The scientists who rediscovered the work of Mendel were Hugo de Vries of Holland, Karl Correns of Germany and Eric Von Tschermark of Austria.

4. What is Heredity?
Ans:- Heredity is the process of transmission of characters from one generation to the other or it is the process of inheritance of characters from the parent to the offspring.

5. What is variation?
Ans:- The minor differences that exist among the offsprings of the same parents are called variations. Such variations occur in both plants and animals.

6. Which are the two types of variation?
Ans:- The two types of variations are – Hereditary variations and environmental variations.

7. What do you mean by alleles?
Ans:- Alleles are pair of genes controlling a pair of contrasting characters.

8. What is a phenotype?
Ans:- The visible external morphological character is called the phenotype.

9. What is a genotype?
Ans:- The genes responsible for the expression of visible external morphological character is called the genotype.

10. What is monohybrid cross?
Ans:- Monohybrid cross is a cross involving two plants differing in only one character (only height, colour of the flower, shape of the seed, etc.,).

11. What do you mean by monohybrid?
Ans:- The hybrid resulting from a monohybrid cross is called a monohybrid.

12. What is the phenotypic ratio in the monohybrid cross?
Ans:- The phenotypic ratio in the monohybrid cross is 3 : 1.

13. What is the genotypic ratio in the monohybrid cross?
Ans:- The genotypic ratio in the monohybrid cross is 1 : 2 : 1.

14. What is dihybrid cross?
Ans:- Dihybrid cross is a cross involving two plants which differ only with respect to two sets of characters.

15. What do you mean by dihybrid?
Ans:- The hybrid resulting from a dihybrid cross is called a dihybrid.

16. What is the phenotypic ratio in the dihybrid cross?
Ans:- The phenotypic ratio in the dihybrid cross is 9 : 3 : 3 : 1

17. What is the genotypic ratio in the dihybrid cross?
Ans:- The genotypic ratio in the dihybrid cross is 1: 2 : 2 : 4 : 1 : 2 : 1 : 2 : 1

18. What is a test cross?
Ans:- A test cross is defined as a back cross performed between the F_1 generation (individual) and its double recessive parent.

19. What is a dominant gene?
Ans:- Dominant gene is the one which expresses itself by suppressing the expression of its counterpart. E.g., the gene for tallness is expressed suppressing the gene for dwarfness. This is conventionally represented as 'T'.

20. What is a recessive gene?
Ans:- Recessive gene is the one, which is not expressed in the presence of the dominant gene. E.g., the gene for dwarfness is expressed only in the absence of the dominant gene for tallness. This is conventionally represented as 't'. *(Contd……..)*

ಮಳೆ: ಕೊಚ್ಚಿಹೋದ ವ್ಯಕ್ತಿ

ಕಿತ್ತೂರು ಕರ್ನಾಟಕದ ವಿವಿಧೆಡೆ ಮಳೆ ಕೋಡಿ ಬಿದ್ದ ಕೆರೆಗಳು, ಮುಳುಗಿದ ಸೇತುವೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಜಯಪುರ, ಬಾಗಲಕೋಟೆ, ಉತ್ತರ ಕನ್ನಡ, ಗದಗ ಸೇರಿದಂತೆ ಬಹುತೇಕ ಕಡೆ ಮಂಗಳವಾರ ರಾತ್ರಿ ಮತ್ತು ಬುಧವಾರ ಉತ್ತಮ ಮಳೆಯಾಯಿತು. ಬಹುತೇಕ ಕಡೆ ಮನೆಗಳಿಗೆ ಹಾನಿಯಾಗಿದೆ. ಅಲ್ಲಲ್ಲಿ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದವು.

ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಸಮೀಪದ ಚಂದನಹೊಸೂರ ಗ್ರಾಮದ ಬಳಿ ಮಂಗಳವಾರ ರಾತ್ರಿ ತಾರಿಹಾಳ ಗ್ರಾಮ ಪಂಚಾಯಿತಿ ಸಿಬ್ಬಂದಿ, ಖಾನಾಪೂರ ತಾಲ್ಲೂಕಿನ ಗಾಡಿಕೊಪ್ಪ ಗ್ರಾಮದ ನಿವಾಸಿ ಸುರೇಶ ನಿಜಗುಣಿ ಗುಂಡಣ್ಣವರ (48) ಅವರು ಹಳ್ಳ ದಾಟುವ ವೇಳೆ ಬೈಕ್ ಸಮೇತ ಕೊಚ್ಚಿಕೊಂಡು ಹೋದರು.

ವಿಜಯಪುರ ಜಿಲ್ಲೆಯಲ್ಲಿ 19 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಎರಡು ಆಕಳು ಸಾವಿಗೀಡಾಗಿವೆ. ಡೋಣಿ ನದಿ ಉಕ್ಕಿ ಹರಿದು ನದಿಪಾತ್ರದ ಹೊಲಗಳಿಗೆ ನೀರು ನುಗ್ಗಿದೆ.

ತಿಕೋಟಾ ತಾಲ್ಲೂಕಿನ ಕಳ್ಳಕವಟಗಿ-ವಿಜಯಪುರ ರಸ್ತೆಯಲ್ಲಿರುವ ಸಂಗಮನಾಥ ದೇವಸ್ಥಾನ ಬಳಿ ಸೇತುವೆ ಮೇಲೆ ಹಳ್ಳ ಉಕ್ಕಿ ಹರಿದಿದೆ. ಮುಳುಗಿದ್ದ ಸೇತುವೆ ಮೇಲೆ ಬೈಕಿನಲ್ಲಿ ದಾಟಲು ಮುಂದಾಗಿ ಕೊಚ್ಚಿ ಹೋಗುತ್ತಿದ್ದ ಯುವಕನನ್ನು ಜನರು ರಕ್ಷಿಸಿದರು.

ಬಾಗಲಕೋಟೆ ನಗರದ ಹಾಗೂ ಸುತ್ತ ಮುತ್ತಲ ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯಿತು. ಇಳಕಲ್, ಹುನಗುಂದ ತಾಲ್ಲೂಕಿನಲ್ಲಿ ಧಾರಾಕಾರ ಮಳೆಯಾಗಿ, ಕೆಲ ಹೊತ್ತು ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು. ಹಿರೇಹಳ್ಳ ತುಂಬಿ ಹರಿದಿದ್ದರಿಂದ ವಿಜಯ ಮಹಾಂತೇಶ ಕರ್ತೃ ಗದ್ದುಗೆ ತಲುಪುವ ಸೇತುವೆ ಜಲಾವೃತಗೊಂಡಿತು.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕೆಲವೆಡೆ ಬಿರುಗಾಳಿ ಸಹಿತ ಜೋರು ಮಳೆ ಸುರಿಯಿತು. ಮಳೆಗೆ ಗುಂಡಬಾಳ ನದಿ ತುಂಬಿ, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿತು. ನದಿಯ ಸುತ್ತಮುತ್ತಲ ಗ್ರಾಮಗಳಲ್ಲಿ ಗುಡ್ಡ ಕುಸಿಯಿತು. ರಸ್ತೆಗಳು ಕೊಚ್ಚಿಹೋಗಿ, ಕಂದಕ ಸೃಷ್ಟಿಯಾಗಿದೆ. ಕೆಲ ಹಳ್ಳಗಳ ತಡೆಗೋಡೆಗಳು ಕುಸಿದಿವೆ.

ವಿಜಯನಗರ ಜಿಲ್ಲೆಯ ವಿವಿಧೆಡೆ ಮಳೆ ಸುರಿದಿದ್ದರಿಂದ ಕೂಡ್ಲಿಗಿಯಲ್ಲಿ ಮೂರು ಕೆರೆ ಕೋಡಿ ಬಿದ್ದಿವೆ. ಹರಪನಹಳ್ಳಿ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಹೊಸಪೇಟೆ ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಯಿತು. ಕೊಟ್ಟೂರು ತಾಲ್ಲೂಕಿನಲ್ಲಿ ನಾಲ್ಕು ಮನೆಗಳು, ಹೂವಿನಹಡಗಲಿ ತಾಲ್ಲೂಕಿನಲ್ಲಿ ಒಂದು ಮನೆ ಕುಸಿದಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು
ಕೆ ಆರ್ ಎಸ್ *	124.80	123.75	12,309	5,776
ಹಾರಂಗಿ	2,859.02	2,856.25	3,796	3,458
ಕಬಿನಿ	2,284.00	2,282.09	14,363	20,250
ಹೇಮಾವತಿ	2,922	2,921.92	7,282	7,000
ಲಿಂಗನಮಕ್ಕಿ	1,819	1,811.80	14,706	7,554
ಸೂಪಾ (ಮೀ)	564	551.55	5,274	2,859
ಮಾಣಿ	595	590.74	1,884	710
ತುಂಗಭದ್ರಾ	1,633	1,626.06	23,788	23,430
ಮಲಪ್ರಭಾ	2,079.5	2,075.50	3,398	1,894
ಘಟಪ್ರಭಾ	2,175	2,171.85	4,941	2,293
ಭದ್ರಾ *	186	182.04	12,494	4,288
ಆಲಮಟ್ಟಿ (ಮೀ)	519.60	519.20	38,824	10,595
ನಾರಾಯಣಪುರ (ಮೀ)	492.25	492.18	10,000	8,000

* ನೆಲಮಟ್ಟದಿಂದ



ಹೊನ್ನಾವರ ತಾಲ್ಲೂಕಿನ ಚಿಕ್ಕನಕೋಡ ಗ್ರಾಮದಲ್ಲಿ ಸುರಿದ ಭಾರಿ ಮಳೆಯಿಂದ ರಸ್ತೆಯಲ್ಲಿ ಕಂದಕ ಉಂಟಾಗಿದೆ

ತುಂಬಿದ ನಾರಿಹಳ್ಳ; ಜಮೀನು ಜಲಾವೃತ

ಸಂಡೂರು (ಬಳ್ಳಾರಿ ಜಿಲ್ಲೆ): ತಾಲ್ಲೂಕಿನಲ್ಲಿ ಉತ್ತಮ ಮಳೆ ಆಗಿದ್ದು, ನಾರಿಹಳ್ಳ ಜಲಾಶಯ ಭರ್ತಿಯಾಗಿದೆ. ಜಲಾಶಯದಿಂದ ಹೆಚ್ಚುವರಿ ನೀರು ಹೊರಗೆ ಬಿಟ್ಟಿದ್ದು, ಸುರಕ್ಷವ ಪಟ್ಟಣದ ಜಮೀನುಗಳು ಜಲಾವೃತವಾಗಿವೆ.

50ಕ್ಕೂ ಹೆಚ್ಚು ಸಣ್ಣರೈತರ ಸುಮಾರು 180 ಎಕರೆಯ ಜಮೀನುಗಳು ನೀರಿನಲ್ಲಿ ಮುಳುಗಿವೆ. ಮೆಕ್ಕೆಜೋಳ, ಹತ್ತಿ, ಭತ್ತ, ಜೋಳ ಸೇರಿದಂತೆ ವಿವಿಧ ತರಕಾರಿ ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಭಾರಿ ಮಳೆ

ಚಿತ್ರದುರ್ಗ ವರದಿ: ಜಿಲ್ಲೆಯಾದ್ಯಂತ ಬುಧವಾರ ರಾತ್ರಿ ಭಾರಿ ಮಳೆಯಾಗಿದ್ದು ವಿವಿಧೆಡೆ ಈರುಳ್ಳಿ, ಮೆಕ್ಕೆಜೋಳ ಬೆಳೆಗಳು ನೀರಿನಲ್ಲಿ ಕೊಚ್ಚಿಹೋಗಿವೆ. ಚಳ್ಳಕೆರೆ, ಮೊಳಕಾಲ್ಮುರು, ಹಿರಿಯೂರು ತಾಲ್ಲೂಕಿನಲ್ಲಿ ರೈತರ ಚಿಂತೆ ಆರಂಭವಾಗಿದೆ.

ರಾತ್ರಿ 10 ಗಂಟೆ ವೇಳೆಗೆ ಭಾರಿ ಗುಡುಗು, ಸಿಡಿಲು ಸಹಿತ ಆರಂಭವಾದ ಮಳೆ ತಡರಾತ್ರಿ 3 ಗಂಟೆವರೆಗೂ ಸುರಿಯಿತು. ಪಟ್ಟಣಕ್ಕೆ ಹೊಂದಿಕೊಂಡಿರುವ ಬಳ್ಳಾರಿ ಗಡಿಗೆ ಹೊಂದಿಕೊಂಡಿರುವ ಕೋನಾಪುರ ಕೆರೆ ಸಹ ಕೋಡಿ ಬಿದ್ದಿದೆ.

ಚಳ್ಳಕೆರೆ ತಾಲ್ಲೂಕಿನ ಕುರುಡಿಹಳ್ಳಿ ವ್ಯಾಪ್ತಿಯಲ್ಲಿ 17 ಎಕರೆ ಭೂಮಿಯಲ್ಲಿ ಮೆಕ್ಕೆಜೋಳ, ಹಿರಿಯೂರು ತಾಲ್ಲೂಕಿನಲ್ಲಿ 20ಕ್ಕೂ ಹೆಚ್ಚು ಎಕರೆಯಲ್ಲಿ ಈರುಳ್ಳಿ ಬೆಳೆ ಕೊಚ್ಚಿಹೋಗಿದೆ.

ನಾಳೆಯಿಂದ ‘ಬುಕ್ ಬ್ರಹ್ಮ’ ಸಾಹಿತ್ಯ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕ್ ಬ್ರಹ್ಮ ಸಂಸ್ಥೆಯು ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ‘ಬುಕ್ ಬ್ರಹ್ಮ ಸಾಹಿತ್ಯ ಉತ್ಸವ’ಕ್ಕೆ ಇದೇ ಶುಕ್ರವಾರ (ಆ.8) ಚಾಲನೆ ಸಿಗಲಿದೆ.

ಮೂರೂ ದಿನ ಬೆಳಿಗ್ಗೆಯಿಂದ ರಾತ್ರಿವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಸಾಹಿತ್ಯ ಗೋಷ್ಠಿಗಳ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿದೆ. 400ಕ್ಕೂ ಹೆಚ್ಚು ಸಾಹಿತಿಗಳು ಹಾಗೂ ಕಲಾವಿದರು ಭಾಗಿಯಾಗಲಿದ್ದಾರೆ. ಈ ವರ್ಷ ಇದಕ್ಕಾಗಿ ಎಂಟು ವಿವಿಧ ವೇದಿಕೆಗಳನ್ನು ಸಜ್ಜುಗೊಳಿಸಲಾಗಿದೆ.

ದಕ್ಷಿಣ ಭಾರತದ ನಾಲ್ಕು ಭಾಷೆಗಳು ಮತ್ತು ಇಂಗ್ಲಿಷ್ ಒಳಗೊಂಡು ಒಟ್ಟು ಐದು ಭಾಷೆಗಳಲ್ಲಿ ವಿವಿಧ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಬಾರಿ ಮರಾಠಿ ಆಹ್ವಾನಿತ ಭಾಷೆಯಾಗಿದ್ದು, ಆ ಭಾಷೆಯಲ್ಲಿಯೂ ವಿಚಾರ ಗೋಷ್ಠಿಗಳು ನಡೆಯಲಿವೆ. ಕಲಾ ಪ್ರದರ್ಶನ, ಪುಸ್ತಕ ಬಿಡುಗಡೆ ಹಾಗೂ ಲೇಖಕರ ಜತೆಗೆ ಸಂವಾದಗಳು ನಡೆಯಲಿವೆ. ಮುಖ್ಯ ವೇದಿಕೆಯಲ್ಲಿ ಸಾಹಿತ್ಯ ಉತ್ಸವದ ಎಲ್ಲ ಪ್ರಮುಖ ಗೋಷ್ಠಿಗಳು ಮತ್ತು ಎಂಟು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಪ್ರಮುಖರು ಭಾಗಿ: ಸಾಹಿತ್ಯೋತ್ಸವದಲ್ಲಿ ಅಂತರ ರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿಯರಾದ ಬಾನು ಮುಷ್ತಾಕ್, ದೀಪಾ ಭಾಸ್ತಿ, ಜ್ಞಾನಪೀಠ ಪುರಸ್ಕೃತ ಚಂದ್ರಶೇಖರ ಕಂಬಾರ, ದಾಮೋದರ ಮೌಜೊ, ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಟಿ.ಎಂ. ಕೃಷ್ಣ ಅವರ ಜತೆಗೆ ಸಾಹಿತ್ಯ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳುತ್ತಾರೆ. ಲಕ್ಷ್ಮೀ ಚಂದ್ರಶೇಖರ್, ಬಿ.ಜಯಶ್ರೀ, ಪ್ರವೀಣ್ ಗೋಡ್ಖಿಂಡಿ, ಮಾನಸಿ ಪ್ರಸಾದ್, ಟಿ.ಎಂ. ಕೃಷ್ಣ, ಗಣಪತಿ ಭಟ್ ಹಾಸಣಗಿ, ಬಿ-ಸ್ಟುಡಿಯೊ ಮತ್ತು ಬೆಂಗಳೂರು ಕ್ಲಬ್ ಆಫ್ ಕಥಕ್ಕಳಿ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ದೇಶದ 36 ಪ್ರಮುಖ ಸಾಹಿತಿಗಳು ಪ್ರತ್ಯೇಕವಾಗಿ ತಮ್ಮ ಓದುಗರು ಮತ್ತು ಸಾಹಿತ್ಯಾಭಿಮಾನಿಗಳ ಜತೆಗೆ ಈ ಬಾರಿ ಮುಖಾಮುಖಿಯಾಗಲಿದ್ದಾರೆ. ಇದು ಸಾಹಿತಿ ಮತ್ತು ಓದುಗರ ನಡುವೆ ನಡೆಯಲಿರುವ ನೇರ ಮಾತುಕತೆಯ ಅಂಗಳವಾಗಿದೆ. ‘ಅನಾವರಣ’ ವೇದಿಕೆಯಲ್ಲಿ ಕನ್ನಡ ಸೇರಿ ವಿವಿಧ ಭಾಷೆಗಳ 36 ಕೃತಿಗಳು ಬಿಡುಗಡೆಯಾಗಲಿವೆ. ಈ ವೇದಿಕೆಯಲ್ಲಿ ಕೃತಿಗಳ ಕುರಿತು ಮಾತುಕತೆಗಳೂ ನಡೆಯಲಿವೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

- **ಎಂದು:** ಇದೇ 8ರಿಂದ 10ರವರೆಗೆ
- **ಎಲ್ಲಿ:** ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣ
- **ವೇದಿಕೆಗಳೆಷ್ಟು:** ಎಂಟು ವಿವಿಧ ವೇದಿಕೆಗಳಲ್ಲಿ ಕಾರ್ಯಕ್ರಮ

ಚಿಣ್ಣರ ಲೋಕ, ಮಳಿಗೆ

ಮಕ್ಕಳಿಗಾಗಿ ಚಿಣ್ಣರ ಲೋಕ ವೇದಿಕೆ ಇರಲಿದೆ. ಇಲ್ಲಿಯೂ ವಿವಿಧ ಸಾಹಿತ್ಯ ಕಾರ್ಯಕ್ರಮಗಳು ನಡೆಯಲಿವೆ. ಪುಸ್ತಕ ಮಳಿಗೆಗಳು ಉತ್ಸವದ ಕೇಂದ್ರ ಬಿಂದುವಾಗಿದ್ದು, ಕನ್ನಡ, ಇಂಗ್ಲಿಷ್, ಮಲೆಯಾಳ, ತೆಲುಗು ಮತ್ತು ತಮಿಳು ಭಾಷೆಯ ಕೃತಿಗಳು ಲಭ್ಯವಾಗಲಿವೆ ಎಂದು ಸಂಸ್ಥೆ ತಿಳಿಸಿದೆ.

ಈ ಉತ್ಸವಕ್ಕೆ ಪ್ರವೇಶ ಉಚಿತವಿದ್ದು, ಹೆಸರು **ನೋಂದಣಿಗೆ:** www.bookbrahmalitfest.com

ಚಿಟಿಕೆ ಸುದ್ದಿ

ಪೊಲೀಸರಿಗೆ ನೀಲಿ ಟೋಪಿ

ಬೆಂಗಳೂರು: ರಾಜ್ಯದ ಹೆಡ್ ಕಾನ್‌ಸ್ಟೆಬಲ್‌ಗಳು, ಕಾನ್‌ಸ್ಟೆಬಲ್‌ಗಳು ಧರಿಸುತ್ತಿರುವ ಸ್ಲೋಚ್ ಹ್ಯಾಟ್ (ಟೋಪಿ) ಬದಲಾಗಿ ‘ನೇವಿ ಬ್ಲೂ ಪೀಕ್ ಕ್ಯಾಪ್’ ವಿತರಿಸಲು ಸರ್ಕಾರ ಸಮ್ಮತಿಸಿದೆ.

ನೇವಿ ಬ್ಲೂ ಪೀಕ್ ಕ್ಯಾಪ್‌ಗಳನ್ನು ಖರೀದಿಸುವ ಸಂಬಂಧ ಟೆಂಡರ್ ಪ್ರಕ್ರಿಯೆ ಆರಂಭಿಸಲು ಆಗಸ್ಟ್ 7ರಂದು ಕೆಎಸ್‌ಆರ್‌ಪಿ ಎಡಿಜಿಪಿ ಉಮೇಶ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಕಿಟ್ ನಿರ್ದಿಷ್ಟತಾ ಸಮಿತಿ ಸಭೆ ಕರೆಯಲಾಗಿದೆ.

ದಶಕಗಳಿಂದ ಪೊಲೀಸರು ಖಾಕಿ ಸಮವಸ್ತ್ರದ ಮೇಲೆ ಬಳಸುತ್ತಿದ್ದ ಸ್ಲೋಚ್ ಕ್ಯಾಪ್‌ಗೆ ವಿದಾಯ ಹೇಳಲಾಗುತ್ತದೆ. ಭಾರತೀಯ ನೌಕಾಪಡೆ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ, ಕೇರಳ, ಗೋವಾ ಹಾಗೂ ದೆಹಲಿ ಸೇರಿದಂತೆ ಇತರೆ ರಾಜ್ಯಗಳ ಪೊಲೀಸರು ಧರಿಸುವಂತಹ ಟೋಪಿಗಳನ್ನು ಇನ್ನುಮುಂದೆ ರಾಜ್ಯದ ಪೊಲೀಸ್ ಸಿಬ್ಬಂದಿ ಧರಿಸಲಿದ್ದಾರೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಜೂನ್ 16ರಂದು ನಡೆದ ವಾರ್ಷಿಕ ಸಮ್ಮೇಳನ ಸಭೆಯಲ್ಲಿ ಪೊಲೀಸ್ ಸಿಬ್ಬಂದಿಯ ಟೋಪಿ ಬದಲಾವಣೆ ಕುರಿತು ಚರ್ಚೆ ನಡೆಸಲಾಗಿತ್ತು. ಈ ವೇಳೆ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ.ಪರಮೇಶ್ವರ ಅವರು ತೆಲಂಗಾಣ ಮಾದರಿ ಟೋಪಿ ಬಗ್ಗೆ ಒಲವು ತೋರಿಸಿದ್ದರು.

ಆದರೆ, ಕೆಲವು ಐಪಿಎಸ್ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದರು. ನಂತರ ಇಲಾಖೆ ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿತ್ತು.

ವರ್ಷಾಂತ್ಯಕ್ಕೆ 600 ಕಿ.ಮೀ. ಹೆದ್ದಾರಿ

ನವದೆಹಲಿ: ಕರ್ನಾಟಕದಲ್ಲಿ 2025-26ನೇ ಆರ್ಥಿಕ ವರ್ಷದ ಅಂತ್ಯಕ್ಕೆ 23 ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಸದಸ್ಯ ನಾರಾಯಣ ಕೊರಗಪ್ಪ ಪ್ರಶ್ನೆಗೆ ಬುಧವಾರ ಉತ್ತರ ನೀಡಿದ ಅವರು, ‘600 ಕಿ.ಮೀ. ಉದ್ದದ ಈ ಹೆದ್ದಾರಿಗಳ ನಿರ್ಮಾಣಕ್ಕೆ ಅಂದಾಜು ₹10,749 ಕೋಟಿ ವೆಚ್ಚ ಮಾಡಲಾಗುತ್ತಿದೆ’ ಎಂದರು.

ಮಕ್ಕಳ ಸುರಕ್ಷತೆಗೆ 25 ಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಸುರಕ್ಷತೆಗೆ ನಿತ್ಯವೂ ಪಾಲಿಸಬೇಕಾದ 25 ಅಂಶಗಳನ್ನು ಪಟ್ಟಿ ಮಾಡಿ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಈ ಹೊಣೆಯನ್ನು ಮುಖ್ಯಶಿಕ್ಷಕರೇ ನಿಭಾಯಿಸಬೇಕು ಎಂದು ಹೇಳಿದೆ.

ಶಿವಮೊಗ್ಗ ಜಿಲ್ಲೆಯ ಹೊಸನಗರ ಸೇರಿದಂತೆ ಕೆಲವೆಡೆ ಶಾಲೆಯ ಕುಡಿಯುವ ನೀರಿಗೆ ವಿಷ ಬೆರೆಸಿದ ಪ್ರಕರಣಗಳು ವರದಿಯಾದ ಬೆನ್ನಲ್ಲೇ ಮಕ್ಕಳ ಸುರಕ್ಷತೆಗೆ ಕೈಗೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳ ಪಟ್ಟಿಯನ್ನು ಶಿಕ್ಷಣ ಹಕ್ಕು ಕಾಯ್ದೆ, ಕರ್ನಾಟಕ ಮಕ್ಕಳ ಸುರಕ್ಷತಾ ನೀತಿ ಅನ್ವಯ ಸಿದ್ಧಪಡಿಸಲಾಗಿದೆ.

ಮಕ್ಕಳ ಸುರಕ್ಷತೆಯ ಕುರಿತು ಇದುವರೆಗೂ ಹಲವು ಸುತ್ತೋಲೆ ಹೊರಡಿಸಿದರೂ, ಲೋಪಗಳು ಮರುಕಳಿಸುತ್ತಲೇ ಇವೆ. ಹಾಗಾಗಿ, ಮುಖ್ಯಶಿಕ್ಷಕರು ಶಾಲೆ ಆರಂಭವಾಗುತ್ತಿದ್ದಂತೆ ಕೆಲ ಪ್ರಾಥಮಿಕ ಅಂಶಗಳನ್ನು ಕಡ್ಡಾಯವಾಗಿ ಪರಿಶೀಲನೆ ಮಾಡಬೇಕು. ಸೂಚನಾ ಫಲಕದಲ್ಲಿ ಬರೆಸಬೇಕು. ಸಹ ಶಿಕ್ಷಕರ ಸಹಾಯ ಪಡೆಯಬೇಕು. ಸುರಕ್ಷತಾ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು. ಮುಂದೆ ಲೋಪಗಳು ಕಂಡು ಬಂದರೆ ಅವರನ್ನೇ ನೇರ ಹೊಣೆ ಮಾಡಲಾಗುವುದು. ಬಿಇಒ, ಡಿಡಿಪಿಐ ಸೇರಿದಂತೆ ಮೇಲಧಿಕಾರಿಗಳು ಕಾಲಕಾಲಕ್ಕೆ ಶಾಲೆಗಳಿಗೆ ಭೇಟಿ ನೀಡಬೇಕು. ಅನುಪಾಲನಾ ವರದಿ ಸಲ್ಲಿಸಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಮುಖ್ಯಶಿಕ್ಷಕರ ನಿಗಾ ಪಟ್ಟಿ

- ಶಾಲಾ ಆವರಣ
- ಪ್ರವೇಶ ದ್ವಾರ
- ಕಾಂಪೌಂಡ್
- ಕೊಠಡಿಗಳು
- ಶೌಚಾಲಯ
- ಕುಡಿಯುವ ನೀರು
- ನೀರಿನ ಸಂಪ್
- ಶುದ್ಧ ನೀರಿನ ಖಾತ್ರಿ
- ಪ್ರಥಮ ಚಿಕಿತ್ಸಾ ಕಿಟ್
- ವಿದ್ಯುತ್ ಕಂಬ, ತಂತಿ
- ಬಿಸಿಯೂಟದ ಸಾಮಗ್ರಿ
- ಅಡುಗೆ ಸಿಲಿಂಡರ್‌ಗಳು
- ಆಹಾರ ಧಾನ್ಯಗಳು
- ಅನಧಿಕೃತ ವ್ಯಕ್ತಿಗಳು
- ಮಕ್ಕಳ ಹಾಜರಾತಿ
- ಮಕ್ಕಳ ಆರೋಗ್ಯ
- ಸಿಸಿಟಿವಿ ಕ್ಯಾಮರಾ

ರೇಣುಕಸ್ವಾಮಿ ಕೊಲೆ ಪ್ರಕರಣ: ‘ಸುಪ್ರೀಂ’ಗೆ ಪ್ರಮಾಣಪತ್ರ

ನವದೆಹಲಿ: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಆರೋಪಿಗಳು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ.

ನಟ ದರ್ಶನ್ ಹಾಗೂ ಇತರ ಆರೋಪಿಗಳಿಗೆ ಜಾಮೀನು ನೀಡಿರುವುದನ್ನು ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿರುವ ನ್ಯಾಯಮೂರ್ತಿ ಜೆ.ಬಿ.ಪಾರ್ದಿವಾಲಾ ನೇತೃತ್ವದ ಪೀಠವು ತೀರ್ಪು ಕಾಯ್ದಿರಿಸಿದೆ. ರಾಜ್ಯ ಸರ್ಕಾರ ಹಾಗೂ ದರ್ಶನ್ ಪರ ವಕೀಲರ ವಾದ ಆಲಿಸಿದ್ದ ಪೀಠವು, ಉಳಿದ ಆರೋಪಿಗಳಿಗೆ ಪ್ರಮಾಣಪತ್ರ ಸಲ್ಲಿಸಲು ಸೂಚಿಸಿತ್ತು. ಪ್ರಕರಣದ 6ನೇ ಆರೋಪಿ ಜಗದೀಶ್, 7ನೇ ಆರೋಪಿ ಅನು ಕುಮಾರ್ ಪರವಾಗಿ ವಕೀಲ ಎಚ್.ಚಂದ್ರ ಶೇಖರ್ ಪ್ರಮಾಣಪತ್ರ ಸಲ್ಲಿಸಿದ್ದಾರೆ.

’ನಾವಿಬ್ಬರೂ ಆಟೊ ಚಾಲಕರು. ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ. ಘಟನೆ ನಂತರ ಶೆಡ್ ಹೊರಗೆ ದರ್ಶನ್ ಜತೆಗೆ ನಾವಿರುವ ಚಿತ್ರವನ್ನು ಆಧಾರವಾಗಿಟ್ಟುಕೊಂಡು ಆರೋಪಿಗಳೆಂದು ಬಿಂಬಿಸಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ’ ಎಂದಿದ್ದಾರೆ.

ಜಾಮೀನು ರದ್ದು ಮಾಡಬಾರದು ಎಂದು ಕೋರಿ ದರ್ಶನ್ ಹಾಗೂ ಪವಿತ್ರಾ ಗೌಡ ಮೇ 20ರಂದು ಪ್ರಮಾಣಪತ್ರ ಸಲ್ಲಿಸಿದ್ದರು. ಎಲ್ಲ ಆರೋಪಿಗಳು ಪ್ರಕರಣದಲ್ಲಿ ಭಾಗಿಯಾಗಿರುವ ಪುರಾವೆಗಳಿದ್ದು, ಜಾಮೀನು ರದ್ದು ಮಾಡಬೇಕೆಂದು ಒತ್ತಾಯಿಸಿ ರಾಜ್ಯ ಸರ್ಕಾರವು ಮೇ 15ರಂದು ಪ್ರಮಾಣಪತ್ರ ಸಲ್ಲಿಸಿತ್ತು.

ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ನಿಯಮಿತ
(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಜಂಟಿ ಉದ್ಯಮ)
(CIN: U74999KA2018PLC118247)
ನೊಂದಾಯಿತ ಕಚೇರಿ: ನಂ.49, 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001. ದೂರವಾಣಿ ಸಂ. +91-80-22267383, ಇ-ಮೇಲ್: mdcbic24@gmail.com
ನಂ. ಸಿಬಿಐಸಿ-ಟಿಐಟಿಎಲ್/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-02/653/2025-26 ದಿನಾಂಕ: 06.08.2025
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : ತುಮಕೂರು ತಾಲ್ಲೂಕು & ಜಿಲ್ಲೆ, ವಸಂತನರಸಪುರ ಕೈಗಾರಿಕಾ ಪ್ರದೇಶದ ಸಮೀಪ ಚೆನ್ನೈ ಬೆಂಗಳೂರು ಕೈಗಾರಿಕಾ ಕಾರಿಡಾರ್ (CBIC) ಆವರಣದಲ್ಲಿ ಹಾದು ಹೋಗಿರುವ ಹಾಲಿ 66ಕೆವಿ ಅಂತರಸನಹಳ್ಳಿ-ಸಿರಾ ಡಿಸಿ ಪ್ರಸರಣ ಮಾರ್ಗ ಹಾಗೂ ಹಾಲಿ 66ಕೆವಿ ತೋವಿನಕೆರೆ ಸಬ್ ಸ್ಟೇಷನ್‌ಗೆ ಬಂದಿರುವ ಟ್ಯಾಪ್ ಲೈನ್ ಪ್ರಸರಣ ಮಾರ್ಗವನ್ನು ಸ್ಥಳಾಂತರಿಸುವ ಕಾಮಗಾರಿ. (2ನೇ ಕರೆ).
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21.08.2025 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಮುಖ್ಯ ಅಭಿಯಂತರರು-1, ಸಿಬಿಐಸಿ-ಟಿಐಟಿಎಲ್
DIPR/CP/2234/NR/2025-26

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಆಯುಕ್ತಾಲಯ
ESIS (M) SERVICES KARNATAKA
ಎಸ್.ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು-560 010.
ಟೆಲಿಫ್ಯಾಕ್ಸ್: (080) 23324216 Website: www.esisms.karnataka.gov.in
Re-ಟೆಂಡರ್ ವಿಚಾರಣೆ ಸಂ: ಇಎಸ್‌ಐಎಸ್/ಇಜಿಎಸ್/02/2025-26 ದಿನಾಂಕ: 06.08.2025
ಅಲ್ಪಾವಧಿ ಮರು-ಟೆಂಡರ್ ಪ್ರಕಟಣೆ
Short Term Re-Tender for the Supply and Installation of ICU Units under Turnkey basis at ESI Hospitals Indiranagar, Mysore and Hubli ಗಳನ್ನು ಸರಬರಾಜು ಮಾಡಲು ತಯಾರಕರು/ ಅಧಿಕೃತ ಮಾರಾಟಗಾರರಿಂದ ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.
1) ಪ್ರಕಟಣೆ ಸಂಖ್ಯೆ: ಮತ್ತು ದಿನಾಂಕ: ಇಎಸ್‌ಐಎಸ್/ಇಜಿಎಸ್/02/2025-26 ದಿ: 06.08.2025. ESISMS/2025/IND0017/CALL-3. 2) ಟೆಂಡರ್ ನಮೂನೆ ವಿವರಗಳಿಗೆ ಹಾಗೂ ದಾಖಲಿಸಲು ಸಂಪರ್ಕಿಸಬೇಕಾದ ವೆಬ್‌ಸೈಟ್: https://kppp.karnataka.gov.in 3) ಮುಂಗಡ ಠೇವಣಿ: Rs.12,76,240/-. 4) ಪೂರ್ವಭಾವಿ ಸಭೆ: 18.08.2025 at 11.30 a.m. at the Office of the Commissionerate, ESIS M Services, Rajajinagar, Bengaluru. 5)ಟೆಂಡರುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಸಲ್ಲಿಸಲು ಅಂತಿಮ ದಿನಾಂಕ: 22.08.2025 ಸಂಜೆ 5.30 ಗಂಟೆಯೊಳಗೆ. 6) ಟೆಂಡರ್‌ಗಳ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 28.08.2025 ಬೆಳಿಗ್ಗೆ 11.30 ಗಂಟೆಗೆ. 7) Demonstration ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸ್ಥಳ: ಕವರ್-1 ತೆರೆದ ನಂತರ ತಿಳಿಸಲಾಗುವುದು.
ಸಹಿ/-
ಆಯುಕ್ತರು, ಕಾ.ರಾ.ವಿ.ಯೋ.ವೈ. ಸೇವೆ.
ವಾಸಾಸಂಇ/ವಾ.ಪ್ರ/2231/ಎಂಎಎ/25-26

ಆಯುಕ್ತರ ಕಛೇರಿ, ಮಹಾನಗರ ಪಾಲಿಕೆ, ಬಳ್ಳಾರಿ
ದೂರವಾಣಿ ಸಂಖ್ಯೆ : 08392-273479 /278168 ಫ್ಯಾಕ್ಸ್ : 08392-273477
ವೆಬ್‌ಸೈಟ್ : www.bellarycity.gov.in
ಇ-ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ-583101
ಸಂ: ಮನಪಾಬ/ಆ.ಶಾ/ವಾ.ವಿ/ಟೆಂಡರ್/ಲೋಡರ್/ಕಾಲ್-2/ಪ.ಪ್ರ/2025-26
ದಿನಾಂಕ: .8.2025
ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಸ್ತು ನಿರ್ವಹಣೆ ಅವಶ್ಯವಿರುವಂತೆ 160 ಲೋಡರ್ಸ್‌ಗಳ ಸೇವೆಯನ್ನು ಹೊರ ಗುತ್ತಿಗೆ ಮೂಲಕ ಪೂರೈಸಿಕೊಳ್ಳಲು ನಿರ್ಧರಿಸಿದ್ದು, ಪ್ರಯುಕ್ತ ಅರ್ಹ ಮಾನವ ಸಂಪನ್ಮೂಲ ಸರಬರಾಜು ಏಜೆನ್ಸಿದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಇಂಡೆಂಟ್ ಸಂಖ್ಯೆ: DMA/2024-25/SE5445/CAL-2 ಮೂಲಕ ಭಾಗವಹಿಸಲು ವಿವರಗಳನ್ನು ವೆಬ್‌ಸೈಟ್ https://Kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು. ಟೆಂಡರ್ ಸಲ್ಲಿಸಲು 21/08/2025 ಸಂಜೆ 05 ಗಂಟೆಗೆ ಕೊನೆಯ ದಿನಾಂಕವಾಗಿರುತ್ತದೆ.
ಸಹಿ/- ಆಯುಕ್ತರು,
ಬಳ್ಳಾರಿ ಮಹಾನಗರ ಪಾಲಿಕೆ,
ಬಳ್ಳಾರಿ.

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಕಿಇಂ-1/ಟೆಂಡರ್/2025-26/567 ದಿ: 31.07.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:10/2025-26
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-2, 3 &4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಹಾಗೂ ಮಧುಗಿರಿ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137- 283336.
ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ:200.08 ಲಕ್ಷಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 16-08-2025 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 18-08-2025 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 19-08-2025 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : 08-08-2025 ಸಂಜೆ 4.00 ಗಂಟೆಗೆ ವರೆಗೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/230/KSMCA/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ, (ದಕ್ಷಿಣ ವಲಯ),
9ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು -11.
ಸಂಖ್ಯೆ: ಹಿಸನಿತೋ(ದಕ್ಷಿಣ)/ಟೆಂಡರ್/12/2025-26 ದಿನಾಂಕ: 06.08.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಆಹ್ವಾನ ಪತ್ರ
(ದ್ವಿಲಕೋಟೆ ಪದ್ಧತಿ) (ಎಸ್‌ಟಿಡಿ ಕೆಡಬ್ಲ್ಯೂ-4)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ದಕ್ಷಿಣ), ಇವರು (ಈ ದಾಖಲಾತಿ-ಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವವರು ಎಂದು ಓದಲಾಗಿದೆ) ಇವರು ಕೆಟಿಪಿಪಿ ಕಾಯಿದೆಗಳು 2000ರಂತೆ, ಅನುಷ್ಠಾನಗೊಳಿಸಲು ಕಾರ್ಮಿಕ ಇಲಾಖೆಯಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ಮತ್ತು ನುರಿತ ವ್ಯಕ್ತಿಗಳು /ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಯಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಉದ್ಯಾನವನಗಳಿಗೆ ಅಭಿವೃದ್ಧಿ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1.	ಚಿಕ್ಕಪೇಟೆ ಕ್ಷೇತ್ರದ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. **ಒಟ್ಟು ಅಂದಾಜು ಮೊತ್ತ:₹.2,50,00,000.00, ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.2,25,65,449.00, ಇಎಂಡಿ ಮೊತ್ತ: ₹.3,38,500.00**
2.	ಪದ್ಮನಾಭನಗರ ಕ್ಷೇತ್ರದ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. **ಒಟ್ಟು ಅಂದಾಜು ಮೊತ್ತ:₹.2,25,00,000.00, ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.2,02,52,271.00, ಇಎಂಡಿ ಮೊತ್ತ: ₹.3,03,800.00**
3.	ಬಿಟಿಎಂ ಲೇಔಟ್ ಕ್ಷೇತ್ರದ ಉದ್ಯಾನವನಗಳಲ್ಲಿ ಸುಂದರೀಕರಣ, ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ನೀರಿನ ಸೌಲಭ್ಯ ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಮಾಡುವುದು. **ಒಟ್ಟು ಅಂದಾಜು ಮೊತ್ತ:₹.1,50,00,000.00, ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ): ₹.1,28,43,950.00, ಇಎಂಡಿ ಮೊತ್ತ: ₹.2,00,000.00**

ಟೆಂಡರ್ ವೇಳಾಪಟ್ಟಿ: (1) ಪ್ರಕಟಣೆಯ ದಿನಾಂಕ 06.08.2025. (2) ಟೆಂಡರ್ ದಾಖಲೆಗಳನ್ನು ದಿನಾಂಕ 07.08.2025ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 08.08.2025ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 14.08.2025ರ ಸಂಜೆ 4:00 ಗಂಟೆಯವರೆಗೆ. (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 16.08.2025ರ ಸಂಜೆ 4:30 ಗಂಟೆಗೆ. (6) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.
ಸಹಿ/- ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ
(ದಕ್ಷಿಣ ವಲಯ)

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ
M.G.I.R.E.D
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು-560 064.
ತರಬೇತಿಗೆ ಅರ್ಜಿ ಆಹ್ವಾನ
ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಐ.ಟಿ.ಐ/ ಡಿಪ್ಲೊಮಾ ಪೂರ್ಣಗೊಳಿಸಿರುವ ಅಭ್ಯರ್ಥಿಗಳಿಂದ “ಸೋಲಾರ್ ಪಿ.ವಿ. ಇನ್‌ಸ್ಟಾಲರ್” ಬಗ್ಗೆ “ಒಂದು ತಿಂಗಳ ವಸತಿಸಹಿತ ಉಚಿತ ತರಬೇತಿಗೆ” ಅರ್ಜಿ ಆಹ್ವಾನಿಸಲಾಗಿದೆ. ತರಬೇತಿಯ ಅವಧಿ 01 ತಿಂಗಳಾಗಿದ್ದು, ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 26.08.2025. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: https://www.mgired.karnataka.gov.in ದೂರವಾಣಿ: 080-23626359/ 8618247700/7483858279/7019709942
ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಚೇರಿ, ಯಲ್ಲಾಪುರ ವಿಭಾಗ, ಯಲ್ಲಾಪುರ
ದೂರವಾಣಿ ನಂ.: 08419-261273 Email: dcfyellapur@gmail.com
ಎ5/ಬಿಜಿಟಿ/ವಿವ-55/ಕಿಶೋರ್/ಇಟೆಂಡರ್/2025-26 ದಿನಾಂಕ: 04-08-2025
ಟೆಂಡರ ಆಹ್ವಾನಿಸುವ ಅಧಿಸೂಚನೆ
(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಯಲ್ಲಾಪುರ ಅರಣ್ಯ ವಿಭಾಗದ ವ್ಯಾಪ್ತಿಗೊಳಪಡುವ ವಲಯಗಳಲ್ಲಿ ವಿಶ್ವ ಬ್ಯಾಂಕ ನೆರವಿನ K-shore ಯೋಜನೆ ಅಡಿ ಮಾನ್‌ಸೂನ್ ನೆಡುತೋಪು ರಚನೆ ಹಾಗೂ ಇತರೆ ಅರಣ್ಯೀಕರಣ ಕಾಮಗಾರಿಗಳಿಗೆ Frame work Agreement ಮಾಡಿಕೊಳ್ಳಲು ಪೂರ್ವ ಅರ್ಹತೆ ಪಡೆಯಲು No: KFD/2025-26/PREQUAL_TENDER_NUMBER_32 ಕರೆಯಲಾಗಿದೆ. ಸದರಿ ಟೆಂಡರ್ ಗೆ ಬೇಕಾಗುವ ತಾಂತ್ರಿಕ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12-08-2025 ಸಾಯಂಕಾಲ 5.00 ಗಂಟೆಗೆ ನಿಗದಿಪಡಿಸಲಾಗಿದೆ. ದಿನಾಂಕ: 11-08-2025 ರಂದು ಯಲ್ಲಾಪುರ ವಿಭಾಗ ಕಚೇರಿಯಲ್ಲಿ ಪೂರ್ವಭಾವಿ ಸಭೆಯನ್ನು (Pre-bid) ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಯಲ್ಲಾಪುರ ವಿಭಾಗ, ಯಲ್ಲಾಪುರ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. (ದೂರವಾಣಿ ಸಂಖ್ಯೆ: 08419-261273).
ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ವಿಭಾಗ, ಯಲ್ಲಾಪುರ
DIPR/KWR/KSMCA/345/25-26 Dt.06.08.2025

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ,
ಡಾ. ಬಾಬು ಜಗಜೀವನ್ ರಾಮ್ ಸಂಶೋಧನಾ ಕೇಂದ್ರ,
ಹೊರ ವರ್ತುಲ ರಸ್ತೆ, ಮಾಗಡಿ ಮುಖ್ಯ ರಸ್ತೆ, ಸುಮನಹಳ್ಳಿ ಸರ್ಕಲ್,
ಬೆಂಗಳೂರು-560091 ದೂರವಾಣಿ ಸಂಖ್ಯೆ: 080-25578422
ಸಂಖ್ಯೆ: SWD/IGCCD/OS-04/CLAT&CUET/2025-26 ದಿನಾಂಕ: 06.08.2025
ಟೆಂಡರ್ ಪ್ರಕಟಣೆ (ಇ-ಟೆಂಡರ್ ಮೂಲಕ ಮಾತ್ರ)
ಸಮಾಜ ಕಲ್ಯಾಣ ಇಲಾಖೆಯ, ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ CLAT (Common Law Admission Test) and CUET (Common University Entrance Test) course ಗೆ ಸಂಬಂಧಿಸಿದಂತೆ ಆನ್‌ಲೈನ್‌ನಲ್ಲಿ ಪರೀಕ್ಷಾ ಪೂರ್ವ ತರಬೇತಿ ನೀಡಲು ಅರ್ಹ ಪ್ರತಿಷ್ಠಿತ ತರಬೇತಿ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 30 ದಿನಗಳ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕಟಣೆ ಸಂಖ್ಯೆ ಈ ಕೆಳಗಿನಂತಿದೆ.
ಟೆಂಡರ್ ಸಂಖ್ಯೆ: 1.SWD/2025-26/SE0209-CLAT
2. SWD/2025-26/SE0210-CUET
ಹೆಚ್ಚಿನ ವಿವರಗಳಿಗೆ http://kppp.karnataka.gov.in ವೆಬ್ ಸೈಟನ್ನು ನೋಡಬಹುದಾಗಿದೆ.
ಸಹಿ/- ನಿರ್ದೇಶಕರು
ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/2223/ಎಸ್‌ಎಸ್‌ಸಿ/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
KPTCL
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.
ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಸಂ:ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಎಪಿಸಿಸಿ&ಪ್ರೊ)/ಕಾನಿಇಂ(ಪ್ರೊ-3)ಸ.ಕಾ.ನಿ.ಇಂ-5/2025-26/1637-657 ದಿನಾಂಕ:05-08-2025
ವಿಚಾರಣಾ ಸಂಖ್ಯೆ/ಕಾಮಗಾರಿಯ ವಿವರ
1. ಕವಿಪ್ರನಿನಿ/2025-26/ಟಿಎಲ್/ವರ್ಕ್_ಇಂಡೆಂಟ್2445
ಕಲಬುರಗಿ ಜಿಲ್ಲೆಯ 220/110/11ಕೆವಿ ಶಹಾಬಾದ್ ಸ್ವೀಕರಣಾ ಕೇಂದ್ರದಿಂದ 110/11ಕೆವಿ ವಿದ್ಯುತ್ ವಿತರಣಾ ಕೇಂದ್ರ ಮೊರಟಗಿವರೆಗೆ ಅಸ್ತಿತ್ವದಲ್ಲಿರುವ 110ಕೆವಿ 59.885ಕಿ.ಮೀ ಉದ್ದದ ಶಹಾಬಾದ್- ಬಿ ಬಾಗೇವಾಡಿ ಮಾರ್ಗದ ಜೋಡಿ ಮಾರ್ಗ ಗೋಪುರಗಳನ್ನು ಮತ್ತು ಲಿಂಕ್ಸ್ ವಾಹಕವನ್ನು ಬದಲಾಯಿಸಿ, 110ಕೆವಿ ಜೋಡಿ ಮಾರ್ಗದ ಗೋಪುರಗಳನ್ನು ಮತ್ತು ಲಿಂಕ್ಸ್ ವಾಹಕವನ್ನು ಅಳವಡಿಸಿ ಪುನರ್ ನಿರ್ಮಾಣ ಮಾಡುವ ಕಾಮಗಾರಿಯನ್ನು **ಪೂರ್ಣ ಗುತ್ತಿಗೆ (ಟೋಟಲ್ ಟರ್ನ್‌ಕೀ) ಆಧಾರದ ಮೇಲೆ** ಸಾಮಗ್ರಿಗಳು/ಸಲಕರಣೆಗಳ ಪೂರೈಕೆ ಮತ್ತು ಎಲ್ಲಾ ಸಾಮಗ್ರಿಗಳ /ಸಲಕರಣೆಗಳ ಅಳವಡಿಕೆ (ಸಿವಿಲ್ ಕೆಲಸಗಳು ಸೇರಿದಂತೆ), ಅಸ್ತಿತ್ವದಲ್ಲಿರುವ ಮಾರ್ಗದಲ್ಲಿ ಕಳಚಿದ ಸಾಮಗ್ರಿಗಳ ಬೈ ಬ್ಯಾಕ್ ಸಹ ಸೇರಿದಂತೆ ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.
ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: **07.08.2025ರ 15:30 ಗಂಟೆಗೆ ಅಥವಾ ನಂತರ,** ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ: 06.09.2025ರ 15:00 ಗಂಟೆ.**
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಸಂ:ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಎಪಿಸಿಸಿ & ಪ್ರೊ)/ಕಾನಿಇಂ-4/ಸ.ಇಂ-1/2025-26/1681-698 ದಿನಾಂಕ:06-08-2025
ವಿಚಾರಣಾ ಸಂಖ್ಯೆ/ಕಾಮಗಾರಿಯ ವಿವರ
2. ಕವಿಪ್ರನಿನಿ/2025-26/ಎಸ್‌ಎಸ್/ವರ್ಕ್_ಇಂಡೆಂಟ್2472
ದಾವಣಗೆರೆ ಜಿಲ್ಲೆ & ತಾಲ್ಲೂಕಿನ 220/66/11ಕೆವಿ ದಾವಣಗೆರೆ ಉಪಕೇಂದ್ರದಲ್ಲಿ 2X100 ಎಂವಿಎ, 220/66/11ಕೆವಿ ವಿದ್ಯುತ್ ಪರಿವರ್ತಕಗಳನ್ನು 2X150 ಎಂವಿಎ, 220/66/11ಕೆವಿ ವಿದ್ಯುತ್ ಪರಿವರ್ತಕಗಳನ್ನಾಗಿ ಬದಲಾಯಿಸುವ ಕಾಮಗಾರಿಯನ್ನು **ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ** ಎಲ್ಲಾ ಉಪಕರಣಗಳು / ಸಾಮಗ್ರಿಗಳ ಹಾಗೂ ಮ್ಯಾಂಡೇಟರಿ ಸ್ಪೇರ್‌ಗಳ ಸರಬರಾಜು ಮತ್ತು ಎಲ್ಲಾ ಉಪಕರಣಗಳು / ಸಾಮಗ್ರಿಗಳ ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.
ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: **07.08.2025** ರಂದು ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **21.08.2025 @ 15.00 ಗಂಟೆ.**
ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ “ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ” ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ಪಡೆಯಬಹುದು. **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ನಿಗಮ ಕಛೇರಿ, 2ನೇ ಮಹಡಿ, ಕವಿಪ್ರನಿನಿ, ಕಾವೇರಿ ಭವನ,
ಬೆಂಗಳೂರು-560009. ದೂ:080-22243926

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಹಿರಿಯರಿಗೆ, ಕಿರಿಯರಿಗೆ ಬರುವ ಒಡವೆಗಳಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದಷ್ಟೂ ಭೂಷಣ.

-ಬಿ.ಎಂ. ಶ್ರೀಕಂಠಯ್ಯ

ಸಂಪಾದಕೀಯ

ಒತ್ತುವರಿ ತೆರವು ಕಾರ್ಯಾಚರಣೆ ಕೋಮುದ್ವೇಷದ ರಾಜಕಾರಣ

ಅಸ್ಸಾಂನ ಕೆಲವು ಜಿಲ್ಲೆಗಳಲ್ಲಿ ಒತ್ತುವರಿ ಭೂಮಿಯನ್ನು ತೆರವುಗೊಳಿಸಲು ಅಲ್ಲಿನ ರಾಜ್ಯ ಸರ್ಕಾರ ನಡೆಸುತ್ತಿರುವ ಕಾರ್ಯಾಚರಣೆಯು, ಮುಸ್ಲಿಂ ಸಮುದಾಯವನ್ನು ಗುರಿ ಮಾಡಿಕೊಂಡಿರುವುದು ಸ್ಪಷ್ಟವಾಗಿದೆ. ರಾಜ್ಯದಾದ್ಯಂತ ಎಲ್ಲ ಸಮುದಾಯಗಳ ಜನರೂ ಸರ್ಕಾರಿ ಭೂಮಿ ಹಾಗೂ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಸರ್ಕಾರದ ಕಂದಾಯ ಭೂಮಿ, ಗೋಮಾಳ ಹಾಗೂ ಅರಣ್ಯ ಪ್ರದೇಶಗಳಲ್ಲಿ ನಡೆದಿರುವ ಒತ್ತುವರಿಯನ್ನು ತೆರವುಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿದೆ ಎಂದು ಸರ್ಕಾರ ಹೇಳಿದೆ. ಮನುಷ್ಯ ಹಾಗೂ ವನ್ಯಮೃಗಗಳ ನಡುವಣ ಸಂಘರ್ಷವನ್ನು ಕಡಿಮೆ ಮಾಡಲು ಸಹಕಾರಿ ಆಗುವಂತೆ ಒತ್ತುವರಿಯನ್ನು ತೆರವುಗೊಳಿಸಲು ಗುವಾಹಟಿ ಹೈಕೋರ್ಟ್ ನೀಡಿರುವ ನಿರ್ದೇಶನದ ಮೇರೆಗೆ ತೆರವು ಕಾರ್ಯಾಚರಣೆ ನಡೆಯುತ್ತಿದೆ ಎಂದು ಹೇಳಲಾಗಿದೆ. ಆದರೆ, ಕೆಲವು ನಿರ್ದಿಷ್ಟ ಪ್ರದೇಶಗಳು ಹಾಗೂ ಕುಟುಂಬಗಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಯುತ್ತಿರುವುದು ಹಾಗೂ ಕ್ಷಿಪ್ರಗತಿಯಲ್ಲಿ ತೆರವು ಪ್ರಕ್ರಿಯೆ ನಡೆಯುತ್ತಿರುವುದು, ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರಿಗೆ ಕೋಮು ಉದ್ದೇಶ ಇರುವುದರ ಸ್ಪಷ್ಟ ಸೂಚನೆಯಾಗಿದೆ. ಒತ್ತುವರಿ ಭೂಮಿಯನ್ನು ತೆರವುಗೊಳಿಸುವ ಕಾರ್ಯಾಚರಣೆ 2021ರಿಂದಲೂ ನಡೆಯುತ್ತಿದೆ. ಆ ಕಾರ್ಯಾಚರಣೆಯನ್ನು ರಾಜಕೀಯ ಉದ್ದೇಶಗಳಿಗಾಗಿ ಈಗ ಇದ್ದಕ್ಕಿದ್ದಂತೆ ತೀವ್ರಗೊಳಿಸಲಾಗಿದೆ.



ಪರಿಸರ ಸಂರಕ್ಷಣೆ ಹಾಗೂ ಭೂಮಿ ನಿರ್ವಹಣೆಯ ಕಾಳಜಿಯಿಂದ ಹೈಕೋರ್ಟ್ ನೀಡಿರುವ ನಿರ್ದೇಶನವನ್ನು, ಅಕ್ರಮ ವಲಸೆಗಾರರು ಎಂದು ಗುರ್ತಿಸಲಾಗುವ ಹಾಗೂ ಬೆಂಗಾಲಿ ಮಾತನಾಡುವ ಮುಸ್ಲಿಮರನ್ನು ಹತ್ತಿಕ್ಕಲು ಸರ್ಕಾರ ಬಳಸುತ್ತಿದೆ. ಮುಸ್ಲಿಂ ಸಮುದಾಯ ಗಣನೀಯ ಪ್ರಮಾಣದಲ್ಲಿರುವ ಪ್ರದೇಶಗಳನ್ನು ಗುರ್ತಿಸಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಒತ್ತುವರಿದಾರರು ಎಂದು ಗುರ್ತಿಸಲಾಗಿರುವ ನಾಗರಿಕರು, ಪ್ರಾಕೃತಿಕ ವಿಕೋಪಗಳಲ್ಲಿ ತಮ್ಮ ಮನೆಗಳನ್ನು ಕಳೆದುಕೊಂಡವರಾಗಿದ್ದಾರೆ ಹಾಗೂ ಲಭ್ಯವಿರುವ ಖಾಲಿ ಜಾಗಗಳಲ್ಲಿ ವಸತಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಒತ್ತುವರಿ ಕಾರ್ಯಾಚರಣೆಯ ನಂತರ ಇವರಲ್ಲಿ ಬಹುತೇಕರಿಗೆ ವಾಸಿಸಲು ಮನೆ ಇಲ್ಲದಂತಾಗಿದೆ ಹಾಗೂ ಅವರ ಜೀವನೋಪಾಯದ ದಾರಿಗಳೂ ಮುಚ್ಚಿ ಹೋಗಿವೆ. ವಾಸಸ್ಥಳಕ್ಕೆ ಸಂಬಂಧಿಸಿದಂತೆ ಅಧಿಕೃತ ದಾಖಲೆಗಳನ್ನು ಹೊಂದಿರುವ ಹಾಗೂ ದಶಕಗಳಿಂದ ವಾಸಿಸುತ್ತಿರುವ ಸ್ಥಳದಿಂದ ನಿರ್ದಿಷ್ಟ ಸಮುದಾಯಕ್ಕೆ ಸೇರಿದವರನ್ನು ಒಕ್ಕಲೆಬ್ಬಿಸಿ ಬೀದಿಪಾಲು ಮಾಡಲಾಗಿದೆ. ಯಾವುದೇ ಸರ್ಕಾರಿ ಕಾರ್ಯಾಚರಣೆ, ಅದೆಷ್ಟೇ ಆಡಳಿತಾತ್ಮಕ ಹಾಗೂ ಕಾನೂನುಬದ್ಧ ಆಗಿದ್ದರೂ, ಮಾನವೀಯ ಸ್ಪಂದನಗಳನ್ನು ಹೊಂದಿರುವುದು ಅಗತ್ಯ. ಅಂಥ ಮಾನವೀಯ ಆಯಾಮ ಅಸ್ಸಾಂನಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಇಲ್ಲವಾಗಿದೆ.

> ಭೂಮಿ ಒತ್ತುವರಿಯನ್ನು ತೆರವುಗೊಳಿಸಿ ಎನ್ನುವ ಹೈಕೋರ್ಟ್ ನಿರ್ದೇಶನ ಪಾಲಿಸುವ ಹೆಸರಿನಲ್ಲಿ ಅಸ್ಸಾಂ ಸರ್ಕಾರ ಕೋಮುದ್ವೇಷದ ರಾಜಕಾರಣ ಮಾಡುತ್ತಿದೆ. ನಾಗರಿಕರ ನಡುವೆ ತಾರತಮ್ಯ ನೀತಿ ಅನುಸರಿಸುತ್ತಿದೆ.

ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರು ತಮ್ಮ ತಾರತಮ್ಯ ಧೋರಣೆಯನ್ನೇ ಸಾರ್ವಜನಿಕ ನೀತಿಯನ್ನಾಗಿ ಅನುಸರಿಸುತ್ತಿರುವಂತಿದೆ. ಸ್ಥಳೀಯರಿಂದ ಆಗಿರುವ ಒತ್ತುವರಿ ಅಪರಾಧವಲ್ಲ ಎಂದು ಹೇಳಿರುವ ಅವರು, ವಲಸಿಗ ಮುಸ್ಲಿಮರನ್ನು ಮಾತ್ರ ಒಕ್ಕಲೆಬ್ಬಿಸುವುದಾಗಿ ಹೇಳಿದ್ದಾರೆ. ಜನರ ನಡುವೆ ತಾರತಮ್ಯ ಎಸಗುವಂತೆ ಸರ್ಕಾರದ ನೀತಿ ಇರಬಾರದು. ಒತ್ತುವರಿ ಮಾಡಿದವರು ಸ್ಥಳೀಯರಾದ ಮಾತ್ರಕ್ಕೆ ಅದು ಕಾನೂನುಬದ್ಧವೂ ಆಗುವುದಿಲ್ಲ. ಒಕ್ಕಲೆಬ್ಬಿಸಿದ ಜನಕ್ಕೆ ಆಶ್ರಯ ನೀಡುವುದು ಸೇರಿದಂತೆ ಯಾವುದೇ ರೀತಿಯ ನೆರವು ನೀಡಬಾರದೆಂದು ಮುಖ್ಯಮಂತ್ರಿ ಜನರಿಗೆ ಕರೆ ನೀಡಿದ್ದಾರೆ. ಅಸ್ಸಾಂನ ಕಾನೂನುಬದ್ಧ ನಿವಾಸಿಗಳು ಯಾರು ಹಾಗೂ ಅತಿಕ್ರಮಣಕಾರರು ಯಾರು ಎನ್ನುವುದನ್ನು ಸರ್ಕಾರ ಮತ್ತು ಅಧಿಕಾರಿಗಳು ತೀರ್ಮಾನಿಸುತ್ತಿದ್ದಾರೆ. ‘ಭೂಮಿ ಜಿಹಾದ್’ ಹಾಗೂ ‘ನಿರ್ದಿಷ್ಟ ಧರ್ಮಕ್ಕೆ ಸಂಬಂಧಿಸಿದ ಜನರಿಂದ ಜನಸಂಖ್ಯಾ ಆಕ್ರಮಣಶೀಲತೆ’ ಎನ್ನುವ ಪ್ರಚೋದನಕಾರಿ ಪದಗಳನ್ನು ಮುಖ್ಯಮಂತ್ರಿ ಬಳಸಿದ್ದಾರೆ. ಮುಖ್ಯಮಂತ್ರಿ ಬಳಸುತ್ತಿರುವ ಭಾಷೆ ಹಾಗೂ ಇಡೀ ತೆರವು ಕಾರ್ಯಾಚರಣೆ ಪ್ರಕ್ರಿಯೆಯು ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಸರ್ಕಾರ ಅನುಸರಿಸುತ್ತಿರುವ ಮುಸ್ಲಿಂ ವಿರೋಧಿ ಧೋರಣೆಯ ಭಾಗವಾಗಿವೆ. 2026ರಲ್ಲಿ ಅಸ್ಸಾಂನಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಆ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ನಡೆಯುತ್ತಿರುವ ರಾಜಕೀಯಪ್ರೇರಿತ ಕಾರ್ಯಾಚರಣೆಯ ರೂಪದಲ್ಲಿ ಅಲ್ಲಿನ ಪ್ರಸಕ್ತ ವಿದ್ಯಮಾನಗಳನ್ನು ಗಮನಿಸಬಹುದು. ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳಲ್ಲಿ ವಾಸಸ್ಥಳದ ಹಕ್ಕೂ ಒಂದಾಗಿದೆ. ಆ ಹಕ್ಕನ್ನು, ಸಂಕುಚಿತ ರಾಜಕೀಯ ಕಾರಣಗಳಿಗಾಗಿ ಸರ್ಕಾರ ಕಿತ್ತುಕೊಳ್ಳಬಾರದು.

ಚಾವಡಿ

ಅಹಮಿಕೆಯ ತೃಪ್ತಿ!



ಬದುಕಿನ ಯಾವುದೇ ಚರ್ಚಾರ್ಹ ವಿಷಯವಿರಲಿ, ಬಹುಪಾಲು ಜನರಿಗೆ ಸತ್ಯಾಸತ್ಯತೆಯ ಅಗತ್ಯವಿಲ್ಲ. ಇದು ಸತ್ಯ ಎನ್ನುವುದು ತನ್ನ ನಂಬಿಕೆ; ತನ್ನ ನಂಬಿಕೆಯೊಂದೇ ಸತ್ಯ ಎನ್ನುವ ಅಹಮಿಕೆಯ ತೃಪ್ತಿಯೊಂದೇ ಅವರಿಗೆ ಸಾಕು. ಮುಕ್ತ ಮನಸ್ಸಿನಿಂದ ಸತ್ಯವನ್ನು ಕಂಡುಕೊಳ್ಳುವ, ಪರಾಮರ್ಶಿಸುವ ಮನೋಭಾವ ಯಾರಿಗೂ ಇಲ್ಲ.

ಗುರುರಾಜ ಕೊಡ್ಕಣಿ, ಕಾದಂಬರಿಕಾರ, ಫೇಸ್‌ಬುಕ್‌ನಿಂದ

ಕಿಡಿನುಡಿ



ಸರ್ಕಾರಿ ನೌಕರರಿಗೆ ಸರ್ಕಾರವು ಹಲವು ಸೌಲಭ್ಯ ಕಲ್ಪಿಸಿದೆ. ಅದರಲ್ಲೇ ಉತ್ತಮವಾಗಿ ಜೀವನ ಸಾಗಿಸಬಹುದು. ಆದರೆ, ಕೆಲವು ಅಧಿಕಾರಿಗಳು ಹಣದಾಸೆಯಿಂದ ಭ್ರಷ್ಟಾಚಾರದಲ್ಲಿ ತೊಡಗುತ್ತಿದ್ದಾರೆ. ಅವರು ಭ್ರಷ್ಟಾಚಾರ ಎಸಗಿರುವುದು ಸಾಬೀತಾದರೆ, ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳುತ್ತೇವೆ.

ಬಿ.ಎಸ್. ಪಾಟೀಲ, ಲೋಕಾಯುಕ್ತ ನ್ಯಾಯಮೂರ್ತಿ

25 ವರ್ಷಗಳ ಹಿಂದೆ

ಸೋಮವಾರ, 7-8-2000

- **ವೀರಪ್ಪನ್ ಬೇಡಿಕೆ: ಉಭಯ ಸರ್ಕಾರಗಳ ಉತ್ತಮ ಸ್ಪಂದನ**

ಬೆಂಗಳೂರು, ಆಗಸ್ಟ್ 6– ‘ಡಾ. ರಾಜ್ ಕುಮಾರ್ ಬಿಡುಗಡೆಯೇ ನಮ್ಮ ಮುಖ್ಯ ಗುರಿ. ಈ ಹಿನ್ನೆಲೆಯಲ್ಲಿ ನರಹಂತಕ ವೀರಪ್ಪನ್ ಸರ್ಕಾರದ ಮುಂದಿಟ್ಟಿರುವ ಎಲ್ಲಾ 10 ಬೇಡಿಕೆಗಳಿಗೂ ಸರ್ಕಾರ ಸ್ಪಂದಿಸಿದೆ’ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ಹೇಳಿದರು.

ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರ ಜತೆ ಚೆನ್ನೈನಲ್ಲಿ ಸುಮಾರು ಮೂರು ಗಂಟೆ ನಡೆದ ಸುದೀರ್ಘ ಮಾತುಕತೆಯ ನಂತರ ನಗರಕ್ಕೆ ಆಗಮಿಸಿದ ಕೃಷ್ಣ ಅವರು, ಈ ವಿಷಯ ತಿಳಿಸಿದರು.

- **ತಮಿಳು ಉಗ್ರಗಾಮಿಗಳ ಕೈವಾಡ ಶಂಕೆ**

ಚೆನ್ನೈ, ಆಗಸ್ಟ್ 6– ಕನ್ನಡದ ಚಿತ್ರನಟ ರಾಜ್‌ಕುಮಾರ್ ಮತ್ತು ಇತರ ಮೂವರ ಬಿಡುಗಡೆಗಾಗಿ ವೀರಪ್ಪನ್ ಮುಂದಿಟ್ಟಿರುವ ರಾಜಕೀಯ ಬೇಡಿಕೆಗಳನ್ನು ತಮಿಳುನಾಡು ಉಗ್ರಗಾಮಿ ಗುಂಪೊಂದರ ಜತೆಗೂಡಿ ರಚಿಸಲಾಗಿದೆ ಎಂಬ ಊಹಾಪೋಹ ಬಲವಾಗಿದೆ.

ಈ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿ ಅವರನ್ನು ಪ್ರಶ್ನಿಸಿದಾಗ, ‘ಇದು ನಿಜವೂ ಇರಬಹುದು ಅಥವಾ ಸ್ವತಃ ವೀರಪ್ಪನ್‌ನೇ ತಮಿಳು ಉಗ್ರಗಾಮಿ-ಯಾಗಿಯೂ ಇರಬಹುದು’ ಎಂದರು.

75 ವರ್ಷಗಳ ಹಿಂದೆ

ಸೋಮವಾರ, 7-8-1950

- **ಮದ್ರಾಸ್ ಆಹಾರ ಸ್ಥಿತಿ ಕಳವಳಕರವಾಗಿಲ್ಲ**

ಮದರಾಸ್, ಆಗಸ್ಟ್ 6–ಮದರಾಸ್ ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುವ ಬಗ್ಗೆ ಕೇಂದ್ರ ಸರ್ಕಾರದ ಆಹಾರ ಸಚಿವ ಶಾಖೆಯವರು ಕಳುಹಿಸಿದ್ದ ಸಿ.ಪಿ. ಕರುಣಾಕರ ಮೆನನ್ ಅವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಮದರಾಸಿನ ಆಹಾರ ಪರಿಸ್ಥಿತಿ ಬಗ್ಗೆ ಯಾವ ರೀತಿಯಲ್ಲಿಯೂ ಕಳವಳ ಪಡಬೇಕಾದ ಕಾರಣವಿಲ್ಲ ಎಂದು ತಿಳಿಸಿದರು.

ನಾಲ್ವಡಿ: ಕನ್ನಡಿಗರ ವೈರಮುಡಿ



ವಿಶ್ಲೇಷಣೆ

ವೈ.ಎಸ್.ವಿ. ದತ್ತ

> ಸ್ವಾತಂತ್ರ್ಯಪೂರ್ವದಲ್ಲೇ ಪ್ರಜಾಪ್ರಭುತ್ವದ ಪ್ರಯೋಗಶಾಲೆಯ ರೂಪದಲ್ಲಿ ಮೈಸೂರು ಸಂಸ್ಥಾನ ರೂಪುಗೊಂಡಿದ್ದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದರ್ಶಿತ್ವವೇ ಕಾರಣ. ನಾಲ್ವಡಿ ಅವರ ಜನಪ್ರಿಯತೆ ಹಾಗೂ ಜನಪರತೆ ಭಾರತದ ರಾಜಪ್ರಭುತ್ವ ಪರಂಪರೆಯ ವಿರಳ ಹಾಗೂ ವಿಶಿಷ್ಟ ಅಧ್ಯಾಯ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರು ಇತ್ತೀಚೆಗಂತೂ ಒಂದಿಲ್ಲೊಂದು ಕಾರಣಕ್ಕಾಗಿ ಪ್ರಸ್ತಾಪವಾಗುತ್ತಿದೆ. ಸಂದರ್ಭೋಚಿತವಾಗಿ ಹೇಳುವುದಾದರೆ, ನಾಲ್ವಡಿ ಅವರ ಹೆಸರನ್ನು ಕನ್ನಡಿಗರು ಅಭಿಮಾನದಿಂದ ಸ್ಮರಿಸಬೇಕಾದ ತಿಂಗಳು ಆಗಸ್ಟ್. ಅವರು ಮೈಸೂರು ಸಂಸ್ಥಾನದ ಮಹಾರಾಜರಾಗಿ ಪಟ್ಟಾಭಿಷಿಕ್ತರಾದದ್ದು ಆಗಸ್ಟ್ 8ರಂದು (1902). ಅವರು ನಮ್ಮನ್ನು ಅಗಲಿದ್ದು ಆಗಸ್ಟ್ 3ರಂದು (1940).

ನಾಲ್ವಡಿ ಅವರ ವ್ಯಕ್ತಿತ್ವಕ್ಕೆ ದಿವ್ಯತೆ, ಭವ್ಯತೆಯ ಮೆರುಗು ಬಂದದ್ದು ಅವರು ಮಹಾರಾಜರು ಎಂಬ ಕಾರಣಕ್ಕಲ್ಲ. ಬದಲಿಗೆ, ಮಹಾರಾಜರಾಗಿದ್ದವರು ಅರಮನೆಯ ಅಟ್ಟದಿಂದ ಜನಮನಕ್ಕಿಳಿದರು ಎಂಬ ಕಾರಣಕ್ಕಾಗಿ. ಬಿಜ್ಜಳನ ಅರಮನೆಗೆ ಪ್ರತಿಯಾಗಿ ಬಸವಣ್ಣ ‘ಮಹಾಮನೆ’ಯನ್ನು ಕಟ್ಟಿದರಷ್ಟೆ. ಆದರೆ, ನಾಲ್ವಡಿಯವರು ಅರಮನೆಯನ್ನೇ ಜನ ಸಾಮಾನ್ಯರ ಮಹಾಮನೆಯಾಗಿ ಪರಿವರ್ತಿಸಿದರು. ಕುವೆಂಪು ಅವರು ಸಾಮ್ರಾಜ್ಯಶಾಹಿ, ಪುರೋಹಿತಶಾಹಿ ಮತ್ತು ಬಂಡವಾಳಶಾಹಿ ವಿರೋಧವಾದ ನಿಲುವು ತಾಳಿರುವುದನ್ನು ಅವರ ಸಾಹಿತ್ಯದಲ್ಲಿ ಕಂಡಿದ್ದೇವೆ. ಅಂತಹ ಕುವೆಂಪು, ನಾಲ್ವಡಿ ಅವರನ್ನು ಕುರಿತು ಬರೆದಿರುವ ‘ಬೆಳ್ಳಿ ಹಬ್ಬದ ಕಬ್ಬದ ಬಳ್ಳಿ’ ಕವನದಲ್ಲಿ– ರಾಜಋಷಿ, ಕರ್ಮಯೋಗಿ, ಆತ್ಮವೀರ, ಧರ್ಮವೀರ, ಲೋಕಮಾನ್ಯ, ಪೂರ್ಣಹೃದಯಿ– ಮೊದಲಾದ ವಿಶ್ಲೇಷಣಾತ್ಮಕ ಪದಪುಂಜಗಳನ್ನು ಬಳಸುವುದರ ಮೂಲಕ ನಾಲ್ವಡಿಯವರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಕೆಲಸ ಮಾಡುತ್ತಾರೆ. ಮತ್ತೂ ಒಂದು ಹೆಜ್ಜೆ ಮುಂದೆ ಹೋಗುವ ಅವರು– ಹರಿಶ್ಚಂದ್ರ, ರಾಮ, ಕೃಷ್ಣ, ಅಶೋಕ, ಯುಧಿಷ್ಠಿರಾದಿಯಾಗಿ ಮಹಾನೃಪರ ಸಾಲಿನಲ್ಲಿ ನಾಲ್ವಡಿ ಅವರ ಹೆಸರು ಬೆಳಗುತ್ತದೆ ಎನ್ನುತ್ತಾರೆ.

ಚಾಮರಾಜೇಂದ್ರ ಒಡೆಯರ್ ಮೃತರಾದಾಗ ನಾಲ್ವಡಿ ಅವರು ಹತ್ತು ವರ್ಷದ ಬಾಲಕ. ಅವರು ರಾಜ್ಯಾಭಿಷಿಕ್ತರಾದಾಗ 18 ವರ್ಷದ ಯುವಕ. ಪಟ್ಟಾಭಿಷಿಕ್ತರಾದ ಮೇಲೆ ತಂದೆಯವರಂತೆಯೇ ನಾಡಿನ ಉದ್ದಗಲಕ್ಕೂ ಸಂಚರಿಸಿದರು. ಹಾಗೆ ಸಂಚರಿಸಿದಾಗ ತಮ್ಮ ತಂದೆಯವರು ಹುಟ್ಟುಹಾಕಿ ಹೋಗಿದ್ದ ಸಾಧನಾ ಮಾರ್ಗದ ವಿಸ್ತರಣೆಯ ದೂರದೃಷ್ಟಿಯ ಕನಸನ್ನು ಕಂಡರು. ಇದರಿಂದಲೇ ಅವರು ‘ಮಾದರಿ ಮೈಸೂರು ಸಂಸ್ಥಾನ’ವನ್ನು ಕಟ್ಟಲು ಸಾಧ್ಯವಾಯಿತು. ಈ ಮಾತು ಹೇಳುವಾಗ ಒಂದು ಪ್ರಸಂಗ ನೆನಪಿಗೆ ಬರುತ್ತದೆ. (ಎಂ. ಶಿಂಗ್ರಯ್ಯನವರು ಬರೆದಿರುವ ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ, 1927). ಅದು ಹೀಗಿದೆ:

ನಾಲ್ವಡಿ ಅವರ ತಂದೆ ಚಾಮರಾಜೇಂದ್ರ ಒಡೆಯರ್ ಅವರು ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ ಸರ್ ರಿಚರ್ಡ್ ಮೀಡ್ ಎಂಬ ಆಂಗ್ಲ ಅಧಿಕಾರಿ ಮೈಸೂರು ಸಂಸ್ಥಾನದ ಚೀಫ್ ಕಮಿಷನರ್ ಆಗಿದ್ದರು. ನಂತರ ಅವರು ನಿವೃತ್ತರಾಗಿ ಸ್ವದೇಶಕ್ಕೆ ಹಿಂದಿರುಗಿದರು. 1884ರಲ್ಲಿ ಚಾಮರಾಜೇಂದ್ರರಿಗೆ ನಾಲ್ವಡಿ ಕೃಷ್ಣರಾಜ ಪುತ್ರ ರತ್ನನ ಜನನದ ಸಂಭ್ರಮ. ಆಗ ಮೀಡ್‌ರವರು ಮಹಾರಾಜರಿಗೆ ಅಭಿನಂದಿಸಿ ಪತ್ರ ಬರೆದರು. ಆ ಪತ್ರಕ್ಕೆ ಪ್ರತ್ಯುತ್ತರವಾಗಿ ಚಾಮರಾಜೇಂದ್ರರು ಮೀಡ್ ಅವರಿಗೆ ಬರೆದ ಪತ್ರದ ಒಕ್ಕಣೆ ಹೀಗಿದೆ:

‘ಪ್ರಿಯ ಮಿತ್ರರಾದ ಸರ್ ರಿಚರ್ಡ್ ಮೀಡ್ ಸಾಹೇಬರವರೇ, ನನಗೆ ಪುತ್ರೋತ್ಸವ ಆದುದಕ್ಕಾಗಿಯೂ, ಜೆ.ಸಿ.ಎಸ್.ಐ ಎಂಬ ಬಿರುದು ಲಭಿಸಿದುದಕ್ಕಾಗಿಯೂ ತಾವು ಬರೆದ ಸಂತೋಷಪೂರಕವಾದ ಸ್ನೇಹ ಪತ್ರಕ್ಕಾಗಿ ನಾನು ನಿಮ್ಮನ್ನು ಮನಸಾರೆ ಅಭಿನಂದಿಸುತ್ತೇನೆ.

ಇದುವರೆಗೂ ನಮ್ಮಲ್ಲಿ ಮಳೆಗಾಲ ವಿಮುಖವಾಗಿರುವುದು ಎಂದು ತಿಳಿಸಲು ವಿಷಾದಿಸುತ್ತೇನೆ. ಆದರೆ, ಕಾಲಸ್ಥಿತಿಯು ಉತ್ತಮವಾಗಬಹುದು ಎಂಬ ಭರವಸೆಯೂ ತೋರುತ್ತಿದೆ. ಹೈಕೋರ್ಟಿಗೆ ಸಂಬಂಧಿಸಿದ ಏರ್ಪಾಡುಗಳೆಲ್ಲಾ ಮುಗಿಯುತ್ತಾ ಬಂದಿದೆ. ಇದು ಪ್ರಜೆಗಳ ಗೌರವಕ್ಕೆ ಪಾತ್ರವಾದ ನ್ಯಾಯಸ್ಥಾನ ಆಗಿರುತ್ತದೆ ಎಂದು ಭಾವಿಸುತ್ತೇನೆ.

ನಮ್ಮ ಸಂಸ್ಥಾನದ ರೈಲ್ವೆಗಳು ಕ್ರಮೇಣ ವೃದ್ಧಿಯಾಗುತ್ತಿವೆ ಎಂದು ತಿಳಿಸಿದರೆ ತಾವು ಸಂತೋಷಪಡುವಿರಿ. ಬೆಂಗಳೂರಿನಿಂದ ಮೈಸೂರಿಗೆ ಮಾತ್ರವಲ್ಲದೆ ತಿಪಟೂರು ಕಡೆಗೆ ಐವತ್ತು ಮೈಲುಗಳಿಗಿಂತ ಹೆಚ್ಚಾಗಿ ರೈಲು ರಸ್ತೆಯು ಮುಗಿಯುತ್ತಾ ಬಂದಿದೆ. ತಮ್ಮ ಪತ್ನಿಯವರಾದ ಲೇಡಿ ಮೀಡ್‌ರವರಿಗೆ ವಿಶ್ವಾಸಪೂರ್ವಕ ನನ್ನ ಧನ್ಯವಾದಗಳನ್ನು ದಯವಿಟ್ಟು ತಿಳಿಸಿ.

1884ರ ಜೂನ್ 26ರಂದು ಬೆಂಗಳೂರಿನಿಂದ ಚಾಮರಾಜೇಂದ್ರ ಒಡೆಯರ್ ಅವರು ಬರೆದ ಪತ್ರ ಒಂದು ಶುದ್ಧ ಖಾಸಗಿ ಪತ್ರ. ಖಾಸಗಿ ಪತ್ರದಲ್ಲೂ ಮಹಾರಾಜರು ಆ ನಿವೃತ್ತ ಅಧಿಕಾರಿಗೆ ತಮ್ಮ ಸಂಸ್ಥಾನದ ಮಳೆ ಬೆಳೆ, ಹೈಕೋರ್ಟ್ ಕೆಲಸದ ಪ್ರಗತಿ, ರೈಲು ಮಾರ್ಗಗಳ ಅಭಿವೃದ್ಧಿ– ಈ ವಿಷಯಗಳನ್ನು ತಿಳಿಸುತ್ತಾರೆಂದರೆ, ಮಹಾರಾಜರವರ ಜನಹಿತ ಧ್ಯಾನದ ಅರಿವಾಗುತ್ತದೆ. ಜೊತೆಗೆ, ಮೀಡ್ ಎಂಬ ವ್ಯಕ್ತಿ ಅಧಿಕಾರದಲ್ಲಿದ್ದಾಗ ತೋರಿರಬಹುದಾದ ಕಾರ್ಯಕ್ಷಮತೆಯನ್ನು ಮಹಾರಾಜರು ಗುರುತಿಸಿರುವುದು ಗೊತ್ತಾಗುತ್ತದೆ. ಜನಪರ ಆಡಳಿತಗಾರ ಮತ್ತು ದಕ್ಷ ಅಧಿಕಾರಿಯ ಮಧ್ಯೆ ಇರಬೇಕಾದ ಸಂಬಂಧದ ರೀತಿಯನ್ನು ಪತ್ರ ಸೂಕ್ಷ್ಮವಾಗಿ ಸೂಚಿಸುತ್ತದೆ.

ತಂದೆಯವರ ಮೇಲ್ಪಂಕ್ತಿಯನ್ನೇ ಅನುಸರಿಸಿದವರು ನಾಲ್ವಡಿಯವರು. ಅವರ ತಂದೆ 1881ರ ಅ. 7ರಂದು ಸ್ಥಾಪಿಸಿದ್ದ ‘ಪ್ರಜಾಪ್ರತಿನಿಧಿ ಸಭೆ’ಯನ್ನು ಮತ್ತಷ್ಟು ಜನಪರವಾಗಿಸಿದರು. ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆ ಮತ್ತು ಮಹಿಳೆಯರಿಗೂ ಮತದಾನದ ಹಕ್ಕು ನೀಡಿದರು. 1907ರಲ್ಲಿ ನ್ಯಾಯವಿಧಾಯಕ ಪರಿಷತ್ತನ್ನು ರೂಪಿಸಿದರು. ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾಲಯ, ಕೃಷ್ಣರಾಜ ಸಾಗರ, ಭದ್ರಾವತಿಯ ಉಕ್ಕಿನ ಕಾರ್ಖಾನೆ, ಮಿಂಟೋ ಆಸ್ಪತ್ರೆ, ಇರ್ವಿನ್ ನಾಲೆ, ಕಾವೇರಿ ವಿದ್ಯುತ್ ಸರಬರಾಜು ಯೋಜನೆ, ಮೈಸೂರು ಬ್ಯಾಂಕ್, ಚೇಂಬರ್ ಆಫ್ ಕಾಮರ್ಸ್... ಒಂದೇ ಎರಡೇ. ಸಾಮಾನ್ಯರಿಗೆ ಅಗತ್ಯವಾಗಿದ್ದ ವಿದ್ಯಾಭ್ಯಾಸ, ಆರೋಗ್ಯ, ವಿದ್ಯುದ್ದೀಪ, ರಸ್ತೆ, ರೈಲು ಮಾರ್ಗ, ನೀರಾವರಿ, ವ್ಯವಸಾಯ, ವಾಣಿಜ್ಯ, ಉದ್ಯಮಗಳಿಗೆ ಬೆಲೆಯಿತ್ತು ಮಾದರಿ ಮೈಸೂರು ಸಂಸ್ಥಾನವನ್ನೂ, ಆಧುನಿಕ ಮೈಸೂರು ಸಂಸ್ಥಾನವನ್ನೂ ಕಟ್ಟಿದ ಕೀರ್ತಿ ನಾಲ್ವಡಿಯವರದ್ದು.

ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣದ ಅಗಾಧ ವೆಚ್ಚವನ್ನು ಅವರು ವೈಯಕ್ತಿಕವಾಗಿ ಭರಿಸಿದ್ದು, ಮಹಾಯುದ್ಧದ ಕಾಲದಲ್ಲಿ ಕಲ್ಲಿದ್ದಲು ಕೊರತೆಯಾದರೂ ಭದ್ರಾವತಿ ಉಕ್ಕಿನ ಕಾರ್ಖಾನೆಯನ್ನು ಸೌದೆ ಸುಟ್ಟು ನಡೆಸಿದ್ದು ಇಂದಿನವರಿಗೆ ದಂತಕಥೆಗಳೇ.

ನನಗೆ ಅವರ ನೂರಾರು ಸಾಧನೆಗಳ ಪಟ್ಟಿಯಲ್ಲಿ ಒಂದು ಈಗ ಪ್ರಸ್ತುತವೆನಿಸುತ್ತದೆ. 1905ರಲ್ಲಿ ಪ್ಲೇಗ್ ಮಾರಿ ಸಂಸ್ಥಾನವನ್ನು ಅಪ್ಪಳಿಸಿದಾಗ ಅವರು ಅದನ್ನು ನಿಭಾಯಿಸಿದ ರೀತಿ. ಮಾರಕ ಪ್ಲೇಗ್‌ನಿಂದ ಸಂಸ್ಥಾನವನ್ನು ರಕ್ಷಿಸಲು ಶಾಶ್ವತ ವಿಧಾನವನ್ನು ಕಂಡುಹಿಡಿಯಬೇಕೆಂದು ಬಯಸಿ 12 ಸದಸ್ಯರನ್ನು ಒಳಗೊಂಡ ಸಮಿತಿಯನ್ನು ಅವರು ರಚಿಸಿದರು. ಮುಖ್ಯ ಎಂಜಿನಿಯರ್ ಡಬ್ಲ್ಯು. ಮ್ಯಾಕ್ ಹಚಿನ್ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯಲ್ಲಿ ಸೀನಿಯರ್ ಸರ್ಜನ್, ಸ್ಯಾನಿಟರಿ ಕಮಿಷನರ್, ಜಿಲ್ಲಾಧಿಕಾರಿ, ಹೀಗೆ ಅಧಿಕಾರಿಗಳಷ್ಟೇ ಅಲ್ಲ, ಎಂ. ವೆಂಕಟಕೃಷ್ಣಯ್ಯ, ಲಿಂಗರಾಜೇ ಅರಸ್, ಮೀರ್ ಕಮಾಲುದ್ದೀನ್ ಅಲಿಖಾನ್, ಅನಂತರಾಜಯ್ಯ ಎಂಬ ಸಾರ್ವಜನಿಕ ಬದುಕಿನ ಗಣ್ಯವ್ಯಕ್ತಿಗಳನ್ನೂ ಸೇರಿಸಲಾಗಿತ್ತು. ಈ ಸಮಿತಿ ನೀಡಿದ ವರದಿಯ ಅನುಷ್ಠಾನಕ್ಕೂ ಮಹಾರಾಜರು ಮುಂದಾದರು. ಪರಿಣಾಮವಾಗಿ, ಒಳಚರಂಡಿ ವ್ಯವಸ್ಥೆ, ರಸ್ತೆಗಳ ವಿಸ್ತರಣೆ, ಸ್ವಚ್ಛ ಪರಿಸರ, ಇವುಗಳಿಂದ ಸಂಸ್ಥಾನ ಹೊಸ ರೂಪ ಪಡೆಯುವಂತಾಯಿತು. ಇದನ್ನು ಇಲ್ಲಿ ಜ್ಞಾಪಿಸಿಕೊಳ್ಳಲು ಕಾರಣ, ಈಗ್ಗೆ ಮೂರು ವರ್ಷಗಳ ಹಿಂದೆ ಕೊರೊನಾ ಬಂದಾಗ ಸರ್ಕಾರ ತೆಗೆದುಕೊಂಡ ಉಪಕ್ರಮಗಳ ಬಗ್ಗೆ ನಮ್ಮಲ್ಲಿ ಈಗಲೂ ಚರ್ಚೆ ನಡೆಯುತ್ತಿದೆ. ಅಷ್ಟೇ ಅಲ್ಲ, ಪರಿಣಾಮಕಾರಿಯಾಗಿ, ಪಾರದರ್ಶಕವಾಗಿ, ಪ್ರಾಮಾಣಿಕವಾಗಿ ಕ್ರಮಗಳನ್ನು ಕೈಗೊಳ್ಳಲಾಯಿತೇ ಎಂಬುದನ್ನು ವಿಚಾರಣೆ ಮಾಡಲು ಸರ್ಕಾರ ಆಯೋಗವೊಂದನ್ನು ನೇಮಿಸಿ ವರದಿ ಪಡೆದುಕೊಂಡಿದೆ. ಅಂದಿನ ಪ್ಲೇಗ್, ಇಂದಿನ ಕೊರೊನಾ; ಅಂದಿನ ನಾಲ್ವಡಿ, ಇಂದಿನ ನಾವು...? ಹೋಲಿಕೆ ಅನಗತ್ಯ.

ಜಾತಿಗಣತಿ, ಸಾಮಾಜಿಕ ನ್ಯಾಯದ ಬಗ್ಗೆ ಇನ್ನೂ ನಮ್ಮ ಗೊಂದಲ ಮುಗಿದಿಲ್ಲ. ಆದರೆ ಅಂದೇ ‘ಮಿಲ್ಲರ್ ಆಯೋಗ’ ರಚಿಸಿದ ನಾಲ್ವಡಿ ಅವರ ಸಾಮಾಜಿಕ ಕಳಕಳಿಗೆ ನಾವು ಯಾರೂ ಸಾಟಿಯಲ್ಲ! ಆದುದರಿಂದಲೇ ಕುವೆಂಪು ಅವರು ತಮ್ಮ ಕವನದಲ್ಲಿ ಪರಮಹಂಸ, ವಿವೇಕಾನಂದರು ಸಾರಿ ಹೇಳಿದ ‘ಸರ್ವಧರ್ಮ ಸಮನ್ವಯ’ ತತ್ವವನ್ನು ನಾಲ್ವಡಿಯವರು ಕಾರ್ಯದಲ್ಲಿ ತೋರಿಸಿದರೆಂದು ಹೇಳುತ್ತಾರೆ.

‘ಕನ್ನಡದ ಕಣ್ವ’ರೆಂದು ಕರೆಯಲ್ಪಡುವ ಬಿ.ಎಂ.ಶ್ರೀ ಅವರು ನಾಲ್ವಡಿಯವರ ಕಾಲದಲ್ಲಿ ಅರಮನೆಗೆ ನಿಕಟವರ್ತಿಯಾಗಿದ್ದವರು. ಅವರು ತಮ್ಮ ‘ಶ್ರೀ ಕೃಷ್ಣರಾಜ ರಜತ ಮಹೋತ್ಸವ ಪ್ರಗಾಥ’ ಕಾವ್ಯದಲ್ಲಿ ನಾಲ್ವಡಿ ಅವರ ವ್ಯಕ್ತಿತ್ವ ಮತ್ತು ಸಾಧನೆಗಳ ಚಿತ್ರಣವನ್ನು ನೀಡುತ್ತಾರೆ. ನಾಲ್ವಡಿ ಅವರನ್ನು ಕಾಯುವಂತೆ ‘ಬೆಟ್ಟದೊಡತಿ’ಯನ್ನು ಬೇಡಿಕೊಳ್ಳುತ್ತ, ‘ಹೊನ್ನುನಡೆಯ, ಹೊನ್ನುನುಡಿಯ, ಕನ್ನಡಿಗರ ವಯಿರಮುಡಿಯ, ಒಡೆಯ ಕೃಷ್ಣನ’ ಎನ್ನುತ್ತಾರೆ.

ಬಿ.ಎಂ.ಶ್ರೀ ಅವರೊಂದಿಗೆ ಕನ್ನಡಿಗರೆಲ್ಲ ದನಿಗೂಡಿಸಿ ಹೇಳಬಹುದು: ‘ಪುಣ್ಯದರಸು, ಧರ್ಮದಾಳು, ಕನ್ನಡಿಗರ ವಯಿರಮುಡಿ.’



ವಾಚಕರ ವಾಣಿ

ಅತಿಥಿ ಉಪನ್ಯಾಸಕರ ನೇಮಕ ವಿಳಂಬ

2025–26ನೇ ಸಾಲಿಗೆ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಕ್ಕೆ ಸಂಬಂಧಿಸಿದಂತೆ ಯುಜಿಸಿ ಮಾನದಂಡಗಳನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ಉಪನ್ಯಾಸಕರ ನೇಮಕ ವಿಳಂಬವಾಗಿದ್ದು, ತರಗತಿಗಳು ಸರಿಯಾಗಿ ನಡೆಯುತ್ತಿಲ್ಲ. ಸಾವಿರಾರು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ರಾಜ್ಯ ಸರ್ಕಾರ ತ್ವರಿತವಾಗಿ ಈ ಸಮಸ್ಯೆ ಬಗೆಹರಿಸಬೇಕಿದೆ.

ಸುರೇಶ ಎಂ. ಮುರುಮಕರ, ಗೋಕಾಕ

ಮೌಢ್ಯತೆಯ ಮಾರಿಯನು ಹೊರದೂಡಿ

‘ಗಂಗಾಮಾತೆ ತನ್ನ ಪುತ್ರರ ಪಾದಗಳನ್ನು ತೊಳೆಯುವುದಕ್ಕಾಗಿ ಬರುತ್ತಿದ್ದಾಳೆ. ಆಕೆಯ ದರ್ಶನದಿಂದ ಪುತ್ರರೆಲ್ಲಾ ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆ’ ಎಂದು ಉತ್ತರಪ್ರದೇಶದ ಸಚಿವ ಸಂಜಯ್ ನಿಶಾದ್, ಪ್ರವಾಹಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದಾಗ ಹೇಳಿದ್ದಾರೆ (ಪ್ರ.ವಾ., ಆಗಸ್ಟ್ 6). ಸಂತ್ರಸ್ತರಿಗೆ ಕೂಡಲೇ ರಕ್ಷಣಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬದಲು, ಅವರನ್ನು ಸ್ವರ್ಗಕ್ಕೆ ಹಾರಿಸುವ ಮಾತಾಡುವುದು ಬೇಜವಾಬ್ದಾರಿ ನಡವಳಿಕೆ ಹಾಗೂ ಅಮಾನವೀಯ.

ರಾಜಕಾರಣಿಗಳು ಸಮುದಾಯಗಳಲ್ಲಿ ಇಂಥ ಅವೈಚಾರಿಕ ಮೌಢ್ಯವನ್ನು ಬಿತ್ತಿ ಬೆಳೆದು ಅದರ ಫಸಲನ್ನು ಕೊಯ್ದು (ಓಟು) ತಾವಷ್ಟೇ ಭೂಸ್ವರ್ಗದಲ್ಲಿ ತೇಲಾಡುತ್ತಾರೆ. ಅವರನ್ನು ನಂಬಿದ ಜನರು ನಿತ್ಯವೂ ನರಕದಲ್ಲಿ ಒದ್ದಾಡುತ್ತಿರುತ್ತಾರೆ.

ಪ್ರೊ. ಆರ್. ಶಿವರಾಮಯ್ಯ, ಬೆಂಗಳೂರು

ಅಪ್ಪನ ಪ್ರೀತಿ ಕೊಡಲು ಸಾಧ್ಯವೇ?

ರಾಜ್ಯ ಸರ್ಕಾರ ‘ಕರ್ನಾಟಕ ದೇವದಾಸಿ ಪದ್ಧತಿ ತಡೆ ಮಸೂದೆ–2025’ ಸಿದ್ಧಪಡಿಸಿದೆ. ಪಿತೃತ್ವದ ಹಕ್ಕಿನ ರೂಪದಲ್ಲಿ ಈ ಮಸೂದೆಯು ಹಿಂಬಾಗಿಲಿನಿಂದ ಅನಿಷ್ಟ ದೇವದಾಸಿ ಪದ್ಧತಿಯನ್ನು ಸಮರ್ಥಿಸುವಂತಿದೆ. ಈ ಪದ್ಧತಿಯ ನಿರ್ಮೂಲನೆಯ ಹಾದಿಯನ್ನು ಮತ್ತಷ್ಟು ಕಠಿಣಗೊಳಿಸಲಿದೆ. ಇಂಥ ತಾತ್ಕಾಲಿಕ ಪರಿಹಾರಗಳಿಂದ ಸಮಸ್ಯೆಗಳು ಮತ್ತಷ್ಟು ಜಟಿಲಗೊಳ್ಳುತ್ತವೆ. ಪಿತೃತ್ವದ ಹಕ್ಕು ದೇವದಾಸಿ ಮಕ್ಕಳಿಗೆ ತಂದೆಯ ಪ್ರೀತಿ ಕೊಡಲು ಸಾಧ್ಯವೇ? ತಳಸಮುದಾಯದ ಮಹಿಳೆಯನ್ನು ಲೈಂಗಿಕವಾಗಿ ಬಳಸಿಕೊಂಡಾತನನ್ನು ಒಂದು ವೇಳೆ ತಂದೆ ಎಂದು ಕೋರ್ಟ್ ತೀರ್ಮಾನಿಸಿದರೆ, ಆತ ಆ ಹೆಣ್ಣಿಗೆ ಆಸರೆಯಾಗುವ ಬದಲು ಇನ್ನಷ್ಟು ಮಾನಸಿಕ ಕಿರುಕುಳ ನೀಡುತ್ತಾನೆ.

ಹೆಣ್ಣಿಗೆ ಗಂಡಸಿನ ಮೂಲಕ ಗುರುತಿಸಿಕೊಳ್ಳುವಿಕೆ ಅನಿವಾರ್ಯವೇನಲ್ಲ. ಈ ಬಗ್ಗೆ ದೇವದಾಸಿ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬಿ, ಅವರ ಶಿಕ್ಷಣ ಮತ್ತು ಉದ್ಯೋಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಿದೆ. ಪಿತೃತ್ವದ ಹಕ್ಕಿನಿಂದ ದೇವದಾಸಿ ಮಕ್ಕಳ ‘ಅಪ್ಪ ಯಾರು’ ಎನ್ನುವ ಪ್ರಶ್ನೆಗೆ ಉತ್ತರ ಸಿಗಬಹುದು. ಆದರೆ, ಅವರ ಸಮಸ್ಯೆಗೆ ಪರಿಹಾರ ಉಂಟೇ?

ಮಹೇಂದ್ರ ಟಿ.ಎಂ., ಕೂಡ್ಲಿಗಿ

ಬಸ್ ಕಂಡಕ್ಟರ್‌ನ ಪ್ರಯಾಣಿಕ ಪ್ರೇಮ

ಮುಷ್ಕರವಿದ್ದರೂ ನಮ್ಮೂರಾದ ಕಲ್ಲುಗುಂಡಿಯಿಂದ ಸುಳ್ಯಕ್ಕೆ ಬಸ್ ಸಂಚಾರವಿತ್ತು. ನಾನು ಸುಳ್ಯಕ್ಕೆ ಹೋಗಬೇಕಿತ್ತು. ಬಸ್ ಹತ್ತಿದಾಗ ಮಳೆ ಜೋರಾಯಿತು. ಕಿಟಕಿ ಪಕ್ಕದ ಸೀಟುಗಳು ತೋಯ್ದು ಹೋಗಿದ್ದವು. ನಾನು ಕಿಟಕಿ ಪಕ್ಕದ ಸೀಟು ಬಿಟ್ಟು ಮಧ್ಯದ ಸೀಟಲ್ಲಿ ಕೂತೆ. ಕೊಡೆಯನ್ನು ಕಿಟಕಿ ಪಕ್ಕದ ಒದ್ದೆ ಸೀಟಿನ ಮೇಲಿಟ್ಟೆ. ನನ್ನ ಎದುರು ಸೀಟಿನ ಮಹಿಳೆಯೂ ಕೊಡೆಯನ್ನು ಸೀಟಿನ ಮೇಲಿಟ್ಟಳು.

ನಿರ್ವಾಹಕ ಬಂದು ನಮ್ಮಿಬ್ಬರಿಗೂ ಕೊಡೆ ತೆಗೆದು ಸೀಟಿನಿಂದ ಕೆಳಗಿಡುವಂತೆ ಹೇಳಿದ. ನಾನು ಕೊಡೆ ತೆಗೆಯುತ್ತಾ, ‘ಹೇಗೂ ಸೀಟಲ್ಲಿ ನೀರಿದೆ. ಅಲ್ಲಿ ಇಟ್ಟರೇನು ತೊಂದರೆ?’ ಎಂದು ಕೇಳಿದೆ. ‘ಕೊಡೆ ತೆಗೆದರೆ ಗಾಳಿಗೆ ಸೀಟಲ್ಲಿ ಇರುವ ನೀರು ಒಣಗುತ್ತೆ’ ಎಂದ. ಆಗ ಇನ್ನಷ್ಟು ಜನ ಬಸ್ಸಿಗೆ ಹತ್ತಿದರು. ಅವರೆಲ್ಲ ಸೀಟು ಒದ್ದೆಯಾಗಿದೆ ಎಂದು ನಿಂತುಕೊಂಡರು. ಕಂಡಕ್ಟರ್ ಕೂಡಲೇ ಹೋಗಿ ಡ್ರೈವರ್ ಪಕ್ಕದಿಂದ ಬಟ್ಟೆ ತಂದು ಕಿಟಕಿ ಪಕ್ಕದ ಎಲ್ಲ ಸೀಟುಗಳ ನೀರನ್ನೂ ಒರೆಸಿದ.

‘ಪಾಪ! ಸೀಟು ಒದ್ದೆ ಎಂದು ಪ್ರಯಾಣಿಕರೆಲ್ಲ ನಿಂತಿದ್ದಾರೆ’ ಎಂದು ನನ್ನ ಹತ್ತಿರ ಹೇಳಿದ. ಪ್ರಯಾಣಿಕರು ನಿಂತರೆ ನಿಲ್ಲಲಿ. ಅದು ಅವರ ಕರ್ಮ ಎಂದು ಭಾವಿಸುವವರೇ ಇರುವಾಗ ಇಂಥ ಕಂಡಕ್ಟರೂ ಇದ್ದಾರಲ್ಲ ಅನಿಸಿ ಆತನ ಬಗ್ಗೆ ಹೆಮ್ಮೆಯಾಯಿತು.

ಸಹನಾ ಕಾಂತಬೈಲು, ಮಡಿಕೇರಿ

ವನ್ಯಜೀವಿ ಹಾವಳಿಗೆ ಪರಿಹಾರ ರೂಪಿಸಿ

ಬರಪೀಡಿತ ಪ್ರದೇಶಗಳಲ್ಲಿ ನವಿಲು, ಜಿಂಕೆಗಳ ಸಂಖ್ಯೆ ಹೆಚ್ಚಾಗಿದೆ. ರೈತರು ಫಸಲನ್ನು ರಕ್ಷಿಸಿಕೊಳ್ಳಲು ಪ್ರತಿದಿನವೂ ಹರಸಾಹಸಪಡಬೇಕಿದೆ. ಕಾನೂನಿನ ಪ್ರಕಾರ ಇವುಗಳನ್ನು ಕೊಲ್ಲುವಂತಿಲ್ಲ. ರೈತ, ಕಾನೂನಿನ ಭೀತಿಗೆ ಹೆದರಿ ನಿವೇದಿಸಿಕೊಳ್ಳಲೂ ಆಗದ ಸ್ಥಿತಿಯಲ್ಲಿದ್ದಾನೆ. ದುಡಿಮೆಯ ಫಲ ಕೊಯ್ಲಿಗೆ ಬರುವಾಗಲೇ ಲಗ್ಗೆಯಿಟ್ಟು ನಾಶ ಮಾಡುವ ವನ್ಯಜೀವಿಗಳು ಸುರಕ್ಷಿತವಾಗಿ ಬದುಕಲು ಹಕ್ಕು ಹೊಂದಿವೆ ನಿಜ. ಹಾಗೆಂದು ರೈತನ ಶ್ರಮ ದೋಚುವ ಹಕ್ಕು ಅವುಗಳಿಗಿದೆಯೇ? ಬೆಳೆ ಹಾನಿಗೆ ವೈಜ್ಞಾನಿಕ ಪರಿಹಾರೋಪಾಯ ಅನ್ವೇಷಿಸುವುದು ಯಾರ ಹೊಣೆ?


ಕೆ. ಪುರುಷೋತ್ತಮ ರೆಡ್ಡಿ, ಪಾವಗಡ

ಸಾರಿಗೆ ನೌಕರರ ಸಮಸ್ಯೆ ಪರಿಹರಿಸಿ

ಸಾರಿಗೆ ಮುಷ್ಕರಕ್ಕೆ ಹೈಕೋರ್ಟ್ ಎರಡು ದಿನ ತಡೆ ನೀಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತುರ್ತು ಅವಶ್ಯಕತೆಗಳಿಗೆ ಸ್ಪಂದಿಸಬೇಕಾದ ಪೊಲೀಸರು, ವೈದ್ಯರು, ಸಾರಿಗೆ ನೌಕರರು ಪ್ರತಿಭಟನೆಗೆ ಮುಂದಾದಾಗ ಜನಸಾಮಾನ್ಯರು ಹೆಚ್ಚಿನ ತೊಂದರೆಗೆ ಸಿಲುಕುತ್ತಾರೆ. ಹಾಗಾಗಿ, ಇಂತಹ ಇಲಾಖೆಯ ನೌಕರರು ಎದುರಿಸುತ್ತಿರುವ ಸಮಸ್ಯೆಗಳಿಗೆ ರಾಜ್ಯ ಸರ್ಕಾರ ಶಾಶ್ವತ ಪರಿಹಾರೋಪಾಯ ಹುಡುಕಬೇಕಿದೆ.

ಸತ್ಯಮೂರ್ತಿ ಗೂಗಿ, ಬೆಂಗಳೂರು

ಚುರುಮುರಿ



ಗಂ ಫ್ರಮ್ ಗೋ!

• ಗುರು ಪಿ.ಎಸ್.

ಹಾಲುಬಿಳುಪಿನ ಉಡುಗೆಯಲ್ಲಿ ಶೋಭಿಸುತ್ತಿದ್ದ ಕಿರೀಟಧಾರಿ ದೇವತೆ ಪ್ರತ್ಯಕ್ಷಳಾದಳು.

‘ಮಾತೆ, ಯಾರು ತಾವು?’ ಅಚ್ಚರಿ ಮಿಶ್ರಿತ ಭಯದಲ್ಲಿ ಕೇಳಿದ ಲಖನೌದ ಲಕ್ಷ್ಮಣ.

‘ನಾನು ಗಂ ಫ್ರಮ್ ಗೋ’.

‘ಅಂದ್ರೆ ದೇವಿ?’

‘ಅಂದ್ರೆ, ಗಂಗಾ ಫ್ರಮ್ ಗೋಮುಖ ಅಂತ’.

‘ನಾವೇನು ತಪ್ಪು ಮಾಡಿದ್ದೆವು ತಾಯಿ, ನೀರಿನ ರೂಪದಲ್ಲಿ ಬಂದು ನಮ್ಮ ಮನೆ–ಮಠ–ಮಂದಿರವನ್ನೆಲ್ಲ ಕೊಚ್ಚಿಕೊಂಡು ಹೋಗುವಂತೆ ಮಾಡಿರುವೆ’.

‘ನಾನೇನು ಮಾಡಲಿ ಲಕ್ಷ್ಮಣ, ಎಲ್ಲರ ಮನೆಯೊಳಗೇ ಬಂದು ಆಶೀರ್ವಾದ ಮಾಡಿ ಹೋಗು ತಾಯಿ ಎಂದು ನಿಮ್ಮ ಪ್ರತಿನಿಧಿ, ಮಂತ್ರಿ ಸಂಜಯನೇ ಕೇಳಿದ್ದ, ಹಾಗಾಗಿ ಇತ್ತ ಬಂದೆ’.

‘ಅಯ್ಯೋ ತಾಯಿ, ನಾವೇ ನಿನ್ನ ಸನ್ನಿಧಾನಕ್ಕೆ ಬಂದು, ಪೂಜೆ ಮಾಡಿ ನಿನ್ನ ದರ್ಶನ ಸಹಿತ ಆಶೀರ್ವಾದ ಪಡೆದುಕೊಳ್ಳುತ್ತೇವೆ. ನೀನೇ ನಮ್ಮ ಮನೆ ಬಾಗಿಲಿಗೆ ಬರಬೇಡವಮ್ಮ, ತಡೆದುಕೊಳ್ಳುವ ಶಕ್ತಿ ನಮಗಿಲ್ಲ...’

ಸಂಭಾಷಣೆ ಮುಂದುವರಿದಂತೆ, ಪಕ್ಕದ ಮನೆಯ ಅಬ್ದುಲ್ಲಾನಿಗೂ ಗೋಚರಿಸಿದಳು ಗಂಗಾಮಾತೆ. ಎರಡೂ ಕೈಗಳನ್ನೂ ಮೇಲೆತ್ತಿ ಬೇಡಿಕೊಳ್ಳುವಂತೆ ನಿಂತ ಅಬ್ದುಲ್ಲಾ, ‘ತಾಯಿ, ಹಿಂದೂಗಳೇನೋ ನಿನ್ನ ದರ್ಶನಕ್ಕಾಗಿ ಬೇಡಿಕೊಂಡಿರಬಹುದು, ಆದರೆ, ಈಗ ನಮ್ಮ ಮನೆಯೊಳಗೂ ಬಂದಿರುವೆಯಲ್ಲ ಮಾತಾ, ನಾವು ಮಾಡಿದ ತಪ್ಪಾದರೂ ಏನು?’

‘ಮೂರ್ಖ, ಹರಿಯುವ ನೀರು ನಾನು... ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂದು ಭೇದ ತೋರಲಾಗುವುದೇ?’

‘ಗಂಗಾಮಾತೆ, ಮೊದಲೇ ಹೇಳಿದಂತೆ, ಕಷ್ಟದಲ್ಲಿದ್ದಾಗ ನಾವೇ ನಿನ್ನ ಸನ್ನಿಧಾನಕ್ಕೆ ಬರುತ್ತೇವೆ. ಬೇಕಿದ್ದರೆ, ನೀನೇ ನೇರವಾಗಿ ನಮ್ಮ ಮಂತ್ರಿ–ಮಹೋದಯರ ಮನೆಗೆ ಹೋಗಿ ದರ್ಶನ ಕೊಡು ತಾಯಿ’ ಎಂದ ಲಕ್ಷ್ಮಣ.

‘ಅವರು ಎಲ್ಲ ರೀತಿಯೂ ಎತ್ತರದಲ್ಲಿದ್ದಾರಲ್ಲವೇ ಲಕ್ಷ್ಮಣ’.

‘ಜಗನ್ಮಾತೆಯಾದ ನಿನಗೆ ಎತ್ತರದಲ್ಲಿರುವವರನ್ನು ಕೆಳಗಿಳಿಸುವುದು ಕಷ್ಟವೇ ದೇವಿ’ ಎಂದರು ಲಕ್ಷ್ಮಣ–ಅಬ್ದುಲ್ಲಾ.

ಸಮ್ಮತಿಯ ಭಾವದಲ್ಲಿ ನಸುನಕ್ಕಳು ಗಂಗಾಮಾತೆ.

ಸಂಗತ

ಹೊಸ ಹಬ್ಬ–ವ್ರತಗಳು ಬೇಕೆ?

ಕೆಲವರಿಗಷ್ಟೇ ಸೀಮಿತವಾಗಿದ್ದ ಕೆಲವು ಹಬ್ಬಗಳು ತಮ್ಮ ವ್ಯಾಪ್ತಿ ಹೆಚ್ಚಿಸಿಕೊಂಡಿವೆ. ಉಳ್ಳವರ ಆಚರಣೆಗಳನ್ನು ಜನಸಾಮಾನ್ಯರೂ ಅನುಕರಿಸುತ್ತಿದ್ದಾರೆ.

• ಹೆಚ್.ಆರ್. ಸುಜಾತಾ


ಶ್ರಾವಣದೊಂದಿಗೆ ಹಬ್ಬಗಳ ಸಡಗರ ಶುರುವಾಗಿದೆ. ಬೇಂದ್ರೆ ಅಜ್ಜ ‘ಶ್ರಾವಣ ಬಂತು ನಾಡಿಗೆ, ಬೀಡಿಗೆ, ಬೆಟ್ಟ ಬಯಲಿಗೆ’ ಅಂತ ಹಾಡಿದರೆ, ಹಬ್ಬದ ವ್ರತಗಳು ಹೆಣ್ಣುಗಳನ್ನು ಕೋಣೆಗೆ, ಮನೆಗಳಿಗೆ ಸೀಮಿತಗೊಳಿಸುತ್ತವೆ.

ಏನು ಈ ವ್ರತಗಳು? ಯಾಕಾಗಿ ಹುಟ್ಟಿದವು? ಇದಕ್ಕೆ ಮೊದಲು ಎಲ್ಲಿದ್ದವು? ಈಗ ಯಾವ ರೀತಿಯಲ್ಲಿ ಸಾರ್ವತ್ರಿಕವಾಗಿವೆ? ನಾವು ಸಣ್ಣವರಿದ್ದಾಗ ಕುಟುಂಬದ ಎಲ್ಲರನ್ನೂ ಹಬ್ಬಿಕೊಳ್ಳುತ್ತಿದ್ದ ಹಬ್ಬಗಳು ಇಂದು ಮನೆ ಮನೆಯಲ್ಲಿ ಪ್ರತಿಷ್ಠೆಯ ವ್ಯಸನಗಳಾಗಿ ಬದಲಾಗಿವೆಯೇ? ತೋರಿಕೆಯನ್ನು ಹೆಚ್ಚು ಒಳಗೊಳ್ಳುತ್ತಿವೆಯೇ?

ಗೌರಿಗೆ ತವರು ಮನೆಯಿಂದ ಕಾಯಿಕಣ ಅಥವಾ ಬಾಗಿನ ತರುವ ಅಣ್ಣ, ಅಪ್ಪ–ಅವ್ವ, ತಮ್ಮಂದಿರ ನಿರೀಕ್ಷೆಯಲ್ಲಿ ಕೋಳಿಯನ್ನು ಸಾಕಿ ಕಾಯ್ದಿಟ್ಟುಕೊಂಡು, ಕುಯ್ದು ತಿನ್ನಿಸಿ ಕಳುಹಿಸುವ ಅಕ್ಕರೆ ನೆನಪಿಗೆ ಬರುತ್ತದೆ. ಹೊಸ ಅಳಿಯನಿಗೆ ಮದುವೆಯ ಖರ್ಚಿನಲ್ಲಿ ಹೆಚ್ಚಿನ ಉಡುಗೊರೆಯನ್ನು ಕೊಡಲಾರದ ತವರಿನವರಿಗೆ, ಮೊದಲನೇ ಗೌರಿಗೆ ಕರೆದು ಮದುಮಕ್ಕಳಿಗೆ ಸಮ್ಮಾನ ಮಾಡಿ ತಿಳಿಯಾಗಿಸುವ ಕಲೆಗಾರಿಕೆಯೂ ಇತ್ತು. ಹಾಗೆಯೇ ಬಳೆಗಾರನ ಮುಂದೆ ಹೆಣ್ಣುಗಳು ಕುಳಿತು, ಇಷ್ಟವಾಗುವ ಆಭರಣ ಅಂದರೆ ಬಣ್ಣದ ಗಾಜಿನ ಬಳೆಯನ್ನು ತೊಡಿಸಿಕೊಳ್ಳುವ ಆತ್ಮೀಯತೆಯೊಂದು ಅವರೊಳಗೆ ಬೆಸೆಯುತ್ತಿತ್ತು.

ದೀವಳಿಗೆ ದನ–ಕರುಗಳ ರೈತಾಪಿ ಜನರ ಸಡಗರವಾದರೆ, ಯುಗಾದಿ ಬ್ಯಾಸಿಗೆ ದಿನವನ್ನು ಎಣ್ಣೆ ಮಜ್ಜನದಲ್ಲಿ ಹದ ಮಾಡಿಕೊಳ್ಳುವ, ತಂಗಾಳಿಗೆ ತೂಗಾಲೆ ಕಟ್ಟಿ ಊರಿಗೆ ಊರೇ ತೂಗಿಕೊಳ್ಳುವ ಹಬ್ಬ. ಒಂದು ಊರನ್ನು, ಒಂದು ಕುಲವನ್ನು, ಒಂದು ಬುಡಕಟ್ಟನ್ನು ಸಂಭ್ರಮಿಸುತ್ತಿದ್ದ, ಬೇಕಾದ ಅಡುಗೆ ಮಾಡಿಕೊಂಡು, ಕುಟುಂಬಗಳನ್ನು ಒಂದುಗೂಡಿಸುತ್ತಿದ್ದ ಹತ್ತಾರು ಹಬ್ಬಗಳು ಪ್ರಸ್ತುತ ಎಲ್ಲಿ ಹೋದವು?

ವರ ಮಹಾಲಕ್ಷ್ಮೀ ವ್ರತ ಈ ಕಾಲದ ವೈಭವದ ಹಬ್ಬ. ಇದು ನಮ್ಮ ಬಾಲ್ಯ ಕಾಲದಲ್ಲಿ ಎಲ್ಲರ ಹಬ್ಬ ಆಗಿರಲಿಲ್ಲ. ಬರೀ ಬ್ರಾಹ್ಮಣರ ಮನೆಗಳಲ್ಲಿ ಅಥವಾ ಸಾರ್ವಜನಿಕ ಸಂಪರ್ಕ ಹೆಚ್ಚಾಗಿಲ್ಲದ ಶ್ರೀಮಂತ ವೈಶ್ಯರ, ವ್ಯಾಪಾರಸ್ಥರ ಮನೆಗಳಲ್ಲಿ ರಾರಾಜಿಸುತ್ತಿದ್ದ ಲಕ್ಷ್ಮೀದೇವಿಯರು ಹಾಗೂ ಅವರ ವ್ರತಗಳು, ಇಂದು ಹಳ್ಳಿ ಹಳ್ಳಿಗಳಲ್ಲಿ, ಮನೆ ಮನೆಯ ಒಳಗೆ ಬಂದು ಆಸೀನರಾಗಿರುವುದು ಹೇಗೆ?



ಶ್ರಮಿಕ ಸಮುದಾಯ ತಮಗೆ ಸಿಕ್ಕ ಬಿಡುವಿನಲ್ಲಿ ಅಟ್ಟ–ಬೆಟ್ಟವನ್ನು ಶುದ್ಧಿಗೊಳಿಸಿ, ಮನೆ–ಮಠ ಅಚ್ಚುಕಟ್ಟು ಮಾಡಿ, ಅಂದು ನಿಟ್ಟುಪವಾಸ ಇದ್ದು, ಎಡೆ ಇಡುವವರೆಗೂ ನೇಮನಿಷ್ಠೆಯಿಂದ, ಹಿರಿಯರ ಹಬ್ಬ ಅಥವಾ ಊರ ಮಾರಿಹಬ್ಬವನ್ನು ಆಚರಿಸುತ್ತಿತ್ತು. ಊರೊಳಗೆ ಸೀಬಾಯಿಯೋ, ಕುರಿ, ಕೋಳಿಯೋ, ಯಾವುದು ನಡೆದಿದೆಯೋ ಅದರ ನಡೆಯಲ್ಲಿ ಒಂದಾಗುತ್ತಿದ್ದ ಜನ–ಮನ ಇಂದು ಕಾಣೆಯಾಗಿ, ಹಬ್ಬಗಳು ಬರೀ ಪ್ರದರ್ಶನದ ಭಾಗಗಳಾಗುತ್ತಿವೆ.

ಮೈಸೂರು ಸೀಮೆಗೆ ಮದುವೆ ಆಗಿ ಬಂದ ನಾನು ವರಮಹಾಲಕ್ಷ್ಮೀ ವ್ರತಕ್ಕಿಂತ ಹೆಚ್ಚಾಗಿ ನೇಮನಿಷ್ಠೆಯ ಊರ ಹಬ್ಬದ ಆಚರಣೆಯನ್ನು ಗಮನಿಸಿದ್ದೇನೆ. ಇತ್ತೀಚಿನ ಎಲ್ಲರ ಮನೆಯ ವರಮಹಾಲಕ್ಷ್ಮೀ ವ್ರತವನ್ನೂ ನೋಡಿದ್ದೇನೆ. ಈ ವ್ರತವನ್ನು ಎಲ್ಲರೂ ಯಾಕೆ ಆಚರಿಸುತ್ತಾರೆ ಎನ್ನುವುದು ನನ್ನ ಪ್ರಶ್ನೆ. ಹಿರಿಯರಿಂದ ಬಂದಿರುವ ಹಬ್ಬಗಳನ್ನು ಮಾಡಿ ದಣಿಯುವುದಲ್ಲದೆ, ಮತ್ತೊಂದನ್ನು ಮಗದೊಂದನ್ನು ಪೋಣಿಸಿಕೊಂಡು ಖರ್ಚಿನ ಬಾಬತ್ತನ್ನು ಹೆಚ್ಚಿಸಿಕೊಳ್ಳುವ ಅಗತ್ಯ ಇದೆಯೇ? ಅಥವಾ ಕುರುಡಾಗಿ ಬೇರೆಯವರ ಹಿಂದೆ ಹೋಗುವ ಅನಿವಾರ್ಯತೆ ಇದೆಯೇ?

ಹಬ್ಬಗಳ ಅನುಕರಣೆ ಕೂಡ ಒಂದು ರೀತಿಯಲ್ಲಿ ಸಮೂಹ ಸನ್ನಿಯೇ. ಈ ಬಗ್ಗೆ ನಮ್ಮ ಹೆಣ್ಣುಮಕ್ಕಳು ಯೋಚಿಸಬೇಕು. ಹಣ ಇರುವವರ ಅನುಕರಣೆಯಿಂದ ಇಲ್ಲದವರು ಒದ್ದಾಡುವಂತಾಗುತ್ತದೆ. ಯಾರದೋ ಕುರುಡು ನಂಬಿಕೆಗಳನ್ನು ನಂಬುತ್ತ ನಮ್ಮ ಬುದ್ಧಿಯನ್ನು ಅವರಿಗೆ ಅಡವಿಡುತ್ತೇವೆ. ಕುರುಡು ಅನುಕರಣೆಯಿಂದ, ‘ಮಾಡೋ ಕೆಲಸ ಬಿಟ್ಟು ಆಡೊ ದಾಸಯ್ಯನ ಜೊತೆ ಹೋದ ಹಾಗೆ’ ಎನ್ನುವ ಗಾದೆಯಂತೆ, ಯಾವುದು ತಪ್ಪು ಯಾವುದು ಸರಿ ಎನ್ನುವ ಹೆಣ್ಣಿನ ವಿವೇಚನೆ ಇಲ್ಲವಾಗುತ್ತದೆ.

ಲಕ್ಷ್ಮೀ ಹಬ್ಬದ ಸಡಗರದಲ್ಲಿ, ಬರೀ ಅಡುಗೆ ಮನೆಯ ಹಾಗೂ ಮನೆಯ ಒಳಗಿನ ಉಪಚಾರಗಳಲ್ಲಿ ಹೆಣ್ಣುಮಕ್ಕಳ ಸಮಯ ಹಾಗೂ ಸ್ವಂತಿಕೆ ಕಳೆದುಹೋಗುತ್ತದೆ.

ಊರ ಹಬ್ಬಗಳಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವ, ಸಡಗರಗೊಳ್ಳುವ ಗಂಡು– ಹೆಣ್ಣುಗಳು ಇಬ್ಬರೂ ಇಲ್ಲಿ ಬೇರೆಯಾಗುತ್ತಾರೆ. ಇಬ್ಬರ ಪ್ರಪಂಚವೂ ಬೇರೆಯಾಗುತ್ತದೆ. ಮಾರಮ್ಮನ ಹಬ್ಬ ಇಡೀ ಊರ ಮಕ್ಕಳನ್ನೇ ಒಂದುಗೂಡಿಸುವ, ಎಲ್ಲೆಲ್ಲಿಯೋ ಚದುರಿಹೋದ ಕಳ್ಳುಬಳ್ಳಿಗಳನ್ನು ಕಲೆಹಾಕುವ ಹಾಗೂ ಕಷ್ಟ–ಸುಖವನ್ನು ಹಂಚಿಕೊಳ್ಳುವ ಆಚರಣೆಯಾಗಿದೆ. ಆದರೆ, ಮನೆಯಲ್ಲಿ ಪ್ರತಿಷ್ಠಾಪಿಸುವ ಮಹಾಲಕ್ಷ್ಮೀ ಮಹಿಳೆಯರಿಗೆ ಮಾತ್ರ ಸೀಮಿತ.

ಗಂಡು ಮತ್ತು ಹೆಣ್ಣು ಇಬ್ಬರೂ ಪಾಲುಗೊಳ್ಳದ, ನಮ್ಮ ನಂಬಿಕೆಗಳನ್ನು ಒಡೆದು ಹಾಕಿ, ಕೇವಲ ಪ್ರತಿಷ್ಠೆಗಾಗಿಯೇ ಆಚರಿಸುವ ಆಚರಣೆಗಳು ನಮಗೆ ಬೇಕೆ ಎನ್ನುವುದರ ಬಗ್ಗೆ ಮಹಿಳೆಯರು ಯೋಚಿಸಬೇಕಿದೆ.

ಹಿಂದಿನಿಂದ ವ್ರತ ಇದ್ದು ನಡೆಸಿಕೊಂಡು ಬಂದವರು, ಮಹಾಲಕ್ಷ್ಮೀ ವ್ರತ ಮಾಡುವುದರಲ್ಲಿ ತಪ್ಪೇನೂ ಇಲ್ಲ. ಅದನ್ನು ಇತರರು ಅನುಸರಿಸುವುದು ಆರ್ಥಿಕವಾಗಿ ಹೊರೆ ಹಾಗೂ ಹೆಣ್ಣುಮಕ್ಕಳ ಸ್ವಂತಿಕೆಯನ್ನು ಇಲ್ಲವಾಗಿಸುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.


ಕೊಳೆರೋಗದಿಂದ ಉದುರಿ ಬಿದ್ದಿರುವ ಅಡಿಕೆ

ನಷ್ಟದ ಭೀತಿಯಲ್ಲಿ ರೈತರು

ನಿರಂತರ ಮಳೆ; ಬೆಳೆಗಳಿಗೆ ಕೊಳೆ ರೋಗ, ಕೀಟ ಬಾಧೆ

ರಾಜ್ಯದ ಕರಾವಳಿ, ಮಲೆನಾಡು, ಉತ್ತರ ಒಳನಾಡು, ದಕ್ಷಿಣ ಒಳನಾಡಿನ ಹಲವು ಪ್ರದೇಶಗಳಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ವಿವಿಧ ಬೆಳೆಗಳಿಗೆ ರೋಗ ತಗುಲಿದ್ದು, ರೈತರಲ್ಲಿ ನಷ್ಟದ ಭೀತಿ ಮೂಡಿದೆ. ಕರಾವಳಿ, ಮಲೆನಾಡು ಭಾಗದಲ್ಲಿ ಅಡಿಕೆ ಬೆಳೆ ಕೊಳೆರೋಗದಿಂದ ತತ್ತರಿಸಿದ್ದರೆ, ಕೊಡಗು, ಚಿಕ್ಕಮಗಳೂರು, ಅರೆಮಲೆನಾಡು ಪ್ರದೇಶದಲ್ಲಿ ಕಾಫಿಗೆ ಕೊಳೆರೋಗ ತಗುಲಿ ಕಾಯಿಗಳು ಉದುರಿ ಹೋಗುತ್ತಿವೆ. ರಾಜ್ಯದ ಹಲವು ಕಡೆಗಳಲ್ಲಿ ಕಾಳು ಮೆಣಸಿನ ಫಸಲಿನ ಮೇಲೂ ವರ್ಷಧಾರೆ ಪರಿಣಾಮ ಬೀರಿದೆ. ಹಲವು ಜಿಲ್ಲೆಗಳಲ್ಲಿ ಮೆಕ್ಕೆಜೋಳವನ್ನು ಬಿಳಿಸುಳಿ ರೋಗ ಕಾಡುತ್ತಿದ್ದರೆ, ಶುಂಠಿಗೆ ಬೆಂಕಿ ರೋಗ, ಎಲೆಮಚ್ಚೆ ರೋಗಗಳು ಬಾಧಿಸಿವೆ. ಉತ್ತರ ಕರ್ನಾಟಕ ಭಾಗದಲ್ಲಿ ತೊಗರಿಗೆ ಬೇರು ಕೊಳೆ ರೋಗ ಹಾಗೂ ಹೆಸರು ಬೆಳೆಗೆ ಹಳದಿ ನಂಜು ರೋಗ ಕಾಣಿಸಿಕೊಂಡಿವೆ. ಈಗ ಮಳೆಯಾಗುತ್ತಿರುವ ಪ್ರದೇಶಗಳಲ್ಲಿ ಇನ್ನಷ್ಟು ದಿನ ಮಳೆ ಮುಂದುವರಿಯಲಿದ್ದು, ರೋಗ, ಕೀಟಗಳ ಬಾಧೆ ಮತ್ತಷ್ಟು ತೀವ್ರ ಸ್ವರೂಪ ಪಡೆಯುವ ಆತಂಕವನ್ನು ರೈತರು ವ್ಯಕ್ತಪಡಿಸಿದ್ದಾರೆ. ಆಗಿರುವ ಬೆಳೆನಷ್ಟಕ್ಕೆ ಸರ್ಕಾರ ವೈಜ್ಞಾನಿಕ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ

ಗಿಡದಲ್ಲೇ ಕಪ್ಪಾಗಿ ಉದುರುತ್ತಿದೆ ಕಾಫಿ

ನಿರಂತರವಾಗಿ ಸುರಿಯುತ್ತಿರುವ ಮಳೆ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾಫಿ ಬೆಳೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಗಿಡಗಳಲ್ಲಿ ಕೊಳೆರೋಗ ಕಾಣಿಸಿಕೊಂಡಿದ್ದು, ಕಾಫಿ ಕಾಯಿಗಳು ಕಪ್ಪಾಗಿ ಉದುರುತ್ತಿವೆ.

ಕೊಡಗು ಜಿಲ್ಲೆಯೊಂದರಲ್ಲೇ 1.07 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಾಫಿ ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ ಮೇ ಅಂತ್ಯದಲ್ಲಿ ಆರಂಭವಾದ ಮಳೆ ನಿಂತಿದ್ದೇ ಜುಲೈ ಅಂತ್ಯಕ್ಕೆ. ಈ ವೇಳೆ ಸುರಿದ ಭಾರಿ ಮಳೆ ಹಾಗೂ ಬಿರುಗಾಳಿಗೆ ಕಾಫಿ ಫಸಲು ನಷ್ಟವಾಗಿದೆ. ಗಿಡಕ್ಕೆ ಗೊಬ್ಬರ ಹಾಕುವುದಕ್ಕೂ ಮಳೆ ಅವಕಾಶವನ್ನೇ ನೀಡಲಿಲ್ಲ. ಮಳೆ ಇಲ್ಲದ ದಿನಗಳು ಬೆರಳೆಣಿಕೆಯಷ್ಟಿದ್ದುದ್ದರಿಂದ ಸಕಾಲದಲ್ಲಿ ಗಿಡಗಳಿಗೆ ಗೊಬ್ಬರವೂ ಲಭಿಸಿಲ್ಲ. ಇದರಿಂದಲೂ ಮುಂದೆ ಇಳುವರಿ ಕಡಿಮೆಯಾಗಲಿದೆ ಎಂಬ ಆತಂಕ ಇದೆ. ಮಳೆಗಾಲ ಇನ್ನೂ ಇದ್ದು, ಹೆಚ್ಚು ಮಳೆ ಬೀಳುವ ಸಾಧ್ಯತೆಗಳಿರುವುದರಿಂದ ಮಳೆಗಾಲ ಮುಗಿದ ನಂತರ ಇಲ್ಲವೇ ಆಗಸ್ಟ್ ಬಳಿಕ ಕಾಫಿ ಮಂಡಳಿ, ತೋಟಗಾರಿಕಾ ಇಲಾಖೆ, ಕಂದಾಯ ಇಲಾಖೆಗಳು ಜಂಟಿ ಸಮೀಕ್ಷೆ ನಡೆಸಲಿವೆ. ಆಗ ಎಷ್ಟು ನಷ್ಟವಾಗಿದೆ ಎಂಬುದು ಖಚಿತವಾಗಲಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಾಫಿ ಬೆಳೆಯಲಾಗುತ್ತಿದ್ದು, ಕೊಳೆರೋಗ ಕಾಡುತ್ತಿದೆ. ಮೇ 15ರಿಂದ ಆರಂಭವಾದ ಮಳೆ ನಿರಂತರವಾಗಿ ಸುರಿದು, ಈಗ ಆಗಾಗ ಕೊಂಚ ಬಿಡುವು ನೀಡುತ್ತಿದೆ. ಆರಂಭದಲ್ಲಿ ಮಳೆಗಾಗಿ ಕಾದಿದ್ದ ರೈತರು, ಮಳೆ ನಿಂತರ ಸಾಕು ಎನ್ನುವಷ್ಟು ರೋಸಿ ಹೋಗಿದ್ದಾರೆ. ಮಳೆಯಿಂದಾಗಿ ಗಿಡದಲ್ಲೇ ಕಾಫಿ ಕಪ್ಪು ಬಣ್ಣಕ್ಕೆ ತಿರುಗಿ ಉದುರುತ್ತಿರುವುದು ಬೆಳೆಗಾರರನ್ನು ಕಂಗೆಡಿಸಿದೆ.


ಚಿಕ್ಕಮಗಳೂರು ಜಿಲ್ಲೆಯ ಕಳಸದಲ್ಲಿ ಕೊಳೆರೋಗದಿಂದ ಕಾಫಿ ಬೆಳೆ ಹಾಳಾಗಿದೆ

ಕೊಳೆರೋಗಕ್ಕೆ ನೆಲಕಚ್ಚಿದ ಅಡಿಕೆ

ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಅಡಿಕೆ ತೋಟಗಳು ಕೊಳೆ ರೋಗದಿಂದ ನಲುಗಿವೆ. ಕರಾವಳಿ ಜಿಲ್ಲೆಗಳಲ್ಲಿ ಅಡಿಕೆ ಬಲಿಯುವ ಮುನ್ನವೇ ಉದುರಿ ಇಡೀ ತೋಟದಲ್ಲಿ ಹಾಸಿಕೊಂಡಿದೆ.

ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ 1.02 ಲಕ್ಷ ಹೆಕ್ಟೇರ್‌ನಲ್ಲಿ ಅಡಿಕೆ ಬೆಳೆ ಇದೆ. ಇದು ಕೃಷಿಕರ ಮುಖ್ಯ ಆರ್ಥಿಕ ಶಕ್ತಿಯೂ ಆಗಿದೆ. ಶೇ 95ರಷ್ಟು ತೋಟಗಳಿಗೆ ಕೊಳೆರೋಗ ವ್ಯಾಪಿಸಿದೆ ಎನ್ನುವುದು ಬೆಳೆಗಾರರ ಅಂಬೋಣ.

‘ನಿರಂತರ ಸುರಿದ ಮಳೆ ಅಡಿಕೆ ಬೆಳೆಯ ಮೇಲೆ ನೇರ ಪರಿಣಾಮ ಬೀರಿದೆ. ನಮ್ಮ ಸಮೀಕ್ಷೆ ಪ್ರಕಾರ ಶೇ 95ರಷ್ಟು ತೋಟಗಳಿಗೆ ಕೊಳೆರೋಗ ವ್ಯಾಪಿಸಿದೆ. ಬೆಳೆಗಾರರು ಶೇ 40ಕ್ಕಿಂತ ಹೆಚ್ಚು ಫಸಲು ಕಳೆದುಕೊಂಡಿದ್ದಾರೆ. ಬೆಳೆಗಾರರು ಸಂಕಷ್ಟದಲ್ಲಿದ್ದಾರೆ’ ಎನ್ನುತ್ತಾರೆ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಕಾರ್ಯದರ್ಶಿ ಮಹೇಶ್ ಪುಚ್ಚಪ್ಪಾಡಿ.

ಸಾಧ್ಯವಾಗದ ಸಿಂಪಡಣೆ: ‘ಈ ಬಾರಿ ಮೇ ತಿಂಗಳ ಕೊನೆಯಲ್ಲೇ ಮಳೆಗಾಲ ಪ್ರಾರಂಭವಾಗಿದ್ದರಿಂದ ಮತ್ತು ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಕೆಲವು ಬೆಳೆಗಾರರಿಗೆ ಅಡಿಕೆಗೆ ಮೊದಲನೇ ಹಂತದ ಬೋರ್ಡೋ ದ್ರಾವಣ (ಮೈಲುತುತ್ತ ಮತ್ತು ಸುಣ್ಣ ಬೆರೆಸಿದ ದ್ರಾವಣ) ಸಿಂಪಡಣೆ ಕೂಡ ಸಾಧ್ಯವಾಗಿಲ್ಲ. ಹಾಗಾಗಿ, ಶೇ 90ರಷ್ಟು ಬೆಳೆ ನಷ್ಟವಾಗಿದೆ’ ಎನ್ನುತ್ತಾರೆ ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಮಂಜುನಾಥ ಡಿ.

ಉಡುಪಿ ಜಿಲ್ಲೆಯ ಕಾರ್ಕಳ, ಬ್ರಹ್ಮಾವರ, ಕುಂದಾಪುರ, ಹೆಬ್ರಿ ತಾಲ್ಲೂಕುಗಳಲ್ಲಿ ಅಡಿಕೆ ಕೃಷಿಗೆ ಈ ರೋಗ ವ್ಯಾಪಿಸಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಜಿಲ್ಲೆಯಲ್ಲಿ 32 ಸಾವಿರ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಅಡಿಕೆ ಬೆಳೆಯಿದೆ. ಕೆಲವೆಡೆ ಕೊಳೆ ರೋಗಕ್ಕೆ ಶೇ 40ರಷ್ಟು ಬೆಳೆ ನೆಲಕಚ್ಚಿದೆ. ಬಹುತೇಕ ತೋಟ ಪಟ್ಟಿಗಳಲ್ಲಿ ಶೇ 20ರಷ್ಟು ಕೊಳೆ ಆವರಿಸಿದ್ದು, ಉಲ್ಬಣದ ಹಂತದಲ್ಲಿದೆ.

‘ಎರಡು ಬಾರಿ ಬೋರ್ಡೋ ಸಿಂಪಡಿಸಿದ್ದರೂ ರೋಗ ನಿಯಂತ್ರಣಕ್ಕೆ ಬರುತ್ತಿಲ್ಲ. ಅಡಿಕೆಗೆ ಕೊಳೆ, ಎಲೆಚುಕ್ಕಿ ರೋಗ ವ್ಯಾಪಕವಾಗಿದ್ದು, ನಿಯಂತ್ರಣಕ್ಕೆ ಸೂಕ್ತ ಔಷಧಿ ಇಲ್ಲ. ಸಂಶೋಧನೆ ನಡೆಯದೆ ಕೊಳೆಗೆ ಬೋರ್ಡೋ ದ್ರಾವಣವನ್ನೇ ಅವಲಂಬಿಸಬೇಕಾಗಿದೆ’ ಎನ್ನುತ್ತಾರೆ ರೈತರು.

ಶಿವಮೊಗ್ಗ ಜಿಲ್ಲೆಯಲ್ಲಿ 1.37 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆ ಹೋಬಳಿ ಹಾಗೂ ಹೊಸನಗರ ತಾಲ್ಲೂಕಿನ ನಗರ ಹೋಬಳಿಯಲ್ಲಿ ಕೊಳೆ ರೋಗ ಬಾಧೆ ಹಾನಿ ಮಾಡಿದ್ದು, ಅಡಿಕೆ ಕುಚ್ಚು ಒಣಗಿ ಉದುರಿಬಿದ್ದಿವೆ. ಜೂನ್ ಮೊದಲ ವಾರದಲ್ಲಿ ಬೋರ್ಡೋ ದ್ರಾವಣ ಸಿಂಪಡಣೆ ಮಾಡಿದ್ದು, ಅದರ ತೀವ್ರತೆ ತಗ್ಗಲು ನೆರವಾಗಿದೆ.

ಪರಿಹಾರಕ್ಕೆ ಮನವಿ

‘ಈ ವರ್ಷ ನಿರಂತರವಾಗಿ ಸುರಿದ ಮಳೆಯಿಂದಾಗಿ ಕೊಳೆರೋಗದಿಂದ ಅಡಿಕೆ ಬೆಳೆ ಭಾಗಶಃ ನಾಶವಾಗಿದ್ದು, ಇದೇ ರೀತಿ ಮಳೆ ಮುಂದುವರಿದರೆ ಬೆಳೆ ಇನ್ನಷ್ಟು ನಾಶವಾಗಲಿದೆ. ಬೆಳೆ ನಾಶದ ಬಗ್ಗೆ ಸಮೀಕ್ಷೆ ನಡೆಸಿ, ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ನೀಡಬೇಕು’ ಎಂದು ಕ್ಯಾಂಪ್ಕೊ ಅಧ್ಯಕ್ಷ ಕಿಶೋರ್ ಕುಮಾರ್ ಕೊಡ್ಗಿ ಅವರು ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ.

‘ಅಡಿಕೆ ಬೆಳೆಯುವ ಜಿಲ್ಲೆಗಳಲ್ಲಿ ವಾಡಿಕೆಗಿಂತಲೂ ಜಾಸ್ತಿ ಮಳೆ ಸುರಿದಿದೆ. ಔಷಧಿ ಸಿಂಪಡಿಸಿದರೂ ಎಡೆಬಿಡದ ಮಳೆಯ ಪರಿಣಾಮ ಕೊಳೆರೋಗ ವ್ಯಾಪಕವಾಗಿದೆ. ರೈತರು ಪರಿಹಾರಕ್ಕಾಗಿ ಸರ್ಕಾರದ ಕಡೆ ನೋಡುತ್ತಿದ್ದಾರೆ’ ಎಂದು ಅವರು ಹೇಳಿದ್ದಾರೆ.


ಕೊಳೆರೋಗದ ಪರಿಣಾಮ ನೆಲಕಚ್ಚಿದ ಅಡಿಕೆ


ಶಿರಸಿಯ ದಾಸನಕೊಪ್ಪದಲ್ಲಿ ಮೆಕ್ಕೆಜೋಳದ ಕಾಳುಗಳು ಮಳೆಗೆ ಮೊಳಕೆ ಒಡೆದಿವೆ

ಮೆಕ್ಕೆಜೋಳಕ್ಕೆ ಬಿಳಿಸುಳಿ ರೋಗ

ಹಾಸನ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತೀವ್ರ ಮಳೆಯಿಂದಾಗಿ ಮೆಕ್ಕೆಜೋಳಕ್ಕೆ ಬಿಳಿಸುಳಿ ರೋಗ ತಗುಲಿದೆ. ಹಾಸನ ಜಿಲ್ಲೆಯೊಂದರಲ್ಲೇ 13ಸಾವಿರ ಹೆಕ್ಟೇರ್‌ನಲ್ಲಿ ರೋಗ ಕಾಣಿಸಿಕೊಂಡಿದೆ.

‘ಜೂನ್‌ನಲ್ಲಿ ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ 164ರಷ್ಟು ಹೆಚ್ಚು ಮಳೆಯಾಗಿದೆ. ವಾಡಿಕೆಗಿಂತ ಮೊದಲೇ ಹೆಚ್ಚಿನ ಮಳೆ ಆಗಿರುವುದರಿಂದ ರೋಗ ತಗುಲಿರುವ ಸಾಧ್ಯತೆಗಳು ಹೆಚ್ಚಿವೆ ಎಂದು ತಜ್ಞರ ತಂಡ ಅಭಿಪ್ರಾಯಪಟ್ಟಿದೆ. ಸತತ 21 ದಿನ ಮಳೆ ಆಗಿರುವುದೂ ರೋಗ ಹರಡಲು ಕಾರಣವಾಗಿದೆ’ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ರಮೇಶ್‌ಕುಮಾರ್ ತಿಳಿಸಿದ್ದಾರೆ.

ಶಿರಸಿ, ಮುಂಡಗೋಡ ಭಾಗದಲ್ಲಿ ಮೆಕ್ಕೆಜೋಳ ಕಟಾವು ಮಾಡಿದ ಸಂದರ್ಭದಲ್ಲಿ ಮುಂಗಾರುಪೂರ್ವ ಮಳೆ ಸುರಿದ ಕಾರಣ ಕೊಯ್ಲು ಮಾಡಿ ಒಣಹಾಕಿದ್ದ 90 ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಬೆಳೆದಿದ್ದ ಮೆಕ್ಕೆಜೋಳದ ಕಾಳುಗಳು ಮೊಳಕೆಯೊಡೆದು ನಷ್ಟ ಉಂಟಾಗಿದೆ. ಶಿರಸಿ, ಮುಂಡಗೋಡದಲ್ಲಿ ಒಟ್ಟು 253 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ನಾಶವಾಗಿದೆ.

ಕಲಬುರಗಿ ಜಿಲ್ಲೆಯಲ್ಲಿ ಜುಲೈ ತಿಂಗಳಲ್ಲಿ ಸುರಿದ ಮಳೆಗೆ ‘ಕಸ್ಕುಟ’ ಕಳೆಬಾಧೆ ಕಾಣಿಸಿದೆ. ಅಲ್ಲಲ್ಲಿ ತೇವಾಂಶ ಹೆಚ್ಚಳದಿಂದ ತೊಗರಿಗೆ ಬೇರು ಕೊಳೆರೋಗ ಹಾಗೂ ಹೆಸರು ಬೆಳೆಗೆ ಹಳದಿ ನಂಜು ರೋಗ ಬಾಧಿಸಿದೆ.

ತಗ್ಗು ಪ್ರದೇಶ, ಮಳೆ ನೀರು ನಿಲ್ಲುವ ಪ್ರದೇಶಗಳಲ್ಲಿ ರೋಗ ಕಾಣಿಸಿದೆ.

ರಾಯಚೂರು ಜಿಲ್ಲೆಯ 99,781 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬಿತ್ತನೆ ನಡೆದಿದ್ದು, ಶೇಕಡ 1ರಷ್ಟು ಪ್ರದೇಶದಲ್ಲಿ ಬೆಳೆಗೆ ಕೀಟಬಾಧೆ ಕಂಡು ಬಂದಿದೆ. ಗಿಡಗಳನ್ನು ಬುಡ ಸಮೇತ ಕಿತ್ತು ತೆಗೆದು ಹಾಕುವಂತೆ ಅಧಿಕಾರಿಗಳು ರೈತರಿಗೆ ಸಲಹೆ ನೀಡಿದ್ದಾರೆ.

ಮುದುಡಿದ ಕಾಳುಮೆಣಸು

ಭಾರಿ ಮಳೆಯಿಂದಾಗಿ ಕಾಳುಮೆಣಸು ಹಾನಿಗೀಡಾಗಿದೆ. ಕರಾವಳಿ, ಮಲೆನಾಡು ಪ್ರದೇಶಗಳಲ್ಲಿ ಸೊರಗು ರೋಗ ಕಂಡುಬಂದಿದೆ. ಕಾಯಿಕಚ್ಚಿದ ಕರಿಮೆಣಸು ಉದುರುತ್ತಿವೆ. ಕೊಡಗು, ಚಿಕ್ಕಮಗಳೂರಿನಲ್ಲೂ ಇದೇ ಪರಿಸ್ಥಿತಿ ಇದೆ. ಉತ್ತರ ಕನ್ನಡ ಜಿಲ್ಲೆಯ 150 ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಕಾಳುಮೆಣಸಿನ ಎಲೆಗಳ ಮೇಲೆ ಕಪ್ಪು ಚುಕ್ಕೆಗಳು ಕಂಡುಬಂದಿದೆ. ನೆಲದಲ್ಲಿ ಹರಡಿ ಬೆಳೆಯುವ ಕವಲು ಬಳ್ಳಿಗಳೂ ರೋಗಕ್ಕೆ ಒಳಗಾಗಿವೆ.

ಕೆಲವೆಡೆ ಮಳೆ ಕೊರತೆ

ರಾಜ್ಯದ ಬಹುತೇಕ ಕಡೆಗಳಲ್ಲಿ ಮಳೆ ತೀವ್ರವಾಗಿದ್ದರಿಂದ ಬೆಳೆ ಹಾನಿಗೀಡಾದರೆ, ಕೆಲವು ಕಡೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗದೆ ಬೆಳೆ ಬೆಳೆಯಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜಧಾನಿ ಬೆಂಗಳೂರಿನ ಸುತ್ತಮುತ್ತಲಿನ ಜಿಲ್ಲೆಗಳು, ಚಿತ್ರದುರ್ಗ, ದಾವಣಗೆರೆ, ಬೀದರ್ ಸೇರಿದಂತೆ ಕೆಲವು ಜಿಲ್ಲೆಗಳ ಹಲವು ಪ್ರದೇಶಗಳಲ್ಲಿ ನಿರೀಕ್ಷೆಯಷ್ಟು ಮಳೆಯಾಗಿಲ್ಲ. ಇದರಿಂದ ಮಳೆಯಾಶ್ರಿತ ರೈತರಿಗೆ ಕೃಷಿ ಚಟುವಟಿಕೆ ಕೈಗೊಳ್ಳಲು ಸಾಧ್ಯವಾಗಿಲ್ಲ.

ಶುಂಠಿಗೆ ಬೆಂಕಿ ರೋಗ

ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಶುಂಠಿ ಬೆಳೆಗೆ ರೋಗ ತಗುಲಿದ್ದು, ರೈತರನ್ನು ಕಂಗೆಡಿಸಿದೆ. ಶಿವಮೊಗ್ಗ, ಚಿಕ್ಕಮಗಳೂರು, ಹಾವೇರಿ, ದಾವಣಗೆರೆ, ಉತ್ತರ ಕನ್ನಡ, ಬೀದರ್, ಹಾಸನ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ 65 ಸಾವಿರದಷ್ಟು ಎಕರೆ ಪ್ರದೇಶದಲ್ಲಿ ಶುಂಠಿ ಬೆಳೆಯುತ್ತಾರೆ. ಈ ಬಾರಿ ಬೆಂಕಿ ರೋಗ (ಫ್ರಾಕ್ಷಿ ಪೈರಿಕ್ಯುಲೇರಿಯಾ), ದುಂಡಾಣು ಎಲೆ ಮಚ್ಚೆ ರೋಗ ಮತ್ತು ಎಲೆ ಚುಕ್ಕೆ ರೋಗಗಳು (ಕೊಲೆಟೋಟ್ರೆಂಕೊಮ್) ಕಾಣಿಸಿಕೊಂಡಿವೆ. ರಾತ್ರಿ ಹಸಿರಾಗಿದ್ದ ತಾಕು ಬೆಳಗಾಗುವ ಹೊತ್ತಿಗೆ ಸುಟ್ಟಂತೆ ಕಾಣುತ್ತಿದೆ. ಅದಕ್ಕೆ ಔಷಧ ಕೊಡುವಷ್ಟರಲ್ಲೇ ಇನ್ನೂ ಎರಡು ಬಾಧೆಗಳು ಕಾಡುತ್ತಿವೆ.

‘ಶುಂಠಿ ಗಡ್ಡೆ ಆಗಿ ರೂಪುಗೊಳ್ಳುವ ಮುನ್ನವೇ ವ್ಯಾಪಕ ಮಳೆಯಾಗಿದೆ. ಅದು ಈ ಬಾರಿ ರೋಗಬಾಧೆ ಉಲ್ಬಣಗೊಳ್ಳಲು ಕಾರಣ’ ಎಂದು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಸಸ್ಯರೋಗಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಶೈಲ ಸೊನ್ನಾಳ ಹೇಳುತ್ತಾರೆ. ಬೆಂಕಿ ರೋಗಕ್ಕೆ ತುತ್ತಾಗಿದ್ದ ಶುಂಠಿ ಬೆಳೆಯ ಎಲೆಗಳ ಮೇಲೆ ಕಪ್ಪು ಚುಕ್ಕೆಗಳಾಗಿ ನಂತರ ಎಲೆಗಳು ಹಳದಿಯಾಗಿ ಪೂರ್ತಿ ಸುಟ್ಟಂತೆ ಭಾಸವಾಗುತ್ತವೆ. ದುಂಡಾಣು ಎಲೆ ಮಚ್ಚೆ ರೋಗ ಬಾಧಿತ ಶುಂಠಿ ಗಿಡದ ಎಲೆ ಮತ್ತು ಕಾಂಡದ ಮೇಲೆ ನೀರಿನಿಂದ ಆವೃತವಾದ ಚಿಕ್ಕ ಗಾತ್ರದ ಮಚ್ಚೆಗಳು ಕಾಣಿಸುತ್ತವೆ. ಎಲೆಚುಕ್ಕೆ ಬಾಧಿತ ಗಿಡಗಳ ಎಲೆ ಹಾಗೂ ಕಾಂಡದ ಮೇಲೆ ಚಿಕ್ಕ ಗಾತ್ರದ ಚುಕ್ಕೆಗಳು ಕಾಣಿಸಿಕೊಂಡು ನಂತರ ತಿಳಿ ಹಳದಿ ಬಣ್ಣಗಳಿಂದ ಆವೃತವಾಗಿ ಮಧ್ಯದಲ್ಲಿ ಚಿಕ್ಕ ಗಾತ್ರದ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುತ್ತಿವೆ. ಇದರಿಂದ ಗಿಡಗಳು ಸಾಯುತ್ತಿವೆ.


ಸಾಗರ ತಾಲ್ಲೂಕಿನ ಆನಂದಪುರ ಬಳಿ ಬೆಂಕಿ ರೋಗ ಬಾಧೆಗೆ ತುತ್ತಾದ ಶುಂಠಿ ತಾಕು

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಇಂಡಿಗೊ ವಿಮಾನವೊಂದರ ಒಳಗೆ ಪ್ರಯಾಣಿಕರೊಬ್ಬರು ಮುಸ್ಲಿಂ ವ್ಯಕ್ತಿಯೊಬ್ಬರ ಕೆನ್ನೆಗೆ ಹೊಡೆದು, ಅವರೊಂದಿಗೆ ಜಗಳವಾಡುತ್ತಿರುವ ವಿಡಿಯೊವೊಂದನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿರುವುದು ಮಾತ್ರವಲ್ಲದೆ, ಘಟನೆಯನ್ನು ಧರ್ಮದ ಆಯಾಮದಲ್ಲಿ ಬಿಂಬಿಸಲಾಗುತ್ತಿದೆ. ಈ ಘಟನೆ ನಡೆದಿರುವುದು ನಿಜ. ಆದರೆ, ಇದು ಧರ್ಮ ಆಧಾರಿತ ಘಟನೆ ಅಲ್ಲ.

ಈ ಘಟನೆ ಬಗ್ಗೆ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಡಿದಾಗ ಎನ್‌ಡಿಟಿವಿಯ ಅಧಿಕೃತ ಯುಟ್ಯೂಬ್ ಚಾನೆಲ್‌ನಲ್ಲಿ ಈ ಬಗ್ಗೆ ಪ್ರಕಟವಾಗಿರುವ ವರದಿ ಸಿಕ್ಕಿತು. ಪ್ರಯಾಣಿಕರೊಬ್ಬರ ದುರ್ನಡತೆ ಬಗ್ಗೆ ಅದರಲ್ಲಿ ಪ್ರಸ್ತಾಪಿಸಲಾಗಿತ್ತು. ಆದರೆ, ಹೊಡೆದ ಮತ್ತು ಏಟು ತಿಂದ ಪ್ರಯಾಣಿಕರ ಹೆಸರುಗಳು ಇರಲಿಲ್ಲ. ಮತ್ತಷ್ಟು ಹುಡುಕಾಟ ನಡೆಸಿದಾಗ, ಈ ಘಟನೆಗೆ ಸಂಬಂಧಿಸಿದಂತೆ ಆಗಸ್ಟ್ 1ರಂದು ಇಂಡಿಗೊ ಹೊರಡಿಸಿದ್ದ ಪ್ರಕಟಣೆ ಸಿಕ್ಕಿತು. ಸಹ ಪ್ರಯಾಣಿಕನಿಗೆ ಹೊಡೆದ ಪ್ರಯಾಣಿಕನನ್ನು ಭದ್ರತಾ ಸಿಬ್ಬಂದಿಗೆ ಒಪ್ಪಿಸಲಾಗಿದೆ ಎಂದು ಅದರಲ್ಲಿ ಹೇಳಲಾಗಿತ್ತು. ಪ್ರಯಾಣಿಕರ ವಿವರಗಳನ್ನು ತಿಳಿಯುವುದಕ್ಕಾಗಿ ಮತ್ತಷ್ಟು ಹುಡುಕಾಟ ನಡೆಸಿದಾಗ ಆಗಸ್ಟ್ 2ರಂದು ದೈನಿಕ್ ಭಾಸ್ಕರ್ ಪತ್ರಿಕೆಯಲ್ಲೂ ವರದಿ ಪ್ರಕಟವಾಗಿತ್ತು. ಹೊಡೆದವರು ಹಫೀಜುಲ್ ರೆಹಮಾನ್ ಮತ್ತು ಸಂತ್ರಸ್ತ ಹುಸೇನ್ ಅಹಮದ್ ಮಜುಂದಾರ್ ಎಂದು ಅದರಲ್ಲಿ ಉಲ್ಲೇಖಿಸಲಾಗಿತ್ತು. ಇಬ್ಬರೂ ಒಂದೇ ಸಮುದಾಯದವರಾಗಿದ್ದು, ವಿಮಾನದ ಒಳಗೆ ನಡೆದ ಘಟನೆಗೆ ಧರ್ಮದ ಬಣ್ಣ ಬಳಿದು ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಸಮಸ್ಯೆಯ ಪರಿಹಾರ

ನುಡಿ ಬೆಳಗು


ಪಿ.ಚಂದ್ರಿಕಾ


ಜಗತ್ತು ಒಳಿತು-ಕೆಡುಕುಗಳ ಸಂಗಮ. ಆದರೆ ಕೆಡುಕಿನದ್ದೇ ವಿಜೃಂಭಣೆ. ಜೊತೆಗೆ ಹಣವೂ ಸೇರಿಬಿಟ್ಟರೆ ಎಲ್ಲವೂ ಸರಿಯೇ. ಸಮಾಜವೂ ಹೇಗೆ ಇಷ್ಟು ಆಸ್ತಿಯನ್ನು ಗಳಿಸಿದೆ ಎಂದು ಕೇಳದು. ಬದಲಿಗೆ ಅವನನ್ನು ಹೀರೋ ಎನ್ನುವ ಹಾಗೆ ನೋಡುತ್ತದೆ. ಅವನು ತಪ್ಪೇ ಮಾಡಿದರೂ ಅವನನ್ನು ಹಾಡಿಹೊಗಳುತ್ತದೆ. ಹೀಗೆ ಅಲ್ಲಿಂದ ಅವನ ಭಂಡತನ, ಸಮಾಜದ್ರೋಹದ ಕೆಲಸಗಳು ಶುರುವಾಗುತ್ತವೆ. ಮನಸ್ಸು ವಿಕೃತವಾಗುತ್ತದೆ. ನನಗೆ ತಿಳಿದ ಹುಡುಗನೊಬ್ಬ, ‘ಇಂಥಾ ಸುದ್ದಿಗಳನ್ನು ಓದಿ, ನೋಡಿ, ನನ್ನ ಮನಸ್ಸು ಈಚೆಗೆ ಎಷ್ಟು ವಿಕ್ಷಿಪ್ತವಾಗಿದೆ ಎಂದರೆ, ಅಪರಾಧದ ಬಗ್ಗೆ ಸುದ್ದಿ ಬಾರದೆ ಹೋದರೆ ಯಾಕೆ ಬರಲಿಲ್ಲ ಎನ್ನುವ ಜಿಜ್ಞಾಸೆಗೆ ಬೀಳುತ್ತೇನೆ. ನಮ್ಮಂಥ ಯುವಕರಿಗೆ ಇಂಥ ಅಭಿರುಚಿ ಯಾಕೆ ಬಂತು’ ಎಂದು ಪ್ರಶ್ನಿಸಿದ. ನಾನು ಉತ್ತರ ಹೇಳಲಾಗದೆ ಕನಲಿಹೋದೆ.

ಕೆಡುಕು ಎನ್ನುವುದು ಅಮಲಿದ್ದ ಹಾಗೆ. ಮನಸ್ಸು ಜಗಳವನ್ನು ನೋಡಬೇಕೆಂದು ಬಯಸುತ್ತದೆ. ಇನ್ನೊಬ್ಬರ ಗುದ್ದಾಟ ನಮಗೆ ರಂಜನೆಯ ವಿಷಯ. ಯಾರೋ ಯಾರನ್ನೋ ಹೊಡೆದರೆ ಅದಕ್ಕೆ ನಮ್ಮ ವಿಶ್ಲೇಷಣೆ ಶುರುವಾಗುತ್ತದೆ. ಮೋಸಮಾಡಿ ಅಭಿವೃದ್ಧಿ ಹೊಂದುತ್ತಿರುವುದನ್ನು ಕಂಡು ತಪ್ಪು ಎಂದು ಕಾಳಜಿಯಿಂದ ಮಾತನಾಡಿದರೂ ‘ನಿನಗೆ ಸಾಧ್ಯವಾಗದ್ದು ಅವನಿಗೆ ಸಾಧ್ಯವಾಯಿತು. ಅದಕ್ಕೆ ಹೊಟ್ಟೆಕಿಚ್ಚು’ ಎಂದು ಜಗತ್ತು ಪ್ರತಿಕ್ರಿಯಿಸುತ್ತದೆ. ಅಂಥಾ ಅವರಿಗೆ ಜನ ಏನೆಂದರೂ ನಾಚಿಕೆಯಾಗದು, ಅವರಿಗೆ ಧರ್ಮ ಅಧರ್ಮದ ಗೊಡವೆಯಿಲ್ಲ. ಅಸಹಾಯಕರನ್ನು ಶೋಷಣೆಗೆ ಒಳಗು ಮಾಡುತ್ತಲೇ ಇರುತ್ತಾರೆ. ಕೆಡಕು ಮಾಡುವವನು ದಿನೇ ದಿನೇ ಬೆಳೆಯುತ್ತಲೇ ಹೋಗುತ್ತಾನೆ- ಶ್ರೀಮಂತಿಕೆ ಹುಡುಕಿ ಬರುತ್ತದೆ. ನಾವಾದರೂ ಅಂಥವರ ಕಥೆಯನ್ನು ಎಲೆ ಅಡಿಕೆಯ ಹಾಗೆ ಜಗಿದು ಸವಿದು ಚಪ್ಪರಿಸುತ್ತಾ ಕೊನೆಯಲ್ಲಿ ‘ಒಳ್ಳೆಯವರಿಗಿದು ಕಾಲವಲ್ಲ’ ಎಂಬ ಘೋಷವಾಕ್ಯದಿಂದ ನಿಟ್ಟುಸಿರು ಬಿಡುತ್ತೇವೆ. ‘ಒಳ್ಳೆಯವರಾಗಿ ನಿಮಗೇನು ಸಿಕ್ಕಿತು’ ಎಂದು ಮನೆಯವರಿಂದ ಹಂಗಿಸಿಕೊಳ್ಳುತ್ತೇವೆ. ಆದರೆ ಅದನ್ನು ಮೀರುವುದಕ್ಕೆ, ಈ ಜಗತ್ತಿಗೆ ಒಳಿತಿನ ಮಹತ್ವ ಹೇಳುವುದಕ್ಕೆ ಮಾತ್ರ ಹೊರಡುವುದಿಲ್ಲ.

ಆದರ್ಶ ಶಿಕ್ಷಕರಾಗಿದ್ದ ಗಾಂಧಿವಾದಿ ಬೆಳಗೆರೆ ಕೃಷ್ಣಶಾಸ್ತ್ರಿಗಳು ನನ್ನ ಹತ್ತಿರದ ಸಂಬಂಧಿ, ಚಿಕ್ಕಂದಿನಿಂದ ಅವರಿಂದ ಪ್ರಸಂಗಗಳನ್ನು ಕೇಳುತ್ತಾ ಬೆಳೆದವರಲ್ಲಿ ನಾನೂ ಒಬ್ಬಳು. ‘ಅಭಿನವ’ಕ್ಕಾಗಿ ಅವರ ‘ಮರೆಯಲಾದೀತೆ’ ಅನುಭವ ಕಥನವನ್ನು ಪುಸ್ತಕವಾಗಿಸುವಾಗ ನಾನು ಅವರು ಹೇಳಿದ್ದನ್ನೆಲ್ಲಾ ರೆಕಾರ್ಡ್ ಮಾಡಿ ಬರೆದುಕೊಳ್ಳುತ್ತಿದ್ದೆ. ಹೀಗೆ ಮಾತನಾಡುತ್ತಾ, ‘ತಾತ ನೀವು ಬರಿಯ ಒಳ್ಳೆಯವರ ಬಗ್ಗೆ ಮಾತ್ರ ಹೇಳುತ್ತೀರಲ್ಲ? ನಿಮಗೆ ಯಾರೂ ಕೆಡುಕನ್ನು ಮಾಡೇ ಇಲ್ಲವೇ? ಅದರ ಬಗ್ಗೆ ಯಾಕೆ ಮಾತಾಡುವುದಿಲ್ಲ’ ಎಂದು ಕೇಳಿದ್ದೆ. ಅದಕ್ಕವರು, ‘ಯಾಕಿಲ್ಲ? ಕೆಡುಕು ಮಾಡುವವರು, ಬಯಸುವವರು ಸಂಖ್ಯೆಯಲ್ಲಿ ತುಂಬಾ ಇದ್ದಾರೆ. ಅದನ್ನು ಹೇಳುವುದರಿಂದ ಏನು ಪ್ರಯೋಜನ? ಅದೇ ಒಳ್ಳೆಯವರ ಬಗ್ಗೆ, ಅವರ ಸಾಧನೆಯ ಬಗ್ಗೆ, ಅವರಿಂದ ಸಮಾಜಕ್ಕೆ ಒಳಿತಾದದ್ದರ ಬಗ್ಗೆ ಮಾತಾಡಿದರೆ, ಕೇಳಿದ ನೂರರಲ್ಲಿ ಒಬ್ಬರಿಗೆ ನಾನೂ ಹಾಗಾಗಬೇಕು ಅನ್ನಿಸಲಿ- ಅಷ್ಟು ಸಾಕು. ಕೆಡುಕಿನ ಬಗ್ಗೆ ಮಾತಾಡಲಿಕ್ಕೆ ತುಂಬಾ ಜನ ಇದ್ದಾರೆ. ಅದಕ್ಕೆ ನಾನೇ ಆಗಬೇಕಾ’ ಎಂದರು.

ನಿಜ ಅಲ್ಲವೇ? ಲೋಭದಿಂದ ಕೋಪದಿಂದ ಕೂಡಿದ ಮನಸ್ಸು ಏನು ಬೇಕಾದರೂ ಮಾಡುತ್ತದೆ. ಕೊಲೆ ಮಾಡಿ ಸಿಕ್ಕಿ ಜೈಲು ಸೇರಿದ ಮೇಲೆ ಕಾಡುವ ಪಾಪಪ್ರಜ್ಞೆ ವಿವೇಕದಂತೆ ಮೊದಲೇ ಯಾಕೆ ಜಾಗೃತವಾಗಿರಲ್ಲ? ವಿವೇಕವಿಲ್ಲದ ಮನಸ್ಸು ಕ್ಷೋಭೆಗೊಳಗಾಗುತ್ತದೆ. ಕೆಡುಕನ್ನು ಆಶ್ರಯಿಸುತ್ತದೆ. ದುಡಿದು ಮಾತ್ರ ತಿನ್ನುವೆ ಎನ್ನುವ ತೀರ್ಮಾನಕ್ಕೆ ಬಂದುಬಿಟ್ಟರೆ ಹೊಡೆದು ತಿನ್ನುವುದರ ಬಗ್ಗೆ ಯೋಚಿಸುವುದೇ ಇಲ್ಲ. ಅಂಥಾ ಒಳಿತಿಗಾಗಿ ಸಂಕಲ್ಪವನ್ನು ಪ್ರಯತ್ನಪೂರ್ವಕವಾಗಿಯಾದರೂ ಸಿದ್ಧಿಸಿಕೊಳ್ಳುವುದು ಇವತ್ತಿನ ಎಲ್ಲ ಸಮಸ್ಯೆಗಳ ಶಾಶ್ವತ ಪರಿಹಾರವಾಗುತ್ತದೆ.

ಗುಂಡಣ್ಣ




ಪದಬಂಧ 6127

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೊಚ್ಚ ಹೊಸದಾದುದು (4)
3.ಶಿರ ಮೇಲೆತ್ತಿಕೊಂಡು ಬರುತ್ತಿರುವ ಧೂರ್ತ! (4)
5.ಅಕ್ಕಿ ತೊಳೆದ ನೀರು (4)
7.ಈತ ಕೆಲಸಕ್ಕೆ ಬಾರದವನು (4)
9.ಗಂಡು ಕೋಳಿ ಇಲ್ಲಿದೆ (2)
10.ನ್ಯಾಯಾಲಯದ ತೀರ್ಪು (2)
11.ನಯವಾದ ಮಾತು (4)
14.ಈತ ಹಾಲು ಮಾರುವವನು (4)
17.ದಷ್ಟ ಪುಷ್ಟವಾದುದನ್ನು ಹೀಗೆನ್ನಿ (4)
18.ಮನಸ್ಸಿನ ಪ್ರೇರಣೆ (4)

ಮೇಲಿಂದ ಕೆಳಕ್ಕೆ
1.ಈತ ನೃತ್ಯ ಮಾಡುವವನು (3)
2.ಸುಲಭಸಾಧ್ಯವಲ್ಲದುದು ಉಲ್ಟಾ ಕಾಣುತ್ತಿದೆ (3)
3.ನಿಧಾನದಿಂದಾದ ತಬ್ಬಿಬ್ಬು! (4)
4.ದೊಡ್ಡ ಅಲೆ (3)
6.ಭೋಜನ ಸಮಾರಂಭಕ್ಕೆ ಬೇಕಾದ ಸಾಮಗ್ರಿ (4)
7.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
8.ಮಿಡಿ ಹಿಡಿದಿದ್ದಕ್ಕೇ ಈ ಸಿಟ್ಟು (4)
12.ವಿಶೇಷಾರ್ಥವುಳ್ಳ ಪದಪುಂಜ (4)
13.ಮಾಂಸಾಹಾರಿಯಾದ ಒಂದು ಜಾತಿಯ ಪಕ್ಷಿ (3)
15.ವಿಷ್ಣುವಿನ ಐದನೆಯ ಅವತಾರ (3)
16.ಗಾಳಿ ಬೆಳಕು ಬರಲು ಮಾಡಿರುವ ಕಿಂಡಿ (3)



6126ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಮಾನ 2.ಕಡುಹಗೆ
4.ಹರಪ್ರಿಯ 6.ಸಿಂಬಳ
8.ಸುಹ 10.ನಿರೂಪ
11.ಹರ 13.ಮೆಲುಕು
14.ಪರೀಕ್ಷಕ 16.ತರಕಲು
17.ಜೀವಕಳೆ

ಮೇಲಿಂದ ಕೆಳಕ್ಕೆ:
1.ಉದಾಹರಿಸು 2.ಕಜ್ಜಿ
3.ಹಣಬರಹ 5.ಯವನಿಕೆ
7.ಅಪರೂಪ 9.ಹಲಾಲುಕೋರ
12.ರಣಕಹಳೆ 15.ಹಾಲು

ಸುಡೊಕು 6511

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3		2	1		4		6	7
				8				
7	9		6		2	5		4
2	7				3			5
				4		2	9	
			9					1
	4	1	2				8	
9				7	8			
	6			5		4		9

6510 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

07 ಆಗಸ್ಟ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ತ್ರಯೋದಶಿ ಗಂ. 14-28 **ನಕ್ಷತ್ರ:** ಪೂರ್ವಾಷಾಢ ಗಂ. 14-01 **ಯೋಗ:** ವಿಷ್ಕಂಭ ಗಂ. 6-42 ಕರಣ: ತೈತಿಲ ಗಂ. 14-28, ಕರ್ಕಾಟಕ ಮಾಸದ 22 ನೇ ದಿನ. **ಮಳೆ ನಕ್ಷತ್ರ :** ಆಶ್ಲೇಷ 2 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 03-00, **ಸೂರ್ಯೋದಯ :** 06-20 ಸೂರ್ಯಾಸ್ತ : 06-52, **ಮುಸ್ಲಿಂ ದಿನಾಂಕ :** 12 ಸಫರ್, **ಅದೃಷ್ಟ ಸಂಖ್ಯೆ :** 1, 4

ಮೇಷ: ಮಹತ್ವದ ಮಾತುಕತೆ ನಡೆಸಲು ಒಳ್ಳೆಯ ಸಮಯ. ಸಂಯಮದಿಂದ ವರ್ತಿಸಿ. ಹಂತ-ಹಂತವಾಗಿ ಕುಟುಂಬದಲ್ಲಿ ನೆಮ್ಮದಿ ಕಾಣುವಿರಿ. ರಾಮಾಯಣ, ಮಹಾಭಾರತದಂತಹ ಧರ್ಮ ಗ್ರಂಥಗಳ ಓದಿನಲ್ಲಿ ಆಸಕ್ತಿ ಹುಟ್ಟಲಿದೆ.

ವೃಷಭ: ಕಷ್ಟದ ಕಾಲವೆಲ್ಲವೂ ದೂರಾಗುವ ಸಾಧ್ಯತೆ ಇರಲಿದೆ. ಒಣ ದ್ರಾಕ್ಷಿ, ಗೋಡಂಬಿ, ಉತ್ತುತೆ ಮತ್ತು ಎಲಕ್ಕಿ ವ್ಯಾಪಾರಿಗಳಿಗೆ ಉತ್ತಮ ಲಾಭ ದೊರೆಯಲಿದೆ. ಸುವ್ಯವಸ್ಥೆಯಿಂದ ಕೂಡಿದ ದಿನವಾಗಿರುವುದು.

ಮಿಥುನ: ಸಂವಹನ ಕಲೆ ಪರೀಕ್ಷೆಗೆ ಒಳಗಾಗಲಿದೆ. ನಿತ್ಯದ ಜೀವನ ಕ್ರಮವನ್ನು ಯಾವುದೇ ಕಾರಣಕ್ಕೂ ಬದಲಿಸದೆ ಹಿಂದಿನಂತೆ ಮುಂದುವರಿಸಿ. ಈಗಿರುವ ಉದ್ಯೋಗದಲ್ಲಿ ಸ್ಥಿರತೆ ಮತ್ತು ಧನಾನುಕೂಲತೆ ಇರುತ್ತದೆ.

ಕರ್ಕಾಟಕ: ಸರ್ಕಾರಿ ಕೆಲಸಗಳು ಮುಕ್ತಾಯದ ಹಂತಕ್ಕೆ ಬರುವುದು. ಷೇರು ವ್ಯವಹಾರಗಳು ಲಾಭ ತರಲಿವೆ. ಮಾಡುವ ಕೆಲಸ ಕ್ರಿಯಾಶೀಲತೆಗೆ ಒತ್ತು ನೀಡುವುದರಿಂದ ಹೊಸ ಹುರುಪು ಮೂಡಲಿದೆ.

ಸಿಂಹ: ಕಬ್ಬು ಬೆಳೆಯುವುದರ ಜೊತೆಗೆ ವ್ಯಾಪಾರ ಹೊಂದಿರುವಂಥವರಿಗೆ ಲಾಭದ ದಿನ. ಯಾರಿಗೂ ತಿಳಿಯದೆ ಮಾಡಿದೆ ಎಂದು ತಿಳಿದ ಕಾರ್ಯವು ಜಗಜ್ಜಾಹೀರಾಗುವ ಪ್ರಸಂಗಗಳು ಎದುರಾಗಬಹುದು.

ಕನ್ಯಾ: ಮೊಂಡು ಹಠವು ಪೋಷಕರ ಹಾಗೂ ಕುಟುಂಬ ವರ್ಗದ ಚಿಂತೆಗೆ ಕಾರಣವಾಗಬಹುದು. ಅವರೋಹಣ ಪ್ರಕ್ರಿಯೆಯಲ್ಲಿರುವ ಷೇರು ವ್ಯವಹಾರಗಳು ನಿಧಾನಗತಿಯಲ್ಲಿ ಆರೋಹಣ ಪ್ರಕ್ರಿಯೆಗೆ ಬರುತ್ತವೆ.

ತುಲಾ: ಸೋಮಾರಿತನ ಮಾಡದೇ ಸೂಕ್ತ ಸಮಯದಲ್ಲಿ ಸರಿಯಾದ ಕೆಲಸ ಮಾಡುವುದರಿಂದ ಅದೃಷ್ಟ ಖುಲಾಯಿಸಲಿದೆ. ಶೈಕ್ಷಣಿಕ ರಂಗದಲ್ಲಿ ವಿದ್ಯಾರ್ಥಿ ಹಾಗೂ ಅಧ್ಯಾಪಕರಿಗೆ ಯಶಸ್ಸು ಸಿಗುತ್ತದೆ.

ವೃಶ್ಚಿಕ: ಉನ್ನತ ಸ್ಥಾನಕ್ಕೆ ತಲುಪಿರುವ ನಿಮ್ಮ ಮಕ್ಕಳು ಆಗುಹೋಗುಗಳಿಗೆ ಎಳ್ಳಿನಿತೂ ಗಮನ ಕೊಡದಿರುವುದು ಬೇಸರಕ್ಕೆ ಕಾರಣವಾಗಬಹುದು. ಮನೆಯನ್ನು ಯುದ್ಧರಂಗವಾಗದಂತೆ ತಡೆಗಟ್ಟ ಬೇಕಾಗುತ್ತದೆ.

ಧನು: ಮಕ್ಕಳ ಎಲ್ಲಾ ವಿಚಾರಗಳಲ್ಲೂ ಮೃದು ಮನಸ್ಸಿನ ಆಲೋಚನೆಗಳನ್ನೇ ಮಾಡಿದಲ್ಲಿ ಫಲಿತಾಂಶ ನೀವಂದುಕೊಂಡ ರೀತಿಯಲ್ಲಿ ಇರುವುದಿಲ್ಲ. ನೂತನ ಉದ್ಯೋಗ ದೊರೆತು ಸಮಾಧಾನವಾಗುವುದು.

ಮಕರ: ಬರಹಗಾರರಾಗಬೇಕು ಎಂಬ ಪಥದಲ್ಲಿ ಸಾಗುತ್ತಿರುವವರಿಗೆ ಪ್ರಸಿದ್ಧ ಬರಹಗಾರರ ಬರಹಗಳನ್ನು ಓದಿ ಬರವಣಿಗೆಗೆ ರೂಪುರೇಷೆ ದೊರೆಯುತ್ತದೆ. ಹೂಡಿಕೆ ಮಾಡುವವರು ಜಾಗರೂಕತೆಯಿಂದ ವರ್ತಿಸಿ.


ಕುಂಭ: ಯಾವುದೇ ಆಹಾರವಾಗಲಿ ಹಿತವಾಗಿ, ಮಿತವಾಗಿ ಸೇವಿಸುವುದು ಉತ್ತಮ. ಸಂಪೂರ್ಣ ಸಾವಯವ ವ್ಯವಸಾಯವನ್ನು ಮಾಡಿ ತಾಜಾ ತರಕಾರಿ ಹಾಗೂ ಹಣ್ಣುಗಳ ಮಾರಾಟಗಾರರಿಗೆ ಲಾಭ ಅಧಿಕವಾಗಲಿದೆ.

ಮೀನ: ಹಣಕಾಸಿನ ವ್ಯವಹಾರ ನಡೆಸುವವರು ನೂತನ ಯೋಜನೆಗಳನ್ನು ವಿಸ್ತರಿಸಬಹುದು. ಉನ್ನತ ಅಧಿಕಾರಿಗಳ ಸಂಪರ್ಕ ಉಂಟಾಗುವುದು. ಸಂಪರ್ಕ ಸಾಧನದಂಥ ಉದ್ಯೋಗ ನಿರತರಿಗೆ ಗೌರವ ಲಭಿಸಲಿದೆ.

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ		ಶಿವಮೊಗ್ಗ	
ಚಾಲಿ	38869-42798	ಬಿಳಿಗೋಟು	25809-33489	ಬೆಟ್ಟೆ	51599-61400
ಚಿಪ್ಪು	26569-31099	ಚಾಲಿ	35599-42599	ಗೊರಬಲು	15000-33151
ಕೋಕ	7869-22699	ಕೋಕ	16119-26669	ರಾಶಿ	44158-58499
ಫ್ಯಾಕ್ಟರಿ	6089-29000	ಕೆಂಪುಗೋಟು	21119-21319	ಸರಕು	65159-91696
ಹೊಸಚಾಲಿ	36029-42933				

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ;	24,649
ಇಂದಿನ ಅಂತ್ಯ;	24,574
ದಿನದ ಕನಿಷ್ಠ;	24,539
↓	75

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹485
	12 ಕ್ಕೆ	₹66
ಮೈಸೂರು:	100 ಕ್ಕೆ	₹495

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹401-661
ದ್ವಿತಳಿ (ಬಿ.ವಿ)	₹471-811

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹200
ಆರ್‌ಎಸ್‌ಎಸ್-5	₹194
ಗುಡ್ ಲಾಟ್	₹178

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1355 (1355)
ಸೋಯಾ (ರಿಫೈನ್ಡ್)	₹1240 (1245)
ಸೂರ್ಯಕಾಂತಿ (ರಿಫೈನ್ಡ್)	₹1355 (1360)
ಪಾಮೋಲಿನ್	₹1205 (1210)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹13000-13000
ದಾವಣಗೆರೆ	₹17500-17500

ಅಡಿಗಾಸ್‌ನಿಂದ ಧಾರ್ಮಿಕ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡಿಗಾಸ್ ಯಾತ್ರಾ ಕಂಪನಿಯು ಪಿತೃ ಪಕ್ಷದ ಅಂಗವಾಗಿ ಧಾರ್ಮಿಕ ಯಾತ್ರೆಯನ್ನು ಆಯೋಜಿಸಿದೆ.

ಯಾತ್ರೆಯು ಎರಡು ಆಯ್ಕೆಗಳನ್ನು ಒಳಗೊಂಡಿದೆ. ಕಾಶಿ, ಗಯಾ, ಪ್ರಯಾಗ, ಅಯೋಧ್ಯೆ, ಚಿತ್ರಕೂಟ ಮತ್ತು ನೈಮಿಷಾರಣ್ಯ ಒಂದನೆಯ ಆಯ್ಕೆ. ಇದು 9 ದಿನಗಳ ಯಾತ್ರೆ. ಕಾಶಿ, ಗಯಾ, ಪ್ರಯಾಗ ಮತ್ತು ಅಯೋಧ್ಯೆ ಎರಡನೆಯ ಆಯ್ಕೆ. ಇದು 6 ದಿನಗಳ ಯಾತ್ರೆ.

ಯಾತ್ರೆಯಲ್ಲಿ ಕ್ಷೇತ್ರ ಪುರೋಹಿತರಿಂದ ಧಾರ್ಮಿಕ ವಿಧಿ ವಿಧಾನ ಮತ್ತು ಆಚರಣೆಗಳನ್ನು ನಡೆಸಿಕೊಡಲು ವ್ಯವಸ್ಥೆ ಮಾಡಿಕೊಡಲಾಗುವುದು. ಯಾತ್ರಾ ವ್ಯವಸ್ಥಾಪಕರು ಜೊತೆಯಿರಲ್ಲಿದ್ದು, ಸ್ಥಳೀಯ ಮಾರ್ಗದರ್ಶಕರು ಮಾಹಿತಿ ನೀಡಲಿದ್ದಾರೆ ಎಂದು ಕಂಪನಿಯ ಸಂಸ್ಥಾಪಕ ಕೆ.ನಾಗರಾಜ್ ಅಡಿಗ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿ ಮತ್ತು ಬುಕಿಂಗ್‌ಗಾಗಿ 080-26616678, 94494 78944, 70222 59008, 93641 04373 ಸಂಖ್ಯೆಗಳಿಗೆ ಕರೆ ಮಾಡಿ.

5,583 ಹುದ್ದೆಗೆ ಎಸ್‌ಬಿಐ ಅರ್ಜಿ

ನವದೆಹಲಿ (ಪಿಟಿಐ): ದೇಶದಾದ್ಯಂತ ಖಾಲಿ ಇರುವ 5,583 ಕಿರಿಯ ಸಹಾಯಕ ಹುದ್ದೆಗಳಿಗೆ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅರ್ಜಿ ಆಹ್ವಾನಿಸಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆಗಸ್ಟ್ 6ರಿಂದ ಆರಂಭವಾಗಿದ್ದು, 26ರವರೆಗೆ ಇರಲಿದೆ ಎಂದು ಬ್ಯಾಂಕ್ ಬುಧವಾರ ತಿಳಿಸಿದೆ. ಕಳೆದ ತಿಂಗಳು 505 ಪ್ರೊಬೇಷನರಿ ಅಧಿಕಾರಿಗಳು ಮತ್ತು 13,455 ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿಗೆ ಮುಂದಾಗಿರುವುದಾಗಿ ತಿಳಿಸಿತ್ತು.

ಪ್ರಸ್ತುತ ದೇಶದಾದ್ಯಂತ 2.36 ಲಕ್ಷಕ್ಕೂ ಅಧಿಕ ಉದ್ಯೋಗಿಗಳನ್ನು ಎಸ್‌ಬಿಐ ಹೊಂದಿದೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಐ.ಟಿ ಮತ್ತು ಆರೋಗ್ಯ ವಲಯದ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 166 ಅಂಶ ಇಳಿಕೆಯಾಗಿ, 80,543ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 75 ಅಂಶ ಕಡಿಮೆಯಾಗಿ, 24,574ಕ್ಕೆ ಕೊನೆಗೊಂಡಿದೆ.

ಕಳೆದ ಎರಡು ದಿನದಲ್ಲಿ ಸೂಚ್ಯಂಕಗಳ ಇಳಿಕೆಯಿಂದಾಗಿ ಹೂಡಿಕೆದಾರರ ಸಂಪತ್ತು ₹3.50 ಲಕ್ಷ ಕೋಟಿಯಷ್ಟು ಕರಗಿದೆ.

ಕ್ಲೇಮ್ ಇತ್ಯರ್ಥಕ್ಕೆ ಏಕರೂಪಿ ವ್ಯವಸ್ಥೆ

ಕರಡು ಸುತ್ತೋಲೆಯನ್ನು ಸಾರ್ವಜನಿಕ ಸಮಾಲೋಚನೆಗೆ ಹೊರಡಿಸಲಿರುವ ಆರ್‌ಬಿಐ

ಮುಂಬೈ (ಪಿಟಿಐ): ಮೃತ ಗ್ರಾಹಕರ ಬ್ಯಾಂಕ್ ಖಾತೆಯಲ್ಲಿ ಇರುವ ಹಣ ಹಾಗೂ ಅವರ ಹೆಸರಿನ ಲಾಕರ್‌ನಲ್ಲಿ ಇರುವ ಅಮೂಲ್ಯ ವಸ್ತುಗಳ ಕ್ಲೇಮ್‌ಗಳನ್ನು ಇತ್ಯರ್ಥಪಡಿಸಲು ಏಕರೂಪಿ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.



ಸಂಜಯ್ ಮಲ್ಹೋತ್ರಾ

ಮೃತ ಗ್ರಾಹಕರು ನಾಮನಿರ್ದೇಶನ ಮಾಡಿರುವ ವ್ಯಕ್ತಿಗಳು ಸಲ್ಲಿಸುವ ಕ್ಲೇಮ್‌ಗಳನ್ನು ಇತ್ಯರ್ಥಪಡಿಸುವ ಪ್ರಕ್ರಿಯೆಯನ್ನು ಸರಳಗೊಳಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗುತ್ತದೆ.

'ಪ್ರಕ್ರಿಯೆಯು ಏಕರೂಪಿ ಆದಾಗ, ಕ್ಲೇಮ್‌ಗಳು ಸರಳವಾಗಿ ಹಾಗೂ ಸುಲಭವಾಗಿ ಇತ್ಯರ್ಥ ಆಗುವ ನಿರೀಕ್ಷೆ ಇದೆ' ಎಂದು ಮಲ್ಹೋತ್ರಾ ಭರವಸೆ ವ್ಯಕ್ತಪಡಿಸಿದ್ದಾರೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ –1949ರ ಅನ್ವಯ, ಬ್ಯಾಂಕ್ ಠೇವಣಿಗಳಿಗೆ ಹಾಗೂ ಲಾಕರ್‌ಗಳಿಗೆ ನಾಮನಿರ್ದೇಶನ ಸೌಲಭ್ಯ ಲಭ್ಯವಿದೆ.

ನಾಮನಿರ್ದೇಶಿತ ವ್ಯಕ್ತಿಗಳು, ಕಾನೂನುಬದ್ಧ ಹಕ್ಕುದಾರರು ಕ್ಲೇಮ್ ಅರ್ಜಿ ಸಲ್ಲಿಸಿದಾಗ ಅದನ್ನು ತ್ವರಿತವಾಗಿ, ಸುಲಭವಾಗಿ ಇತ್ಯರ್ಥಪಡಿಸಲು ಬ್ಯಾಂಕುಗಳು ಸರಳವಾದ ಪ್ರಕ್ರಿಯೆ ರೂಪಿಸಬೇಕು ಎಂದು ಆರ್‌ಬಿಐ ನೀತಿಯು ಹೇಳುತ್ತದೆ. ಆದರೆ ಪ್ರಕ್ರಿಯೆಗಳಲ್ಲಿ ಬ್ಯಾಂಕಿನಿಂದ ಬ್ಯಾಂಕಿಗೆ ವ್ಯತ್ಯಾಸ ಇದೆ.

'ಗ್ರಾಹಕರಿಗೆ ಒದಗಿಸುವ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ, ಪ್ರಕ್ರಿಯೆಯನ್ನು ಸರಳಗೊಳಿಸಲು ಮತ್ತು ಸಲ್ಲಿಸಬೇಕಿರುವ ದಾಖಲೆಗಳನ್ನು ನಿರ್ದಿಷ್ಟಪಡಿಸಲು ತೀರ್ಮಾನಿಸಲಾಗಿದೆ. ಈ ದಿಸೆಯಲ್ಲಿ ಕರಡು ಸುತ್ತೋಲೆಯೊಂದನ್ನು ಸಾರ್ವಜನಿಕರ ಸಮಾಲೋಚನೆಗಾಗಿ ಶೀಘ್ರವೇ ಹೊರಡಿಸಲಾಗುತ್ತದೆ' ಎಂದು ಆರ್‌ಬಿಐ ಹೇಳಿದೆ.

'ಯುಪಿಐಗೆ ಬಳಕೆದಾರರು ಶುಲ್ಕ ನೀಡಬೇಕು ಎಂದಿಲ್ಲ'

ಬೆಂಗಳೂರು: ಯುಪಿಐ ಪಾವತಿ ವ್ಯವಸ್ಥೆಯು ಯಾವತ್ತಿಗೂ ಉಚಿತವಾಗಿ ಇರಲು ಸಾಧ್ಯವಿಲ್ಲ ಎಂಬ ಮಾತನ್ನು ತಾವು ಹೇಳಿಲ್ಲ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಸ್ಪಷ್ಟಪಡಿಸಿದ್ದಾರೆ.

'ಎಂಡಿಆರ್ ಶುಲ್ಕವನ್ನು ಗ್ರಾಹಕರಿಗೆ ವರ್ಗಾಯಿಸಲಾಗುತ್ತದೆಯೇ ಎಂಬ ಪ್ರಶ್ನೆಯನ್ನು ನನಗೆ ಕೇಳಲಾಗಿತ್ತು. ಒಂದಿಷ್ಟು ವೆಚ್ಚಗಳು ಇರುತ್ತವೆ. ವೆಚ್ಚಗಳನ್ನು ಯಾರೋ ಒಬ್ಬರು ಪಾವತಿಸಬೇಕಾಗುತ್ತದೆ. ಯಾರು ಪಾವತಿಸಬೇಕಾಗುತ್ತದೆ ಎಂಬುದು ಮುಖ್ಯ... ವ್ಯವಸ್ಥೆಯು ಸುಸ್ಥಿರವಾಗಿ ಇರಲು ವೈಯಕ್ತಿಕ ಮಟ್ಟದಲ್ಲಿ ಅಥವಾ ವ್ಯವಸ್ಥೆಯ ಮಟ್ಟದಲ್ಲಿ ಯಾರಾದರೂ ಹಣ ಪಾವತಿಸಬೇಕಾಗುತ್ತದೆ' ಎಂದು ಅವರು ವಿವರಣೆ ನೀಡಿದ್ದಾರೆ.

'ವ್ಯವಸ್ಥೆಯು ಈಗಲೂ ಉಚಿತವಾಗಿ ಇಲ್ಲ. ಅದಕ್ಕೆ ಯಾರೋ ಶುಲ್ಕ ನೀಡುತ್ತಿದ್ದಾರೆ, ಸರ್ಕಾರವು ವ್ಯವಸ್ಥೆಗೆ ಸಬ್ಸಿಡಿ ನೀಡುತ್ತಿದೆ... ಬಳಕೆದಾರರು ಶುಲ್ಕ ಪಾವತಿಸಬೇಕಾಗುತ್ತದೆ ಎಂಬ ಮಾತನ್ನು ನಾನು ಯಾವತ್ತೂ ಹೇಳಿಲ್ಲ' ಎಂದು ಅವರು ತಿಳಿಸಿದ್ದಾರೆ.

ರೆಪೊ ದರ ಯಥಾಸ್ಥಿತಿ

ಮುಂಬೈ (ಪಿಟಿಐ): ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ ಇರುವ ತೀರ್ಮಾನವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು ಬುಧವಾರ ತೆಗೆದುಕೊಂಡಿದೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ನೇತೃತ್ವದ ಸಮಿತಿಯು ರೆಪೊ ದರವನ್ನು ಶೇ 5.5ರಲ್ಲೇ ಉಳಿಸಿಕೊಳ್ಳಲು ಸರ್ವಾನುಮತದಿಂದ ನಿರ್ಧರಿಸಿದೆ. ಅಲ್ಲದೆ, 'ತಟಸ್ಥ' ಹಣಕಾಸಿನ ನೀತಿಯನ್ನು ಮುಂದುವರಿಸಲು ಕೂಡ ಅದು ನಿರ್ಣಯಿಸಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಾಣಿಜ್ಯ ನೀತಿಗಳು ಪೂರ್ಣ ಪ್ರಮಾಣದಲ್ಲಿ ಪ್ರಕಟಗೊಳ್ಳುವುದರ ಹಾಗೂ ಈ ಹಿಂದೆ ರೆಪೊ ದರವನ್ನು ಇಳಿಕೆ ಮಾಡಿದ್ದುದರ ಪರಿಣಾಮಗಳನ್ನು ಅರ್ಥ ಮಾಡಿಕೊಂಡು ಮುಂದಿನ ತೀರ್ಮಾನ ತೆಗೆದುಕೊಳ್ಳುವ ನಿಲುವನ್ನು ಆರ್‌ಬಿಐ ತಾಳಿರುವಂತಿದೆ.

ಮುಂಗಾರು ಮಳೆಯು ಚೆನ್ನಾಗಿ ಆಗುತ್ತಿರುವುದು ಹಾಗೂ ಹಬ್ಬಗಳ ಋತು ಹತ್ತಿರವಾಗಿರುವುದು ದೇಶದ ಅರ್ಥವ್ಯವಸ್ಥೆಗೆ ಶಕ್ತಿ ಕೊಡುವ ನಿರೀಕ್ಷೆ ಇದೆ.

ಜಾಗತಿಕ ಮಟ್ಟದಲ್ಲಿ ವ್ಯಾಪಾರ ವಹಿವಾಟುಗಳಿಗೆ ಸವಾಲುಗಳು ಮುಂದುವರಿದಿವೆ ಎಂದು ಸಮಿತಿಯ ತೀರ್ಮಾನವನ್ನು ಪ್ರಕಟಿಸುವ ಸಂದರ್ಭದಲ್ಲಿ ಮಲ್ಹೋತ್ರಾ ಹೇಳಿದ್ದಾರೆ.

'ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆಯಲ್ಲಿ ಮಧ್ಯಮಾವಧಿಯಲ್ಲಿ ಕೂಡ ದೇಶದ ಅರ್ಥ ವ್ಯವಸ್ಥೆಯು ಚೆನ್ನಾಗಿ ಬೆಳವಣಿಗೆ ಕಾಣುವ ಸಾಧ್ಯತೆ ಇದೆ. ಇದಕ್ಕೆ ಅರ್ಥ ವ್ಯವಸ್ಥೆಯ ಆಂತರಿಕ ಶಕ್ತಿ, ಅರ್ಥವ್ಯವಸ್ಥೆಯ ಮೂಲಭೂತ ಅಂಶಗಳು ಗಟ್ಟಿಯಾಗಿರುವುದು ಕಾರಣ' ಎಂದು ಅವರು ಹೇಳಿದ್ದಾರೆ.

ಫೆಬ್ರುವರಿಯಿಂದ ಈಚೆಗೆ ಆರ್‌ಬಿಐ ರೆಪೊ ದರವನ್ನು ಒಟ್ಟು ಶೇ 1ರಷ್ಟು ಕಡಿಮೆ ಮಾಡಿದೆ. ಈ ಕಡಿತಗಳ ಪ್ರಯೋಜನವು ಗ್ರಾಹಕರಿಗೆ ವರ್ಗಾವಣೆ ಆಗುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಆರ್‌ಬಿಐ ಹೇಳಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಈ ಆರ್ಥಿಕ ವರ್ಷದ ನಾಲ್ಕನೆಯ ತ್ರೈಮಾಸಿಕದಲ್ಲಿ ಹಾಗೂ ಅದರ ನಂತರದಲ್ಲಿ ಶೇ 4ಕ್ಕಿಂತ ಹೆಚ್ಚಳ ಕಾಣುವ ಸಾಧ್ಯತೆ ಇದೆ ಎಂದು ಮಲ್ಹೋತ್ರಾ ಹೇಳಿದ್ದಾರೆ.

ಜಿಡಿಪಿ ಮುನ್ನೋಟ ಪರಿಷ್ಕರಣೆ ಇಲ್ಲ

ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣದ ಅಂದಾಜನ್ನು ಆರ್‌ಬಿಐ ಶೇಕಡ 6.5ರಲ್ಲಿ ಉಳಿಸಿಕೊಂಡಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣದ ಅಂದಾಜನ್ನು ಪರಿಷ್ಕರಿಸಿರುವ ಆರ್‌ಬಿಐ, ಅದನ್ನು ಶೇ 3.1ಕ್ಕೆ ತಗ್ಗಿಸಿದೆ.



ಅಮೆರಿಕವು ಭಾರತದ ಸರಕುಗಳ ಮೇಲೆ ದೊಡ್ಡ ಮಟ್ಟದಲ್ಲಿ ಸುಂಕವನ್ನು ವಿಧಿಸಿರುವ ಕಾರಣಕ್ಕೆ ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣವು ತುಸು ತಗ್ಗಬಹುದು ಎಂದು ಕೆಲವು ಹಣಕಾಸು ಸಂಸ್ಥೆಗಳು ಅಂದಾಜು ಮಾಡಿದ್ದರೂ, ಆರ್‌ಬಿಐ ತನ್ನ ಅಂದಾಜನ್ನು ಪರಿಷ್ಕರಿಸಿಲ್ಲ.

ಮುಂಗಾರು ಮಳೆಯು ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಆಗಿರುವುದು, ಹಣದುಬ್ಬರವು ಕಡಿಮೆ ಮಟ್ಟದಲ್ಲಿ ಇರುವುದು, ಹಣಕಾಸಿನ ಸ್ಥಿತಿಯು ಪೂರಕವಾಗಿ ಇರುವುದು ದೇಶದ ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಿ ಇವೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಹಣಕಾಸು ನೀತಿಗಳು, ವಿತ್ತೀಯ ಕ್ರಮಗಳು ಹಾಗೂ ಸರ್ಕಾರದ ಕಡೆಯಿಂದ ಆಗುತ್ತಿರುವ ದೊಡ್ಡ ಮಟ್ಟದ ಬಂಡವಾಳ ವೆಚ್ಚಗಳು ಕೂಡ ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಲಿವೆ. ಸೇವಾ ವಲಯದಲ್ಲಿ ಬೆಳವಣಿಗೆ ಚೆನ್ನಾಗಿ ಇರಲಿದೆ ಎಂದು ಅವರು ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಎರಡನೆಯ ತ್ರೈಮಾಸಿಕದಲ್ಲಿ ಶೇ 2.1ರಷ್ಟು, ಮೂರನೆಯ ತ್ರೈಮಾಸಿಕದಲ್ಲಿ ಶೇ 3.1ರಷ್ಟು ಹಾಗೂ ನಾಲ್ಕನೆಯ ತ್ರೈಮಾಸಿಕದಲ್ಲಿ ಶೇ 4.4ರಷ್ಟು ಇರುವ ಅಂದಾಜು ಇದೆ ಎಂದು ಆರ್‌ಬಿಐ ಹೇಳಿದೆ.

ಸುರಕ್ಷತೆಗೆ ವಾಟ್ಸ್‌ಆ್ಯಪ್ ಹೊಸ ಕ್ರಮ

ನವದೆಹಲಿ (ಪಿಟಿಐ): ಬಳಕೆದಾರರ ಸುರಕ್ಷತೆಯನ್ನು ಖಾತರಿಪಡಿಸುವ ಉದ್ದೇಶದಿಂದ ವಾಟ್ಸ್‌ಆ್ಯಪ್ ಹೊಸ ಸೌಲಭ್ಯವೊಂದನ್ನು ಜಾರಿಗೆ ತಂದಿದೆ.

ವಾಟ್ಸ್‌ಆ್ಯಪ್ ಬಳಕೆದಾರರ ಸಂಪರ್ಕಗಳ ಪಟ್ಟಿಯಲ್ಲಿ ಇಲ್ಲದ ವ್ಯಕ್ತಿಯೊಬ್ಬರು ಅವರನ್ನು ಹೊಸ ಗುಂಪಿಗೆ ಸೇರಿಸಿದಾಗ, ಅದರ ಬಗ್ಗೆ ಆ ಬಳಕೆದಾರರಿಗೆ ಸಂದೇಶ ರವಾನಿಸುವ ಕೆಲಸವನ್ನು ಹೊಸ ವ್ಯವಸ್ಥೆಯು ಮಾಡುತ್ತದೆ.

'ಸೇಫ್ಟಿ ಓವರ್‌ವ್ಯೂ' ಹೆಸರಿನ ಈ ಸೌಲಭ್ಯವು ಹೊಸ ಗುಂಪಿನ ಬಗ್ಗೆ ಪ್ರಮುಖವಾದ ಮಾಹಿತಿಯನ್ನು ಒದಗಿಸುತ್ತದೆ, ಸುರಕ್ಷಿತವಾಗಿರಲು ಏನು ಮಾಡಬೇಕು ಎಂಬ ಸಲಹೆಯನ್ನು ನೀಡುತ್ತದೆ.

'ಅಲ್ಲಿಂದ, ಬಳಕೆದಾರರು ಗ್ರೂಪ್‌ನಲ್ಲಿನ ಮಾತುಕತೆಗಳನ್ನು ಗಮನಿಸದೆಯೇ ಅದರಿಂದ ಹೊರನಡೆಯಬಹುದು' ಎಂದು ವಾಟ್ಸ್‌ಆ್ಯಪ್ ತಿಳಿಸಿದೆ.

ಗ್ರೂಪ್‌ನಲ್ಲಿ ಇರಲು ತಾನು ಬಯಸುವುದಾಗಿ ಬಳಕೆದಾರ ತಿಳಿಸುವವರೆಗೂ ಆ ಗ್ರೂಪ್‌ನಲ್ಲಿನ ಸಂದೇಶಗಳ ಬಗ್ಗೆ ಬಳಕೆದಾರರಿಗೆ ನೋಟಿಫಿಕೇಷನ್ ರವಾನೆ ಆಗುವುದಿಲ್ಲ.

ವ್ಯಕ್ತಿಯೊಬ್ಬ ತನ್ನ ಸಂಪರ್ಕ ಪಟ್ಟಿಯಲ್ಲಿ ಇಲ್ಲದ ವ್ಯಕ್ತಿಯ ಜೊತೆ ಚಾಟಿಂಗ್ ಆರಂಭಿಸಿದಾಗ ಆ ವ್ಯಕ್ತಿಯ ಬಗ್ಗೆ ಇನ್ನಷ್ಟು ಮಾಹಿತಿ ಒದಗಿಸಿ, ಬಳಕೆದಾರರಿಗೆ ಎಚ್ಚರಿಕೆ ನೀಡುವ ಸೌಲಭ್ಯ ರೂಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ವಾಟ್ಸ್‌ಆ್ಯಪ್ ಹೇಳಿದೆ.

ಈ ವರ್ಷದ ಮೊದಲ ಆರು ತಿಂಗಳಲ್ಲಿ, ವಂಚನೆಯ ಕೇಂದ್ರಗಳಿಗೆ ಸಂಬಂಧಿಸಿದ 68 ಲಕ್ಷ ಖಾತೆಗಳನ್ನು ವಾಟ್ಸ್‌ಆ್ಯಪ್ ಬಂದ್ ಮಾಡಿದೆ.

ನಿಸ್ಸಾನ್‌ನಿಂದ ಮ್ಯಾಗ್ನೈಟ್ ಕುರೊ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಸ್ಸಾನ್ ಮೋಟರ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿಯು ಹೊಸ ನಿಸ್ಸಾನ್‌ಮ್ಯಾಗ್ನೈಟ್ ಕುರೊ ವಿಶೇಷ ಆವೃತ್ತಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರ ಆರಂಭಿಕ ಬೆಲೆ ₹8.30 ಲಕ್ಷ.



ಕಪ್ಪು ಬಣ್ಣದ ಮ್ಯಾಗ್ನೈಟ್ ಕುರೊ ವಿಶೇಷ ಆವೃತ್ತಿಯ ವಾಹನವನ್ನು ನಿಸ್ಸಾನ್‌ನ ಎಲ್ಲ ಡೀಲರ್‌ಶಿಪ್‌ಗಳಲ್ಲಿ ಮತ್ತು ನಿಸ್ಸಾನ್‌ನ ಅಧಿಕೃತ ವೆಬ್‌ಸೈಟ್‌ನಲ್ಲಿ ₹11 ಸಾವಿರ ಪಾವತಿಸುವ ಮೂಲಕ ಬುಕ್ ಮಾಡಬಹುದು ಎಂದು ಕಂಪನಿ ತಿಳಿಸಿದೆ.

ವಿಶೇಷಗಳು: ಈ ವಾಹನವು ಟರ್ಬೊ-ಪೆಟ್ರೋಲ್ ಮತ್ತು ಸಾಮಾನ್ಯ ಪೆಟ್ರೋಲ್ ಪವರ್‌ಟ್ರೇನ್ ಆಯ್ಕೆಗಳಲ್ಲಿ ಲಭ್ಯವಿದೆ. ಪಿಯಾನೋ ಬ್ಲಾಕ್ ಫ್ರಂಟ್ ಗ್ರಿಲ್, ಡೈಮಂಡ್ ಕಟ್ ಅಲಾಯ್ ವೀಲ್‌ಗಳು ಮತ್ತು ಕಪ್ಪು ಬಣ್ಣ ಡೋರ್ ಹ್ಯಾಂಡಲ್‌ಗಳನ್ನು ಹೊಂದಿದೆ.

6 ಏರ್‌ಬ್ಯಾಗ್‌ಗಳು, ಎಬಿಎಸ್ + ಇಬಿಡಿ, ಬ್ರೇಕ್ ಅಸಿಸ್ಟ್, ಟಿಪಿಎಂಎಸ್ ಸೇರಿದಂತೆ 40ಕ್ಕೂ ಹೆಚ್ಚು ಸುರಕ್ಷತಾ ವೈಶಿಷ್ಟ್ಯಗಳನ್ನು ಇದು ಹೊಂದಿದೆ.

ಮುಂಬೈ ಧಾರಣೆ (ಶೇಂಗಾ)

06-08-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7300-7400
ದಪ್ಪ ಗುಜರಾತ್ (ಹೊಸ)	8300-8400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1365 (1365)
ಒಂದು ವಾರದ ಡೆಲಿವರಿ	1360 (1360)
ಪಾಮ್ ವಾರದ ಡೆಲಿವರಿ	1203 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1285 (1290)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,00,000 (1,00,200)
ಬೆಳ್ಳಿ ಕೆ.ಜಿಗೆ	1,13,200 (1,12,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-1600
ಮಧ್ಯಮ	₹800-1200
ಸಣ್ಣ	₹500-800

ಟ್ರಂಪ್ ರಾಯಭಾರಿ ಜೊತೆ ಪುಟಿನ್ ಚರ್ಚೆ

ಮಾಸ್ಕೊ (ಎಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಅವರೊಂದಿಗೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಬುಧವಾರ ಇಲ್ಲಿ ಮಾತುಕತೆ ನಡೆಸಿದ್ದಾರೆ ಎಂದು ರಷ್ಯಾದ ಆಡಳಿತ ಕಚೇರಿ ಕ್ರೆಮ್ಲಿನ್ ಹೇಳಿದೆ.

ಉಕ್ರೇನ್ ಜತೆಗೆ ಕದನ ವಿರಾಮ ಘೋಷಿಸುವಂತೆ ರಷ್ಯಾಕ್ಕೆ ಟ್ರಂಪ್ ನೀಡಿದ 50 ದಿನಗಳ ಗಡುವು ಶುಕ್ರವಾರ ಕೊನೆಗೊಳ್ಳಲಿರುವ ಕಾರಣದಿಂದ ಈ ಮಾತುಕತೆ ಮಹತ್ವ ಪಡೆದುಕೊಂಡಿದೆ. ಉಭಯ ದೇಶಗಳ ಮುಖಂಡರ ನಡುವೆ ಮೂರು ಗಂಟೆ ಸುದೀರ್ಘ ಮಾತುಕತೆ ನಡೆದಿದೆ. ಆದರೆ, ಮಾತುಕತೆ ಬಗ್ಗೆ ಎರಡೂ ದೇಶಗಳು ಯಾವುದೇ ಮಾಹಿತಿಯನ್ನು ಹಂಚಿಕೊಂಡಿಲ್ಲ.

ಯುದ್ಧ ನಿಲ್ಲಿಸದಿದ್ದರೆ ಇನ್ನಷ್ಟು ಆರ್ಥಿಕ ನಿರ್ಬಂಧಗಳನ್ನು ಹೇರಲಾಗುವುದು, ರಷ್ಯಾದಿಂದ ತೈಲ ಖರೀದಿಸುತ್ತಿರುವ ದೇಶಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸಲಾಗುವುದು ಎಂದು ಟ್ರಂಪ್ ಎಚ್ಚರಿಸಿದ್ದರು.

ಪುಟಿನ್ ಅವರ ವಿಶೇಷ ರಾಯಭಾರಿ ಕಿರಿಲ್ ಡಿಮಿಟ್ರಿವ್ ಅವರೊಂದಿಗೂ ಸ್ಟೀವ್ ವಿಟ್ಕಾಫ್ ಪ್ರತ್ಯೇಕ ಮಾತುಕತೆ ನಡೆಸಿದರು.

ಸುಂಕ ಶೇ 50ಕ್ಕೆ ಏರಿಸಿದ ಟ್ರಂಪ್

ಒಂದನೇ ಪುಟದಿಂದ...

ಈ ಹಿಂದೆ ಭಾರತದಿಂದ ಆಮದು ಮಾಡಿಕೊಳ್ಳಲಾಗುವ ಸರಕುಗಳ ಮೇಲೆ ಹೇರಿದ್ದ ಶೇ 25ರಷ್ಟು ಸುಂಕವು ಆ.7ರಿಂದ ಜಾರಿಗೆ ಬರಲಿದೆ. ಇದು ಜಾರಿಯಾಗಲು ಇನ್ನೂ 14 ಗಂಟೆ ಬಾಕಿ ಇರುವಾಗಲೇ, ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕ ಹೇರಲಾಗಿದೆ.

ಹೆಚ್ಚುವರಿ ಸುಂಕವು 21 ದಿನಗಳಲ್ಲಿ ಅಥವಾ ಆಗಸ್ಟ್ 27ರಿಂದ ಜಾರಿಗೆ ಬರಲಿದೆ. ಇದು ಉಕ್ಕು, ಅಲ್ಯುಮಿನಿಯಂ ಸರಕುಗಳಿಗೆ ಅನ್ವಯಿಸುವುದಿಲ್ಲ. ಔಷಧ ವಲಯ ಹೆಚ್ಚುವರಿ ಸುಂಕ ನೀತಿಯಡಿ ಬರಲಿದೆ.

ರಷ್ಯಾದಿಂದ ತೈಲ ಖರೀದಿ ವಿಚಾರದಲ್ಲಿ ಅಮೆರಿಕದ ನಿಲುವು 'ನ್ಯಾಯಸಮ್ಮತವಲ್ಲ' ಎಂದು ಭಾರತ ಮಂಗಳವಾರ ತಿರುಗೇಟು ನೀಡಿತ್ತು.

ಭಾರತ ತನ್ನ ಬೇಡಿಕೆಯ ಪೈಕಿ ಶೇ 88ರಷ್ಟು ಕಚ್ಚಾ ತೈಲವನ್ನು ವಿವಿಧ ರಾಷ್ಟ್ರಗಳಿಂದ ಖರೀದಿಸುತ್ತದೆ. 2021ರ ವರೆಗೆ ರಷ್ಯಾದಿಂದ ಖರೀದಿಸಿದ ತೈಲ ಪ್ರಮಾಣ ಶೇ 0.2ರಷ್ಟಾಗುತ್ತದೆ. ಉಕ್ರೇನ್ ಮೇಲೆ ಯುದ್ಧ ಸಾರಿದ ನಂತರ, ರಷ್ಯಾ ರಿಯಾಯಿತಿ ದರದಲ್ಲಿ ತೈಲ ಮಾರಾಟ ಮಾಡಲು ಆರಂಭಿಸಿದೆ. ಭಾರತದ ತೈಲ ಸಂಸ್ಕರಣಾ ಕಂಪನಿಗಳು ಈ ಅವಕಾಶವನ್ನು ತಡಮಾಡದೇ ಬಳಸಿಕೊಂಡಿವೆ. ಪ್ರಸ್ತುತ ರಷ್ಯಾ, ಭಾರತಕ್ಕೆ ತೈಲ ಪೂರೈಸುವ ಪ್ರಮುಖ ರಾಷ್ಟ್ರವಾಗಿದೆ.

ಅನ್ಯಾಯ, ಅಸಮರ್ಥನೀಯ: ಭಾರತ

ಒಂದನೇ ಪುಟದಿಂದ...

'ನಾವು ನಮ್ಮ ನಿಲುವನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ನಮ್ಮ ಆಮದು ಮಾರುಕಟ್ಟೆ ಅಂಶಗಳ ಮೇಲೆ ಆಧಾರಿತ. ಭಾರತದ ಇಂಧನ ಸುರಕ್ಷತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಆಮದು ಮಾಡಿಕೊಳ್ಳಲಾಗುತ್ತಿದೆ' ಎಂದು ಸಚಿವಾಲಯ ಹೇಳಿದೆ.

'ಹಲವು ದೇಶಗಳು ರಾಷ್ಟ್ರೀಯ ಹಿತಾಸಕ್ತಿ ರಕ್ಷಣೆಗೆ ಬೇಕಾದ ಕ್ರಮಗಳನ್ನು ಕೈಗೊಳ್ಳುತ್ತಿವೆ. ಹಾಗಾಗಿ, ಭಾರತದ ವಿರುದ್ಧ ಅಮೆರಿಕದ ಕ್ರಮವು ಅತ್ಯಂತ ದುರದೃಷ್ಟಕರ' ಎಂದು ಹೇಳಲಾಗಿದೆ.

ರಷ್ಯಾದಿಂದ ರಸಗೊಬ್ಬರ, ರಾಸಾಯನಿಕಗಳ ಆಮದು ಗೊತ್ತಿಲ್ಲ: ಟ್ರಂಪ್

'ರಷ್ಯಾದಿಂದ ಅಮೆರಿಕವು ಯುರೇನಿಯಂ, ರಸಗೊಬ್ಬರಗಳು ಹಾಗೂ ರಾಸಾಯನಿಕಗಳನ್ನು ಆಮದು ಮಾಡಿಕೊಳ್ಳುತ್ತಿರುವ ಬಗ್ಗೆ ನನಗೆ ಏನೂ ಗೊತ್ತಿಲ್ಲ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಈ ಸರಕುಗಳನ್ನು ಅಮೆರಿಕವು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿದೆ' ಎಂಬ ಭಾರತದ ಹೇಳಿಕೆಗೆ ಟ್ರಂಪ್ ಈ ರೀತಿ ಪ್ರತಿಕ್ರಿಯಿಸಿದ್ದಾರೆ.

'ಈ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಈ ಬಗ್ಗೆ ಪರಿಶೀಲಿಸಿ, ನಿಮಗೆ ಮಾಹಿತಿ ನೀಡುತ್ತೇನೆ' ಎಂದು ಟ್ರಂಪ್ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ್ದಾರೆ. ರಷ್ಯಾದಿಂದ ಇಂಧನ ಖರೀದಿಸುತ್ತಿರುವ ಇತರ ದೇಶಗಳ ಮೇಲೆ ಸುಂಕ ವಿಧಿಸುವ ಕುರಿತು ಶೀಘ್ರವೇ ನಿರ್ಧರಿಸಲಾಗುವುದು ಎಂದಿದ್ದಾರೆ.

TRAVEL CORNER

Orchid TRAVEL & TOURS ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ರಿಯಾಯಿತಿ ದರದಲ್ಲಿ ಪ್ರವಾಸಗಳು
✆ 99000 99252
ಗ್ರ್ಯಾಂಡ್ ಯು.ಕೆ. ಮತ್ತು ಯುರೋಪ್
18 ದಿನಗಳು – 10 ದೇಶಗಳು
6 ದಿನಗಳ ಬಾಲಿ
7/11 ದಿನಗಳ ಸಿಂಗಾಪುರ ಮಲೇಶಿಯ–ಥೈಲ್ಯಾಂಡ್
11 ದಿನಗಳ ವಿಯೆಟ್ನಾಮ್ ಮತ್ತು ಕಾಂಬೋಡಿಯಾ
8 ದಿನಗಳ ನೇಪಾಳ ಸ್ಪೆಷಲ್
6 ದಿನಗಳ ಶ್ರೀಲಂಕಾ (ರಾಮಾಯಣ ಸ್ಪೆಷಲ್)
5 ದಿನಗಳ ಕಾಶಿ–ಪ್ರಯಾಗ್‌ರಾಜ್–ಅಯೋಧ್ಯ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Distributors
ತನ್ಮಯಿ ಪ್ರೋಟಿನ್ ಪೌಡರ್ ರಾಜ್ಯದ್ಯಂತ ಡಿಸ್ಟ್ರಿಬ್ಯೂಟರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಕ್ಕರೆ ಕಾಯಿಲೆ, ರಕ್ತದೊತ್ತಡ, ತೂಕ, ಕಡಿಮೆಯಾಗುತ್ತದೆ. ದೇಹಕ್ಕೆ ಶಕ್ತಿ ಮಂಡಿನೋವು, ಕಾಲುನೋವು, ನಿದ್ರೆ ಸಮಸ್ಯೆ, ಸೊಂಟ ಕಾಲುಗಳಲ್ಲಿ ಶಕ್ತಿ ಇಲ್ಲದವರಿಗೆ, ಬಿಸಿ ನೀರು ಅಥವಾ ಹಾಲಿನಲ್ಲಿ ಬೆರಸಿ ಕುಡಿಯುವುದರಿಂದ ನಿಮ್ಮ ಕಾಯಿಲೆಗಳು ಮುಕ್ತಿಗೊಳ್ಳುತ್ತವೆ. ಬೆಂಗಳೂರು Ph: 9019626612

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಸೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606385001, 9008835841.

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
ಮಂಗಳೂರಿನಲ್ಲಿ ಕಂಪನಿ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. ಸಂಬಳ 15000–20000/–, ಊಟ ವಸತಿ ಉಚಿತ. 7483021469

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381.

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC,Degree, ITI, Diplomaದವರು.18,000/-ದಿಂದ 86,000/-. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

ಬಾರ್ ವೇಟರ್ಸ್ ಬೇಕಾಗಿದ್ದಾರೆ ಸಂಪರ್ಕಿಸಿ ಮೊಬೈಲ್ 7090650796 ಜೆ.ಪಿ.ನಗರ್ ಹಂತ 2 7090650796

ಕರ್ನಾಟಕದಾದ್ಯಂತ ಪ್ರಸಿದ್ಧ MNCಕಂಪನಿಗೆ Work From Home &Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. (18,000- 35,000) 7th, 10th Any Degree. Ph: +917411273440/ +917625020184.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು


ಪ್ರವಾಸ
Travel
7ದಿನಗಳ ಕಾಶಿಯಾತ್ರೆ, 9 ದಿನಗಳ ಗುಜರಾತ್. 12 ದಿನಗಳ ಮಧ್ಯಪ್ರದೇಶ. 10 ದಿನಗಳ ನೇಪಾಳ ಮುಕ್ತಿನಾಥ.13ದಿನಗಳ ಚಾರ್‌ಧಾಮಯಾತ್ರೆ. 6ದಿನಗಳ ದುಬೈ ಪ್ರವಾಸ. ನಂದಿ ಹಾಲಿಡೇಸ್ ಬಸವನಗುಡಿ ಬೆಂಗಳೂರು.04 9980270467 9740228186

ಭಾರತಪರಂಪರ ದರ್ಶನ: 17.8.25 ಪುರಿಜಗನ್ನಾಥ 2ಶಕ್ತಿಪೀಠ, ಲಿಂಗರಾಜ,ಕೊಲ್ಕತ್ತ 6ದಿನ ವಿಮಾನದಲ್ಲಿ. 5.10.25 11ದಿನ ನೇಪಾಳ್ ಮುಕ್ತಿನಾಥ್ ಕಾಶಿ,ಅಯೋಧ್ಯ. ಪ್ರಕಾಶ್`ಹೆಬ್ಬಾರ್. 9448792891.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

33ನೇ ವರ್ಷದ ಚಿರಸ್ಮರಣೆ



ಪಿ.ಎಲ್.ಕುಮಾರಸ್ವಾಮಿ
ನಿವೃತ್ತ ಜಿಲ್ಲಾ ನ್ಯಾಯಾಧೀಶರು

ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸದಾಸ್ಮರಿಸುವ.

ಪತ್ನಿ: ಕಮಲಮ್ಮ, ಮಕ್ಕಳು, ಮೊಮ್ಮಕ್ಕಳು

20ನೇ ವರ್ಷದ ಚಿರಸ್ಮರಣೆ




ಎನ್. ತಿಮ್ಮರಾಜು
(ಮಾ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಶಾಂತಿನಗರ)
ನಿಧನ: 07-08-2005
ಸದಾ ನಿಮ್ಮ ನೆನಪಿನಲ್ಲಿರುವ..
ಪತ್ನಿ–ಶ್ರೀಮತಿ ಮಂಜುಳ ತಿಮ್ಮರಾಜು ಮಕ್ಕಳು ಹಾಗೂ ಕುಟುಂಬವರ್ಗದವರು.

ಶ್ರದ್ಧಾಂಜಲಿ



ಶ್ರೀಮತಿ. ವಿ. ಸರೋಜ
ಮರಣ: 06-08-2025
ಇವರ ಅಂತ್ಯಕ್ರಿಯೆಯನ್ನು ದಿನಾಂಕ 07-08-2025 ರಂದು ಬೆಳಿಗ್ಗೆ 11 ಕ್ಕೆ ಚಾಮರಾಜಪೇಟೆ ರುದ್ರಭೂಮಿಯಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು
ಪತಿ - ಶ್ರೀ ಹನುಮಂತಯ್ಯ (ತುಬಿನಕೆರೆ, ಕುಣಿಗಲ್ ತಾಲೂಕು)
ಮಕ್ಕಳು. - ಶ್ರೀಮತಿ ವಿನುತ.ಹೆಚ್ ಮತ್ತು ಶ್ರೀ ಅರಸೇಗೌಡ
ಶ್ರೀ ಡಾ|| ಮನುಕುಮಾರ್.ಹೆಚ್ ಮತ್ತು ಸುಷ್ಮಾ. ಬಿ. ಟಿ
ಮೊಮ್ಮಕ್ಕಳು

ಶತಮಾನೋತ್ಸವದ ಜನ್ಮದಿನದಂದು ಪ್ರೀತಿಯ ಸ್ಮರಣೆ



ಶ್ರೀ. ಹೆಚ್. ಕಮಲಾನಾಥ್
07.08.1925 ರಿಂದ 29.09.2011
ಸ್ಟ್ಯಾಂಡರ್ಡ್ ಬುಕ್ ಕಂಪನಿ
ಸ್ಟ್ಯಾಂಡರ್ಡ್ ಪ್ರೆಸ್
ಮಾಜಿ ಅಧ್ಯಕ್ಷರು
ಬೆಂಗಳೂರು ಗಾಯನ ಸಮಾಜ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ
ಕರ್ನಾಟಕ ಪ್ರಕಾಶಕರ ಮತ್ತು ಪುಸ್ತಕ ವ್ಯಾಪಾರಿಗಳ ಸಂಘ

LOOKING FOR JOB OPPORTUNITY
Refer Classifieds on Wednesday

ಪುಣ್ಯಸ್ಮರಣೆ



ದಿ|| ಸೋಲೂರು ಬೋರಮ್ಮ ತಿಮ್ಮಯ್ಯನವರು — 31ನೇ ವರ್ಷ 50ನೇ ವರ್ಷ
ದಿ|| ಎಸ್.ಕೆ. ಗೋವಿಂದರಾಜ್ — 2ನೇ ವರ್ಷ
ದಿ|| ಲೀಲಮ್ಮ ಕೃಷ್ಣಪ್ಪನವರು — 8ನೇ ವರ್ಷ 12ನೇ ವರ್ಷ

ಇವರ ಆತ್ಮಕ್ಕೆ ಭಗವಂತನು ಶಾಂತಿ ನೀಡಲಿ ಎಂದು ಪ್ರಾರ್ಥಿಸುವ STK Family & ಬಂಧು–ಮಿತ್ರರು

‘ಕಥೆ ಚೆನ್ನಾಗಿದ್ದರಷ್ಟೇ ಪಾತ್ರ ಒಪ್ಪಿಕೊಳ್ಳುವೆ’

ವಿಜಯ ರಾಘವೇಂದ್ರ ಹಾಗೂ ಅಶ್ವಿನಿ ಚಂದ್ರಶೇಖರ್ ಜೋಡಿಯಾಗಿ ನಟಿಸಿರುವ ‘ರಿಪ್ಪನ್ ಸ್ವಾಮಿ’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ. ಆಗಸ್ಟ್ 29ರಂದು ಚಿತ್ರ ತೆರೆಗೆ ಬರಲಿದ್ದು, ಇದರಲ್ಲಿ ವೈದ್ಯೆಯಾಗಿ ಕಾಣಿಸಿಕೊಂಡಿರುವ ಅಶ್ವಿನಿ ತಮ್ಮ ಸಿನಿಪಯಣ ಕುರಿತು ಮಾತನಾಡಿದ್ದಾರೆ.




ಅಶ್ವಿನಿ ಚಂದ್ರಶೇಖರ್

‘ಚಿತ್ರದಲ್ಲಿ ವಿಜಯ ರಾಘವೇಂದ್ರ ಅವರ ಪತ್ನಿಯಾಗಿ ಮಂಗಳಾ ಎಂಬ ಪಾತ್ರ ನಿರ್ವಹಿಸಿದ್ದೇನೆ. ವೃತ್ತಿಯಿಂದ ವೈದ್ಯೆ. ಜತೆಗೆ ಎಸ್ಟೇಟ್ ಪ್ರದೇಶದಲ್ಲಿ ವಾಸಿಸುವ ಗೃಹಿಣಿಯಾಗಿರುತ್ತೇನೆ. ಇವತ್ತಿನ ತಲೆಮಾರಿನ ಗೃಹಿಣಿಯರನ್ನು ಪ್ರತಿನಿಧಿಸುವ ಪಾತ್ರ ಎನ್ನಬಹುದು. ಇದೊಂದು ಕಂಟೆಂಟ್ ಆಧಾರಿತ ಸಿನಿಮಾ. ಹೀಗಾಗಿ ಕಥೆ ಎಲ್ಲರ ಜೀವನದಲ್ಲಿ ನಡೆಯಬಹುದಾದ ಕಥೆಯಂತಿದೆ. ಮಲಯಾಳ ಸಿನಿಮಾಗಳ ಬಗ್ಗೆ ಯಾವಾಗಲೂ ಮಾತಾಡುತ್ತೇವೆ. ಅದೇ ರೀತಿಯ ಚಿತ್ರ ಹಾಗೂ ಪಾತ್ರ ಪೋಷಣೆ ಇಲ್ಲಿದೆ’ ಎಂದು ಮಾತು ಪ್ರಾರಂಭಿಸಿದರು ಅಶ್ವಿನಿ.

‘ನಾಯಕನಿಗೆ ಇರುವಷ್ಟೇ ಪ್ರಾಮುಖ್ಯ ನನ್ನ ಪಾತ್ರಕ್ಕೂ ಇದೆ. ಹೀಗಾಗಿ ಒಂದು ಸುದೀರ್ಘ ವಿರಾಮದ ಬಳಿಕ ಈ ಸಿನಿಮಾ ಒಪ್ಪಿಕೊಂಡೆ. ‘ಗೊಂಬೆಗಳ ಲವ್’, ‘ಆಕ್ಟೋಪಸ್’, ‘ಪ್ರೇಮ ಪಲ್ಲಕ್ಕಿ’ ಮುಂತಾದ ಚಿತ್ರಗಳಲ್ಲಿ ನಟಿಸಿದ್ದೆ, ನಂತರ ಕನ್ನಡದಲ್ಲಿ ಯಾವುದೇ ಸಿನಿಮಾ ಮಾಡಿರಲಿಲ್ಲ. ಚಿತ್ರ ಮುಗಿದ ಮೇಲೆ ‘ಮಂಗಳಾ’ ಪಾತ್ರ ನೆನಪಿನಲ್ಲಿ ಉಳಿಯುತ್ತದೆ ಎಂಬ ಭರವಸೆಯಿದೆ. ಚಿಕ್ಕಮಗಳೂರಿನ ಎಸ್ಟೇಟ್ ಒಂದರಲ್ಲಿ ನಡೆದ ನೈಜ ಘಟನೆಯನ್ನೇ ನಿರ್ದೇಶಕರು ಚಿತ್ರವಾಗಿಸಿದ್ದಾರೆ. ನಾನು ಸುಮ್ಮನೆ ಬಂದು ಹೋಗುವ, ಹಾಡಿನಲ್ಲಿ ಕುಣಿದು ಹೋಗುವ ನಾಯಕಿಯ ಪಾತ್ರಗಳನ್ನು ಒಪ್ಪಿಕೊಳ್ಳಲಾರೆ. ಕಂಟೆಂಟ್ ಇದ್ದರಷ್ಟೇ ಪಾತ್ರ ಒಪ್ಪಿಕೊಳ್ಳುವೆ. ನಟಿಸಿದ ತೃಪ್ತಿ ಸಿಗಬೇಕು’ ಎನ್ನುತ್ತಾರೆ ಅವರು.

‘ನಾನು ನೃತ್ಯಗಾರ್ತಿ. ಜತೆಗೆ ಮಾಡೆಲ್ ಆಗಿದ್ದೆ. ಓದುತ್ತಿರುವಾಗಲೇ ನಟನೆಗೆ ಬಂದೆ. ಆಗ ಇದನ್ನು ವೃತ್ತಿಯಾಗಿ ತೆಗೆದುಕೊಂಡಿರಲಿಲ್ಲ. ನಟನೆಯನ್ನೇ ವೃತ್ತಿಯಾಗಿಸಿಕೊಂಡು ಐದು ವರ್ಷಗಳಾಯ್ತು. ನನಗೆ ಕೆಲಸ ಮಾಡುವ ತಂಡ ಕೂಡ ಬಹಳ ಪ್ರಮುಖವಾಗುತ್ತದೆ. ಹೊಸ ತಂಡಗಳ ಜತೆ ಕೆಲಸ ಮಾಡಿದ್ದೇ ಹೆಚ್ಚು’ ಎಂದರು.

‘ಸದ್ಯ ತಮಿಳು ಮತ್ತು ಮಲಯಾಳದಲ್ಲಿ ಹೆಚ್ಚು ಕೆಲಸ ಮಾಡುತ್ತಿದ್ದೇನೆ. ಕನ್ನಡದಲ್ಲಿ ಈ ಚಿತ್ರ ಬಿಡುಗಡೆಗಾಗಿ ಕಾಯುತ್ತಿರುವೆ. ತಮಿಳಿನಲ್ಲಿ ರೋಬೊ ಶಂಕರ್ ಜತೆಗಿನ ಸಿನಿಮಾ ಕಳೆದು ತಿಂಗಳು ಬಿಡುಗಡೆಗೊಂಡಿದೆ. ಜೀವಿ–3 ಸಿನಿಮಾ ಬಿಡುಗಡೆಗಿದೆ. ಇನ್ನೆರಡು ಸಿನಿಮಾಗಳಲ್ಲಿ ನಟಿಸುತ್ತಿರುವೆ. ಮಲಯಾಳದಲ್ಲಿ ನಿವಿನ್ ಪೌಲಿ ಅವರ ಸಿನಿಮಾವೊಂದರಲ್ಲಿ ನಟಿಸುತ್ತಿರುವೆ’ ಎಂದು ತಮ್ಮ ಮುಂದಿನ ಸಿನಿಮಾಗಳ ಮಾಹಿತಿ ನೀಡಿದರು.



ವಿಜಯ ರಾಘವೇಂದ್ರ

‘ಒಂದೊಳ್ಳೆ ಸಿನಿಮಾ ಮಾಡಿದ್ದೇವೆ ಎಂಬ ವಿಶ್ವಾಸವಿದೆ. ಆದರೆ ಜನ ನೋಡಿ ಅದನ್ನು ಹೇಳಬೇಕು. ವಿಜಯ ರಾಘವೇಂದ್ರ ಅವರಿಗೆ ಸರಿಹೊಂದುವ ಗಟ್ಟಿಯಾದ ಕಥೆಯನ್ನು ಹೊಂದಿರುವ ಚಿತ್ರವಿದು. ಇಂಥ ಸಿನಿಮಾದಲ್ಲಿ ಕೆಲಸ ಮಾಡಿದ ಖುಷಿಯಿದೆ’ ಎಂದರು.

ಚಂದನವನದ ಶಾಕುಂತಲೆಯ ‘ಶಾಕುಂತಲೆ ಸಿನಿಮಾಸ್’



ಐಶಾನಿ

ನಟ ರಕ್ಷಿತ್ ಶೆಟ್ಟಿ ನಾಯಕರಾಗಿ ನಟಿಸಿದ್ದ ‘ವಾಸ್ತು ಪ್ರಕಾರ’ ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ನಟಿ ಐಶಾನಿ ಶೆಟ್ಟಿ ತಮ್ಮ ನಿರ್ದೇಶನದ ಮೊದಲ ಸಿನಿಮಾವನ್ನು ತೆರೆಗೆ ತರಲು ಸಜ್ಜಾಗುತ್ತಿದ್ದಾರೆ.

‘ಗಣಿ ಬಿ.ಕಾಂ ಪಾಸ್’, ‘ಹೊಂದಿಸಿ ಬರೆಯಿರಿ’, ‘ಧರಣಿ ಮಂಡಲ ಮಧ್ಯದೊಳಗೆ’ ಹೀಗೆ ಹಲವು ಸಿನಿಮಾಗಳಲ್ಲಿ ನಟಿಸಿರುವ ಐಶಾನಿ ಸದ್ಯ ಸ್ಯಾಂಡಲ್‌ವುಡ್‌ನಲ್ಲಿ ‘ಶಾಕುಂತಲೆ’ಯಾಗಿ ಗುರುತಿಸಿಕೊಂಡಿದ್ದಾರೆ. ಇದಕ್ಕೆ ‘ನಡುವೆ ಅಂತರವಿರಲಿ’ ಸಿನಿಮಾದ ‘ಶಾಕುಂತ್ಲೆ ಸಿಕ್ಕಳು..’ ಹಾಡು ಕಾರಣ. ಈ ಹೆಸರಿನಿಂದಲೇ ಇದೀಗ ಐಶಾನಿ ಹೊಸ ಹೆಜ್ಜೆ ಇಟ್ಟಿದ್ದಾರೆ. ‘ಶಾಕುಂತಲೆ ಸಿನಿಮಾಸ್’ ಎಂಬ ನಿರ್ಮಾಣ ಸಂಸ್ಥೆಯನ್ನು ಅವರು ಆರಂಭಿಸಿದ್ದಾರೆ. ತನ್ನ ನಿರ್ದೇಶನದ ಸಿನಿಮಾವನ್ನು ಇದೇ ನಿರ್ಮಾಣ ಸಂಸ್ಥೆಯಿಂದ ತೆರೆಗೆ ತರುತ್ತಿದ್ದಾರೆ.

ನಿರ್ದೇಶನ ಐಶಾನಿ ಅವರಿಗೆ ಹೊಸದಲ್ಲ. ಅವರು ಸ್ನಾತಕೋತ್ತರ ಪದವಿ ಪಡೆಯುತ್ತಿರುವ ಸಂದರ್ಭದಲ್ಲಿ ಶೈಕ್ಷಣಿಕ ಪ್ರವಾಸಕ್ಕೆಂದು ಹೋದಾಗ ನೋಡಿದ, ಅನುಭವಿಸಿದ ಘಟನೆಗಳನ್ನು ಇಟ್ಟುಕೊಂಡು ಕಥೆ ಮಾಡಿದ್ದರು. ಅದನ್ನೇ ‘ಕಾಜಿ’ ಎಂಬ ಕಿರುಚಿತ್ರದ ಮೂಲಕ ಜನರ ಎದುರಿಗೆ ಇಟ್ಟಿದ್ದರು. ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿದ್ದ ಈ ಕಿರುಚಿತ್ರದಲ್ಲಿ ಹಿತಾ ಚಂದ್ರಶೇಖರ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದರು.

‘ಖುಷಿ, ಭಯ ಎರಡೂ ಇದೆ’

ನಿರ್ಮಾಣ ಸಂಸ್ಥೆ ಆರಂಭಿಸಿರುವುದರ ಕುರಿತು ಮಾತನಾಡಿದ ಐಶಾನಿ, ‘ಖುಷಿ ಮತ್ತು ಸ್ವಲ್ಪ ಭಯ ಇದೆ. ಹೊಸ ಜವಾಬ್ದಾರಿ ಹೊತ್ತುಕೊಂಡಿದ್ದೇನೆ. ನನ್ನ ಜೀವನದಲ್ಲಿ ಸಿನಿಮಾ ವಿಶೇಷವಾದ ಜಾಗ ಪಡೆದಿದೆ. ಕಥೆ ಹೇಳುವುದು ನನ್ನ ಇಷ್ಟದ ಕೆಲಸ. ನಾನೀಗ ಸಿನಿಮಾವೊಂದನ್ನು ನಿರ್ದೇಶನ ಮಾಡುವ ದೊಡ್ಡ ಜವಾಬ್ದಾರಿ ಹೊತ್ತಿದ್ದೇನೆ. ಈ ಕಥೆಯ ಜೊತೆ ಕೆಲಸ ಮಾಡುತ್ತಾ ನನಗೆ ತಿಳಿಯದೇ ಹೊಸ ಪ್ರಪಂಚಕ್ಕೆ ಪ್ರಯಾಣ ಮಾಡಿದೆ. ಈ ಕಥೆಯನ್ನು ನಾನೇ ನಿರ್ಮಾಣ ಮಾಡುವ ಆಲೋಚನೆ ಬಂತು. ಈ ಚಿತ್ರವನ್ನು ಸ್ವಂತ ಸಂಸ್ಥೆಯಲ್ಲಿ ಮಾಡಲು ನಿರ್ಧರಿಸಿದೆ. ‘ಶಾಕುಂತಲೆ’ ನನಗೆ ಜನರೇ ಕೊಟ್ಟ ಹೆಸರು. ನಾನು ಎಲ್ಲೆ ಹೋದರೂ ನನ್ನನ್ನು ಪ್ರೀತಿಯಿಂದ ‘ಶಾಕುಂತಲೆ’ ಎಂದು ಕರೆಯುತ್ತಾರೆ. ಜನರು ನೀಡಿದ ಈ ಗೌರವಕ್ಕೆ ಪ್ರತಿಯಾಗಿ ನಿರ್ಮಾಣ ಸಂಸ್ಥೆಗೂ ಅದೇ ಹೆಸರಿಟ್ಟೆ. ಈ ಹೊಸ ಪಯಣದಲ್ಲಿ ಗಟ್ಟಿಯಾಗಿ ನಿಂತು ಜವಾಬ್ದಾರಿ ನಿರ್ವಹಿಸುವುದಕ್ಕೆ ಪಣ ತೊಟ್ಟಿದ್ದೇನೆ’ ಎನ್ನುತ್ತಾರೆ.

‘ಅಪರಿಚಿತೆ’ ಶೀರ್ಷಿಕೆ ಅನಾವರಣ



ಗೀತಪ್ರಿಯ, ಶ್ರೀನಾಥ್

ಈ ಹಿಂದೆ ‘ತಾಯವ್ವ’ ಎಂಬ ಸಿನಿಮಾದಲ್ಲಿ ನಟಿಸಿದ್ದ ಗೀತಪ್ರಿಯ ಸುರೇಶ್‌ಕುಮಾರ್ ಇದೀಗ ‘ಅಪರಿಚಿತೆ’ ಎಂಬ ಪ್ರಾಜೆಕ್ಟ್ ಘೋಷಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಶೀರ್ಷಿಕೆ ಅನಾವರಣಗೊಂಡಿತು.

ಸಿನಿಮಾ ಕುರಿತು ಮಾತನಾಡಿದ ಗೀತಪ್ರಿಯ, ‘ಸಾಮಾಜಿಕ ಸಂದೇಶ ಇರುವಂತಹ ಸಿನಿಮಾಗಳಲ್ಲಿ ನಟಿಸಲು ನನಗೆ ಇಷ್ಟ. ಹಿಂದಿನ ಸಿನಿಮಾದಂತೆ ಇದೂ ಸಾಮಾಜಿಕ ಸಂದೇಶವಿರುವ ಸಿನಿಮಾ. ಚಿತ್ರದ ಚಿತ್ರೀಕರಣ ಆರಂಭವಾಗಿದ್ದು, ಇದು ನೈಜ ಘಟನೆ ಆಧಾರಿತವಾಗಿದೆ. ನಾನು ಶಿಕ್ಷಕಿಯ ಪಾತ್ರ ಮಾಡುತ್ತಿದ್ದೇನೆ’ ಎಂದರು.

ಚಿತ್ರಕ್ಕೆ ವಿಶ್ವನಾಥ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಸಿಂಧು ಲೋಕನಾಥ್, ಆರ್.ಜೆ.ನಿಖಿತಾ, ಶ್ರೀನಾಥ್ ಹಾಗೂ ಶ್ರೀನಾಥ್ ಅವರ ಪುತ್ರ ರೋಹಿತ್ ಪ್ರಮುಖ ಪಾತ್ರದಲ್ಲಿದ್ದಾರೆ. ಥ್ರಿಲ್ಲರ್ ಜಾನರ್‌ನಲ್ಲಿ ಈ ಸಿನಿಮಾವಿದೆ. ಅಕ್ಟೋಬರ್‌ನಲ್ಲಿ ಬಿಡುಗಡೆಗೆ ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಅಮರ ಫಿಲಂಸ್ ಬ್ಯಾನರ್ ಮೂಲಕ ಗೀತಪ್ರಿಯ ಅವರ ಪತಿ ಸುರೇಶ್‌ಕುಮಾರ್ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ‘ಕೋವಿಡ್ ಬಳಿಕ ನಾನು ನಟಿಸುತ್ತಿರುವ ಮೊದಲ ಸಿನಿಮಾ ಇದಾಗಿದೆ. ಸಮಾಜಕ್ಕೆ ಉತ್ತಮ ಸಂದೇಶ ಈ ಸಿನಿಮಾದಲ್ಲಿದೆ. ಮುಖ್ಯವಾಗಿ 40 ವರ್ಷದ ನಂತರ ನಾನು, ನನ್ನ ಮಗ ಒಂದೇ ಚಿತ್ರದಲ್ಲಿ ನಟಿಸುತ್ತಿದ್ದೇವೆ’ ಎಂದರು ಶ್ರೀನಾಥ್.

2 ಮೃತದೇಹ ಪತ್ತೆ, 9 ಯೋಧರು ಕಣ್ಮರೆ

ಉತ್ತರಕಾಶಿ: ನಾಪತ್ತೆಯಾಗಿದ್ದ 28 ಜನರಿದ್ದ ಕೇರಳದ ಗುಂಪು ಸುರಕ್ಷಿತ ● 250ಕ್ಕೂ ಹೆಚ್ಚು ಜನರ ರಕ್ಷಣೆ

ಪ್ರಜಾವಾಣಿ ವಾರ್ತೆ/ಪಿಟಿಐ/ಎಎಫ್‌ಪಿ

ಉತ್ತರಕಾಶಿ (ಉತ್ತರಾಖಂಡ)/ಲಖನೌ: ಮೇಘ ಸ್ಫೋಟದಿಂದ ಉಂಟಾದ ದಿಢೀರ್ ಪ್ರವಾಹದಿಂದ ನಲುಗಿರುವ ಜಿಲ್ಲೆಯ ಧರಾಲಿ ಗ್ರಾಮದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯ ಬುಧವಾರವೂ ಭರದಿಂದ ಸಾಗಿದೆ. ಅವಶೇಷಗಳಡಿಯಿಂದ ಎರಡು ಮೃತದೇಹಗಳನ್ನು ಹೊರತೆಗೆಯಲಾಗಿದ್ದು, 250ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ.

ಕೇರಳ ಮೂಲದ 28 ಪ್ರವಾಸಿಗರಿದ್ದ ತಂಡ ನಾಪತ್ತೆಯಾಗಿತ್ತು. ಎಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಪ್ರವಾಸಿಗರ ಕುಟುಂಬದ ಸದಸ್ಯರು ಹೇಳಿದ್ದಾರೆ.

ಹರ್ಸಿಲ್‌ನಲ್ಲಿರುವ ಸೇನಾ ಶಿಬಿರಕ್ಕೆ ಭಾರಿ ಹಾನಿಯಾಗಿದೆ. ಈ ಮೊದಲು 11 ಯೋಧರು ಕಣ್ಮರೆಯಾಗಿದ್ದರು. ನಂತರ ಇಬ್ಬರನ್ನು ರಕ್ಷಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಮಳೆ, ದಿಢೀರ್ ಪ್ರವಾಹ ಹಾಗೂ ಭೂಕುಸಿತದಂತಹ ವಿಕೋಪಗಳಿಂದಾಗಿ ರಕ್ಷಣಾ ಕಾರ್ಯ ಸವಾಲಾಗಿ ಪರಿಣಮಿಸಿದೆ. 25 ಅಡಿಗಳಷ್ಟು ಎತ್ತರದ ಅವಶೇಷಗಳ ಮೇಲೆ ತಾತ್ಕಾಲಿಕ ದಾರಿ ನಿರ್ಮಿಸಿ, ರಕ್ಷಣೆಗೆ ಪ್ರಯತ್ನಿಸಲಾಗುತ್ತಿದೆ.

> ಧರಾಲಿಯಲ್ಲಿ 24 ಗಂಟೆಯೊಳಗೆ 27 ಸೆಂ.ಮೀ.ನಷ್ಟು ಮಳೆ ಬಿದ್ದಿದೆ. ಪರ್ವತ ಪ್ರದೇಶಗಳಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಬೀಳುವ ಮಳೆಯ ಪರಿಣಾಮ ಅಗಾಧವಾಗಿರುತ್ತದೆ
>
> **ಮನೀಷ್ ಶ್ರೇಷ್ಠ,** ಜಲತಜ್ಞ ಅಂತರರಾಷ್ಟ್ರೀಯ ಸಮಗ್ರ ಪರ್ವತ ಅಭಿವೃದ್ಧಿ ಕೇಂದ್ರ, ನೇಪಾಳ

> ನಮ್ಮ ಸಹೋದ್ಯೋಗಿಗಳಲ್ಲಿ ಕೆಲವರು ಕಣ್ಮರೆಯಾಗಿದ್ದು, ಸೇನಾ ಶಿಬಿರಕ್ಕೂ ಹಾನಿಯಾಗಿದೆ. ಆದರೂ ಯೋಧರು ಧೈರ್ಯಗುಂದದೆ, ಬದ್ಧತೆಯಿಂದ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ
>
> **ಲೆಫ್ಟಿನೆಂಟ್ ಕರ್ನಲ್ ಮನೀಷ್ ಶ್ರೀವಾಸ್ತವ,** ರಕ್ಷಣಾ ವಕ್ತಾರ

‘ಮಂಗಳವಾರ ಮಧ್ಯಾಹ್ನ 2ರಿಂದ ನನ್ನ ತಮ್ಮ ಹಾಗೂ ಆತನ ಕುಟುಂಬದ ಸದಸ್ಯರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ’ ಎಂದು ವ್ಯಕ್ತಿಯೊಬ್ಬರು ಹೇಳಿದ್ದಾರೆ.

‘ನನ್ನ ತಮ್ಮ, ಆತನ ಪತ್ನಿ ಹಾಗೂ ಮಗ ನಾಪತ್ತೆಯಾಗಿದ್ದಾರೆ. ಧರಾಲಿಯಲ್ಲಿರುವ ನಮ್ಮ ಮನೆ ಹಾಗೂ ಹೋಟೆಲ್ ಪ್ರವಾಹದಲ್ಲಿ ಕೊಚ್ಚಿ ಹೋಗಿವೆ. ನಿನ್ನೆ ಮಧ್ಯಾಹ್ನ 2ಕ್ಕೆ ಕೊನೆಯದಾಗಿ ತಮ್ಮನೊಂದಿಗೆ ಮಾತನಾಡಿದ್ದೇನೆ’ ಎಂದರು.

‘ಹವಾಮಾನ ಅನುಕೂಲಕರವಾಗಿದ್ದಲ್ಲಿ, ನಾಳೆ ಅವರಿಗಾಗಿ ಶೋಧ ನಡೆಸಲಾಗುವುದು. ಇದಕ್ಕಾಗಿ ಹೆಲಿಕಾಪ್ಟರ್ ಒದಗಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ’ ಎಂದೂ ಹೇಳಿದರು.

ರಕ್ಷಣಾ ಕಾರ್ಯ: ‘ಎನ್‌ಡಿಆರ್‌ಎಫ್‌ನ ಮೂರು ತಂಡಗಳು ಧರಾಲಿಯತ್ತ ಪ್ರಯಾಣ ಬೆಳೆಸಿವೆ. ಆದರೆ, ಭೂಕುಸಿತದಿಂದಾಗಿ ಹೃಷಿಕೇಶ–ಉತ್ತರಕಾಶಿ ಹೆದ್ದಾರಿ ಬಂದ್ ಆಗಿರುವ ಕಾರಣ, ತಂಡಗಳು ಧರಾಲಿ ತಲುಪಲು ತೊಂದರೆಯಾಗಿದೆ’ ಎಂದು ಎನ್‌ಡಿಆರ್‌ಎಫ್ ಡಿಐಜಿ ಮೊಹಸಿನ್ ಶಹೀದ್ ಹೇಳಿದ್ದಾರೆ.



ಉತ್ತರಕಾಶಿ ಜಿಲ್ಲೆಯ ಧರಾಲಿ ಗ್ರಾಮದಲ್ಲಿ ಯೋಧರು ಬುಧವಾರ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು ಪಿಟಿಐ ಚಿತ್ರ

ಮಹಾರಾಷ್ಟ್ರದ 51 ಪ್ರವಾಸಿಗರು ಸುರಕ್ಷಿತ: ಉತ್ತರಕಾಶಿಯಲ್ಲಿ ಸಿಲುಕಿರುವ ರಾಜ್ಯದ 51 ಪ್ರವಾಸಿಗರು ಸುರಕ್ಷಿತವಾಗಿದ್ದಾರೆ ಎಂದು ಮಹಾರಾಷ್ಟ್ರ ಸರ್ಕಾರ ಬುಧವಾರ ಹೇಳಿದೆ.

‘ರಾಜ್ಯದ ಪ್ರವಾಸಿಗರನ್ನು ಸುರಕ್ಷಿತವಾಗಿ ಕರೆತರುವ ಕುರಿತು ಎಲ್ಲ ಪ್ರಯತ್ನಗಳು ನಡೆದಿವೆ. ಈ ಸಂಬಂಧ, ಉತ್ತರಾಖಂಡ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಉತ್ತರಕಾಶಿ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ’ ಎಂದು ಎಸ್‌ಇಒಸಿ ಅಧಿಕಾರಿಗಳು ಹೇಳಿದ್ದಾರೆ.

ಮುಚ್ಚಿಹೋದ ಪ್ರಾಚೀನ ದೇಗುಲ: ಮೇಘ ಸ್ಫೋಟದ ಕಾರಣ, ಖೀರಗಂಗಾ ನದಿಯಲ್ಲಿ ಉಂಟಾದ ದಿಢೀರ್ ಪ್ರವಾಹದಲ್ಲಿ ಕೊಚ್ಚಿ ಬಂದ ಅವಶೇಷಗಳಡಿ, ಇಲ್ಲಿನ ಪ್ರಾಚೀನ ಶಿವ ದೇಗುಲ ‘ಕಲ್ಪ ಕೇದಾರ’ ಮುಚ್ಚಿಹೋಗಿದೆ.

ಬಹಳ ವರ್ಷಗಳ ಹಿಂದೆ ಸಂಭವಿಸಿದ್ದ ಪ್ರಾಕೃತಿಕ ವಿಪತ್ತಿನ ಕಾರಣ ಈ ದೇವಾಲಯ ನೆಲದಲ್ಲಿ ಹುದುಗಿತ್ತು. 1945ರಲ್ಲಿ ಕೈಗೊಂಡಿದ್ದ ಉತ್ಖನನದ ವೇಳೆ ಈ ದೇಗುಲ ಪತ್ತೆಯಾಗಿತ್ತು.

ಸೇನೆಯಿಂದ ಕಾರ್ಯಾಚರಣೆ ಚುರುಕು

ನವದೆಹಲಿ: ಉತ್ತರಕಾಶಿಯ ಧರಾಲಿ ಗ್ರಾಮದಲ್ಲಿ ಉಂಟಾದ ದಿಢೀರ್ ಪ್ರವಾಹದಿಂದಾಗಿ ನಾಪತ್ತೆಯಾಗಿರುವವರ ಪತ್ತೆಗಾಗಿ ಭಾರತೀಯ ಸೇನೆ ತೀವ್ರ ಶೋಧ ಕಾರ್ಯಕೈಗೊಂಡಿದೆ.

ಅವಶೇಷಗಳಡಿ ಸಿಲುಕಿರುವವರನ್ನು, ವಾಸನೆ ಗ್ರಹಿಸಿ ಪತ್ತೆ ಮಾಡುವ ಸಾಮರ್ಥ್ಯವಿರುವ ಶ್ವಾನಗಳನ್ನು ಸೇನೆ ಶೋಧ ಕಾರ್ಯಕ್ಕೆ ಬಳಸಿಕೊಳ್ಳುತ್ತಿದೆ. ಡ್ರೋನ್‌ಗಳು ಹಾಗೂ ಭೂಮಿ ಅಗೆಯುವ ಯಂತ್ರಗಳನ್ನು ಕೂಡ ಬಳಸುತ್ತಿದೆ.

‘ವಿವಿಧೆಡೆ ಸಿಲುಕಿರುವವರ ಶೋಧ ಮತ್ತು ರಕ್ಷಣೆಗಾಗಿ ಎಂಐ–17 ಹಾಗೂ ಚಿನೂಕ್ ಹೆಲಿಕಾಪ್ಟರ್‌ಗಳನ್ನು ಸನ್ನದ್ಧವಾಗಿರಿಸಲಾಗಿದೆ.

ರಕ್ಷಣಾ ಕಾರ್ಯ ಸವಾಲಿನಿಂದ ಕೂಡಿದೆ: ಧಾಮಿ

‘ಮಳೆ ಸುರಿಯುತ್ತಿರುವ ಕಾರಣ ರಕ್ಷಣಾ ಕಾರ್ಯವು ಸವಾಲಿನಿಂದ ಕೂಡಿದೆ. ಸೇನೆ, ಐಟಿಬಿಪಿ, ಎಸ್‌ಡಿಆರ್‌ಎಫ್‌ನ ತಂಡಗಳು ಸನ್ನದ್ಧವಾಗಿವೆ. ಜಿಲ್ಲಾಧಿಕಾರಿ ಮತ್ತು ಎಸ್‌ಪಿ ದರ್ಜೆ ಅಧಿಕಾರಿಗಳು ಕೂಡ ಘಟನಾ ಸ್ಥಳಕ್ಕೆ ತೆರಳುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೇಳಿದ್ದಾರೆ.

ಪ್ರಮುಖ ಅಂಶಗಳು

- ಸೇನೆಯ 125 ಅಧಿಕಾರಿಗಳು ಹಾಗೂ ಯೋಧರು, ಐಟಿಬಿಪಿಯ 83 ಅಧಿಕಾರಿಗಳು ಹಾಗೂ ಯೋಧರು, ಬಿಆರ್‌ಒದ ಅಧಿಕಾರಿಗಳು, 100ಕ್ಕೂ ಹೆಚ್ಚು ಕಾರ್ಮಿಕರು ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿಯನ್ನು ರಕ್ಷಣಾ ಕಾರ್ಯಕ್ಕೆ ನಿಯೋಜನೆ ಮಾಡಲಾಗಿದೆ
- 14 ರಾಜಸ್ಥಾನ ರೈಫಲ್ಸ್‌ನ ಕಮಾಂಡಿಂಗ್ ಆಫೀಸರ್ ಕರ್ನಲ್ ಹರ್ಷವರ್ಧನ್ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆ ನೇತೃತ್ವ ವಹಿಸಿದ್ದಾರೆ
- ಗಂಗೋತ್ರಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಗಂಗ್ನಾನಿ ಬಳಿಯ ಲಿಮಾಚಾ ನದಿಗೆ ನಿರ್ಮಿಸಲಾಗಿರುವ ಸೇತುವೆ ಪ್ರವಾಹದಲ್ಲಿ ಕೊಚ್ಚಿ ಹೋಗಿದೆ. ಹೀಗಾಗಿ, ಧರಾಲಿಗೆ ತೆರಳಬೇಕಿದ್ದ ರಕ್ಷಣಾ ಸಿಬ್ಬಂದಿ ದಾರಿಯಲ್ಲಿಯೇ ಸಿಲುಕಿದ್ದಾರೆ
- ರುದ್ರಪ್ರಯಾಗದಲ್ಲಿ ಮಂದಾಕಿನಿ, ಹರಿದ್ವಾರದಲ್ಲಿ ಬಾಣಗಂಗಾ, ದೇವಪ್ರಯಾಗದಲ್ಲಿ ಭಾಗೀರಥಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ ಎಂದು ಕೇಂದ್ರ ಜಲ ಆಯೋಗ ಹೇಳಿದೆ

ಇ.ಡಿ ಎದುರು ವಿಚಾರಣೆಗೆ ಹಾಜರಾದ ದೇವರಕೊಂಡ

ಹೈದರಾಬಾದ್ (ಪಿಟಿಐ): ಆನ್‌ಲೈನ್‌ನಲ್ಲಿ ಅಕ್ರಮ ಬೆಟ್ಟಿಂಗ್ ಹಾಗೂ ಜೂಜಾಟಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಟ ವಿಜಯ್ ದೇವರಕೊಂಡ ಅವರು ಇಲ್ಲಿನ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ಬುಧವಾರ ವಿಚಾರಣೆಗೆ ಹಾಜರಾದರು.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ನಟರಾದ ಪ್ರಕಾಶ್ ರಾಜ್, ಅವರು ಜುಲೈ 30ರಂದು ವಿಚಾರಣೆಗೆ ಹಾಜರಾಗಿದ್ದರು. ಇವರೊಂದಿಗೆ ನಟ ರಾಣಾ ದಗ್ಗುಬಾಟಿ, ವಿಜಯ್ ದೇವರಕೊಂಡ ಹಾಗೂ ನಟಿ ಲಕ್ಷ್ಮಿ ಮಂಚು ಅವರಿಗೂ ವಿಚಾರಣೆಗೆ ಹಾಜರಾಗುವಂತೆ ಇ.ಡಿ ನೋಟಿಸ್ ನೀಡಿತ್ತು.

ಬೆಟ್ಟಿಂಗ್ ಆ್ಯಪ್‌ಗಳ ಪ್ರಚಾರಕ್ಕೆ ಸಂಬಂಧಿಸಿ ನಟರು ಹಾಗೂ ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್‌ಗಳ ವಿರುದ್ಧ 5 ರಾಜ್ಯಗಳಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳ ಆಧಾರದ ಮೇಲೆ ಇ.ಡಿ ವಿಚಾರಣೆ ನಡೆಸುತ್ತಿದೆ.

300 ಲೀಟರ್ ಎದೆಹಾಲು ದಾನ ಮಾಡಿದ ಮಹಿಳೆ



ಚೆನ್ನೈ (ಪಿಟಿಐ): ತಮಿಳುನಾಡಿನ ತಿರುಚಿರಾಪಲ್ಲಿಯ ಮಹಿಳೆಯೊಬ್ಬರು 300 ಲೀಟರ್ ಎದೆಹಾಲು ದಾನ ಮಾಡಿ ಸಹಸ್ರಾರು ಶಿಶುಗಳನ್ನು ರಕ್ಷಿಸಿದ್ದಾರೆ.

ಈ ಮೂಲಕ ಅವರು ಅವಧಿಗೂ ಮುನ್ನ ಜನಿಸಿದ ಮತ್ತು ಗಂಭೀರ ಸ್ಥಿತಿಯಲ್ಲಿರುವ ನವಜಾತ ಶಿಶುಗಳ ಜೀವ ಉಳಿಸಲು ನೆರವಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಎರಡು ಮಕ್ಕಳ ತಾಯಿಯಾದ ಸೆಲ್ವಾ ಬೃಂದಾ ಅವರು 2023ರಿಂದ ಏಪ್ರಿಲ್‌ನಿಂದ 2025ರ ಫೆಬ್ರುವರಿವರೆಗೆ 22 ತಿಂಗಳು 300.17 ಲೀಟರ್ ಎದೆಹಾಲನ್ನು ಮಹಾತ್ಮ ಗಾಂಧಿ ಮೆಮೋರಿಯಲ್ ಸರ್ಕಾರಿ ಆಸ್ಪತ್ರೆಯ ಎದೆಹಾಲು ಬ್ಯಾಂಕಿಗೆ ದಾನ ಮಾಡಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಎದೆಹಾಲಿನ ಬ್ಯಾಂಕ್ 2023–24ರ ಅವಧಿಯಲ್ಲಿ ಸಂಗ್ರಹಿಸಿದ ಒಟ್ಟು ಹಾಲಿನಲ್ಲಿ ಬೃಂದಾ ಅವರ ಕೊಡುಗೆಯೇ ಅರ್ಧದಷ್ಟಿದೆ ಎಂದು ವಿವರಿಸಿದ್ದಾರೆ. ಈ ಮಹತ್ವದ ಸೇವೆಯ ಕಾರಣಕ್ಕೆ ಬೃಂದಾ ಅವರ ಹೆಸರು ‘ಏಷ್ಯಾ ಬುಕ್ ಆಫ್ ರೆಕಾರ್ಡ್ಸ್’ ಮತ್ತು ‘ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್’ನಲ್ಲಿ ಸ್ಥಾನ ಪಡೆದಿದೆ.

‘ವಿಶ್ವ ಸ್ತನ್ಯಪಾನ ಸಪ್ತಾಹ’ದ ಸಮಾರೋಪ ಸಮಾರಂಭದಲ್ಲಿ ಬೃಂದಾ ಅವರನ್ನು ಎದೆಹಾಲಿನ ಬ್ಯಾಂಕಿನ ಅಧಿಕಾರಿಗಳು ಸನ್ಮಾನಿಸಲಿದ್ದಾರೆ.

ಚೀನಾಕ್ಕೆ ಮೋದಿ ಎರಡು ದಿನಗಳ ಭೇಟಿ

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ಶಾಂಘೈ ಸಹಕಾರ ಒಕ್ಕೂಟದಲ್ಲಿ (ಎಸ್‌ಸಿಒ) ಪಾಲ್ಗೊಳ್ಳಲು ಚೀನಾಕ್ಕೆ ಆಗಸ್ಟ್ 31 ಮತ್ತು ಸೆಪ್ಟೆಂಬರ್ 1ರಂದು ಎರಡು ದಿನಗಳ ಭೇಟಿ ನೀಡಲಿದ್ದಾರೆ’ ಎಂದು ಮೂಲಗಳು ಬುಧವಾರ ತಿಳಿಸಿವೆ. ಆದರೆ, ಈ ಬಗ್ಗೆ ಅಧಿಕೃತ ಹೇಳಿಕೆ ಪ್ರಕಟವಾಗಿಲ್ಲ.

ಲಡಾಖ್‌ನ ಗಾಲ್ವಾನ್‌ನಲ್ಲಿನ 2020ರ ಭಾರತ ಮತ್ತು ಚೀನಾ ಸೇನಾ ಸಂಘರ್ಷದ ಬಳಿಕ ಎರಡೂ ದೇಶಗಳ ಸಂಬಂಧ ಹಳಸಿತ್ತು. ಹಳಸಿದ ಸಂಬಂಧ ಸರಿಪಡಿಸಿಕೊಳ್ಳುವ ಪ್ರಯತ್ನದಲ್ಲಿ ಎರಡೂ ದೇಶಗಳು ಹಲವು ಕ್ರಮಗಳನ್ನು ಕೈಗೊಂಡಿವೆ. ಈ ಕಾರಣದಿಂದಾಗಿಯೂ ಮೋದಿ ಅವರ ಭೇಟಿ ಪ್ರಾಮುಖ್ಯ ಪಡೆದಿದೆ. ಸುಮಾರು ಏಳು ವರ್ಷಗಳ ಬಳಿಕ ಪ್ರಧಾನಿ ಮೋದಿ ಅವರು ಚೀನಾಕ್ಕೆ ತೆರಳಿದ್ದಾರೆ.

ಸಂಬಂಧ ಉತ್ತಮಪಡಿಸಿಕೊಳ್ಳುವ ಉದ್ದೇಶದಿಂದ ಎರಡೂ ದೇಶಗಳು ‘ವಿಶೇಷ ಪ್ರತಿನಿಧಿಗಳ ಮಾತುಕತೆ’ ಕಾರ್ಯಕ್ರಮವನ್ನು ರೂಪಿಸಿಕೊಂಡಿವೆ. ಪ್ರಧಾನಿ ಮೋದಿ ಅವರ ಚೀನಾ ಭೇಟಿಯ ಬಳಿಕ ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಇದೇ ಕಾರ್ಯಕ್ರಮದ ಅಡಿಯಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದಾರೆ ಎನ್ನಲಾಗುತ್ತಿದೆ.

ಇದೇ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ಮೋದಿ ಅವರು 2018ರಲ್ಲಿ ಚೀನಾಕ್ಕೆ ಭೇಟಿ ನೀಡಿದ್ದರು. ಬಳಿಕ 2019ರಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ‘ಅನೌಪಚಾರಿಕ ಶೃಂಗಸಭೆ’ಗಾಗಿ ಭಾರತಕ್ಕೆ ಭೇಟಿ ನೀಡಿದ್ದರು. ಇದು ಅವರ ಎರಡನೇ ಭೇಟಿಯಾಗಿತ್ತು.

ಈ ಬಾರಿಯ ಶಾಂಘೈ ಶೃಂಗಸಭೆಯ ಬಳಿಕ ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಜಿನ್‌ಪಿಂಗ್ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆಯೇ ಎನ್ನುವ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ಆಗಸ್ಟ್ 29ರಂದು ಪ್ರಧಾನಿ ಮೋದಿ ಅವರು ಜಪಾನ್‌ಗೆ ಭೇಟಿ ನೀಡಲಿದ್ದಾರೆ ಎನ್ನಲಾಗುತ್ತಿದೆ.

ಕ್ವಾಡ್ ಶೃಂಗಸಭೆ: ಟ್ರಂಪ್ ಆಗಮನ ಅನಿಶ್ಚಿತ

ಕ್ವಾಡ್ ಶೃಂಗಸಭೆಯು ಭಾರತದಲ್ಲಿ ಇದೇ ವರ್ಷದಲ್ಲಿ ನಡೆಯಲಿದೆ. ಈ ಶೃಂಗಸಭೆಗಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತಕ್ಕೆ ಭೇಟಿ ನೀಡಬೇಕಿತ್ತು. ಆದರೆ, ಸುಂಕದ ವಿಚಾರದಲ್ಲಿ ಅಮೆರಿಕ ಮತ್ತು ಭಾರತ ಸಂಬಂಧದಲ್ಲಿ ಬಿರುಕು ಮೂಡಿದೆ. ಈ ಕಾರಣದಿಂದಾಗಿ ಟ್ರಂಪ್ ಅವರು ಭಾರತಕ್ಕೆ ಬರುವ ಕುರಿತು ಅನಿಶ್ಚಿತ ಸ್ಥಿತಿ ನಿರ್ಮಾಣವಾಗಿದೆ. ಕ್ವಾಡ್‌ನ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಈಗಾಗಲೇ ಎರಡು ಸುತ್ತಿನ ಸಭೆಗಳನ್ನು ಅಮೆರಿಕದಲ್ಲಿ ನಡೆದಿವೆ.

ಅಮೆರಿಕವು ಒಟ್ಟು ಶೇ 50ರಷ್ಟು ಸುಂಕ ಹೇರಿರುವ ಈ ಹೊತ್ತಿನಲ್ಲಿ ಟ್ರಂಪ್ ಅವರನ್ನು ಭಾರತಕ್ಕೆ ಆಹ್ವಾನಿಸಲು ಭಾರತ ಹಿಂಜರಿಯುತ್ತದೆ ಎನ್ನಲಾಗುತ್ತಿದೆ. ‘ಟ್ರಂಪ್ ಅವರ ಭೇಟಿಯ ಮೂಲಕ ಪ್ರಧಾನಿ ಮೋದಿ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳಿಗೆ ಹೊಸ ಅಸ್ತ್ರ ನೀಡಿದಂತಾಗುತ್ತದೆ. ಭಾರತ–ಪಾಕಿಸ್ತಾನ ಮಧ್ಯದ ಸಂಘರ್ಷ ಅಂತ್ಯಕ್ಕೆ ನಾನೇ ಮಧ್ಯಸ್ಥಿಕೆ ವಹಿಸಿದ್ದೆ ಎಂದು ಟ್ರಂಪ್ ಅವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿಯೇ ಒಂದೊಮ್ಮೆ ಹೇಳಿಕೆ ನೀಡಿದರೆ, ಪ್ರಧಾನಿ ಮೋದಿ ಅವರಿಗೆ ಮುಜುಗರ ಆಗಬಹುದು’ ಎನ್ನಲಾಗುತ್ತಿದೆ.

ಎಲ್ಲದರ ಕುರಿತೂ ಚರ್ಚೆ ಸಾಧ್ಯ: ಖರ್ಗೆ

ಎಸ್‌ಐಆರ್: ಮಾಜಿ ಸಭಾಪತಿ ಧನಕರ್ ಆದೇಶ ಉಲ್ಲೇಖಿಸಿ ಉಪ ಸಭಾಪತಿ ಹರಿವಂಶ್‌ಗೆ ಪತ್ರ

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಸಂಸತ್ತಿನಲ್ಲಿ ಚರ್ಚಿಸಲು ವಿರೋಧ ಪಕ್ಷಗಳು ಬಿಗಿಪಟ್ಟು ಹಿಡಿದಿವೆ. ಸಂಸತ್ತಿನಲ್ಲಿ ಚುನಾವಣಾ ಪ್ರಕ್ರಿಯೆಗಳಿಗೆ ಸಂಬಂಧಿಸಿ ಈ ಹಿಂದೆ ನಡೆದ ಚರ್ಚೆಗಳು, ಮಾಜಿ ಸಭಾಪತಿ ಜಗದೀಪ್ ಧನಕರ್ ಅವರ ಆದೇಶಗಳನ್ನು ಉಲ್ಲೇಖಿಸಿ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

‘ಈ ಚರ್ಚೆಯು ನಮ್ಮ ಪ್ರಜಾಪ್ರಭುತ್ವಕ್ಕೆ ಅತ್ಯಂತ ಮಹತ್ವದ್ದು’ ಎಂದೂ ಕಾಂಗ್ರೆಸ್ ಅಭಿಪ್ರಾಯಪಟ್ಟಿದೆ. ಈ ಬಗ್ಗೆ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಉಪ ಸಭಾಪತಿ ಹರಿವಂಶ್ ಅವರಿಗೆ ಬುಧವಾರ ಪತ್ರ ಬರೆದಿದ್ದಾರೆ.



ಖರ್ಗೆ

‘ಈ ಭೂಮಿ ಮೇಲಿರುವ ಎಲ್ಲ ವಿಚಾರಗಳ ಕುರಿತೂ ಇಲ್ಲಿ ಚರ್ಚೆ ನಡೆಸಬಹುದು. ಒಂದಕ್ಕೆ ಮಾತ್ರ ನಿರ್ಬಂಧ ಇದೆ. ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿಗಳ ವಾಗ್ದಂಡನೆ ವಿಚಾರದಲ್ಲಿ ಮಾತ್ರವೇ ಚರ್ಚೆ ಸಾಧ್ಯವಿಲ್ಲ’ ಎಂದು ರಾಜ್ಯಸಭೆಯ ಸಭಾಪತಿಯಾಗಿದ್ದ ಜಗದೀಪ್ ಧನಕರ್ ಅವರು 2023ರ ಜುಲೈ 21ರಂದು ಆದೇಶ ನೀಡಿದ್ದರು’ ಎಂದು ಖರ್ಗೆ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಯಾವುದೇ ಒಂದು ವಿಚಾರವು ನ್ಯಾಯಾಲಯದಲ್ಲಿ ಇದ್ದರೆ, ಆ ಕುರಿತ ಚರ್ಚೆ ಸಾಧ್ಯವಿಲ್ಲ ಎನ್ನುವ ವಾದವನ್ನು ಧನಕರ್ ಅವರು ಒಪ್ಪಿರಲೇ ಇಲ್ಲ. ಸಭಾಪತಿಯೊಬ್ಬರು ಒಮ್ಮೆ ನೀಡಿದ ಆದೇಶವು ಸದಾ ಮೌಲ್ಯಯುತವಾಗಿರುತ್ತದೆ. ನೀವೇ ಹಲವು ಬಾರಿ ಈ ಹಿಂದಿನ ಸಭಾಪತಿ ನೀಡಿದ ಆದೇಶವನ್ನು ಉಲ್ಲೇಖಿಸಿದ್ದೀರಿ’ ಎಂದು ಖರ್ಗೆ ಅವರು ಪತ್ರದಲ್ಲಿ ಬರೆದಿದ್ದಾರೆ.

‘ಈ ಹಿಂದೆ ಐದು ಬಾರಿ ಚರ್ಚೆ ನಡೆದಿತ್ತು’

‘ಚುನಾವಣಾ ಪಕ್ರಿಯೆಗಳಿಗೆ ಸಂಬಂಧಿಸಿ ಈ ಹಿಂದೆ 1961, 1981, 1991, 2015 ಮತ್ತು 2019ರಲ್ಲಿ ಚರ್ಚೆಗಳು ನಡೆದಿವೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಚರ್ಚೆಗೆ ಅವಕಾಶ ನೀಡಲು ಈ ಹಿಂದಿನ ಚರ್ಚೆಗಳೇ ನಿದರ್ಶನಗಳು. ತಡ ಮಾಡದೇ ಈ ವಿಚಾರದ ಕುರಿತು ಚರ್ಚೆಗೆ ಅವಕಾಶ ನೀಡಿ’ ಎಂದು ಲೋಕಸಭೆ ವಿರೋಧ ಪಕ್ಷ ಉಪನಾಯಕ ಗೌರವ್ ಗೊಗೊಯ್ ಆಗ್ರಹಿಸಿದ್ದಾರೆ.

ವಿರೋಧ ಪಕ್ಷಗಳ ಪಟ್ಟು

ನವದೆಹಲಿ (ಪಿಟಿಐ): ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಚರ್ಚೆಗೆ ಅವಕಾಶ ನೀಡಬೇಕು ಎಂದು ವಿರೋಧ ಪಕ್ಷಗಳು ಬುಧವಾರವೂ ಪಟ್ಟು ಹಿಡಿದಿದ್ದರಿಂದ ರಾಜ್ಯಸಭೆಯ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಯಿತು.

ಕಲಾಪವು ಮಧ್ಯಾಹ್ನ ಆರಂಭವಾಗುತ್ತಿದ್ದಂತೆ ಸಭಾಪತಿ ಪೀಠದಲ್ಲಿದ್ದ ಭುವನೇಶ್ವರ ಕಲಿತಾ ಅವರು ಸಮುದ್ರಯಾನದ ಮೂಲಕ ಸರಕುಗಳ ಸಾಗಣೆ ಮಸೂದೆ–2020ನ್ನು ಕೈಗೆತ್ತಿಕೊಳ್ಳುವಂತೆ ಸೂಚಿಸಿದರು. ಇದಕ್ಕೆ ವಿರೋಧ ಪಕ್ಷದ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಕೋಲಾಹಲದ ನಡುವೆಯೇ ಧ್ವನಿ ಮತದ ಮೂಲಕ ಮಸೂದೆಯನ್ನು ಅಂಗೀಕರಿಸಲಾಯಿತು. ಈ ಮಸೂದೆಯು ಈಗಾಗಲೇ ಲೋಕಸಭೆಯಲ್ಲಿ ಅಂಗೀಕಾರವಾಗಿದೆ.

ಉಪಸಭಾಪತಿ ಹರಿವಂಶ್ ಅವರು, ‘ನಿಯಮ 267ರಡಿ 35 ನೋಟಿಸ್‌ಗಳನ್ನು ಸ್ವೀಕರಿಸಲಾಗಿತ್ತು. ಇವು ನಿಯಮಾವಳಿ ಪ್ರಕಾರ ಇಲ್ಲದಿದ್ದರಿಂದ ತಿರಸ್ಕರಿಸಲಾಗಿದೆ’ ಎಂದು ತಿಳಿಸಿದರು.

ವಿರೋಧ ಪಕ್ಷಗಳು ಪ್ರತಿಭಟನೆ ಮುಂದುವರಿಸಿದ್ದರಿಂದ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಯಿತು.

ಚರ್ಚೆ ಸಾಧ್ಯವಿಲ್ಲ: ಕಿರಣ್ ರಿಜಿಜು




ನವದೆಹಲಿ (ಪಿಟಿಐ): ‘ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ (ಎಸ್‌ಐಆರ್) ಕುರಿತು ಲೋಕಸಭೆಯಲ್ಲಿ ಚರ್ಚೆ ನಡೆಸಲು ಸಾಧ್ಯವಿಲ್ಲ’ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಪುನರುಚ್ಚರಿಸಿದ್ದಾರೆ.

‘ಎಸ್‌ಐಆರ್’ ಕುರಿತ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇರುವುದರಿಂದ ಮತ್ತು ಲೋಕಸಭೆಯ ನಿಯಮಗಳ ಪ್ರಕಾರ, ನ್ಯಾಯಾಲಗಳಲ್ಲಿ ವಿಚಾರಣಾ ಹಂತದಲ್ಲಿರುವ ವಿಷಯಗಳ ಕುರಿತು ಸದನದಲ್ಲಿ ಚರ್ಚಿಸಲು ಅವಕಾಶ ಇಲ್ಲ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ಎಸ್‌ಐಆರ್’ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು ಆಗ್ರಹಿಸಿ ಬುಧವಾರವೂ ವಿರೋಧ ಪಕ್ಷಗಳು ಸದನದಲ್ಲಿ ಗದ್ದಲ ಎಬ್ಬಿಸಿದವು. ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಬಗ್ಗೆಯೂ ಸದನದಲ್ಲಿ ಚರ್ಚೆ ಸಾಧ್ಯವಿಲ್ಲ ಎಂದು ರಿಜಿಜು ಹೇಳಿದರು.

ವಿವರ ಸಲ್ಲಿಸಿ: ‘ಸುಪ್ರೀಂ’



ನವದೆಹಲಿ (ಪಿಟಿಐ): ಬಿಹಾರದಲ್ಲಿ ನಡೆದ ಮತದಾರರ ಪಟ್ಟಿಯ ‘ವಿಶೇಷ ಸಮಗ್ರ ಪರಿಷ್ಕರಣೆ’ (ಎಸ್‌ಐಆರ್) ನಂತರ, ಪಟ್ಟಿಯಿಂದ ಅಂದಾಜು 65 ಲಕ್ಷ ಮತದಾರರ ಹೆಸರು ತೆಗೆದುಹಾಕಲಾಗಿದೆ. ಈ ಕುರಿತ ವಿವರಗಳನ್ನು ಆಗಸ್ಟ್ 9ರ ಒಳಗಾಗಿ ಸಲ್ಲಿಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿರುವ ಮತದಾರರ ವಿವರಗಳನ್ನು ಈಗಾಗಲೇ ರಾಜಕೀಯ ಪಕ್ಷಗಳಿಗೆ ಒದಗಿಸಲಾಗಿದೆ. ಇದೇ ವಿವರಗಳಿರುವ ಪಟ್ಟಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಜೊತೆಗೆ, ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ಗೂ (ಎಡಿಆರ್) ನೀಡುವಂತೆ ಆಯೋಗದ ಪರ ವಕೀಲರಿಗೆ ಸೂಚಿಸಿದೆ.

ಬಿಹಾರದಲ್ಲಿ ‘ಎಸ್‌ಐಆರ್’ ಕೈಗೊಳ್ಳುವ ಕುರಿತು ಆಯೋಗವು ಜೂನ್ 24ರಂದು ಹೊರಡಿಸಿದ್ದ ಅದೇಶ ಪ್ರಶ್ನಿಸಿ ಎಡಿಆರ್ ಮೇಲ್ಮನವಿ ಸಲ್ಲಿಸಿತ್ತು.

ಈಗ, ಆಯೋಗವು ತೆಗೆದುಹಾಕಿರುವ 65 ಲಕ್ಷ ಮತದಾರರ ಹೆಸರುಗಳನ್ನು ಬಹಿರಂಗಪಡಿಸಬೇಕು. ಜೊತೆಗೆ, ಈ ಮತದಾರರು ಮೃತಪಟ್ಟಿದ್ದಾರೆಯೇ?, ಶಾಶ್ವತವಾಗಿ ವಲಸೆ ಹೋಗಿದ್ದಾರೆಯೇ? ಅಥವಾ ಯಾವುದಾದರೂ ಕಾರಣಕ್ಕಾಗಿ ಅವರನ್ನು ಪರಿಗಣಿಸಿಲ್ಲವೇ ಎಂಬ ಮಾಹಿತಿಯನ್ನು ಕೂಡ ಉಲ್ಲೇಖಿಸುವಂತೆ ಆಯೋಗಕ್ಕೆ ಸೂಚನೆ ನೀಡಬೇಕು ಎಂದು ಕೋರಿ ಎಡಿಆರ್ ಹೊಸದಾಗಿ ಅರ್ಜಿ ಸಲ್ಲಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ, ಉಜ್ವಲ್ ಭೂಯಾನ್ ಹಾಗೂ ಎನ್.ಕೋಟೀಶ್ವರ ಸಿಂಗ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ‘ಆಯೋಗವು ಪರಿಷ್ಕರಣೆ ನಂತರ ಈಗ ಕರಡು ಮತದಾರರ ಪಟ್ಟಿ ಪ್ರಕಟಿಸಿದೆ. ಪಟ್ಟಿಯಿಂದ ಮತದಾರರ ಹೆಸರುಗಳನ್ನು ಕೈಬಿಟ್ಟಿರುವುದಕ್ಕೆ ಏನು ಕಾರಣ ಎಂಬುದು, ಮುಂದೆ ವಿಚಾರಣೆ ವೇಳೆ ಪ್ರಸ್ತಾಪವಾಗಲಿದೆ’ ಎಂದು ಎಡಿಆರ್ ಪರ ಹಾಜರಿದ್ದ ಹಿರಿಯ ವಕೀಲ ಪ್ರಶಾಂತ ಭೂಷಣ್ ಉದ್ದೇಶಿಸಿ ಪೀಠ ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ಪ್ರಶಾಂತ್ ಭೂಷಣ್, ‘ಕೆಲವು ರಾಜಕೀಯ ಪಕ್ಷಗಳಿಗೆ, ಪಟ್ಟಿಯಿಂದ ಕೈಬಿಟ್ಟಿರುವ ಮತದಾರರ ವಿವರಗಳನ್ನು ಆಯೋಗ ಒದಗಿಸಿದೆ. ಆದರೆ, ಅಂತಹ ಮತದಾರರು ಸತ್ತಿದ್ದಾರೆಯೋ ಅಥವಾ ವಲಸೆ ಹೋಗಿದ್ದಾರೋ ಎಂಬ ಬಗ್ಗೆ ಸ್ಪಷ್ಟನೆ ನೀಡಿಲ್ಲ’ ಎಂದು ಪೀಠಕ್ಕೆ ತಿಳಿಸಿದರು.

ಆಗ ಪೀಠವು, ಆಯೋಗದ ಪರ ವಕೀಲರನ್ನು ಉದ್ದೇಶಿಸಿ,‘ಈ ಪ್ರಕ್ರಿಯೆಯು ಪ್ರತಿಯೊಬ್ಬ ಮತದಾರನ ಮೇಲೂ ಪರಿಣಾಮ ಬೀರಲಿದೆ ಎಂಬುದು ನಮ್ಮ ಭಾವನೆ. ಹೀಗಾಗಿ, ಸಮಗ್ರ ವಿವರಗಳ ಸಮೇತ ಶನಿವಾರದ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸಿ. ಅದನ್ನು ಪ್ರಶಾಂತ್ ಭೂಷಣ್ ಪರಿಶೀಲಿಸಲಿ. ನಂತರ, ಯಾವ ವಿವರಗಳನ್ನು ಬಹಿರಂಗ ಪಡಿಸಲಾಗಿದೆ ಮತ್ತು ಯಾವುದನ್ನು ಬಹಿರಂಗಪಡಿಸಲಾಗಿಲ್ಲ ಎಂಬುದನ್ನು ನಾವು ನೋಡಲು ಸಾಧ್ಯವಾಗಲಿದೆ’ ಎಂದು ಹೇಳಿತು.

12, 13ಕ್ಕೆ ವಿಚಾರಣೆ: ‘ಎಸ್‌ಐಆರ್’ ಕುರಿತು ಆಯೋಗವು ಹೊರಡಿಸಿರುವ ಆದೇಶ ಪ್ರಶ್ನಿಸಿ ಎಡಿಆರ್ ಹಾಗೂ ಇತರರು ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆಯನ್ನು ಆಗಸ್ಟ್ 12 ಹಾಗೂ 13ರಂದು ಆರಂಭಿಸುವುದಾಗಿ ಪೀಠ ಹೇಳಿದೆ.

ಮತದಾರರ ಪಟ್ಟಿಯ ಪರಿಷ್ಕರಣೆಗೆ ಸಂಬಂಧಿಸಿ ತನ್ನ ಹೇಳಿಕೆ/ಆಕ್ಷೇಪಗಳನ್ನು ವಿಚಾರಣೆ ವೇಳೆ ಎಡಿಆರ್ ಸಲ್ಲಿಸಬಹುದು ಎಂದು ಪೀಠ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಬಿಎಫ್‌ಐ ಚುನಾವಣೆ: ಠಾಕೂರ್ ಮತ್ತೆ ಅನರ್ಹ



ನವದೆಹಲಿ (ಪಿಟಿಐ): ಕೇಂದ್ರದ ಮಾಜಿ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ಭಾರತ ಬಾಕ್ಸಿಂಗ್ ಫೆಡರೇಷನ್ ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತೆ ಅನರ್ಹರಾಗಿದ್ದಾರೆ.

ಇದೇ ತಿಂಗಳ 21ರಂದು ನಡೆಯಲಿರುವ ಚುನಾವಣೆಗೆ ಮತದಾರರ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಲಾಗಿದ್ದು ಠಾಕೂರ್ ಹೆಸರನ್ನು ಕೈಬಿಡಲಾಗಿದೆ. ಬಿಎಫ್‌ಐ ವಾರ್ಷಿಕ ಮಹಾಸಭೆಗೆ (ಎಜಿಎಂ) ಹಿಮಾಚಲ ಪ್ರದೇಶ ಬಾಕ್ಸಿಂಗ್ ಸಂಸ್ಥೆಯು ತನ್ನ ಅಧ್ಯಕ್ಷ ರಾಜೇಶ್ ಭಂಡಾರಿ ಮತ್ತು ಠಾಕೂರ್ ಅವರನ್ನು ತನ್ನ ಇಬ್ಬರು ಪ್ರತಿನಿಧಿಗಳಾಗಿ ನಾಮನಿರ್ದೇಶನ ಮಾಡಿತ್ತು. ಈ ಸಭೆಯ ಮುಖ್ಯ ಕಾರ್ಯಸೂಚಿ 2025–2029ರ ಅವಧಿಗೆ ಪದಾಧಿಕಾರಿಗಳ ಆಯ್ಕೆ ಮಾಡುವುದಾಗಿದೆ.

ಆದರೆ ಬಾಕ್ಸಿಂಗ್ ಫೆಡರೇಷನ್‌ನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ವರ್ಲ್ಡ್ ಬಾಕ್ಸಿಂಗ್ ರಚಿಸಿರುವ ಹಂಗಾಮಿ ಸಮಿತಿಯು 66 ಮಂದಿ ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಠಾಕೂರ್ ಹೆಸರು ಇಲ್ಲ.

ಠಾಕೂರ್ ಅವರ ನಾಮನಿರ್ದೇಶನ ಬಿಎಫ್‌ಐ ನಿಯಮಾವಳಿಯ ಪ್ರಕಾರ ಇಲ್ಲ ಎಂದು ಹಂಗಾಮಿ ಸಮಿತಿ ತಿಳಿಸಿದೆ.

ವಾರ್ಷಿಕ ಮಹಾಸಭೆಗೆ ನಾಮನಿರ್ದೇಶನಗೊಂಡವರು ಆಯಾ ರಾಜ್ಯ ಸಂಸ್ಥೆಗಳಲ್ಲಿ ಸಭೆಯಲ್ಲಿ ಆಯ್ಕೆಗೊಂಡವರಾಗಿರಬೇಕು ಎಂದು ಎಂದು ಮಾಹಿತಿ ನೀಡಿದೆ.

ಫುಟ್‌ಬಾಲ್: ಡ್ರಾ ಪಂದ್ಯದಲ್ಲಿ ಭಾರತ



ಯಾಂಗೂನ್ (ಮ್ಯಾನ್ಮಾರ್) (ಪಿಟಿಐ): ಭಾರತದ ವನಿತೆಯರು ಬುಧವಾರ ಇಲ್ಲಿ ನಡೆದ ಎಎಫ್‌ಸಿ 20 ವರ್ಷದೊಳಗಿನವರ ಏಷ್ಯನ್ ಕಪ್ 2026 ಅರ್ಹತಾ ಸುತ್ತಿನ ತನ್ನ ಮೊದಲ ಪಂದ್ಯದಲ್ಲಿ ಇಂಡೊನೇಷ್ಯಾ ಜೊತೆ ಗೋಲುರಹಿತ ಡ್ರಾ ಸಾಧಿಸಿದರು.

ಭಾರತ ತಂಡವು ಒಂದು ಅಂಕ ಪಡೆದು ಡಿ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ. ಆತಿಥೇಯ ಮ್ಯಾನ್ಮಾರ್ ತಂಡವು 3 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ದಿನದ ಮತ್ತೊಂದು ಪಂದ್ಯದಲ್ಲಿ ಆತಿಥೇಯ ತಂಡವು 6–1 ಗೋಲುಗಳಿಂದ ತುರ್ಕಮೆನಿಸ್ತಾನ ವಿರುದ್ಧ ಸುಲಭ ಗೆಲುವು ಸಾಧಿಸಿತು.

ಭಾರತ ತಂಡವು ಶುಕ್ರವಾರ ನಡೆಯಲಿರುವ ತನ್ನ ಎರಡನೇ ಪಂದ್ಯದಲ್ಲಿ ತುರ್ಕಮೆನಿಸ್ತಾನ ವಿರುದ್ಧ ಸೆಣಸಲಿದೆ.

ಕ್ರೀಡಾ ಮಸೂದೆ ಮಂಡನೆ ಮುಂದಕ್ಕೆ

ಮಂಡನೆಯಾಗದ ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ (ತಿದ್ದುಪಡಿ) ಮಸೂದೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಂಸದೀಯ ಸಮಿತಿಗೆ ಒಪ್ಪಿಸಲು ವಿರೋಧ ಪಕ್ಷಗಳ ಪಟ್ಟು
- ಆರ್‌ಟಿಐಗೆ ಸಂಬಂಧಿಸಿದ ನಿಯಮದಲ್ಲಿ ತಿದ್ದುಪಡಿಗೆ ಸರ್ಕಾರ ಚಿಂತನೆ

ನವದೆಹಲಿ: ರಾಷ್ಟ್ರೀಯ ಕ್ರೀಡಾಡಳಿತ ಮಸೂದೆ ಮತ್ತು ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ (ತಿದ್ದುಪಡಿ) ಮಸೂದೆ (2025)ಗಳು ದಿನದ ಕಲಾಪ ಪಟ್ಟಿಯಲ್ಲಿ ಆದ್ಯತೆ ಪಡೆದಿದ್ದರೂ ಅವು ಗಳನ್ನು ಲೋಕಸಭೆಯಲ್ಲಿ ಮಂಡಿಸಲು ಸರ್ಕಾರ ಒಲವು ತೋರಿಸಲಿಲ್ಲ.

ಈ ಎರಡು ಮಸೂದೆಗಳನ್ನು ಇನಷ್ಟು ಪರಿಶೀಲನೆಗೆ ಒಳಪಡಿಸಲು ಸಂಸದೀಯ ಸಮಿತಿಗೆ ಒಪ್ಪಿಸಬೇಕೆಂದು ವಿರೋಧ ಪಕ್ಷಗಳು ಸ್ಪೀಕರ್ ಓಂ ಬಿರ್ಲಾ ಅವರನ್ನು ಕೇಳಿದ ಕಾರಣ ಸರ್ಕಾರ ಈ ನಿಲುವು ತಳೆಯಿತು.

‘ವಿರೋಧ ಪಕ್ಷಗಳ ಮನವಿಯ ಮೇರೆಗೆ’ ಸರ್ಕಾರ ಮಸೂದೆಗಳನ್ನು ಮಂಡಿಸಲು ಮುಂದಾಗಿಲ್ಲ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಲೋಕಸಭೆಗೆ ತಿಳಿಸಿದರು.

ಆದರೆ ಇವುಗಳನ್ನು ಸಂಸದೀಯ ಸಮಿತಿಗೆ ಪರಿಶೀಲನೆಗೆ ಒಳಪಡಿಸುವ ಬಗ್ಗೆ ರಿಜಿಜು ಅವರು ಭರವಸೆ ನೀಡಲಿಲ್ಲ.

ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಯಲ್ಲಿ ಆರ್‌ಟಿಐಗೆ ಸಂಬಂಧಿಸಿದ ನಿಯಮದಲ್ಲಿ ತಿದ್ದುಪಡಿ ತರಲು ಸರ್ಕಾರ ಮುಂದಾಗಿದ್ದು, ಸರ್ಕಾರದಿಂದ ಅನುದಾನ ಮತ್ತು ನೆರವು ಪಡೆಯುವ ಕ್ರೀಡಾ ಫೆಡರೇಷನ್‌ಗಳು ಮಾತ್ರ ಆರ್‌ಟಿಐಗೆ ವ್ಯಾಪ್ತಿಗೆ ಬರಲಿವೆ. ತಿದ್ದುಪಡಿಯಾದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಆರ್‌ಟಿಐ ಪರಿಧಿಯಿಂದ ಹೊರಬರಲಿದೆ.

ಇದಕ್ಕೆ ಮೊದಲು, ವಿರೋಧ ಪಕ್ಷಗಳ ನಾಯಕರು ಸ್ಪೀಕರ್ ಅವರನ್ನು ಭೇಟಿ ಮಾಡಿ, ರಾಷ್ಟ್ರೀಯ ಮಹತ್ವದ ಈ ಎರಡೂ ಮಸೂದೆಗಳನ್ನು ಮಂಡಿಸುವ ಮೊದಲು ಒಮ್ಮತ ಮೂಡಿಸುವ ಅಗತ್ಯವಿದೆ. ಹಾಗಾಗಿ ಜಂಟಿ ಸಂಸದೀಯ ಸಮಿತಿಯ ಪರಿಶೀಲನೆಗೆ ಕಳುಹಿಸಬೇಕು ಎಂದು ಒತ್ತಾಯಿಸುವ ಪತ್ರ ನೀಡಿದರು.

ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್, ಎನ್‌ಸಿಪಿಯ (ಎಸ್‌ಪಿ) ಸುಪ್ರಿಯಾ ಸುಳೆ, ತೃಣಮೂಲ ಕಾಂಗ್ರೆಸ್‌ನ ಕಾಕೋಲಿ ಘೋಷ್, ಡಿಎಂಕೆಯ ಕನಿಮೋಳಿ ಮತ್ತಿತರರು ಪತ್ರಕ್ಕೆ ಸಹಿ ಹಾಕಿದ್ದಾರೆ.

ಪಿಟಿಐ ವರದಿ: ಕ್ರೀಡಾ ಆಡಳಿತ ಮಸೂದೆಯನ್ನು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಜುಲೈ 23ರಂದು ಲೋಕಸಭೆಯಲ್ಲಿ ಮಂಡಿಸಿದ್ದರು. ಈ ಮಸೂದೆಯ ನಿಯಮ 15 (2)ರ ಪ್ರಕಾರ ಮಾನ್ಯತೆ ಪಡೆದ ಎಲ್ಲ ಕ್ರೀಡಾ ಸಂಸ್ಥೆಗಳೂ, ಸಾರ್ವಜನಿಕ ಸಂಸ್ಥೆಗಳಾಗಲಿದ್ದು, ಅದರ ಕರ್ತವ್ಯ, ಅಧಿಕಾರ ಚಲಾವಣೆ ಎಲ್ಲವೂ 2005ರ ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ಬರಬೇಕಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಹಿಂದಿನಿಂದಲೂ ಆರ್‌ಟಿಐ ವ್ಯಾಪ್ತಿಗೆ ಸೇರಿಸುವುದನ್ನು ವಿರೋಧಿಸುತ್ತ ಬಂದಿದೆ. ಇತರ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಂತೆ ತಾನು ಸರ್ಕಾರದ ಯಾವುದೇ ಅನುದಾನದ ಮೇಲೆ ಅವಲಂಬಿತವಾಗಿಲ್ಲ ಎಂದು ಮಂಡಳಿಯು ವಾದಿಸುತ್ತ ಬಂದಿದೆ.

ಈ ಮಸೂದೆಯು ಕಾಯ್ದೆಯಾಗಿ ಜಾರಿಯಾದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ರಾಷ್ಟ್ರೀಯ ಕ್ರೀಡಾ ಫೆಡರೇಷನ್ (ಎನ್‌ಎಸ್‌ಎಫ್) ಆಗಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಕ್ರಿಕೆಟ್ ಒಲಿಂಪಿಕ್ ಕ್ರೀಡೆಯಾಗಲಿರುವ ಕಾರಣ ಬಿಸಿಸಿಐಗೂ ಈ ನಿಯಮ ಅನ್ವಯಿಸಲಾಗುತ್ತಿದೆ. 2028ರ ಲಾಸ್ ಏಂಜಲಿಸ್ ಒಲಿಂಪಿಕ್ಸ್‌ನಲ್ಲಿ ಟಿ20 ಕ್ರಿಕೆಟ್ ಪರಿಚಯಿಸಲಾಗುತ್ತಿದೆ.

ರಾಷ್ಟ್ರೀಯ ಕ್ರೀಡಾ ಮಂಡಳಿ (ಎನ್‌ಎಸ್‌ಬಿ) ಸ್ಥಾಪನೆಯ ಪ್ರಸ್ತಾವವೂ ಈ ಮಸೂದೆಯಲ್ಲಿದೆ. ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ಮಾನ್ಯತೆ, ಅವುಗಳಿಗೆ ಉತ್ತರದಾಯಿತ್ವ, ಕ್ರೀಡಾ ಸಂಸ್ಥೆಗಳ ಪದಾಧಿಕಾರಿಗಳ ವಯಸ್ಸು ಮತ್ತು ಅವಧಿಯ ಮಿತಿ ಬದಲಾವಣೆ, ವ್ಯಾಜ್ಯಗಳ ಪರಿಹಾರ ವಿಷಯವು ಮಂಡಳಿಯ ಅಧಿಕಾರ ವ್ಯಾಪ್ತಿಗೆ ಬರಲಿದೆ.

ಐಸಿಸಿ ತಿಂಗಳ ಆಟಗಾರ ಪ್ರಶಸ್ತಿ: ಮಲ್ಡರ್, ಸ್ಟೋಕ್ಸ್ ರೇಸ್‌ನಲ್ಲಿ

ಗಿಲ್ ಸೇರಿ ಮೂವರ ನಾಮನಿರ್ದೇಶನ

ದುಬೈ (ಪಿಟಿಐ): ಜುಲೈ ತಿಂಗಳ ಐಸಿಸಿ ತಿಂಗಳ ಆಟಗಾರ ಪ್ರಶಸ್ತಿಗೆ ಭಾರತ ತಂಡದ ನಾಯಕ ಶುಭಮನ್ ಗಿಲ್ ಸೇರಿದಂತೆ ಮೂವರು ಆಟಗಾರರು ನಾಮನಿರ್ದೇಶನಗೊಂಡಿದ್ದಾರೆ. ದಕ್ಷಿಣ ಆಫ್ರಿಕಾದ ವಿಯಾನ್ ಮಲ್ಡರ್ ಮತ್ತು ಇಂಗ್ಲೆಂಡ್ ತಂಡನ ನಾಯಕ ಬೆನ್ ಸ್ಟೋಕ್ಸ್ ಇತರ ಇಬ್ಬರು.

ಇಂಗ್ಲೆಂಡ್ ವಿರುದ್ಧ ಐದು ಟೆಸ್ಟ್‌ಗಳ ಸರಣಿಗೆ ಗಿಲ್ ಅವರು ಭಾರತ ಯುವ ತಂಡವನ್ನು ಸಮರ್ಥವಾಗಿ ಮುನ್ನಡೆಸಿದ್ದರು. ವೈಯಕ್ತಿಕವಾಗಿಯೂ ಮಿಂಚಿದ 25 ವರ್ಷ ವಯಸ್ಸಿನ ಗಿಲ್ ಒಂದು ದ್ವಿಶತಕ ಒಳಗೊಂಡಂತೆ 75.40ರ ಸರಾಸರಿಯಲ್ಲಿ 754 ರನ್ ಪೇರಿಸಿ ಗಮನಸೆಳೆದಿದ್ದರು. ಐದು ಟೆಸ್ಟ್‌ಗಳ ಸರಣಿಗೆ ನಾಯಕನಾಗಿ, ಗಾವಸ್ಕರ್ ಅವರ ದಾಖಲೆಯನ್ನು (732 ರನ್) ಮುರಿದಿದ್ದರು. ಡಾನ್ ಬ್ರಾಡ್ಮನ್ (810 ರನ್) ಬಿಟ್ಟರೆ ನಾಯಕನಾಗಿ ಅತಿ ಹೆಚ್ಚು ರನ್ ಕಲೆಹಾಕಿದವರಲ್ಲಿ ಅವರು ಎರಡನೇ ಸ್ಥಾನದಲ್ಲಿದ್ದಾರೆ.

ಇಂಗ್ಲೆಂಡ್ ವಿರುದ್ಧ ಮೂರು ಟೆಸ್ಟ್‌ಗಳಲ್ಲಿ ಗಿಲ್ 94.50 ಸರಾಸರಿಯಲ್ಲಿ 567 ರನ್ ಗಳಿಸಿದ್ದು ಅಮೋಘ ಸಾಧನೆಯಾಗಿದೆ ಎಂದು ಐಸಿಸಿಯು ತನ್ನ ವೆಬ್‌ಸೈಟ್‌ನಲ್ಲಿ ಬರೆದಿದೆ.

ಎಜ್‌ಬಾಸ್ಟನ್‌ನಲ್ಲಿ ಭಾರತದ ಗೆಲುವಿನಲ್ಲಿ ಅವರ ಪಾತ್ರ ಪ್ರಮುಖವಾಗಿತ್ತು. ಅವರು 269 ಮತ್ತು 161 ರನ್ ಗಳಿಸಿದ್ದು ಪಂದ್ಯದಲ್ಲಿ ಕಲೆಹಾಕಿದ ಒಟ್ಟು 430 ರನ್, ಇಂಗ್ಲೆಂಡ್‌ನ ಗ್ರಹಾಂ ಗೂಚ್ (456) ನಂತರ ಎರಡನೇ ಅತ್ಯಧಿಕ ಮೊತ್ತ ಎನಿಸಿದೆ ಎಂದೂ ಅದು ತಿಳಿಸಿದೆ. ಗಿಲ್, ದಿಗ್ಗಜ ವಿರಾಟ್ ಕೊಹ್ಲಿ ಅವರ ಸ್ಥಾನ ತುಂಬುತ್ತಿದ್ದಾರೆ ಎಂದೂ ಬರೆದಿದೆ.



ಶುಭಮನ್ ಗಿಲ್

ದಕ್ಷಿಣ ಆಫ್ರಿಕಾ ತಂಡಕ್ಕೆ ಮೊದಲ ಬಾರಿ ನಾಯಕನಾಗಿ ಮಲ್ಡರ್, ಜಿಂಬಾಬ್ವೆ ವಿರುದ್ಧ ಬುಲಾವಯೊದಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಅಜೇಯ 367 ರನ್ ಬಾರಿಸಿದ್ದರು. ಅವರು ಬ್ರಯಾನ್ ಲಾರಾ ಅವರ ದಾಖಲೆ (ಔಟಾಗದೇ 400) ಮುರಿಯುವ ಅವಕಾಶ ಹೊಂದಿದ್ದರು. ಆದರೆ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿದ್ದರು. ಮಲ್ಡರ್, ದಕ್ಷಿಣ ಆಫ್ರಿಕಾ ಪರ ಅತ್ಯಧಿಕ ಮೊತ್ತ ಪೇರಿಸಿದ ಹಿರಿಮೆಗೂ ಪಾತ್ರರಾದರು.

ಅವರು ಎರಡು ಪಂದ್ಯಗಳಲ್ಲಿ 265.50 ಸರಾಸರಿಯಲ್ಲಿ 531 ರನ್ ಗಳಿಸಿದ್ದು ಅತ್ಯಮೋಘ ಸಾಧನೆ ಎಂದು ಐಸಿಸಿ ಬಣ್ಣಿಸಿದೆ. ಬೌಲಿಂಗ್‌ನಲ್ಲೂ ಕರಾಮತ್ತು ತೋರಿದ ಅವರು 15.28 ಸರಾಸರಿಯಲ್ಲಿ ಏಳು ವಿಕೆಟ್‌ಗಳನ್ನು ಗಳಿಸಿದ್ದರು.

ಭಾರತ ವಿರುದ್ಧ ಸರಣಿಯಲ್ಲಿ ಆಲ್‌ರೌಂಡ್ ಪ್ರದರ್ಶನ ನೀಡಿದ ಸ್ಟೋಕ್ಸ್ ಅವರನ್ನೂ ಐಸಿಸಿ ಶ್ಲಾಘಿಸಿದೆ. ನಾಯಕನಾಗಿ ಅವರು 50.20 ಸರಾರಿಯಲ್ಲಿ 251 ರನ್ ಗಳಿಸಿದ್ದರು. 26.33 ಸರಾಸರಿಯಲ್ಲಿ 12 ವಿಕೆಟ್ ಪಡೆದಿದ್ದರು. ಕೆಲವು ಪಂದ್ಯಗಳ ನಿರ್ಣಾಯಕ ಸಂದರ್ಭದಲ್ಲಿ ತಂಡದ ನೆರವಿಗೆ ಬಂದಿದ್ದರು.

ನಿಕಟ ಪೈಪೋಟಿಯ ಸರಣಿಯಲ್ಲಿ ಸ್ಟೋಕ್ಸ್ ಅವರ ನಾಯಕತ್ವದ ಕೌಶಲವು ಇಂಗ್ಲೆಂಡ್ ತಂಡದ ಪ್ರದರ್ಶನದಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಎದುರಾಳಿ ತಂಡದ ಜೊತೆಯಾಟಗಳನ್ನು ಮುರಿದು ಇಂಗ್ಲೆಂಡ್ ಮೇಲುಗೈ ಪಡೆಯಲು ನೆರವಾಗಿದ್ದಾರೆ ಎಂದು ಐಸಿಸಿ ಬಣ್ಣಿಸಿದೆ.

ಟೆಸ್ಟ್ ರ‍್ಯಾಂಕಿಂಗ್: 15ನೇ ಸ್ಥಾನಕ್ಕೆ ಸಿರಾಜ್

ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದ ಜಸ್‌ಪ್ರೀತ್ ಬೂಮ್ರಾ

ದುಬೈ (ಪಿಟಿಐ): ಇಂಗ್ಲೆಂಡ್ ವಿರುದ್ಧ ದಿ ಓವಲ್‌ನಲ್ಲಿ ಅಂತಿಮ ಟೆಸ್ಟ್ ಪಂದ್ಯದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಪರಿಣಾಮ ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಐಸಿಸಿ ಟೆಸ್ಟ್ ಕ್ರಮಾಂಕಪಟ್ಟಿಯಲ್ಲಿ ಜೀವನಶ್ರೇಷ್ಠ 15ನೇ ಸ್ಥಾನಕ್ಕೆ ಏರಿದ್ದಾರೆ.

ಆ ಪಂದ್ಯದಲ್ಲಿ 9 ವಿಕೆಟ್ ಗಳಿಸಿ ಭಾರತದ ರೋಚಕ ಗೆಲುವಿನ ರೂವಾರಿಯಾಗಿದ್ದ ಸಿರಾಜ್ 12 ಸ್ಥಾನಗಳಷ್ಟು ಬಡ್ತಿ ಪಡೆದಿದ್ದಾರೆ. ಆ ಗೆಲುವಿನಿಂದ ಭಾರತ ಐದು ಟೆಸ್ಟ್‌ಗಳ ಸರಣಿಯನ್ನು 2–2 ಡ್ರಾ ಮಾಡಿಕೊಂಡಿತ್ತು. ಸಿರಾಜ್ ಆ ಟೆಸ್ಟ್‌ನಲ್ಲಿ ಪಂದ್ಯಶ್ರೇಷ್ಠರಾಗಿದ್ದರು.

2024ರ ಜನವರಿಯಲ್ಲಿ 16ನೇ ಸ್ಥಾನಕ್ಕೇರಿದ್ದು, ರ‍್ಯಾಂಕಿಂಗ್‌ನಲ್ಲಿ ಸಿರಾಜ್ ಅವರ ಇದುವರೆಗಿನ ಶ್ರೇಷ್ಠ ಸಾಧನೆಯಾಗಿತ್ತು.

ಕಾರ್ಯಭಾರ ನಿರ್ವಹಣೆಯಿಂದಾಗಿ ಆ ಸರಣಿಯಲ್ಲಿ ಮೂರು ಪಂದ್ಯಗಳನ್ನು ಮಾತ್ರ ಆಡಿದ್ದ ಅಗ್ರ ವೇಗಿ ಜಸ್‌ಪ್ರೀತ್ ಬೂಮ್ರಾ 889 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ.

ಕೊನೆಯ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿ ಸಿರಾಜ್‌ಗೆ ಸಮರ್ಥ ಬೆಂಬಲ ನೀಡಿದ್ದ ಪ್ರಸಿದ್ಧ ಕೃಷ್ಣ 59ನೇ ಸ್ಥಾನಕ್ಕೆ ಏರಿದ್ದಾರೆ. ಎರಡೂ ಇನಿಂಗ್ಸ್‌ಗಳಲ್ಲಿ ಇಬ್ಬರು ಬೌಲರ್‌ಗಳು 4 ಅಥವಾ ಹೆಚ್ಚು ವಿಕೆಟ್ ಪಡೆದ ಎರಡನೇ ದೃಷ್ಟಾಂತ ಇದಾಗಿತ್ತು. 1969ರಲ್ಲಿ ಆಸ್ಟ್ರೇಲಿಯಾ ವಿರುದ್ಧ ದೆಹಲಿಯಲ್ಲಿ ಸ್ಪಿನ್ನರ್‌ಗಳಾದ ಬಿಷನ್ ಸಿಂಗ್ ಬೇಡಿ ಮತ್ತು ಎರ‍್ರಪಳ್ಳಿ ಪ್ರಸನ್ನ ಅವರು ಹಿಂದೆ ಈ ಸಾಧನೆ ಮಾಡಿದ್ದರು.



ಮೊಹಮ್ಮದ್ ಸಿರಾಜ್

ಟೆಸ್ಟ್ ಬ್ಯಾಟರ್‌ಗಳ ಪಟ್ಟಿಯಲ್ಲಿ ಯಶಸ್ವಿ ಜೈಸ್ವಾಲ್ ಅಗ್ರ ಐದರಲ್ಲಿ ಸ್ಥಾನ ಪಡೆದಿದ್ದಾರೆ. ಅವರು ಸರಣಿಯಲ್ಲಿ ಎರಡು ಶತಕಗಳನ್ನು ಬಾರಿಸಿದ್ದರು. ಜೈಸ್ವಾಲ್ 792 ಪಾಯಿಂಟ್ಸ್ ಕಲೆಹಾಕಿದ್ದಾರೆ. ಅಗ್ರ 10ರಲ್ಲಿ ಸ್ಥಾನ ಪಡೆದಿರುವ ಭಾರತದ ಇನ್ನೊಬ್ಬ ಆಟಗಾರನೆಂದರೆ ರಿಷಭ್ ಪಂತ್. ಅವರು ಒಂದು ಸ್ಥಾನ ಕೆಳಗಿಳಿದು ಎಂಟನೇ ಸ್ಥಾನದಲ್ಲಿ ನೆಲಸಿದ್ದಾರೆ. ಅವರು ಗಾಯಾಳಾಗಿದ್ದರಿಂದ ಕೊನೆಯ ಟೆಸ್ಟ್ ಆಡಿರಲಿಲ್ಲ.

ಸರಣಿಯಲ್ಲಿ ಮೂರು ಶತಕಗಳನ್ನು ಬಾರಿಸಿದ ಜೋ ರೂಟ್ ಅವರು ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನ ಬಲಪಡಿಸಿಕೊಂಡಿದ್ದಾರೆ. ಸರಣಿಯ ಆಟಗಾರನಾದ ಹ್ಯಾರಿ ಬ್ರೂಕ್ ಅವರು ಎರಡನೇ ಸ್ಥಾನಕ್ಕೇರಿದ್ದಾರೆ.

ಇಂಗ್ಲೆಂಡ್ ವೇಗಿಗಳಾದ ಗಸ್ ಅಟ್ಕಿನ್ಸನ್ ಮತ್ತು ಜೋಶ್ ಟಂಗ್ ಸಹ ಪ್ರಗತಿ ಕಂಡಿದ್ದಾರೆ. ಬೌಲರ್‌ಗಳ ವಿಭಾಗದಲ್ಲಿ ಅಟ್ಕಿನ್ಸನ್ ಮೊದಲ ಸಲ 10ನೇ ಸ್ಥಾನದಲ್ಲಿದ್ದು, ಟಂಗ್ 14 ಸ್ಥಾನ ಪ್ರಗತಿ ಕಂಡಿದ್ದು 46ನೇ ಸ್ಥಾನದಲ್ಲಿದ್ದಾರೆ.

ಹೈದರಾಬಾದ್‌ನಲ್ಲಿ ಸಿರಾಜ್‌ಗೆ ಸ್ವಾಗತ

ಹೈದರಾಬಾದ್ (ಪಿಟಿಐ): ಇಂಗ್ಲೆಂಡ್ ವಿರುದ್ಧ ಸಮಬಲಗೊಂಡ ಸರಣಿಯಲ್ಲಿ ಅಮೋಘ ಪ್ರದರ್ಶನ ನೀಡಿದ ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಬುಧವಾರ ತವರಿಗೆ ಮರಳಿದ್ದು, ವಿಮಾನ ನಿಲ್ದಾಣದಲ್ಲಿ ಅವರಿಗೆ ಅಭಿಮಾನಿಗಳು ಆತ್ಮೀಯ ಸ್ವಾಗತ ನೀಡಿದರು.

ಸರಣಿಯ ಎಲ್ಲ ಐದೂ ಪಂದ್ಯಗಳಲ್ಲಿ ಆಡಿದ 31 ವರ್ಷ ವಯಸ್ಸಿನ ಸಿರಾಜ್ 185.3 ಓವರುಗಳನ್ನು ಮಾಡಿದ್ದರು. 23 ವಿಕೆಟ್‌ಗಳನ್ನು ಕಬಳಿಸಿದ್ದರು.

ಫೀಲ್ಡಿಂಗ್ ಕೋಚ್ ಟಿ.ದಿಲೀಪ್ ಜೊತೆ ಲಂಡನ್‌ನಿಂದ ಮೊದಲು ಮುಂಬೈಗೆ ಬಂದಿಳಿದ ಸಿರಾಜ್ ಅವರಿಗೆ ಅಭಿಮಾನಿಗಳ ಸಣ್ಣ ಗುಂಪು ಸಂಭ್ರಮದ ಸ್ವಾಗತ ನೀಡಿತು. ಅಲ್ಲಿಂದ ಅವರು ಕಾರುಹತ್ತಿ ಡೊಮೆಸ್ಟಿಕ್ ಟರ್ಮಿನಲ್‌ಗೆ ತೆರಳಿ ಅಲ್ಲಿಂದ ಹೈದರಾಬಾದಿಗೆ ಪಯಣಿಸಿದರು. ಅಲ್ಲಿ ಅಭಿಮಾನಿಗಳು ನೆರೆದಿದ್ದರು.

‘ನಾವು ಅವರ(ಸಿರಾಜ್) ಜೊತೆ ಇನ್ನೂ ಮಾತನಾಡಿಲ್ಲ. ಆದರೆ ನಾವು ಅವರಿಗೆ ಅಭಿನಂದಿಸಲು ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಿದ್ದೇವೆ. ಇಂಗ್ಲೆಂಡ್ ವಿರುದ್ಧ ಸರಣಿಯಲ್ಲಿ ದೇಶ ಹೆಮ್ಮೆಪಡುವಂತೆ ಮಾಡಿದ ಸಾಧನೆ ನಮಗೆಲ್ಲಾ ಅಭಿಮಾನದ ವಿಷಯ’ ಎಂದು ಹೈದರಾಬಾದ್ ಕ್ರಿಕೆಟ್ ಸಂಸ್ಥೆ ಪದಾಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದರು.

ಐದನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಶುಭಂ, ವೇದಾಂತ್, ತನಿಷ್ಕಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಭಂ ತ್ರಿವೇದಿ ಅವರು ನಗರದ ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ನಡೆಯುತ್ತಿರುವ ಐದನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಶುಭಂ ಫೈನಲ್ ಪಂದ್ಯದಲ್ಲಿ 12–10, 11–6, 11–9ರಿಂದ ಅಥರ್ವ ನವರಂಗೆ ಅವರನ್ನು ಮಣಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ಅಥರ್ವ 11–7, 7–11, 12–10, 11–7ರಿಂದ ಗೌರವ್ ಗೌಡ ವಿರುದ್ಧ; ಶುಭಂ 13–11, 11–7, 7–11, 11–9ರಿಂದ ರೇಯಾಂಶ್ ಜಲನ್ ವಿರುದ್ಧ ಗೆಲುವು ಸಾಧಿಸಿದ್ದರು.

15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಪ್ರಶಸ್ತಿಯನ್ನು ವೇದಾಂತ್ ವಸಿಷ್ಠ ಗೆದ್ದರು. ವೇದಾಂತ್ ಫೈನಲ್ ಪಂದ್ಯದಲ್ಲಿ 12–14, 7–11, 11–9, 14–12, 14–12ರಿಂದ ಎಂ.ತಮೋಘ್ನ ಎದುರು ಜಯ ಸಾಧಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ತಮೋಘ್ನ 11–5, 9–11, 5–11, 11–7, 11–4ರಿಂದ ಎಂ.ಸಿದ್ಧಾಂತ್ ವಿರುದ್ಧ; ವೇದಾಂತ್ 11–4, 14–12, 11–7ರಿಂದ ರೇಯಾಂಶ್ ಜಲನ್ ಅವರನ್ನು ಪರಾಭವಗೊಳಿಸಿದ್ದರು.

ತನಿಷ್ಕಾ ಕಪಿಲ್ ಕಾಲಭೈರವ 15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು.

ತನಿಷ್ಕಾ ಫೈನಲ್ ಪಂದ್ಯದಲ್ಲಿ 14–12, 11–6, 13–11ರಿಂದ ರಾಶಿ ವಿ. ರಾವ್ ಅವರನ್ನು ಮಣಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ತನಿಷ್ಕಾ 11–8, 11–6, 11–3ರಿಂದ ಮಿಹಿಕಾ ಉಡುಪ ಎದುರು; ರಾಶಿ 11–9, 11–8, 11–8ರಿಂದ ಕ್ರಿಶಾ ಕರ್ಕೇರಾ ವಿರುದ್ಧ ಗೆಲುವು ಸಾಧಿಸಿದ್ದರು.



ಪ್ರಶಸ್ತಿ ಗೆದ್ದ ಶುಭಂ ತ್ರಿವೇದಿ, ತನಿಷ್ಕಾ ಕಪಿಲ್ ಕಾಲಭೈರವ ಹಾಗೂ ವೇದಾಂತ್ ವಸಿಷ್ಠ

ಮಹಾರಾಣಿ ಟ್ರೋಫಿ: ಹುಬ್ಬಳ್ಳಿ, ಮೈಸೂರಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಜಿ. ತೇಜಸ್ವಿನಿ (26ಕ್ಕೆ4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಮಹಾರಾಣಿ ಟ್ರೋಫಿ ಮಹಿಳಾ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಮಂಗಳೂರು ಡ್ರ್ಯಾಗನ್ಸ್ ತಂಡವನ್ನು 35 ರನ್‌ಗಳಿಂದ ಮಣಿಸಿತು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಹುಬ್ಬಳ್ಳಿ ತಂಡವು, ಮೋನಿಕಾ ಸಿ. ಪಟೇಲ್ (44, 27ಎ) ಅವರ ಆಟದ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 163 ರನ್ ಪೇರಿಸಿತು. ಗುರಿ ಬೆನ್ನಟ್ಟಿದ ಮಂಗಳೂರು ತಂಡವು 128 ರನ್ ಗಳಿಸಲಷ್ಟೇ ಶಕ್ತವಾಯಿತು. ಲಿಯಾಂಕಾ ಶೆಟ್ಟಿ (46, 38ಎ) ಏಕಾಂಗಿ ಹೋರಾಟ ತೋರಿದರು.

ದಿನದ ಎರಡನೇ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ತಂಡವು ಶಿವಮೊಗ್ಗ ಲಯನೆಸ್ ಎದುರು 27 ರನ್‌ಗಳ ಸುಲಭ ಜಯ ದಾಖಲಿಸಿತು.

ಸಂಕ್ಷಿಪ್ತ ಸ್ಕೋರು: ಹುಬ್ಬಳ್ಳಿ ಟೈಗರ್ಸ್: 20 ಓವರುಗಳಲ್ಲಿ 5ಕ್ಕೆ 163 (ನಂದನಿ ಚವ್ಹಾಣ್ 39, ಮೋನಿಕಾ ಸಿ. ಪಟೇಲ್ 44, ಪಿ. ಸಲೋನಿ 7ಕ್ಕೆ2) **ಮಂಗಳೂರು ಡ್ರ್ಯಾಗನ್ಸ್:** 20 ಓವರುಗಳಲ್ಲಿ 8ಕ್ಕೆ 128 (ಲಿಯಾಂಕಾ ಶೆಟ್ಟಿ 46, ಪ್ರಿಯಾ ಚವ್ಹಾಣ್ 26ಕ್ಕೆ2, ಬಿ.ಜಿ. ತೇಜಸ್ವಿನಿ 26ಕ್ಕೆ4).
ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ 35 ರನ್ ಜಯ
ಮೈಸೂರು ವಾರಿಯರ್ಸ್: 20 ಓವರುಗಳಲ್ಲಿ 6ಕ್ಕೆ 140 (ಶುಭಾ ಸತೀಶ್ 64, ಕುಸುಮಾ ನಾಗರಾಜು 32, ಸೈನಾ ಕಪೂರ್ 23ಕ್ಕೆ2) ಶಿವಮೊಗ್ಗ ಲಯನೆಸ್: 20 ಓವರ್‌ಗಳಲ್ಲಿ 7ಕ್ಕೆ 113 (ರೋಶಿನಿ ಕಿರಣ್ 41, ವಂದಿತಾ ರಾವ್ 22ಕ್ಕೆ2).
ಫಲಿತಾಂಶ: ಮೈಸೂರು ವಾರಿಯರ್ಸ್‌ಗೆ 27 ರನ್ ಗೆಲುವು.

ಕೆವಿಎಸ್ ಕಬಡ್ಡಿ ಟೂರ್ನಿ ಕೋಲ್ಕತ್ತ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರಿಯ ವಿದ್ಯಾಲಯಗಳ ರಾಷ್ಟ್ರೀಯ ಕ್ರೀಡಾಕೂಟದ ಕಬಡ್ಡಿ ಸ್ಪರ್ಧೆಯಲ್ಲಿ 14 ವರ್ಷದೊಳಗಿನ ಬಾಲಕಿಯರ ವಿಭಾಗದ ಪ್ರಶಸ್ತಿಯನ್ನು ಕೋಲ್ಕತ್ತ ತಂಡ ಗೆದ್ದುಕೊಂಡಿತು.

ಹೆಬ್ಬಾಳದಲ್ಲಿನ ಕೇಂದ್ರಿಯ ವಿದ್ಯಾಲಯದ ಮೈದಾನದಲ್ಲಿ ಬುಧವಾರ ನಡೆದ ಫೈನಲ್ ಪಂದ್ಯದಲ್ಲಿ ಕೋಲ್ಕತ್ತ 30–29ರಿಂದ ಚೆನ್ನೈ ವಿರುದ್ಧ ರೋಚಕ ಗೆಲುವು ಸಾಧಿಸಿತು.

ಮೂರನೇ ಸ್ಥಾನಕ್ಕೆ ನಡೆದ ಹಣಾಹಣಿಯಲ್ಲಿ ದೆಹಲಿ ತಂಡವು 24–16ರಿಂದ ಜಬಲ್‌ಪುರ ತಂಡವನ್ನು ಸುಲಭವಾಗಿ ಮಣಿಸಿತು.

ಇದಕ್ಕೂ ಮೊದಲು ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಕೋಲ್ಕತ್ತ 36–16ರಿಂದ ಜಬಲ್‌ಪುರ ವಿರುದ್ಧ ಹಾಗೂ ಚೆನ್ನೈ 55–22ರಿಂದ ದೆಹಲಿ ವಿರುದ್ಧ ಗೆಲುವು ಸಾಧಿಸಿದ್ದವು.

ಕೆ.ವಿ ಡಿಆರ್‌ಡಿಒದಲ್ಲಿ ನಡೆದ 17 ವರ್ಷದೊಳಗಿನ ಬಾಲಕಿಯರ ಕಬಡ್ಡಿ ಫೈನಲ್‌ನಲ್ಲಿ ಚೆನ್ನೈ 32–20ರಿಂದ ಭುವನೇಶ್ವರ ವಿರುದ್ಧ ಗೆಲುವು ಸಾಧಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಕೆ.ವಿ ಎಎಫ್‌ಎಸ್ ಯಲಹಂಕದಲ್ಲಿ ನಡೆದ ಬಾಲಕರ 17 ವರ್ಷದೊಳಗಿನ ಫೈನಲ್ ಪಂದ್ಯದಲ್ಲಿ ಜೈಪುರ 43–27ರಿಂದ ಕೋಲ್ಕತ್ತ ವಿರುದ್ಧ ಜಯಿಸಿತು.

ಹೋಟೆಲ್‌ನಲ್ಲಿ ಬೆಂಕಿ ಅವಘಡ: ಚೆನ್ನೈ ಜಿಎಂ ಟೂರ್ನಿ ಮುಂದಕ್ಕೆ

ಚೆನ್ನೈ (ಪಿಟಿಐ): ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಿಯ ತಾಣವಾದ ಹಯಾತ್ ರೀಜೆನ್ಸಿ ಹೋಟೆಲ್‌ನಲ್ಲಿ ಮಂಗಳವಾರ ತಡರಾತ್ರಿ ಬೆಂಕಿ ಕಾಣಿಸಿಕೊಂಡಿತು. ಹೀಗಾಗಿ, ದೇಶದ ಮತ್ತು ವಿಶ್ವದ ಕೆಲವು ಪ್ರಮುಖ ಆಟಗಾರರು ಪಾಲ್ಗೊಳ್ಳಲಿರುವ ಈ ಟೂರ್ನಿಯನ್ನು ಗುರುವಾರಕ್ಕೆ ಮುಂದೂಡಲಾಗಿದೆ.

ಈ ಟೂರ್ನಿಯ ಮೂರನೇ ಆವೃತ್ತಿ ಬುಧವಾರ ಆರಂಭವಾಗಬೇಕಾಗಿತ್ತು. ‘ಚೆನ್ನೈ ಜಿಎಂ ಟೂರ್ನಿ ನಡೆಯಬೇಕಾದ ಹಯಾತ್ ರೀಜೆನ್ಸಿ ಹೋಟೆಲ್‌ನಲ್ಲಿ ಮಂಗಳವಾರ ರಾತ್ರಿ ಬೆಂಕಿ ಕಾಣಿಸಿಕೊಂಡಿದೆ. ಎಲ್ಲ ಆಟಗಾರರು ಸುರಕ್ಷಿತವಾಗಿದ್ದು ಅವರಿಗೆ ಸಮೀಪದ ಇನ್ನೊಂದು ಹೋಟೆಲ್‌ನಲ್ಲಿ ವಾಸ್ತವ್ಯ ಕಲ್ಪಿಸಲಾಯಿತು. ಟೂರ್ನಿಯನ್ನು ಒಂದು ದಿನ ಮುಂದೂಡಲಾಗಿದೆ’ ಎಂದು ಭಾರತದ ಗ್ರ್ಯಾಂಡ್‌ಮಾಸ್ಟರ್ ಹಾಗೂ ಟೂರ್ನಿಯ ನಿರ್ದೇಶಕ ಶ್ರೀನಾಥ್ ನಾರಾಯಣನ್ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಆಟಗಾರರನ್ನು ಮತ್ತೆ ಟೂರ್ನಿ ನಡೆಯುವ ಹೋಟೆಲ್‌ಗೆ ಕರೆತರಲಾಗಿದೆ. ಸುರಕ್ಷತಾ ಕ್ರಮಗಳಿಗೆ ಸಂಬಂಧಿಸಿ ತಪಾಸಣೆಗಳ ನಂತರ ಟೂರ್ನಿಯನ್ನು ಒಂದು ದಿನ ನಂತರ ಆರಂಭಿಸಲಾಗುತ್ತಿದೆ.

ಹೋಟೆಲ್‌ನ 9ನೇ ಮಹಡಿಯಲ್ಲಿ ವಿದ್ಯುತ್ ಅವಘಡದಿಂದ ಮಧ್ಯರಾತ್ರಿ ಬೆಂಕಿ ಕಾಣಿಸಿಕೊಂಡು ಇಡೀ ಹೋಟೆಲ್‌ನಲ್ಲಿ ಹೊಗೆ ಆವರಿಸಿತ್ತು. ಹೀಗಾಗಿ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದ ಅತಿಥಿಗಳನ್ನು ತೆರವು ಮಾಡಲಾಯಿತು ಎಂದು ಚೆಸ್‌ಬೇಸ್ ಇಂಡಿಯಾ ವರದಿ ಮಾಡಿದೆ.

‘ಟೂರ್ನಿಯ ಅವಧಿ ಬದಲಾಗುವುದಿಲ್ಲ. ಆದರೆ ವಿಶ್ರಾಂತಿ ದಿನವನ್ನು ತೆಗೆದುಹಾಕಲಾಗಿದೆ’ ಎಂದು ಆಯೋಜಕರು ಪಿಟಿಐಗೆ ತಿಳಿಸಿದ್ದಾರೆ. ಟೂರ್ನಿಯು ನಿಗದಿಯಂತೆ ಆಗಸ್ಟ್ 15ರಂದು ಮುಕ್ತಾಯಗೊಳ್ಳಲಿದೆ.

ಈ ಟೂರ್ನಿಯು ಒಂದು ಕೋಟಿ ರೂಪಾಯಿ ಬಹುಮಾನ ಮೊತ್ತ ಹೊಂದಿದೆ. ಭಾರತದ ಅಗ್ರಮಾನ್ಯ ಆಟಗಾರ ಅರ್ಜುನ್ ಇರಿಗೇಶಿ, ಅನುಭವಿ ವಿದಿತ್ ಗುಜರಾತಿ, ನೆದರ್ಲೆಂಡ್ಸ್‌ನ ಅನಿಶ್ ಗಿರಿ ಮತ್ತಿತರ ಖ್ಯಾತನಾಮರು ಭಾಗವಹಿಸಲಿದ್ದಾರೆ. 19 ಗ್ರ್ಯಾಂಡ್ ಮಾಸ್ಟರ್‌ಗಳು (ಮಾಸ್ಟರ್ಸ್ ಮತ್ತು ಚಾಲೆಂಜರ್ ವಿಭಾಗಗಳಲ್ಲಿ ಸೇರಿ) ಕಣದಲ್ಲಿದ್ದಾರೆ.

ಚೆನ್ನೈಯಿನ್ ಎಫ್‌ಸಿ ಕಾರ್ಯನಿರ್ವಹಣೆ ಸ್ಥಗಿತ

ನವದೆಹಲಿ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಭವಿಷ್ಯದ ಸುತ್ತ ಅನಿಶ್ಚಿತತೆಯ ಕಾರ್ಮೋಡ ಕವಿದಿರುವ ಬೆನ್ನಲ್ಲೇ ಚೆನ್ನೈಯಿನ್ ಎಫ್‌ಸಿ ತಂಡ ಬುಧವಾರ ತನ್ನ ಕಾರ್ಯಚಟುವಟಿಕೆಯನ್ನು ಸ್ಥಗಿತಗೊಳಿಸಿದೆ. ಇದರಿಂದ ಭಾರತದ ಕ್ಲಬ್ ಫುಟ್‌ಬಾಲ್ ಬಿಕ್ಕಟ್ಟು ಮತ್ತಷ್ಟು ತೀವ್ರಗೊಂಡಿದೆ.

ಈಗಾಗಲೇ ಬೆಂಗಳೂರು ಎಫ್‌ಸಿ ಮತ್ತು ಒಡಿಶಾ ಎಫ್‌ಸಿ ತಂಡಗಳು ಮುಖ್ಯ ತಂಡದ ಆಟಗಾರರಿಗೆ ಮತ್ತು ನೆರವು ಸಿಬ್ಬಂದಿಗೆ ವೇತನ ಪಾವತಿ ತಡೆಹಿಡಿದಿದೆ.

ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಉನ್ನತ ಅಧಿಕಾರಿಗಳು ಮತ್ತು ಎಂಟು ಐಎಸ್‌ಎಲ್ ಕ್ಲಬ್‌ಗಳ ನಡುವೆ ಗುರುವಾರ ನಿಗದಿಯಾಗಿರುವ ಸಭೆಗೆ ಒಂದು ದಿನ ಮೊದಲೇ ಚೆನ್ನೈಯಿನ್ ಎಫ್‌ಸಿ ಈ ನಿರ್ಧಾರ ತಳೆದಿದೆ.

‘ಐಎಸ್‌ಎಲ್ ಭವಿಷ್ಯ ಅನಿಶ್ಚಿತವಾಗಿದ್ದು, ಚೆನ್ನೈಯಿನ್ ಎಫ್‌ಸಿ ತನ್ನ ಕ್ಲಬ್ ಕಾರ್ಯನಿರ್ವಹಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಕ್ರಮಕ್ಕೆ ಅನಿವಾರ್ಯವಾಗಿ ಮುಂದಾಗಿದೆ’ ಎಂದು ಚೆನ್ನೈ ಮೂಲದ ಕ್ಲಬ್ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದೆ.

‘ಇದು ಕಠಿಣ ನಿರ್ಧಾರ. ಸಾಕಷ್ಟು ಯೋಚಿಸಿ, ಸಮಾಲೋಚಿಸಿ ಈ ನಿರ್ಧಾರಕ್ಕೆ ಬರಲಾಗಿದೆ’ ಎಂದು ಅದು ತಿಳಿಸಿದೆ. ಚೆನ್ನೈಯಿನ್ ಎಫ್‌ಸಿ ಎರಡು ಬಾರಿ ಐಎಸ್‌ಎಲ್ ಚಾಂಪಿಯನ್ ಆಗಿದೆ.

ಹೋದ ವಾರ, ಐಎಸ್‌ಎಲ್ ತಂಡವಾದ ಒಡಿಶಾ ಎಫ್‌ಸಿ ತನ್ನ ಆಟಗಾರರಿಗೆ ಮತ್ತು ನೆರವು ಸಿಬ್ಬಂದಿಗೆ ವೇತನ ನೀಡುವುದನ್ನು ನಿಲ್ಲಿಸಿತ್ತು. ಸೋಮವಾರ ಬೆಂಗಳೂರು ಎಫ್‌ಸಿ ಕೂಡ ಆಟಗಾರರಿಗೆ ವೇತನ ತಡೆಹಿಡಿಯುವ ನಿರ್ಧಾರ ಕೈಗೊಂಡಿತ್ತು.

ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ವಾಟರ್‌ಪೋಲೊ

ಕರ್ನಾಟಕ ತಂಡಗಳಿಗೆ ಹ್ಯಾಟ್ರಿಕ್ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ಮಯಿ ಪೈ ಅವರ ಅಮೋಘ ಆಟದ ನೆರವಿನಿಂದ ಕರ್ನಾಟಕದ ಬಾಲಕರ ತಂಡವು 51ನೇ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ವಾಟರ್ ಪೋಲೊ ಸ್ಪರ್ಧೆಯಲ್ಲಿ ಹ್ಯಾಟ್ರಿಕ್ ಜಯ ಸಾಧಿಸಿತು.

ಬಸವನಗುಡಿ ಈಜು ಕೇಂದ್ರದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಕರ್ನಾಟಕ 15–5ರಿಂದ ಒಡಿಶಾ ತಂಡವನ್ನು ಮಣಿಸಿತು. ಆತಿಥೇಯ ತಂಡದ ಪರ ಚಿನ್ಮಯಿ 7 ಅಂಕ ಗಳಿಸಿದರೆ, ಸೂರ್ಯಚಂದ್ರ 3 ಅಂಕ ಕಲೆಹಾಕಿದರು. ಇದಕ್ಕೂ ಮುನ್ನ ಕರ್ನಾಟಕ ತಂಡವು 13–3ರಿಂದ ಮಣಿಪುರ ವಿರುದ್ಧ; 12–2ರಿಂದ ಹರಿಯಾಣ ವಿರುದ್ಧ ಗೆಲುವು ಸಾಧಿಸಿತ್ತು.

ಕರ್ನಾಟಕದ ಬಾಲಕಿಯರೂ ಸತತ ಮೂರನೇ ಪಂದ್ಯವನ್ನು ಗೆದ್ದುಕೊಂಡರು. ಮೂರನೇ ಪಂದ್ಯದಲ್ಲಿ ಸಾಂಘಿಕ ಪ್ರದರ್ಶನ ನೀಡಿ 7–6ರಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿದರು. ಇಶಾನಿ ಕಿರಣ್, ರೋಷಿಣಿ ಎಸ್. ಮತ್ತು ತನ್ವಿ ರವಿ ತಲಾ ಎರಡು ಅಂಕ ಗಳಿಸಿದರು. ಇದಕ್ಕೂ ಮುನ್ನ ಕರ್ನಾಟಕ 8–1ರಿಂದ ತಮಿಳುನಾಡು ವಿರುದ್ಧ; 9–0ರಿಂದ ಅಸ್ಸಾಂ ವಿರುದ್ಧ ಗೆಲುವು ಸಾಧಿಸಿತ್ತು.

ಬಾಲಕರ ವಿಭಾಗದ ಇತರ ಪಂದ್ಯಗಳಲ್ಲಿ ಮಹಾರಾಷ್ಟ್ರ 17–1ರಿಂದ ದೆಹಲಿ ವಿರುದ್ಧ; ಬಂಗಾಳ 14–ರಿಂದ ಅಸ್ಸಾಂ ವಿರುದ್ಧ; ಕೇರಳ 8–2ರಿಂದ ತೆಲಂಗಾಣ ವಿರುದ್ಧ; ಹರಿಯಾಣ 8–1ರಿಂದ ಮಣಿಪುರ ವಿರುದ್ಧ ಗೆಲುವು ಸಾಧಿಸಿದವು. ಬಾಲಕಿಯರ ವಿಭಾಗದಲ್ಲಿ ತಮಿಳುನಾಡು 9–4ರಿಂದ ಅಸ್ಸಾಂ ಎದುರು; ಕೇರಳ 15–2ರಿಂದ ಬಂಗಾಳ ಎದುರು ಜಯ ಸಾಧಿಸಿದವು.

ಮಹಾರಾಷ್ಟ್ರ ಪ್ರಾಬಲ್ಯ: ಕೆನ್ಸಿಂಗ್ಟನ್ ಈಜುಕೊಳದಲ್ಲಿ ನಡೆಯುತ್ತಿರುವ ಡೈವಿಂಗ್ ಸ್ಪರ್ಧೆಯಲ್ಲಿ ಬುಧವಾರ ಮಹಾರಾಷ್ಟ್ರದ ಈಜುಪಟುಗಳು ಎರಡು ಚಿನ್ನ ಗೆದ್ದು ಪ್ರಾಬಲ್ಯ ಮೆರೆದರು. ಎಸ್‌ಎಸ್‌ಸಿಬಿ ಮತ್ತು ತಮಿಳುನಾಡು ತಲಾ ಒಂದು ಚಿನ್ನ ಗೆದ್ದುಕೊಂಡಿತು.




ಬಸವನಗುಡಿ ಈಜು ಕೇಂದ್ರದಲ್ಲಿ ಬುಧವಾರ ನಡೆದ ಬಾಲಕರ ವಿಭಾಗದ ವಾಟರ್ ಪೋಲೊ ಪಂದ್ಯದಲ್ಲಿ ಕರ್ನಾಟಕದ ಅಮೋಘವರ್ಷ ಎಂ.ಬಿ., ಯದುನಂದನ್ ಆರ್ ಗೌಡ (ಇಬ್ಬರೂ ಬಿಳಿ ಟೋಪಿ) ಮತ್ತು ಒಡಿಶಾದ ರಾಜುಕಿಶನ್ (ಕೆಂಪು ಟೋಪಿ) ಚೆಂಡಿಗಾಗಿ ಸೆಣಸಾಡಿದರು

ಚಿತ್ರ: ಪ್ರಶಾಂತ್ ಎಚ್‌.ಜಿ.

ಬಾಕ್ಸಿಂಗ್: ಭಾರತದ ನಾಲ್ವರು ಫೈನಲ್‌ಗೆ

ಬ್ಯಾಂಕಾಕ್ (ಪಿಟಿಐ): ನೀರಜ್, ಇಶಾನ್ ಕಟಾರಿಯಾ, ಯಾತ್ರಿ ಪಟೇಲ್ ಮತ್ತು ಪ್ರಿಯಾ ಅವರು ಇಲ್ಲಿ ಬುಧವಾರ ನಡೆದ 19 ಮತ್ತು 22 ವರ್ಷದೊಳಗಿನ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು. ನಾಲ್ವರು ಮಹಿಳೆಯರು ಸೇರಿದಂತೆ ಎಂಟು ಬಾಕ್ಸರ್‌ಗಳು ಕಂಚಿನ ಪದಕ ಗೆದ್ದರು.



ಪುರುಷರ 75 ಕೆ.ಜಿ ವಿಭಾಗದಲ್ಲಿ ನೀರಜ್ ಹಾಗೂ 90 + ಕೆ.ಜಿ ವಿಭಾಗದಲ್ಲಿ ಇಶಾನ್ ಅವರು ಫೈನಲ್‌ಗೆ ಅರ್ಹತೆ ಗಿಟ್ಟಿಸಿಕೊಂಡರು.

ಮಹಿಳೆಯರ 57 ಕೆ.ಜಿ ವಿಭಾಗದಲ್ಲಿ ಯಾತ್ರಿ ಪಟೇಲ್ ಹಾಗೂ 60 ಕೆ.ಜಿ ವಿಭಾಗದಲ್ಲಿ ಪ್ರಿಯಾ ಅವರು ಪ್ರಶಸ್ತಿ ಸುತ್ತಿಗೆ ಅರ್ಹತೆ ಪಡೆದರು.

ಎಂಟು ಮಂದಿಗೆ ಕಂಚು: ಪುರುಷರ ವಿಭಾಗದಲ್ಲಿ ರಾಕಿ ಚೌಧರಿ, ಹರ್ಷ್, ಮಯೂರ್ ಮತ್ತು ಅಂಕುಶ್ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಮಹಿಳೆಯರ ವಿಭಾಗದಲ್ಲಿ ಭಾವನಾ ಶರ್ಮಾ, ಗ್ರೆವಾಲ್, ಪ್ರಾಂಜಲ್ ಯಾದವ್ ಮತ್ತು ಶ್ರುತಿ ಕಂಚು ಗೆದ್ದುಕೊಂಡರು.

